ಮಂಗಾರವಾಡಿ ಮಹಿಳಾ ಅಧ್ಯಯನ
(ಗುಲಬರ್ಗಾ ಜಿಲ್ಲೆ ಅನುಲಕ್ಷಿಸಿ)

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪ್ರಬಂಧ)

ಸಂಶೋಧಕ

ಪರಮೇಶ್ವರ ಸಿ ಜಾನೆ

ಮಾರ್ಗದರ್ಶಕರು

ಡಾ.ಹರಿಶ್ಚಂದ್ರ ದಿಗ್ಸಂಗೀಕರ್
ಹಿರಿಯ ಶ್ರೇಣಿ ಉಪನ್ಯಾಸಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೭-೦೮

ಮಂಗಾರವಾಡಿ ಮಹಿಳಾ ಅಧ್ಯಯನ
(ಗುಲಬರ್ಗಾ ಜಿಲ್ಲೆ ಅನುಲಕ್ಷಿಸಿ)

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪ್ರಬಂಧ)

ಸಂಶೋಧಕ
ಪರಮೇಶ್ವರ ಸಿ ಜಾನೆ

ಮಾರ್ಗದರ್ಶಕರು
ಡಾ.ಹರಿಶ್ಚಂದ್ರ ದಿಗ್ಸಂಗೀಕರ್
ಹಿರಿಯ ಶ್ರೇಣಿ ಉಪನ್ಯಾಸಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೭-೦೮

ಪ್ರಮಾಣ ಪತ್ರ

"ಮಂಗಾರವಾಡಿ ಮಹಿಳಾ ಅಧ್ಯಯನ" (ಗುಲಬರ್ಗಾ ಜಿಲ್ಲೆ ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುಲು ಡಾ.ಹರಿಶ್ಚಂದ್ರ ದಿಗ್ಸಂಗಿಕರ್ ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಲಾಗಿದೆ. ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಪರಮೇಶ್ವರ ಸಿ. ಜಾನೆ
ಸಂಶೋಧನಾ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ :

ಸ್ಥಳ : ವಿದ್ಯಾರಣ್ಯ

ದೃಢೀಕರಣ ಪತ್ರ

ಪರಮೇಶ್ವರ ಸಿ.ಜಾನೆ ಇವರು **"ಮಂಗಾರವಾಡಿ ಮಹಿಳಾ ಅಧ್ಯಯನ" (ಗುಲಬರ್ಗಾ ಜಿಲ್ಲೆ ಅನುಲಕ್ಷಿಸಿ)** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿದ್ದಾನೆ. ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಈ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

(ಡಾ.ಹರಿಶ್ಚಂದ್ರ ದಿಗ್ಸಂಗಿಕರ್)
ಮಾರ್ಗದರ್ಶಕರು
(ಹಿರಿಯ ಶ್ರೇಣಿ ಉಪನ್ಯಾಸಕರು)
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ :

ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

ಮಂಗಾರವಾಡಿ ಮಹಿಳಾ ಅಧ್ಯಯನ ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಸಿದ್ಧಪಡಿಸಲು ಅವಕಾಶ ಕಲ್ಪಿಸಿದ ಮಾನ್ಯ ಕುಲಪತಿಗಳಿಗೆ, ಕುಲಸಚಿವರಿಗೆ, ಅಧ್ಯಯನಾಂಗ ನಿರ್ದೇಶಕರಿಗೆ ಗ್ರಂಥಪಾಲರಿಗೆ ಕೃತಜ್ಞತೆಗಳು.

ನನಗೆ ಪ್ರಬಂಧದ ವಿಷಯ ಸೂಚಿಸಿ ಮಾರ್ಗದರ್ಶನ ನೀಡಿದ ಡಾ.ಹರಿಶ್ಚಂದ್ರ ದಿಗ್ಸಂಗಿಕರ್ ಅವರಿಗೆ ಮತ್ತು ನನ್ನ ಅಧ್ಯಯನ ಸಂದರ್ಭದಲ್ಲಿ ಸಲಹೆ ಸೂಚನೆಗಳನ್ನು ನೀಡಿದ ಡಾ.ಹೆಬ್ಬಾಲೆ ಕೆ.ನಾಗೇಶ್, ಡಾ.ಮಂಜುನಾಥ ಬೇವಿಕಟ್ಟಿ, ಡಾ.ಸಿ.ಟಿ.ಗುರುಪ್ರಸಾದ್, ಡಾ.ಸ.ಚಿ.ರಮೇಶ್, ಡಾ.ಮೊಗಳ್ಳಿ ಗಣೇಶ್, ಡಾ.ಚಿನ್ನಸ್ವಾಮಿ ಸೋಸಲೆ, ಡಾ.ಹೆಚ್.ಟಿ.ಪೋತೆ, ಡಾ.ಎಸ್.ಪಿ.ಮೇಲ್ಕೇರಿ, ಡಾ.ಟಿ.ಎಂ.ಬಾಸ್ಕರ್, ಡಾ.ವಿ.ಟಿ.ಕಾಂಬಳೆ, ಡಾ.ಜಗನ್ನಾಥ ಸಿಂದೆ, ಡಾ.ಚಂದ್ರಕಾಂತಯಾತನೂರ, ಡಾ.ಎಮ್.ಎಸ್.ಪಾಟೀಲ, ಡಾ.ಡಿ.ಬಿ.ನಾಯಕ, ಡಾ.ರಾಜಕುಮಾರ ಮಾಲಿಪಾಟೀಲ ಅವರಿಗೆ ಕೃತಜ್ಞತೆಗಳು.

ಸದಾ ನನ್ನ ಏಳ್ಗೆಯನ್ನು ಬಯಸುತ್ತಿರುವ, ತಂದೆ ತಾಯಿ, ಚಿಕ್ಕಪ್ಪ ಚಿಕ್ಕಮ್ಮ, ಇವರಿಗೆ ಚಿರಋಣಿ ನನ್ನ ಶ್ರೇಯಸ್ಸನ್ನು ಬಯಸುತ್ತಿರುವ, ಅಣ್ಣ ತಮ್ಮಂದಿರು ತಂಗಿಯರಿಗೆ ಹಾಗೂ ಕುಟುಂಬ ಎಲ್ಲರಿಗೂ ನನ್ನ ವಂದನೆಗಳು.

ಸ್ನೇಹಿತರಾಗಿ ನನ್ನ ಅಧ್ಯಯನಕ್ಕೆ ಸಹಕರಿಸಿದ ಜಿ.ಎಂ.ಲೋಕೇಶ್, ಉಮೇಶ್, ಮಾಳಿಗೆ ಯಲ್ಲಣ್ಣ ಕೆ, ಕೆ.ಚಿದಾನಂದಪ್ಪ, ನಾರಾಯಣಸ್ವಾಮಿ, ಹೆಚ್.ಎಲ್.ರವಿ, ಸ್ವಾಮಿ, ಉದಯಕುಮಾರ, ಮತ್ತು ಎ.ಡಿ.ಬಸವರಾಜ, ಕೈಲಾಸ ಜಾನೆ, ನಾಗಮ್ಮ, ಹಾಬಾಳ ಅಂಜಲಿ, ಮಂಗಳಾ ಎಸ್. ಚಂದ್ರಕಾಂತವಾಲಿ, ಪ್ರಭು ಪಟ್ಟಣ, ರಂಗನಾಥ ಕೆ, ನಿಂಗಪ್ಪ ಮಾದಣ್ಣವರ್, ಮಲ್ಲಿಕಾರ್ಜುನ ಕೆ, ರವಿ ಗೋಮ್ಯ, ಶ್ರೀಮತಿ ಮೇತ್ರಾ, ವಿಠ್ಠಲ, ಕಟ್ಟಿ, ಅಮಿತ ಕೊಳ್ಳದ್, ವಿಷ್ಣುವರ್ಧನ ಮೂಲಿಮನಿ, ನಿಜಗುಣ, ಹಿತೇಶ್ವರ ಜಿ.ಹೆಚ್, ಇವರಿಗೆ ಕೃತಜ್ಞತೆಗಳು

ಅಚ್ಚು ಕಟ್ಟಾಗಿ ಅಕ್ಷರ ಜೋಡಣೆ ಮಾಡಿದ 'ಮಾನಸ ಗ್ರಾಫಿಕ್ಸ್, ಕಮಲಾಪುರ ಅವರಿಗೂ ನನ್ನ ವಂದನೆಗಳು.

ಸ್ಥಳ : ವಿದ್ಯಾರಣ್ಯ

ಪರಮೇಶ್ವರ ಜಾನೆ.
(ಎಂ.ಫಿಲ್.ಸಂಶೋಧನಾ ವಿದ್ಯಾರ್ಥಿ)
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ – ೧

ಪೀಠಿಕೆ

ಬುಡಕಟ್ಟುಗಳ ಅಧ್ಯಯನವು ಸರಿಸುಮಾರು ನೂರು ವರ್ಷಗಳ ಇತಿಹಾಸ ಭಾರತದಲ್ಲಿದೆ, ಜಾಗತಿಕ ಮಟ್ಟದಲ್ಲಿ ರೂಪಗೊಂಡು ಮಾನವಶಾಸ್ತ್ರ ಮತ್ತು ಸಾಮಾಜಿಕ ಮಾನವಶಾಸ್ತ್ರದ ಭಾಗವಾಗಿ ಬುಡಕಟ್ಟುಗಳ ಅಧ್ಯಯನ, ಬೆಳೆದು ಬಂದುದು ಕಂಡು ಬರುತ್ತದೆ. ಆಚಾರ, ವಿಚಾರ, ಸಂಸ್ಕೃತಿ, ಸಂಪ್ರದಾಯ, ವರ್ಣ ಜನಾಂಗದಲ್ಲಿ ಸಮ್ಮಿಲನಗೊಂಡಂತೆ ನೋಡುಗರಿಗೆ ಕಂಡುಬಂದರೂ ಅದರ ಅಂತರಾತ್ಮದಲ್ಲಿ, ಅಂತಸ್ತು, ಅಧಿಕಾರ, ಏಣಿಶ್ರೇಣಿಕೃತ, ಸಮಾಜದ ವ್ಯವಸ್ಥೆಯಿದೆ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಮಕ್ಕಳನ್ನು ಹೆರುವ ಮತ್ತು ಸಲಹುವ ಸ್ವಾಭಾವಿಕ ಕೇಂದ್ರವಾದ ಸ್ತ್ರೀ ಮಾತ್ರ ಅದೇ ಸ್ಥಾನದಲ್ಲಿದ್ದಾಳೆ. ಪುರುಷರ ಕಾರ್ಯ ಸಾಧನೆಯಲ್ಲಿ ಭಾಗಿಯಾಗಿದ್ದಾಳೆ. ಆದರೆ ಅವಳನ್ನು ಕಾಣುವ ದೃಷ್ಟಿಕೋನ ಮಾತ್ರ ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದಿದೆ. ವಿವಿಧ ಧರ್ಮಗಳು ಮಹಿಳೆಗೆ ಪೂಜ್ಯಸ್ಥಾನ ನೀಡುತ್ತಿವೆ ನಿಜ ಆದರೆ ಧರ್ಮಗಳು ಮಹಿಳೆಗೆ ಇಲ್ಲಸಲ್ಲದ ನಿರ್ಬಂಧಗಳನ್ನು ಹೇರುವುದು ಬೌದ್ಧಿಕ ವಿಕಾಸಕ್ಕೆ ಮಾರಕವಾಗಿದೆ.

ಕರ್ನಾಟಕದಲ್ಲಿ ಬುಡಕಟ್ಟುಗಳ ಸಂಖ್ಯೆ ಅಧಿಕ ಹೊಂದಿರುವುದು ಅವರು ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶ ಸೇರಿ ನಗರವಾಸಿಗಳಾಗಿ ತಮ್ಮ ಮಟ್ಟವನ್ನು ಸುಧಾರಿಸಿಕೊಳ್ಳುವ ನಿಟ್ಟಿನಲ್ಲಿ ಮಂಗಾರವಾಡಿಗಳು ತಮ್ಮ ಬದುಕಸಾಗಿಸುತ್ತ ಬಂದಿದ್ದಾರೆ ಗುಲಬರ್ಗಾ ಜಿಲ್ಲೆಯಲ್ಲಿಯ, ಬಾಪುನಗರ ಮತ್ತು ಸುಂದರನಗರ ಬಡಾವಣೆಯಲ್ಲಿ ಮಂಗಾರವಾಡಿ ಸಮುದಾಯದವರು ವಾಸಿಸುತ್ತಿದ್ದಾರೆ ಅಲೆಮಾರಿಗಳಾದ ಅವರು ಅವರದೆ ಆದ ಉಡುಗೆ-ತೊಡುಗೆ, ಆಚಾರ-ವಿಚಾರ, ಸಂಪ್ರದಾಯ-ನಂಬಿಕೆ, ರೂಢಿಗಳು ವಿಶಿಷ್ಟವಾದ ಪದ್ದತಿಯಲ್ಲಿ

ಬೆಳಸಿಕೊಂಡು ಬಂದು ಒಂದು ಬುಡಕಟ್ಟು ಸ್ತ್ರೀ ಪುರುಷರು ಕೂಲಿ ಮಾಡಿಕೊಂಡು ಜೀವನಸಾಗಿಸುತ್ತಿದ್ದಾರೆ. ಆದರೆ ಅದರಲ್ಲಿ ಸ್ತ್ರೀಯರು, ಕಳ್ಳತನ ಮಾಡಿಕೊಂಡು ಮತ್ತು ಮತ್ತೊಬ್ಬರ ಜೇಬು ಕತ್ತರಿಸುವ ಪ್ರವೃತ್ತಿಯನ್ನು ಬೆಳಸಿಕೊಂಡಿದ್ದಾರೆ ಅವರ ದಿನ ನಿತ್ಯದ ಕಸಬು ಕಳ್ಳತನವೆಂಬುದು ವದಂತಿ ಇದೆ ಆ ನಿಟ್ಟಿನಲ್ಲಿ ಇವರ ಸಾಮಾಜಿಕ ಮತ್ತು ಆರ್ಥಿಕ ಜೀವನದ ಅವಲಂಬನೆಗಳಾವುವು ಎನ್ನುವುದನ್ನು ಅರಿಯಬೇಕಾಗಿದೆ ಸಾಂಸ್ಕೃತಿಕ, ಕೌಟುಂಬಿಕ, ಸಂರಚನೆಗೆ, ವರ್ಗ, ಜಾತಿ, ಆಸ್ತಿಯ ಹಕ್ಕು ಮತ್ತು ನೈತಿಕತೆಗೆ ಸಂಬಂಧಿಸಿದಂತೆ ಸ್ತ್ರೀಯರ ಅಂತಸ್ತಿನಲ್ಲಿ ಅಗಾಧ ವ್ಯತ್ಯಾಸಗಳಿವೆ ಸಂಘಸಂಸ್ಥೆಗಳಿಂದ ದೊರೆತ ಮೂಲಭೂತ ಸಕಲ ಸೌಕರ್ಯಗಳು ಮೇಲ್ವರ್ಗದ ಮಹಿಳೆಯರಿಗೆ ತಲುಪಿದಂತೆ ಕೆಳವರ್ಗದ ಮಹಿಳೆಯರಿಗೆ ಯಾಕೆ ತಲುಪಲಿಲ್ಲ. ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭಿವೃದ್ಧಗಾಗಿ ಸಂವಿಧಾನವು ವಿಶೇಷ ಸೌಲಭ್ಯಗಳನ್ನು ನೀಡಿದರೂ ಮಂಗಾರವಾಡಿಗರ ಯಾವುದೇ ಸೌಲಭ್ಯಗಳು ಸಿಗದೆ ವಂಚಿತರಾಗಿದ್ದಾರೆ. ಆರ್ಥಿಕವಾಗಿ, ರಾಜಕೀಯವಾಗಿ, ಹಿಂದೂಳಿದಿದ್ದಾರೆ, ಹೈದರಾಬಾದ್ ಕರ್ನಾಟಕದ ಕೇಂದ್ರ ಸ್ಥಾನವಾದ ಗುಲಬರ್ಗಾದಲ್ಲಿ ಅತೀ ಹಿಂದುಳಿದಿದ್ದಾರೆ.

ಭಾರತದಲ್ಲಿರುವ ಯಾವುದೇ ಸಮುದಾಯವು ಮಹಿಳೆಯ ಬಗ್ಗೆ ಅಂದಿನ ಸಾಮಾಜಿಕ ರಚನೆ, ಮಹಿಳೆಯರ ಸ್ಥಾನಮಾನ ಹಾಗೂ ಅಂತ್ತಸ್ಥನ್ನು ಅರ್ಥೈಸಬೇಕಾದರೆ ಅಂತಹ ಸಮಾಜದ ಮೇಲೆ ಪ್ರಭಾವ ಬೀರುವ ಅಂಶ ಅದನ್ನು ರೂಪಿಸುವ ಚಾರಿತ್ರಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಅಂಶಗಳು ವಿಶ್ಲೇಷಿಸುವುದು ಅಗತ್ಯವಾದರೂ ಇನ್ನೂ ಮೂರು ಸಾವಿರ ವರ್ಷಕ್ಕೂ ಹೆಚ್ಚು ದೀರ್ಘಾವಧಿಯ ವರ್ಣರಂಜಿತ ನಿರಂತರ ಇತಿಹಾಸ ಹೊಂದಿರುವ ನಮ್ಮ ಭಾರತೀಯ ಬುಡಕಟ್ಟುಗಳು ಮತ್ತು ಅಲೆಮಾರಿಗಳ ಬಗ್ಗೆ ಸರಳವಾಗಿ ವಿಶ್ಲೇಷಿಸುವುದು ಸುಲಭದ ಮಾತಲ್ಲ ಆದ್ದರಿಂದ ಮಹಿಳೆಯರ, ಕೌಟುಂಬಿಕ ಜೀವನ, ಆಸ್ತಿಯ ಹಕ್ಕು ಮತ್ತು ನೈತಿಕತೆಗೆ ಸಂಬಂಧಿಸಿದಂತೆ ಅನೇಕ ಅಂಶಗಳಿವೆ. ಬುಡಕಟ್ಟುಗಳು– ಹೊಂದಿರುವ ಸೌಲಭ್ಯಗಳನ್ನು ಸಂವಿಧಾನದಲ್ಲಿ ವಿವರಿಸಲಾಗಿದೆ. ಬುಡಕಟ್ಟಿನ ಮಹಿಳೆಯರೂ ಅರ್ಧಭಾಗಕ್ಕಿಂತ ಹೆಚ್ಚು ಮಹಿಳೆಯರೂ ಈಗಲೂ ಕೂಡಾ ಅಸಮಾನತೆ ಹಾಗೂ ಶೋಷಣೆಗೆ ಗುರಿಯಾಗಿದ್ದಾರೆ. ಮಹಿಳೆಯರ ಆತ್ಮಬಲ ಕಾರ್ಯದಕ್ಷತೆ ಮತ್ತು ಕ್ರಿಯಾಶೀಲಗುಣಗಳನ್ನು ಸಮುದಾಯದ ಮತ್ತು ರಾಷ್ಟ್ರದ ಸಮಗ್ರ ಅಭಿವೃದ್ಧಿಗೆ ಬಳಸದೆ ನಿರ್ಲಕ್ಷ್ಯ ತೋರಿರುವುದು ಮಾನವ ಧರ್ಮಕ್ಕೆ ಅಪಚಾರವೆಸಗಿದಂತೆ ಎನ್ನಬಹುದು.

ಬುಡಕಟ್ಟಿನ ಮಹಿಳೆಯರು ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಹಕ್ಕುಗಳಲ್ಲಿ ಸಮಾನತೆ ಇರುವುದಿಲ್ಲವೋ ಮತ್ತು ಸೌಲಭ್ಯಪಡೆದುಕೊಳ್ಳುವುದಿಲ್ಲವೋ ಆ ಮಹಿಳೆ ಅಭಿವೃದ್ಧಿಯತ್ತ ಸಾಗಲು ಸಾಧ್ಯವಿಲ್ಲವೆಂದು ಹೇಳಬಹುದಾಗಿದೆ. ಪ್ರತಿಯೊಂದು ಬುಡಕಟ್ಟುಗಳು

ಪರಸ್ಪರ ಸಾಂಸ್ಕೃತಿಕ ಆಚರಣೆಗಳಲ್ಲಿ ಒಂದು ಮತ್ತೊಂದು ಬುಡಕಟ್ಟಿಗೆ ಸಾಮ್ಯವಿರುವಂತೆ ಕಂಡು ಬಂದರೂ ಸಹ ಅನೇಕ ವ್ಯತ್ಯಾಸಗಳನ್ನು ಗುರ್ತಿಸಬಹುದಾಗಿದೆ. ಭಾರತದಲ್ಲಿ ವರ್ಣ ವ್ಯವಸ್ಥೆಯ ಕಾಲದಿಂದ ಆಧುನಿಕ ಕಾಲದವರೆಗೂ ಸಾಮಾಜಿಕ ವ್ಯವಸ್ಥೆಯು ಏಣಿ ಶ್ರೇಣಿಯಿಂದ ಕೂಡಿದ್ದು ಇಂತಹ ಸಾಮಾಜಿಕ ಸ್ಥರ ವಿನ್ಯಾಸದಿಂದ ದೂರವಿರುವ ಹಾಗೂ ಕಾಡನ್ನೇ ತಮ್ಮ ದೇವರೆಂದು ಪೂಜಿಸುವ ಕಾಲವೊಂದಿತ್ತು ಆದರೆ ಬರಬರುತ್ತ ಬುಡಕಟ್ಟು ಸಮುದಾಯಗಳಲ್ಲಿ ಮತ್ತು ಅಲೆಮಾರಿಗಳ ಸ್ಥಾನಮಾನಗಳು ಹೊಂದಲು ನಗರ ಪ್ರದೇಶಗಳು ಗ್ರಾಮೀಣ ಪ್ರದೇಶಗಳಲ್ಲಿ ಬಂದು ನೆಲೆಸಲು ಆರಂಭಿಸಿದರು ಅದರಂತೆ ಮಂಗಾರವಾಡಿಗರು ಗುಲಬರ್ಗಾ ನಗರ ಪ್ರದೇಶ ಬಾಪೂನಗರ ಮತ್ತು ಸುಂದರನಗರ ಬಡಾವಣೆಯಲ್ಲಿ ಬಂದು ನೆಲೆಸಿರುವಂತಹದು ಗಮನಿಸಬಹುದಾಗಿದೆ. ನಗರ ಜೀವನ ಸೇರಿದ ಮೇಲೆ ಜೀವನ ವಿಧಾನವು ಬೇರೆಯಾಗಿರುವಂತಹುದು ಕಂಡುಬರುತ್ತದೆ. ಹಾಗಾಗಿ ಇವರ ಜೀವನ ವಿಧಾನವನ್ನು ಸ್ಥೂಲವಾಗಿ ಅಧ್ಯಯನ ಮಾಡಲು ಈ ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ.

ಕರ್ನಾಟಕದಲ್ಲಿ ಒಟ್ಟು ನಲವತ್ತೊಂಬತ್ತು ಪರಿಶಿಷ್ಟ ಬುಡಕಟ್ಟುಗಳಿವೆ ಸಂವಿಧಾನ ಬದ್ದವಾಗಿ ಉಳಿದ ಕೆಲವು ಬುಡಕಟ್ಟುಗಳು ಅಲೆಮಾರಿ ಬುಡಕಟ್ಟುಗಳೆಂದು ಇನ್ನೂ ಕೆಲವು ಬುಡಕಟ್ಟುಗಳನ್ನು ಅರೆ ಅಲೆಮಾರಿ ಬುಡಕಟ್ಟುಗಳು ಎಂದು ಪರಿಗಣಿಸಿ ಮೀಸಲಾತಿಯ ಪಟ್ಟಿಗೆ ಅಂದರೆ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಪಟ್ಟಿಗೆ ಮತ್ತು ಜಾತಿಗೆ ಸೇರಿಸಲಾಗಿದೆ. ಇಂದು ನಾವು ಶಿಷ್ಟ ಸಂಪ್ರದಾಯಗಳ ಸಮುದಾಯಗಳಿಂದ ಕೂಡಿದ್ದು ಕಂಡು ಬರುತ್ತದೆ ಹಾಗೇ ಅನೇಕ ಬುಡಕಟ್ಟುಗಳು ಅಲಕ್ಷಕ್ಕೆ ಒಳಗಾಗಿರುವ ಸಮುದಾಯಗಳ ಇನ್ನು ಕಾಡಲ್ಲೇ ಉಳಿದಿರುವಂತಹುದು ನಾವು ಗಮನಿಸಬೇಕಾದ ವಿಷಯವಾಗಿದೆ. ಕಾಡು ಗೊಲ್ಲರೂ, ಗೊಂಡರು, ಗೌಳಿಯರು, ಗೌಡರು, ಮುಕ್ರಿಯರು, ಯರವರು, ಮಸ್ಸುರು, ಹಕ್ಕಿ–ಪಿಕ್ಕಿಯವರು, ಕುಡುಬಿಯರೂ ಹಲವಾರು ಬುಡಕಟ್ಟುಗಳು ಕರ್ನಾಟಕ ತುಂಬೆಲ್ಲಾ ತಮ್ಮದೆಯಾದ ವಿಶಿಷ್ಟ ರೀತಿಯ ನೆಲೆ, ಸಂಸ್ಕೃತಿ, ಆಚರಣೆ, ವಿಧಾನಗಳಿಂದ ಕೂಡಿದ ಬುಡಕಟ್ಟುಗಳಾಗಿವೆ. ಒಂದು ದೇಶದ ಮೂಲ ನಿವಾಸಿಗಳೇ ಆದಿವಾಸಿಗಳು ಬುಡಕಟ್ಟು ಜನಾಂಗಗಳೂ ಕಾಡು ಬೆಟ್ಟ, ಗುಡ್ಡ, ಪ್ರದೇಶಗಳಲ್ಲಿ ಒಂದೇ ಕಡೆ. ಖಾಯಂ ಆಗಿ ವಾಸಿಸುವುದಿಲ್ಲ. ಕಾಡಿನಲ್ಲಿ ದೊರೆಯುವ ಪ್ರಕೃತಿದತ್ತವಾದ ಗಡ್ಡೆ, ಗೆಣಸು, ಆಹಾರವಾಗಿ ಉಪಯೋಗಿಸುತ್ತಿದ್ದರು ಬುಡಕಟ್ಟುಗಳಲ್ಲಿ ಮಹಿಳೆಯ ಸ್ಥಾನಮಾನ ನಿಲುವನ್ನು ಹೊಂದಿರಲಿಲ್ಲ. ಆಕೆ. ಆದೇಶದ ಸಮಗ್ರ ಅಭಿವೃದ್ಧಿಗೆ ಮುಖ್ಯ ಕಾರ್ಯ ಕಾರಣಿಯಾಗಿರುವಂತಹದು ನಾವು ಗಮನಿಸಬಹುದಾಗಿದೆ. ಒಂದು ದೇಶದಲ್ಲಿಯ ಮಹಿಳೆಯರ ಸ್ಥಾನಮಾನ ಆ ದೇಶದ ಆಧುನಿಕತೆಯ ಆಳತೆಗೋಲು ಎನ್ನಬಹುದು ಸಮುದಾಯದಲ್ಲಿ ಮಹಿಳೆಯ ಸ್ಥಾನಮಾನ ನಿರ್ಧಾರವಾಗುವುದು ಆ ಸಮುದಾಯದಲ್ಲಿ ತನ್ನನ್ನು ತಾನು ಅಭಿವ್ಯಕ್ತಿಗೊಳಿಸಿಕೊಳ್ಳಲು

ಅವಳಿಗಿರುವ ಸಮಾನ ಅಂಶಗಳಿಂದ ಶೈಕ್ಷಣಿಕ ಅವಕಾಶಗಳು ಬಹಳ ಪ್ರಮುಖವಾದದು ಜಗತ್ತಿನಾದ್ಯಂತ ಎಲ್ಲ ಸಮಾಜದಲ್ಲಿ ಮತ್ತು ಸಂಸ್ಕೃತಿಯಲ್ಲಿ ಮಹಿಳೆಯರು ಅನ್ಯಾಯಕ್ಕೆ ಮತ್ತು ತುಳಿತಕ್ಕೆ ಹಾಗು ಪುರುಷರ ದಬ್ಬಾಳಿಕೆ ಒಳಗಾಗತ್ತಲೆ ಇದ್ದಾರೆ. ಇದನ್ನು ಯಾರು ಅಲ್ಲಗಳೆಯಲಾರರು ಸಾಮಾಜಿಕವಾಗಿ, ಆರ್ಥಿಕವಾಗಿ ಅವಳು ಪುರುಷರ ಮೇಲೆ ಅವಲಂಬನೆಯಾಗಿದ್ದಾಳೆ. ಈ ಕಾರಣಗಳಿಂದಾಗಿಯೇ ಭಾರತವು ಸ್ವಾತಂತ್ರ್ಯ ಪಡೆದ ಐದುದಶಕಗಳಾದರೂ ಯಾವುದೇ ಒಂದು ಮಾರ್ಪಾಡು ಬುಡಕಟ್ಟು ಸಮುದಾಯಗಳಲ್ಲಿ ಆದಿವಾಸಿ ಸಮುದಾಯಗಳಲ್ಲಿ ಕಂಡುಬರುವುದಿಲ್ಲ.

ದ್ವಿಪತ್ನಿತ್ವದ ಪ್ರಕರಣಗಳು ಅತ್ಯಂತ ವಿರಳವಾಗಿದ್ದು ಆಳುವ ವರ್ಗಕ್ಕೆ ಸೀಮಿತವಾಗಿತ್ತು ವೇದಗಳ ಕಾಲದಲ್ಲಿ ಮಹಿಳೆಗೆ ಒಳ್ಳೆಯ ಸ್ಥಾನಮಾನ ಸಿಕ್ಕಿರಲಿಲ್ಲ. ಮನು ತನ್ನ ಮನುಸ್ಮೃತಿಯಲ್ಲಿ ಮಹಿಳೆಗೆ ಅತ್ಯಂತ ಗೌರವಸ್ಥಾನವನ್ನು ನೀಡಿದರೂ ಅವಳ ಜೀವನ ಎಲ್ಲಾ ಹಂತಗಳಲ್ಲಿ ಪುರುಷಾಧೀನಳು ಮಹಿಳೆಯರ ಸ್ಥಾನಮಾನ ಸಮಾಜದಲ್ಲಿ ಪ್ರತ್ಯೇಕ ವ್ಯಕ್ತಿತ್ವವನ್ನು ಮತ್ತು ಸ್ಥಾನವನ್ನು ಕಳೆದುಕೊಂಡಿದ್ದಳು ಅವಳ ಅಸ್ತಿತ್ವ ಹಾಗೂ ಸಂತೋಷ ಅವಳ ಪತಿಯನ್ನೆ ಅವಲಂಬಿಸಿತ್ತು. ಪತಿ ಕುರುಡನಾಗಿರಲ್ಲಿ ಕುಂಟನಾಗಿರಲ್ಲಿ ಕ್ರೂರಿಯಾಗಿರಲಿ ಪತ್ನಿ ಮಾತ್ರ ಅವನಿಗೆ ನಿಷ್ಠೆಯಿಂದ ವಿಧೇಯಪೂರಕವಾಗಿ ಗಂಡನಿಗಾಗಿ ಮಕ್ಕಳಿಗಾಗಿ ತನ್ನ ಸುಖ, ಸಂತೋಷಗಳನ್ನು ತ್ಯಾಗ ಮಾಡಬೇಕು ಎನ್ನುವಂತಹುದು ನಾವು ತಿಳಿಯಬಹುದಾದ ವಿಷಯವಾಗಿದೆ. ಹಿಂದೂ ಸಮಾಜದ ಮನೋಭಾವ ದೃಷ್ಟಿಕೋನ, ಜೀವನ ಶೈಲಿ, ಎಲ್ಲವೂ, ಭಾರತೀಯ ಮಹಿಳೆಯರ ಸ್ಥಾನಮಾನ ಅತ್ಯಂತ ಹೀನಾಯವಾದ ಸ್ಥಿತಿ ಎದುರಿಸಬೇಕಾಯಿತು. ಅನಾಗರೀಕರಂತೆ ಮಹಿಳೆಯರ ಮೇಲೆ ವರ್ತನೆ ಮಾಡಿದ್ದರು ದಬ್ಬಾಳಿಕೆ ಸಾಮಾಜಿಕ ಹಿಂಸೆ ಅವರನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳುವಂತೆ ಮಾಡಿದರು ಮನಬಂದಂತೆ ಲೈಂಗಿಕ ದಾಹ ಮತ್ತು ಅತ್ಯಾಚಾರಗಳ ಮಹಿಳೆಯರ ಮೇಲೆ ದೌರ್ಜನ್ಯ ಪೂರಕವಾಗಿ ಮಾಡಿರುವಂತಹದು ಸಹಿಸಿಕೊಳ್ಳಲಾರದೆ. ತಮ್ಮ ಮೂಲ ಸ್ಥಳಗಳನ್ನು ಬಿಟ್ಟು ವಲಸೆ ಹೋಗಿ, ತಮ್ಮ ಜೀವನ ನಡೆಸಲು ಆರಂಭಿಸಿದರು ಅಲ್ಲಿಯೂ ಆರ್ಥಿಕವಾಗಿ ಬಳಲುತ್ತಿದ್ದಾಗ. ಹೊಟ್ಟೆಗೆ ಅನ್ನ ಸಿಗದೆ ಕಂಗಾಲಾದರು ಅನಿವಾರ್ಯವಾಗಿ ಸಣ್ಣ ಪುಟ್ಟ ಕಳ್ಳತನ ಮಾಡುವುದುದನ್ನು ಆರಂಭಿಸಿದರು ಎಂಬುದು ಹೇಳುತ್ತಾರೆ ಬರಬರುತ್ತ ಮನುಷ್ಯ ಬದಲಾವಣೆ ಹೊಂದುವುದು ಜಗದ ನಿಯಮ ಎಂಬುದು ನಾವು ಗಮನಿಸಬೇಕಾದದು.

ಮಹಿಳೆಯರಿಗೆ ಸಂವಿಧಾನದಲ್ಲಿ ಡಾ.ಬಾಬಾಸಾಹೇಬ ಅಂಬೇಡ್ಕರರು ಸ್ತ್ರೀ–ಪುರುಷರಿಗೆ, ಸಮಾನತೆಯನ್ನು ನೀಡಿದರು ಮಹಿಳೆಯು ವಾಸ್ತವಿಕವಾಗಿ ಯಾವುದೇ ರೀತಿಯಲ್ಲಿಯೂ ಬದಲಾವಣೆ ಕಾಣುತ್ತಾಳೆ ಭಾರತದ ಸಂವಿಧಾನದ ಅನುಚ್ಛೇಧಗಳ ನ್ಯಾಯಿಕ,

ವ್ಯಾಖ್ಯಾನಗಳನ್ನು ಗಮನಿಸಿದಾಗ, ಸ್ತ್ರೀ-ಪುರುಷರ ಕಾನೂನಿನಲ್ಲಿ, ಕೊಡಮಾಡಿರುವ ಸಮಾನತೆಯಾಗಿ ಅಷ್ಟೆ ಉಳಿದಿದೆ ಎಂಬುದು ಸ್ಪಷ್ಟವಾಗುತ್ತದೆ. ಸ್ತ್ರಿ-ಪುರುಷ ಸಮಾನತೆ, ಕೇವಲ, ಔಪಚಾರಿಕ ಸಮಾನತೆಯಾಗದೆ. ವಾಸ್ತವಿಕ ಸಮಾನತೆಯಾಗುವಂತೆ ಕಾನೂನುಗಳನ್ನು ಅನುಷ್ಠಾನಗೊಳಿಸುವಲ್ಲಿ ಕೆಲವು ತೀರ್ಪುಗಳು ಸಹಾಯಕವಾಗಿದ್ದರೂ ಅವುಗಳ ಸಂಖ್ಯೆ, ಬಹು ಕಡಿಮೆ ಇದಕ್ಕೆ ಕಾರಣ ಸಮಾನತೆ ಮತ್ತು ಸ್ತ್ರೀ ಪುರುಷರ ನಡುವಿನ ವ್ಯತ್ಯಾಸಗಳನ್ನು ಸರಿಯಾದ ರೀತಿಯಲ್ಲಿ ವ್ಯಾಖ್ಯಾನಿಸಿದರೂ ಕಾನೂನು ತಾರತಮ್ಯ ತೋರಿಸದೆ ಎಲ್ಲ ತತ್ವವನ್ನು ಒಪ್ಪಿಕೊಳ್ಳುವಂತ ಮನೋಭಾವನೆಯನ್ನು ಒಂದು ಸಾರ್ಥಕವಾಗಬಲ್ಲದೂ ಈ ಬದಲಾವಣೆ ತೀರ ನಿಧಾನಗತಿಯದಾದರೂ ಕಾನೂನಿನ ಈ ನೀತಿಯನ್ನು ನಾವು ಅಲ್ಲಗೆಳೆಯುವಂತಿಲ್ಲ ಸಮಾಜದಲ್ಲಿರುವ ಬೇಧಭಾವವನ್ನು ಹೋಗಲಾಡಿಸಲು ಸಮುದಾಯದ ಸುಧಾರಣೆಗೆ ರೂಪುರೇಷೆಗಳನ್ನು ನಿರ್ಮಾಣಮಾಡಬೇಕು. ಪುರುಷ ಪ್ರಧಾನವಾದ ಭಾರತೀಯ ಸಮುದಾಯ ಸಮಾಜದ ಮೂಲಭೂತ ಅವಶ್ಯಕತೆಗೆ ಮತ್ತು ಬುಡಕಟ್ಟುಗಳ ಒಂದು ಬೆಳವಣಿಗೆಗೆ ವ್ಯವಸ್ಥೆಯನ್ನು ನಿರ್ಮಿಸದಿರುವುದು ಸಮುದಾಯದ ಮುಖ್ಯಸ್ಥ ಕುಟುಂಬದೊಳಗೆ ಮಹಿಳೆಯ ಲೈಂಗಿಕತೆ, ದುಡಿಮೆ, ಉತ್ಪಾದನೆ, ಸಂತಾನೋತ್ಪತ್ತಿ, ಎಲ್ಲವೂ ಪುರುಷನ ನಿಯಂತ್ರಣಕ್ಕೆ ಒಳಪಡಿಟ್ಟಿರುತ್ತದೆ. ಪುರುಷ ಉತ್ತಮ ಹಾಗೂ ಮಹಿಳೆ ಪ್ರಧಾನ ಮತ್ತು ಅಪ್ರಧಾನ ಎಂಬಂಥದು ಮುಂದಿನ ಪೀಳಿಗೆಗೆ ರೂಪಗೊಳ್ಳುವ ವರ್ಗ ವ್ಯವಸ್ಥೆ ಪುರುಷನ ತಾರತಮ್ಯತೆ, ಮೇಲ್ವರ್ಗದ ಪುರುಷರಿಗೆ ಉತ್ತಮ ಪರಿಕರವಾಗಿದೆ. ಭಾರತೀಯ ಸಂಪ್ರದಾಯದಂತೆ ಆರ್ಥಿಕ ವ್ಯವಸ್ಥೆ ಪುರುಷ ಪ್ರಧಾನವಾದದ್ದು ಸಮುಧಾಯಗಳಲ್ಲಿ ಆರ್ಥಿಕ ನಿಯಂತ್ರಣ ಹೊಂದಿರುವುದು ಪುರುಷರು ಆಸ್ತಿಯ ಮಾಲೀಕರು ವಿವಿಧ ಉತ್ಪಾದನಾ ಚಟುವಟಿಕೆಗಳ ಮೌಲ್ಯ ನಿರ್ಧರಣೆ ಮಾಡುತ್ತಿರುವುದು ಪುರುಷರೆ ಏಕೆಂದರೆ ಹಳೆಯ ಕಾಲದಿಂದಲೂ ಅಂಟಿಕೊಂಡು ಬಂದ ಒಂದು ವ್ಯವಸ್ಥೆ ವರ್ಣ ವ್ಯವಸ್ಥೆಯೇ ಇದಕ್ಕೆ ಮೂಲ ಪ್ರೇರಣೆಯೆಂದು ತಿಳಿದುಬರುತ್ತದೆ.

೧.೧ ಗುಲಬರ್ಗಾ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ

ಕಲಬುರ್ಗಿ ಜಿಲ್ಲೆಯ ೯.೮೮೫ ಚ.ಕಿ.ಮೀ. ವಿಸ್ತೀರ್ಣ ಹೊಂದಿದು ೧.೩೦೪ ಗ್ರಾಮಗಳು ೧೨ ಪಟ್ಟಣಗಳು, ೧೦ ತಾಲೂಕುಗಳಾಗಿ ವಿಭಾಗಿಸಲ್ಪಟ್ಟಿದೆ. ಈ ಜಿಲ್ಲೆಯು ಕಡಿಮೆ ಮಳೆ ಬೀಳುವ ಪ್ರದೇಶವಾಗಿದೆ. ರಾಜ್ಯದ ಒಟ್ಟು ನೀರಾವರಿ ಪ್ರದೇಶದ ಶೇಕಡಾ ೨.೧೧ ಹೆಕ್ಟೇರ್ ಜಮೀನು ಮಾತ್ರ ನೀರಾವರಿಗೆ ಒಳಪಟ್ಟಿದೆ. ಇಲ್ಲಿನ ಜನರ ಬಹುತೇಕ ಉದ್ಯೋಗವೆಂದರೆ ಒಕ್ಕಲುತನ, ಮಳೆಯನ್ನೇ ಅವಲಂಬಿಸಿರುವುದರಿಂದ ಮೇಲಿಂದ ಮೇಲೆ ಭೀಕರ ಬರಗಾಲಕ್ಕೆ ತುತ್ತಾಗುತ್ತಾರೆ. ಈ ಹರಿಯುವ ಕೃಷ್ಣ, ಭೀಮಾ, ನದಿಗಳಿಂದಲೂ ಅಮೇಜಾನ್, ಕಾಗಿಣಾ, ಬೆಣ್ಣೆತೊರಾ, ಮುಂತಾದ ಚಿಕ್ಕ ತೊರೆಗಳಿಂದಲ್ಲೂ ಯಾವುದೇ ಲಾಭವಾಗಿಲ್ಲ. ಗುಲಬರ್ಗಾ ಜಿಲ್ಲೆಯ ಉತ್ತರಕ್ಕೆ ಬೀದರ್ ಹಾಗೂ ದಕ್ಷಿಣಕ್ಕೆ ರಾಯಚೂರು

ಜಿಲ್ಲೆಗಳಿವೆ. ಪಶ್ಚಿಮಕ್ಕೆ ಅಳಂದ, ಅಫಜಲಪೂರ್, ತಾಲೂಕುಗಳಿವೆ. ಮಹಾರಾಷ್ಟ್ರದ, ಸೋಲಾಪೂರ ಜಿಲ್ಲೆಯ ಉಮರ್ಗಾ, ಅಕ್ಕಲಕೋಟೆ, ತಾಲೂಕುಗಳು ಭಾಗಗಳು ಹತ್ತಿಕೊಂಡಿವೆ. ಆದರೆ ಈ ಭಾಗಗಳು ಕನ್ನಡದ ಪ್ರಭಾವವುಳ್ಳ ಭಾಗಗಳೇ ಹೆಚ್ಚಾಗಿ ಕಂಡು ಬರುತ್ತದೆ. ಮರಾಠಿಗರ ಪೂರ್ವಕ್ಕೆ ಚಿಂಚೋಳಿ, ಸೇಡಂ ಹಾಗೂ ಯಾದಗೀರ್ ತಾಲ್ಲೂಕುಗಳಿಗೆ. ಆಂಧ್ರಪ್ರದೇಶದ ತಾಂಡೂರ್, ಕೊಡಂಗಲ್, ನಾರಾಯಣ ಪೇಟೆ ಭಾಗಗಳು ಹತ್ತಿಕೊಂಡಿದ್ದ ಇಲ್ಲಿ ತೆಲಗುವಿನ ಗಾಡ ಪ್ರಭಾವ ಎದ್ದು ಕಾಣಿಸುತ್ತದೆ. ರಾಷ್ಟ್ರಕೂಟ ಸಾಮ್ರಾಜ್ಯ ತಲೆಯತ್ತಿ ಮೆರೆದದು ಈ ಜಿಲ್ಲೆಯಲ್ಲಿಯೇ ಎಂಬುದು ಅಭಿಮಾನದ ಸಂಗತಿ ಕೇವಲ ರಾಜ್ಯ ಸಾಮ್ರಾಜ್ಯಗಳನ್ನು ಕಟ್ಟುವದಷ್ಟೆ ಅಲ್ಲದೆ ಪ್ರಜಾ ಜೀವನದಲ್ಲಿ ಸ್ಥಿರ ಶಾಂತಿ ಸುಭಿಕ್ಷಗಳು ನೆಲಸುವ ಆಡಳಿತ ಕ್ರಮವನ್ನು ಇವರು ರೂಡಿಸಿಕೊಂಡು ಬಗೆಗೆ ಇಲ್ಲಿನ ಶಾಸನಗಳು ಬೆಳಕು ಚೆಲ್ಲುತ್ತವೆ.

ಒಟ್ಟಾರೆಯಾಗಿ ರಾಜಕೀಯ ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ ಭವ್ಯ ಪರಂಪರೆಯಿಂದ ಕೂಡಿದ ಹಲವಾರು ಜಾತಿ, ಪಂಥ, ಧರ್ಮ, ಮತಗಳೂ ವಿವಿಧ ರೀತಿಯ ವೃತ್ತಿಗಳಲ್ಲಿ ಮತ್ತು ಒಕ್ಕಲುತನದಿಂದ ಜೀವನ ನಡೆಸುವ ಜನರು ಕೂಡಿದ್ದು ಕರ್ನಾಟಕ ಚರಿತ್ರೆಗೆ ಗುಲಬರ್ಗಾ ಜಿಲ್ಲೆಯು ಶತಶತಮಾನಗಳಿಂದಲೂ ತನ್ನ ಕಾಣಿಕೆ ಸಲ್ಲಿಸಿರುವುದಕ್ಕೆ ಸಾಕ್ಷಿಯಾಗಿವೆ. ಅನೇಕ ರಾಜ್ಯಮನೆತನಗಳು ಆಳಿದ ಮಹತ್ವದ ಸಾಂಸ್ಕೃತಿಕ ಕೇಂದ್ರವಾಗಿದೆ. ಹೈದರಾಬಾದ್ ಕರ್ನಾಟಕವು ನಿಜಾಮನ ಅಧಿಕಾರ ವ್ಯಾಪ್ತಿಗೆ ಸೇರಿಕೊಂಡಿರುವುದರಿಂದ ಇದರ ಚರಿತ್ರೆ ಸಂಕೀರ್ಣ ಸ್ವರೂಪ ಹೊಂದಿದೆ.

೧.೨. ಮುಖ್ಯಬೆಳೆಗಳು

ಈ ಪ್ರದೇಶಗಳಲ್ಲಿ ಬೆಳೆಯುವ ಮುಖ್ಯಬೆಳಗಳೆಂದರೆ ಜೋಳ, ಕಬ್ಬು, ಸಜ್ಜೆ, ತೊಗರೀ, ಹತ್ತಿ, ಮೆಣಸಿನಕಾಯಿ, ಉದ್ದು, ಹೆಸರು, ನವಣೆ, ಶೇಂಗಾ, ಕಡಲೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಇಲ್ಲಿಯ ಜನರು ಕೇವಲ ಮಳೆ ಆಧಾರಿತ ವ್ಯವಸ್ಥೆಯನ್ನು ನಂಬಿಕೊಂಡು ವ್ಯವಸಾಯ ಮಾಡುತ್ತಾರೆ. ಮಳೆ ಬಂದರೆ ಮಾತ್ರ ಒಳ್ಳೆಯ ಬೆಳೆ, ಇಲ್ಲದಿದ್ದರೆ ಒಂದೊಂದು ವರ್ಷಗಳಲ್ಲಿ ಬರಗಾಲಪೀಡಿತ ಪ್ರದೇಶವೆಂದು ಘೋಷಿಸುತ್ತಾರೆ. ಗುಲ್ಬರ್ಗಾ ವಿಸ್ತೀರ್ಣದಲ್ಲಿ ೧೧ನೇ ಸ್ಥಾನದಲ್ಲಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಬರುವ ತಾಲೂಕುಗಳು ಅಫಜಲಪೂರ, ಆಳಂದ, ಚಿತ್ತಾಪೂರ, ಚಿಂಚೋಳಿ, ಯಾದಗಿರಿ, ಶಹಾಪೂರ, ಸುರಪೂರ, ಗುಲಬರ್ಗಾ, ಒಟ್ಟಾರೆಯಾಗಿ ಎಂಟು ತಾಲೂಕುಗಳು ಗುಲಬರ್ಗಾ ಜಿಲ್ಲೆಯು ಹೊಂದಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಹಿಂದುಳಿದ ಪ್ರದೇಶದ ಇದ್ದಾಗಿದೆ.

೧.೩ ಮಂಗಾರವಾಡಿ ಪದದ ಅರ್ಥ

ಮಂಗಾರವಾಡಿ ಪದದ ನಿಷ್ಪತ್ತಿಯ ಮೂಲ ಹುಡುಕುವುದರ ಜೊತೆಗೆ ಮಂಗಾರವಾಡಿಗರೆಂದರೆ ಯಾರು ಅವರ ಮೂಲ ಎಲ್ಲಿಂದ ಎಂಬ ಉತ್ತರ ಕಂಡುಕೊಳ್ಳಲು

ಪ್ರಯತ್ನಿಸಲಾಗಿದೆ. ಮಾಂಗ ಅಥವಾ ಮಂಗ ಎಂದರೆ, ಬೇಡು, ಕೇಳೂ ಎಂದರ್ಥ. ಗಾರುಡಿಗ ಎಂದರೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ತಿರುಗುತ್ತ ಹೋಗುವುದು. ಮಂಗಾರವಾಡಿಪದ ಹೇಗೆ ಹುಟ್ಟಿರಬೇಕು ಪದ ನಿಷ್ಪತ್ತಿಯಿಂದ ಒಂದು ಶಬ್ದದ ಸಂಯುಕ್ತ ರೂಪವನ್ನು ಎರಡಾಗಿಸಿ ವಿಭಾಗಿ ಅದರ ಅರ್ಥವಿವರಣೆ ಹುಡುಕಲಾಗಿದೆ. ಅದರಲ್ಲೂ ಸಮಾಸಯುಕ್ತಪದ. ಒಡೆದು ಹೇಗೆ ಅರ್ಥವನ್ನು ಕೊಡಬಹುದು. ಈ ಪದಕ್ಕೆ ಅರ್ಥ ಸಂಭವನೀಯ ಎಂದು ತೀರ್ಮಾನಿಸುವುದು ಪದವೊಂದು ಹುಟ್ಟಿರಬಹುದಾದ ಮೂಲವನ್ನೇ ಹಿಡಿದುಕೊಂಡು ವರ್ತಮಾನದಲ್ಲಿ ಅದರ ವಿವರಣೆ ಹೊಂದಿರುವುದು ಎಂದು ತೀರ್ಮಾನಿಸುವುದು ಕಷ್ಟ ಎಂಬುದು ಗೋಚರಿಸುತ್ತದೆ.

೧.೪. ಮಂಗಾರವಾಡಿಗರ ಜನಸಂಖ್ಯೆ

ಮಂಗಾರವಾಡಿಗರು ಗುಲಬರ್ಗಾದ ಬಾಪೂನಗರ ಮತ್ತು ಸುಂದರನಗರಗಳಲ್ಲಿ ನೆಲೆಸಿದ್ದಾರೆ. ಕೌಟುಂಬಿಕವಾಗಿ ಮನೆಯಲ್ಲಿ ತಂದೆ ತಾಯಿ, ಅಣ್ಣ ತಮ್ಮ, ಅಕ್ಕ, ತಂಗಿ ಎಲ್ಲರು ಕೂಡಿಕೊಂಡಿರುವುದು ತಿಳಿದುಬರುತ್ತದೆ. ಮಹಿಳೆ ಮತ್ತು ಪುರುಷ ಜನಸಂಖ್ಯೆ –೫೪೯. ಪುರುಷರ ೨೯೭ ಮಹಿಳೆಯರು ಸಂಖ್ಯೆ, ೨೫೨ ಇದ್ದಾರೆ. ಮಕ್ಕಳ ಸಂಖ್ಯೆ ೧೫೨ವಿರುವುದು ತಿಳಿದುಬರುತ್ತದೆ. ಇದರಲ್ಲಿ ಹೆಚ್ಚಾಗಿ ಮಹಿಳೆ ಮತ್ತು ಪುರುಷರು ಅನಕ್ಷರಸ್ಥರಾಗಿದ್ದಾರೆ. ಆದರೆ ಇತ್ತೀಚ್ಚಿನ ದಿನಗಳಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ನೀಡುತ್ತಿದ್ದಾರೆ. ಜಿಲ್ಲೆಯಲ್ಲಿ ಮಂಗಾರವಾಡಿಗರು ಹೆಚ್ಚಾಗಿರುವುದು ಕಂಡುಬರುವುದಿಲ್ಲ ಉಳಿದ ಜಿಲ್ಲೆಗಳಲ್ಲಿ ಬೀದರ್, ವಿಜಾಪೂರ, ಬೆಂಗಳೂರು ಮುಂತಾದ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ.

೧.೫. ಅಧ್ಯಯನದ ಉದ್ದೇಶ

ಮಂಗಾರವಾಡಿಗರು ದಿನನಿತ್ಯದ ಬದುಕಿನ ನಿರ್ವಹಣೆಗಾಗಿ ಯಾವುದೇ ಕೆಲಸ ಮಾಡುವುದು ಕಂಡುಬರುವುದಿಲ್ಲ ಇವರ ಬದುಕು ಯಾವುದೇ ಆರ್ಥಿಕ ಅವಲಂಬನೆ ಹೊಂದಿದಾರೆಂದು ಎನ್ನುವುದು ಗುರ್ತಿಸುವುದು ಅತಿ ಕಷ್ಟಕರವಾಗಿದೆ. ಹಾಗಾಗಿ, ಇವರು ಜನ ಸಾಮಾನ್ಯರ ದೃಷ್ಟಿಯಲ್ಲಿ ಕಳ್ಳರೆಂಬ ಹಣೆ ಪಟ್ಟಿಯನ್ನು ಹೊಂದಿದ್ದಾರೆ. ಬಸ್ಸಿನಲ್ಲಿ, ರೈಲ್ವೆಗಳಲ್ಲಿ, ರೈಲ್ವೆ ಸ್ಟೇಷನ್‌ಗಳಲ್ಲಿ ಕಳ್ಳತನ ಮಾಡಿಕೊಂಡು ಬದುಕುತ್ತಿದ್ದಾರೆಂಬ ವದಂತಿ ಇವೆ. ಹಾಗಾಗಿ ದಿನನಿತ್ಯದ ಬದುಕನು ಅರಿತುಕೊಳ್ಳುವ ಕೆಲಸ ಈ ಪ್ರಬಂಧದಲ್ಲಿ ಮಾಡಲಾಗಿದೆ. ಮಂಗಾರವಾಡಿ ಮಹಿಳೆಯರು ನಗರದ ಬೀದಿಗಳಲ್ಲಿ ಸಿಗುವ ಪ್ಲಾಸ್ಟಿಕ್ ಮತ್ತು ಆಯ್ದಿಕೊಳ್ಳುತ್ತಾರೆ. ಆ ನಿಟ್ಟಿನಲ್ಲಿಯು ಮನೆಯ ಸುತ್ತಮುತ್ತಲಿರುವ ಬೆಲೆ ಬಾಳುವ ವಸ್ತುಗಳನ್ನು ಕಳ್ಳತನ ಮಾಡಿಕೊಂಡುಬದುಕುತ್ತಾರೆ. ಗಂಡು ಹೆಣ್ಣು ಬೇದಭಾವವಿಲ್ಲದೆ ಕಳ್ಳತನದಂತಹ ಕೆಲಸದಲ್ಲಿ ಭಾಗಿಯಾಗುತ್ತರೆಂಬುದನ್ನು ತಿಳಿದು ಬರುವ ವಿಷಯವಾಗಿದೆ. ಹೆಣ್ಣು ಮಕ್ಕಳು

ಬಸ್‌ಸ್ಟ್ಯಾಂಡ್‌ಗಳಲ್ಲಿ, ರೈಲ್ವೆಗಳಲ್ಲಿ ಹೆಣ್ಣು ಮಕ್ಕಳ ಕತ್ತಿನಲ್ಲಿರುವ ಸರಗಳ್ಳತನ ಮಾಡುತ್ತಾರೆಂಬ ವದಂತಿ ಇದೆ. ಹಿಂದಿನ ದಿನಗಳಲ್ಲಿ ಅನೇಕ ತೊಂದರೆಗಳನ್ನು ಎದುರಿಸದೆ ಇಂಥಹ ಕೆಲಸಕ್ಕೆ ಕೈ ಹಾಕಿದರೆಂಬುದು ತಿಳಿದು ಬರುತ್ತದೆ. ಆದರೆ ಇತ್ತೀಚ್ಚಿನ ದಿನಗಳಲ್ಲಿ ಅವರ ಬದುಕು ಪರಿವರ್ತನೆಯತ್ತ ಸಾಗುತ್ತಿದೆ ಎನ್ನುವ ಹಿನ್ನೆಲೆಯಲ್ಲಿ ಗತ ಕಾಲದಿಂದ 'ಬುಡ್ಡಕಟ್ಟುಗಳು ಮತ್ತು ಅಲೆಮಾರಿ ಜನರು ಬೇರೆ ಜಾತಿಗಳೊಡನೆ ಬೇರೆಯದೆ ಬಹಳ ಸ್ವತಂತ್ರವಾಗಿಯೇ ಇದ್ದು ಬೆಟ್ಟ ಗುಡ್ಡಗಳಲ್ಲಿ ವಾಪಿಸುತ್ತಿದ್ದುದೇ ಪ್ರಮುಖವಾಗಿ ಹಿಂದು ಧರ್ಮದ ಪ್ರಭಾವದಿಂದ ಕೊಂಡಿದ್ದರಿಂದ ಇವು ಹಿಂದೂ ಧರ್ಮದ ಕೆಲವು ಅಂಶಗಳನ್ನು ಒಳಗೊಂಡಿದ್ದರೂ ಬಹುಮಟ್ಟಿಗೆ ತಮಗೇ ವಿಶಿಷ್ಟವಾಗಿ ಸಂಸ್ಕೃತಿಯನ್ನು ರೂಪಿಸಿಕೊಂಡವು.[೧] ಪ್ರಸ್ತುತದವರೆಗಿನ ಬದುಕನ್ನು ಹಂತಹಂತವಾಗಿ ಅಭ್ಯಾಸಿಸುತ್ತ ಹೋದಾಗ ಅವರು ಬದಲಾವಣೆಯತ್ತ ಸಾಗುತ್ತಿರುವುದು ಗಮನಾರ್ಹವಾದ ಸಂಗತಿ ಎಂದು ಹೇಳಬೇಕು.

ಪ್ರಸ್ತುತದಲ್ಲಿ ಪುರುಷ ಮತ್ತು ಮಹಿಳೆಯರು ಕೆಲಸಕಾರ್ಯಗಳನ್ನು ಮಾಡುತ್ತಿರುವುದು ತಿಳಿದುಬರುತ್ತದೆ. ಪುರುಷರು ಆಟೋರಿಕ್ಷಾ, ರಿಕ್ಷಾ ಮತ್ತು ವಿವಿಧ ಕೆಲಸಗಳ ಜೊತೆಗೆ ಒಕ್ಕಲುತನದಂತ ಕೆಲಸಗಳಲ್ಲಿ ಬೇರೊಬ್ಬರ ಮನೆಯ ಜೀತದಾಳುಗಳಾಗಿ ಕೆಲಸಮಾಡುತ್ತಿದ್ದಾರೆ. ಆದರೆ ನಗರ ಬೇರೆ ಬೇರೆ ಸಮುದಾಯದವರು ಮಂಗಾರವಾಡಿಗರು ಇನ್ನೂ ಕಳ್ಳತನ ವೃತ್ತಿ ಮಾಡುವ ಸಮುದಾಯದವರೆಂದು ತಿಳಿದು ಇವರ ಜೊತೆ ಜನರು ಸೇರಲು ಹಿಂಜರಿಯುತ್ತಾರೆ. ಬೇರೆ ಬೇರೆ ಸಮುದಾಯದವರು ಕಳ್ಳತನ ಮಾಡಿದರೆ ಅದು ಮಂಗಾರವಾಡಿ ಜನರು ಮಾಡಿದರೆಂದು ಆರೋಪಿಸುತ್ತಾರೆ ಮತ್ತು ಪೊಲೀಸರಿಗೆ ದೂರು ಕೊಡುತ್ತಾರೆ ಪೊಲೀಸರು ಮಂಗಾರವಾಡಿಗರನ್ನು ದೈಹಿಕವಾಗಿ, ಮಾನಸಿಕವಾಗಿ, ತೊಂದರೆಗೊಳಪಡಿಸುತ್ತಾರೆ ಎಂಬ ನೋವು ಮಂಗಾರವಾಡಿಗರಲ್ಲಿದೆ. ಕಳ್ಳತನ ಮಾಡುವವರೆ ಬೇರೆ, ಗುಲಬರ್ಗಾದಂತಹ ದೊಡ್ಡ ನಗರದಲ್ಲಿ ಹಲವಾರು ಜಾತಿ ಮತ್ತು ಜನಾಂಗದ ಜನರು ನೆಲೆಸಿದ್ದಾರೆ ಏನೇ ಕಳ್ಳತನವಾದರೆ ಅದು ಮುಂಗಾರವಾಡಿಗರು ಮಾಡಿದರೆಂಬ ಆರೋಪ ಮಾಡುತ್ತಾರೆ ಬಾಯಿಂದ ಬಾಯಿಗೆ ಮಾತಿನ ಮೂಲಕ ತಿಳಿದ ವಿಷಯ ಅವಮಾನಕರ ಜೀವನ ನಡೆಸುತ್ತಿದ್ದಾರೆ. ಬೇರೆ ಯಾರೊಬ್ಬರು ಮಾಡಿದರೂ ಅದು ಮಂಗಾರವಾಡಿಗರೆಂಬ ಮಾತು ತಿಳಿದುಬರುತ್ತದೆ. ಈ ಹಿನ್ನೆಲೆಯಿಂದ ಬೇರೆ ಸಮುದಾಯಗಳು ಅಪಮಾನಕರ ದೃಷ್ಟಿಯಿಂದ ಸಮುದಾಯಗಳು ನೋಡುತ್ತಿವೆ. ಈ ಹಿನ್ನೆಲೆಯಲ್ಲಿ ಮೂಲತಃಹವಾಗಿ ಯಾರು ಕಳ್ಳತನ ಮಾಡಿದರು ಎಲ್ಲಿ ಮಾಡಿದರು ಏನು ಕಳ್ಳತನ ಮಾಡಿದರೆಂಬುದು ಪೊಲೀಸರು ಕೇಳುವುದಿಲ್ಲ ಮೊದಲು ಬಂದು ಮಂಗಾರವಾಡಿ ಮಹಿಳೆ ಮತ್ತು ಪುರುಷನ್ನು ಬಂದಿಸುತ್ತಾರೆ. ಅವರ ಜೀವನ ನಡೆಸುವುದಕ್ಕೆ ತೊಂದರೆಯಾಗುತ್ತಿದೆ. ಹಲವಾರು ಅಪವಾದಗಳು ಆರೋಪಗಳು ಮಂಗಾರವಾಡಿ ಸಮುದಾಯದ ಮೇಲೆ ಇವೆ.

ಆದರೆ ಸಣ್ಣಪುಟ್ಟ ತಪ್ಪುಗಳು ಮಾಡಿದವರಿಗೆ ಪೊಲೀಸರು ಅವರನ್ನು ಶಿಕ್ಷಿಸಬೇಕು ಇದಲ್ಲದೆ ಇಡಿ ಸಮುದಾಯಕ್ಕೆ ತೊಂದರೆ ಕೊಡುತ್ತಾರೆ ತಪ್ಪು ಮಾಡಿದವರನ್ನು ಯಾರು ಏನು ಅರಿತುಕೊಳ್ಳದೆ ಕಳ್ಳತನ ಆರೋಪದ ಹಿನ್ನೆಲೆಯಲ್ಲಿ ಮಂಗಾರವಾಡಿಗರನ್ನು ಹಿಂಸಿಸುತ್ತಿದ್ದಾರೆ ಎಂಬವಾದ ಮಂಗಾರವಾಡಿ ಮಹಿಳೆಯರದಾಗಿದೆ.

ಮಹಿಳೆಯರು 'ದುಡಿಯುವ ಮಹಿಳೆಯ ಧ್ವನಿ (The Voice of working women) ಎಂಬ ಪೂರ್ತಿ ಎಡ ಪಂಥೀಯ ದ್ವೈಮಾಸಿಕ ಆಂಗ್ಲ ಪತ್ರಿಕೆಯನ್ನು ಭಾರತೀಯ ಕಾರ್ಮಿಕ ಸಂಘಗಳ ಕೇಂದ್ರದ (CITU Centra for Indian Trade Unions)ಮಹಿಳಾ ಶಾಖೆಯಾದ AICCWW-All India Co-ordination committee of Working women ಪ್ರಕಟಿಸುತ್ತದೆ[೨] ಇವರ ಎಲ್ಲಾ ವರ್ಗದ ದುಡಿಯುವ ಮಹಿಳೆಯರು. ಸಣ್ಣ ಸಣ್ಣ, ಸಂಘಗಳು ಸ್ತ್ರೀಶಕ್ತಿ ಗುಂಪುಗಳು ಜೊತೆಸೇರಿ ಒಳ್ಳೆಯ ರೀತಿಯಲ್ಲಿ ಜೀವನ ಸಾಗಿಸುತ್ತಿರುವುದು ತಿಳಿದು ಬರುತಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ, ಹಿಂದೂಳಿದಿದ್ದಾರೆ, ಜೊತೆಗೆ, ಕೂಲಿ ಕೆಲಸ, ಹೋಟೆಲುಗಳಲ್ಲಿ, ಬಾರ್‌ಗಳಲ್ಲಿ ಹುಡುಗರು ಕೆಲಸಮಾಡುತ್ತಿದ್ದಾರೆ. ಇದರಿಂದ ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಎದುರಿಸುವ ಸಮಸ್ಯೆಗಳನ್ನು ಅರಿತು ಕೆಲಸ ಮಾಡುತ್ತಿದ್ದಾರೆ. ಆದರೂ ಕೂಡಾ ಅವರ ಮೇಲೆ ಕಳ್ಳತನ ಹೊರಿಸುತ್ತಿದ್ದಾರೆ. ಆದರೆ ಇದಕ್ಕೆ ಮುಖ್ಯ ಕಾರಣ ಅವರ ಮೇಲಿರುವ ಕಳ್ಳತನದ ಆರೋಪ, ಮುಕ್ತಿ ಹೊಂದುವುದು ಯಾವಾಗ ಎಂಬುದು ತಿಳಿಯದಾಗಿದೆ. ಮುಂಬರುವ ಪೀಳಿಗೆಗಳಲ್ಲಿ ಇಂತಹ ಆರೋಪ ಮಾಡಿ ಅವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂತಹ ಕೆಲಸಗಳು ಅಧಿಕಾರಿಗಳು ಮೇಲ್ವರ್ಗದವರು ಕೈಗೊಳ್ಳುತ್ತಿದ್ದಾರೆಂಬುದು ಹೇಳುತ್ತಾರೆ. ಅಧಿಕಾರಿಗಳು ನ್ಯಾಯವಾದ ರೀತಿಯಲ್ಲಿ ಸೂಕ್ತವಾದ ಸ್ಥಾನ ನೀಡಬೇಕಾಗಿರುವುದು ಅವರ ಕರ್ತವ್ಯ. ಅದನ್ನು ಬಿಟ್ಟು ಯಾರೇ ಕಳ್ಳತನ ಮಾಡಿದರೂ ಮೊದಲು ಬಂದು ಮುಂಗಾರವಾಡಿ ಮಹಿಳೆ ಮತ್ತು ಪುರಷರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ತೊಂದರೆಗೊಳಪಡಿಸುತ್ತಾರೆ. ನಾವು ನಮ್ಮ ಸಮುದಾಯ ಯಾರೊಬ್ಬರು ಮಾಡಿರುವ ಕಳ್ಳತನ ಇಡೀ ಸಮುದಾಯಕ್ಕೆ ಕೆಟ್ಟ ಹೆಸರು ಸಿಗುತ್ತದೆ ಎಂಬುದು ಅರಿತುಕೊಂಡು ಒಳ್ಳೆಯ ರೀತಿಯಲ್ಲಿ ಜೀವನ ಸಾಗಿಸುತ್ತಾರೆ. ತಾವು ಸ್ವತಃಹ ತಮ್ಮ ಬೆವರು ಸುರಿಸಿ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಮಾಡಿಸುತ್ತಿದ್ದಾರೆ. ಹಿಂದಿನ ದಿನಗಳಲ್ಲಿ ತಾವು ಅನುಭವಿಸಿದ ಕಷ್ಟ-ನಷ್ಟಗಳು ನಮ್ಮ ಮಕ್ಕಳಿಗೆ ಮತ್ತು ಸಮುದಾಯಕ್ಕೆ ಯಾವುದೇ ತೊಂದರೆಗಳು ಆಗಬಾರದೆಂಬ ನಿಲುವು ಹೊಂದಿದ್ದಾರೆ. ಇವರ ಮೇಲೆ ಇದ್ದ ಆರೋಪಗಳು ತಮ್ಮ ಮಕ್ಕಳಿಗೆ ಬರಬಾರದೆಂಬ ಉದ್ದೇಶ ಹೊಂದಿದ್ದಾರೆ. ಹಿಂದಿನ ಕಾಲದಲ್ಲಿ ತಾವು ಅನುಭವಿಸಿಕೊಂಡು ತಿಂದ ಒದೆಗಳು ಮತ್ತು ನರಕಯಾತನೆ ಅನುಭವಿಸಿದ್ದೇವೆ ಅದನ್ನು ನಮ್ಮ ಮುಂದಿನ ಪೀಳಿಗೆಗೆ ಆಗಬಾರದೆಂಬ ಧ್ಯೇಯವನ್ನು

ಹೊಂದಿದ್ದಾರೆ. ಹಿಂದಿನ ದಿನಗಳಲ್ಲಿ ಆರ್ಥಿಕವಾಗಿ ಗಂಭೀರ ಪರಿಸ್ಥಿತಿಯಲ್ಲಿರುವಾಗ ಅನ್ನ ನೀರು ಸಿಗದೆ ಇರುವ ಸಂದರ್ಭದಲ್ಲಿ ಯಾರೋ ಒಬ್ಬ ಮಂಗಾರವಾಡಿ ಸಮುದಾಯ ಮಹಿಳೆ ಮತ್ತು ಪುರುಷ ಕಳ್ಳತನ ಮಾಡಿದರೆಂಬುದು ತಿಳಿದ ಸಂಗತಿ, ಆದರೆ, ಬರಬರುತ್ತ ಮಂಗಾರವಾಡಿಗರನ್ನು ಕಳ್ಳರೆಂದು ಗುರ್ತಿಸತೊಡಗಿದರು ಅದರಲ್ಲು ಕೂಡಾ ಮಹಿಳೆಯು ತುಂಬಾ ಚಾಣಾಕ್ಷ ತನದಿಂದ ಕಳ್ಳತನ ಮಾಡುತ್ತಿದ್ದರೆಂಬುದು ಹೇಳುವ ವದಂತಿ ಇದೆ. ತದನಂತರದಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಬ್ರಿಟೀಷರಿಂದ ಮುಕ್ತಿ ಹೊಂದಿದಂತಾಯಿತ್ತು.

ಸ್ವತಂತ್ರ್ಯ ಬಂದ ನಂತರ 'ಭಾರತದ ಸಂವಿಧಾನದಲ್ಲಿ ಸರ್ಕಾರ, ಹಲವು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸೌಲಭ್ಯಗಳನ್ನು ಬುಡಕಟ್ಟು ಮತ್ತು ಅಲೆಮಾರಿ ಜನಾಂಗಕ್ಕೆ ಒರಗಿಸಿದೆ. ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿ ಮಾಡಿದಲ್ಲದೆ. "ಮಕ್ಕಳ ವಿದ್ಯಾಭ್ಯಾಸವನ್ನು ಪಡೆಯುವುದು ಅವರ ಹಕ್ಕು"[೩] ಸಂವಿಧಾನದಲ್ಲಿ ಸೇರಿಸಲಾಗಿದೆ.' ಸಂವಿಧಾನದಲ್ಲಿ ಬುಡಕಟ್ಟುಗಳಿಗೆ ಮೀಸಲಾತಿಯನ್ನು ಕಲ್ಪಿಸಲಾಯಿತು. ಅದನ್ನು ತಲುಪಬೇಕಾದರೆ ಹತ್ತು ಹದಿನೈದು ವರ್ಷಗಳು ಕಳೆದವು ಕೆಲವೊಂದು ಬುಡಕಟ್ಟುಗಳು ಕಾಡು ಗುಡ್ಡ ಬೆಟ್ಟಗಳಲ್ಲಿರುವಂತಹದು ತಿಳಿದುಬರುತ್ತದೆ. ಆದರೆ ಬರಬರುತ್ತ, ಕೆಲವು ಬುಡಕಟ್ಟುಗಳು ಬದಲಾವಣೆಯತ್ತ ಸಾಗಿದವು ಎಂಬುದು ಗಮನಿಸಬೇಕಾದ ವಿಷಯವಾಗಿದೆ. ಆದರೆ ಅವುಗಳು ತಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಮಾತ್ರ ಬುಡಕಟ್ಟುಗಳು ಹಾಗೆಯೇ ಮುಂದುವರೆಸಿಕೊಂಡು ಬರುತ್ತಿವೆ. ಸಂಸ್ಕೃತಿ ಪರಂಪರೆ ಆಚಾರ, ವಿಚಾರಗಳು ಯಥಾವತ್ತಾಗಿಬೆಳಸಿಕೊಂಡು ಬರುತಿರುವುದು ಗಮನಿಸಬಹುದಾಗಿದೆ. ಆದರೆ ಇಂದಿನ ದಿನಗಳಲ್ಲಿ ಕೆಲವೊಂದು ಬುಡಕಟ್ಟುಗಳು ಕಾಡು ಗುಡ್ಡ, ಬೆಟ್ಟಗಳಲ್ಲಿ ಉಳಿದುಕೊಂಡಿರುವುದು ತಿಳಿದುಬರುತ್ತದೆ. ಅವರಿಗೆ ಸ್ವತಂತ್ರ್ಯ ಅರಿವು ಮತ್ತು ಅಕ್ಷರದ ಅರಿವು ತಮ್ಮ ಹಕ್ಕುಗಳು ಸೌಲತ್ತುಗಳನ್ನು ದೂರದರ್ಶನ ಮಾದ್ಯಮದ ಮೂಲಕ ತಿಳಿ ಹೇಳುವ ಕೆಲಸ ಸಾಗುತ್ತಿದೆ. ಸ್ವಲ್ಪ ಮಟ್ಟಿಗೆ, ನಗರ ಪ್ರದೇಶಗಳನ್ನು ಸೇರುತ್ತಿದ್ದಾರೆ, ಬುಡಕಟ್ಟುಗಳು ನಗರನಿವಾಸಿಗಳಂತೆ, ಗ್ರಾಮೀಣ ಪ್ರದೇಶದ ಜನರಂತೆ ಬದಕಲು ಕಾನೂನಿನಲ್ಲಿ ಸಾಮಾನ್ಯವಾಗಿ ಎಲ್ಲರಿಗೂ ಅವಕಾಶಗಳನ್ನು ಕಲ್ಪಿಸಲಾಗಿದೆ. ಆದರೂ ಕೂಡ ಅವರನ್ನು ನೋಡುವ ದೃಷ್ಟಿಯೇ ಬೇರೆಯಾಗಿರುತ್ತದೆ. ಎಂಬುದು ಸತ್ಯದ ಸಂಗತಿಯಾಗಿದೆ. ಕಾನೂನಿನ ಚೌಕಟ್ಟಿನ ಅಳತೆಯಲ್ಲಿ, ಸಾಮಾನ್ಯವಾಗಿ ಸ್ಥಾನಮಾನಗಳೂ ನೀತಿಗಳೂ ಕಾಯ್ದೆಗಳು ಎಲ್ಲರಿಗೂ ಒಂದೇಯಾಗಿವೆ. ಕಾನೂನು ಯಾರಿಗೂ ಬೇದವನ್ನು ಬಯಸುವುದಿಲ್ಲ. ಆದರೆ ಆಡಳಿತ ವರ್ಗದಲ್ಲಿ ಆಗುವಂತಹವರು ಅಧಿಕಾರಗಳ ಸ್ವಾರ್ಥತೆ ನೋಡುತ್ತೇವೆ. ಇದ್ದರಿಂದ ಒಂದು ಸಮುದಾಯವು ಮತ್ತೊಂದು ಸಮುದಾಯಕ್ಕೆ ಮತ್ತು ಸಮುದಾಯದ ಜನರನ್ನು ದ್ವೇಷಿಸುವುದು ಇದಕ್ಕೆ ಕಾರಣ

ಕೀಳು ಜಾತಿ, ಕೆಳಮಟ್ಟದಲ್ಲಿರುವುದೇ ಎಂಬುದು ಖಚಿತವಾಗುತ್ತದೆ. ಏಕೆಂದರೆ ಪುರೋಹಿತ ಶಾಹಿಗಳು ಆಡಳಿತ ವರ್ಗದವರು ತಮ್ಮ ಅನುಕೂಲಕ್ಕಾಗಿ ಜಾತಿಮತ, ಪಂಥಗಳನ್ನು ಹುಟ್ಟಿಸಿದರೂ ಮೇಲು-ಕೀಳು, ಉಚ್ಚ-ನಿಚ್ಚ, ಎಂಬ ಬೇದ ನೀತಿಯಿಂದ ಅನೇಕ ಆದಿವಾಸಿಗಳು ಬುಡಕಟ್ಟುಗಳು ಅಲೆಮಾರಿಗಳು ತೊಂದರೆಗೊಳಗಾದವು ಅಂತಹ ತೊಂದರೆಗಳು ಸಹಿಸಿಕೊಳ್ಳಲಾರದೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗುವಾಗ ಸಣ್ಣ ಪುಟ್ಟ ಕಳ್ಳತನ ಮಾಡುವುದು ಅನಿವಾರ್ಯವಾಯಿತ್ತು. ಅದನ್ನೇ ಅವರು ಮೂಲ ವೃತ್ತಿಯಾಗಿ ಮಾಡಿಕೊಂಡರು ಏಕೆಂದರೆ ಆರ್ಥಿಕವಾಗಿ ತೊಂದರೆಗಿಡಾದಾಗ ತಪ್ಪುಗಳು ಮಾಡುವುದು ಸಹಜ. ಹೊಟ್ಟೆಗೆ ಅನ್ನ ನೀರಿಲ್ಲದೆ ಮನುಷ್ಯ ಬಾಳುವುದು ಕಷ್ಟ ಅದನ್ನು ಸಿಗದೆ ಹೋದಾಗ ಕಳ್ಳತನ ಮಾಡುವುದನ್ನು ಕಲಿತು ಕೊಂಡರು ಎಂದು ಹೇಳವುದು ಕಷ್ಟಕರವಾಗಿದೆ ಏಕೆಂದರೆ ತಮ್ಮ ಹೊಟ್ಟೆಪಾಡಿಗಾಗಿ ಮಾಡುವುದು ಕಳ್ಳತನವಲ್ಲ ದೈಹಿಕ ದಾಹವನ್ನು ಹಸಿವನ್ನು ಹಿಂಗಿಸಿಕೊಳ್ಳುವ ಬಯಕೆಯಿಂದ ಅಂತಹ ಕೆಲಸಕ್ಕೆ ಮಾರು ಹೋಗಬೇಕಾಯಿತು. ಆದರೆ ಇಂದಿನ ದಿನಗಳಲ್ಲಿ ಬೆಳವಣಿಗೆ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಅಲೆಮಾರಿಗಳ, ಆದಿವಾಸಿಗಳ, ಸ್ಥಿತಿಗತಿ ಏನಾಗಿದೆ ಎಂಬುದು ಸ್ವಲ್ಪ ತಿರುಗಿನೋಡುವ ಕೆಲಸವಾಗಬೇಕಾಗಿದೆ. ಇಂದಿನ ದಿನಗಳಲ್ಲಿ ಮಾಧ್ಯಮಗಳು ದೂರದರ್ಶನಗಳ ಮುಖಾಂತರ ಅರಿವು ಮೂಡಿಸುವಂತಹ ಕಾರ್ಯರಂಭವಾಗಬೇಕಾದದು ಅಗತ್ಯದ ಸಂಗತಿಯಾಗಿದೆ. ಪ್ರಸ್ತುತ ದಿನಗಳಲ್ಲಿ ಮಂಗರವಾಡಿಗರು ಕಳ್ಳತನ ಮಾಡುತ್ತಿರೆಂಬ ಆಪಾದನೆಗೆ ಗುರಿಯಾಗಿದ್ದಾರೆ. ಬೇರೆ ಬೇರೆ ಸಮುದಾಯದವರು ಕಳ್ಳತನ ಮಾಡಿದರೆ ಶಿಕ್ಷೆ ಅನುಭವಿಸುವುವವರು ಮಂಗಾರವಾಡಿಗರು ಆದರೆ ಮೂಲಃತಹವಾಗಿ ಅಂತಹ ಆರೋಪ ಹೋಗಲಾಡಿಸುವುದೆ. ಈ ಅಧ್ಯಯನದ ಉದ್ದೇಶವಾಗಿದೆ. ಆದರೆ ಬೇರೆ ಬೇರೆ ಸಮುದಾಯದ ಜನರೂ ಅಕ್ಕ ಪಕ್ಕದ ನಿವಾಸಿಗಳು ಎಲ್ಲೆ ಕಳ್ಳತನವಾದರೆ ಅದಕ್ಕೆ ಮಂಗಾರವಾಡಿಗರೆಂದು ಬೆರಳುಮಾಡಿತೋರಿಸುತ್ತಾರೆಂದು ಹೇಳುತ್ತಾರೆ. ಇಂತಹ ವ್ಯವಸ್ಥೆಯಲ್ಲಿ ಮಂಗಾರವಾಡಿಗರು ಬೇಸತ್ತು ಸಮುದಾಯಗಳಲ್ಲಿ ಒಳ್ಳೆಯ ಜೀವನ ನಡೆಸಲು ಸಾಧ್ಯವಾಗದೇ ಹಿಂದುಳಿದಿದ್ದಾರೆ. ಈ ಎಲ್ಲಾ ಆರೋಪವನ್ನು ಹೋಗಲಾಡಿಸುವುದೇ ಈ ಅಧ್ಯಯನದ ಉದ್ದೇಶವಾಗಿದೆ.

೧.೬ ಅಧ್ಯಯನದ ವ್ಯಾಪ್ತಿ

ಮಂಗಾರವಾಡಿ ಮಹಿಳಾ ಅಧ್ಯಯನ ಎಂಬ ಈ ಪ್ರಬಂಧಕ್ಕೆ ಪೂರಕ ಮತ್ತು ಪ್ರಾಥಮಿಕ ಆಕರಗಳ ಅವಶ್ಯಕತೆಗಾಗಿ ಹೈದರಾಬಾದ್ ಕರ್ನಾಟಕದ, ಹೃದಯಭಾಗವಾದ ಗುಬಲರ್ಗಾ ಜಿಲ್ಲೆಯನ್ನು ಅಧ್ಯಯನದ ವ್ಯಾಪ್ತಿಗೆ ಆಯ್ದುಕೊಳ್ಳಲಾಗಿದೆ.

ಅಡಿ ಟಿಪ್ಪಣಿಗಳು

೧. ಕರ್ನಾಟಕದ ಬುಡಕಟ್ಟುಗಳು, ಡಾ. ಆರ್.ರಾಮಕೃಷ್ಣ, ಪು.ಸಂ-೪

೨. ಮಹಿಳೆ ಮತ್ತು ಸಮೂಹಮಾದ್ಯಮಗಳು, ಡಾ.ಆರ್.ಸರೋಜಾ, ಪು.ಸಂ-೬೬

೩. ಬುಡಕಟ್ಟು ಅಧ್ಯಯನ ಸಂಪುಟ-೩, ಸಂಚಿಕೆ-೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ-೨೭೩, ೨೦೦೬

ಅಧ್ಯಾಯ - ೨

ಮಂಗಾರವಾಡಿಗಳ ಮೂಲ ಮತ್ತು ವಲಸೆ

ಅಧ್ಯಾಯ – ೨

ಮಂಗಾರವಾಡಿಗಳ ಮೂಲ ಮತ್ತು ವಲಸೆ

ಭಾರತದಲ್ಲಿ ಅನೇಕ ಸಮುದಾಯ ಮತ್ತು ಬುಡಕಟ್ಟಿನ ಜನರು ಗ್ರಾಮ ಸಂಸ್ಕೃತಿಗೂ ಹಾಗೂ ನಗರ ವ್ಯವಸ್ಥೆಗೆ ಸೇರಿಕೊಳ್ಳದೇ ತಮ್ಮದೇ ಆದ ವಿಶಿಷ್ಟ ಸಂಸ್ಕೃತಿ ಹಾಗೂ ಪರಂಪರೆಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಇವರು ತಮ್ಮ ವಿಶಿಷ್ಟ ಸಂಸ್ಕೃತಿಯ ನೆಲೆಯಲ್ಲಿ ನಂಬಿಕೆ, ಸಂಪ್ರದಾಯ ಸಂಸ್ಕೃತಿ ಮುಂತಾದ ಹಲವಾರು ಅಂಶಗಳಿಂದ ಭಾರತೀಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ. ಕರ್ನಾಟಕದ ಅನೇಕ ಅಲೆಮಾರಿ ಬುಡಕಟ್ಟಿನ ಜನರಲ್ಲಿ ಮಂಗಾರವಾಡಿಗರು ಕಂಡು ಬರುತ್ತಾರೆ. ಇವರು ಭಾರತದ ಮಹಾರಾಷ್ಟ್ರ ರಾಜ್ಯದ ಬಾಂಬೆ ಪ್ರದೇಶದವರೆಂದು ಹೇಳುತ್ತಾರೆ. ಆದರೆ ಇದು ಚರ್ಚಾಸ್ಪದವಾಗಿದೆ ಇದಕ್ಕೆ ನಿಖರವಾದಂತಹ ಆಧಾರಗಳಿಲ್ಲ. ಮುಂದೇ ಭಾರತದ ನಾನಾ ರಾಜ್ಯಗಳಲ್ಲಿ ಪಸರಿಸಿ ಕೊಂಡಿರುವಂತಹದು ತಿಳಿದುಬರುತ್ತದೆ. ಸಮಕಾಲೀನ ಸಂದರ್ಭದಲ್ಲಿ ಇರುವ ಕರ್ನಾಟಕ ಹಲವಾರು ಜಿಲ್ಲೆಯಗಳಲ್ಲಿ ನೆಲೆಸಿರುವಂತಹದು ಕಂಡುಬರುತ್ತದೆ. ಗುಲಬರ್ಗಾ, ಬೀದರ ಬಸವಕಲ್ಯಾಣ, ಹುಮನಾಬಾದ, ಬಿಜಾಪೂರ, ಬೆಂಗಳೂರು, ಇಂಡಿ ತಾಲೂಕು ಜಿಲ್ಲೆಗಳಲ್ಲಿರುವಂತಹದು ಗುರ್ತಿಸಬಹುದಾಗಿದೆ.

'ಮಂಗಾರವಾಡಿ ಮಹಿಳೆಯರು ಇನ್ನೊಂದು ಜಾತಿ ಸಮುದಾಯದಿಂದ ಅನೇಕ ಬಗೆಗಳಲ್ಲಿ ಭಿನ್ನವಾಗಿ ನಿಲ್ಲಲು ಪ್ರಯತ್ನಿಸಿದಾರೆ, ಇದನ್ನೇ ಡಾ.ಬಿ.ಆರ್.ಅಂಬೇಡ್ಕರ್ ರವರು "ಪ್ರತ್ಯೇಕತೆ ಎಂಬುದು ಜಾತಿಯ ಒಂದು ಸ್ವಾಭಾವಿಕ ಪರಿಣಾಮ'ಎನ್ನುತ್ತಾರೆ. [1]ಮಂಗಾರವಾಡಿಗರು ಮೂಲಃತಹವಾಗಿ ಕಾಡುಗಳಲ್ಲಿ ಬೆಟ್ಟಗಳಲ್ಲಿ ತಮ್ಮ ಜೀವನ ನಡೆಸುತ್ತಿದ್ದರು ನಂತರ ಅಲೆಮಾರಿ ಜೀವನ ಆರಂಭಿಸಿ ದೇಶದ ಮೂಲ ಮೊಲೆಗಳಲ್ಲಿ ಸಂಚರಿಸಲು ಆರಂಭಿಸಿದರು ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ಹರಿಯಾಣ, ಪಂಜಾಬ್, ಓರಿಸ್ಸಾ, ಚಂಡಿಗಡ,

ಉತ್ತರಾಂಚಲ, ಹಲವಾರು ರಾಜ್ಯಗಳಲ್ಲಿರುವುದು ಕಂಡುಬರುತ್ತಾರೆ. ನಗರ ಪ್ರದೇಶಗಳಲ್ಲಿ ವಾಸಿಸಿದರೂ ಈ ಸಮುದಾಯವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಾಗೂ ಶೈಕ್ಷಣಿಕವಾಗಿ ಹಿಂದುಳಿದವರಾಗಿದ್ದಾರೆ. ಬ್ರಿಟೀಷರ ಕಾಲದಲ್ಲಿ ಜೀವನ ಪರ್ಯಂತರ ಅವರ ದಬ್ಬಾಳಿಕೆಯಲ್ಲಿ ಕಾಲಕಳೆದವರು ಅವರು ನೀಡುವ ಹಿಂಸೆ, ಮಾನಸಿಕ ಹಿಂಸೆ, ಸಮುದಾಯಗಳ ಮೇಲೆನ ದೌರ್ಜನ್ಯ ಮಹಿಳೆಯರ ಮೇಲೆ ಬಲತ್ಕಾರ, ಲೈಂಗಿಕ ಕಿರುಕುಳ ನೀಡುವುದುನ್ನು ತಾಳಲಾರದೆ ಅವರಿಂದ ಮುಕ್ತಿ ಹೊಂದಲು ಅವರು ಅಲೆಮಾರಿಗಳಾಗಿ ಬೇರೆ ಬೇರೆ ಕಡೆಗೆ ಪರಿಸರಿಕೊಂಡಿರುವುದು ತಿಳಿದುಬರುತ್ತದೆ.

ಮಂಗಾರವಾಡಿಗರು ಮೂಲಃತಹವಾಗಿ ಮರಾಠಿ ಭಾಷೆಯನ್ನು ತಮ್ಮ ಮಾತೃ ಭಾಷೆಯನ್ನಾಗಿ ಮಾಡಿಕೊಂಡು ಮರಾಠಿಯಲ್ಲಿಯೇ ಮಾತನಾಡುತ್ತಾರೆ ಅವರಿಗೆ ಕನ್ನಡ ಬರುವುದಿಲ್ಲ ಬಂದರೆ ಅಲ್ಪಸ್ವಲ್ಪ ಕನ್ನಡ ಮಾತನಾಡಬೇಕು ಎಂಬುದು ಅವರ ಒಂದು ಬಯಕೆ ಈ ಕರ್ನಾಟಕದಲ್ಲಿರುವ ಮಂಗಾರವಾಡಿಗರ ಕನ್ನಡವನ್ನು ಮಾತನಾಡಲು ಬಯಸುತ್ತಾರೆ. ಪುರುಷರು ಕನ್ನಡ ಚೆನ್ನಾಗಿ ಮಾತನಾಡುತ್ತಾರೆ ಅವರಲ್ಲಿ ಮಹಿಳೆಯರು ಕನ್ನಡ ಮಾತನಾಡಬೇಕಾದರೆ ತೊದಲುತ್ತಾರೆ ಆದರೂ ಸ್ವಲ್ಪ ಸ್ವಲ್ಪ ಮಾತಾಡುವುದನ್ನು ರೂಢಿಸಿಕೊಂಡಿದ್ದಾರೆ. ತಮ್ಮ ಜೀವನದ ವಿಧಾನ ಆಚಾರ ವಿಚಾರ ಪದ್ಧತಿಗಳು ಸಂಸ್ಕೃತಿ, ಇತಿಹಾಸಗಳ ಬಗ್ಗೆ ಅವರು ತಾಳಿರುವ ನಂಬಿಕೊಂಡಿರುವ ಸಾಂಸ್ಕೃತಿಕ ಜೀವನವನ್ನು ಉಳಿಸಿಕೊಳ್ಳುವುದರಲ್ಲೇ ಬದುಕುತ್ತಿದ್ದಾರೆ. ಮಂಗಾರವಾಡಿಗರಿಗೆ ಪ್ರತ್ಯೇಕ ಹೆಸರುಗಳನ್ನು ಕೊಡುವುದು ಸಮುದಾಯದಲ್ಲಿಲ್ಲ ಅಂದರೆ ಅವರಲ್ಲಿ ಒಳ ಪಂಗಡಗಳಿಲ್ಲವೆಂದು ಸಮುದಾಯದ ಹಿರಿಯರು ಹೇಳುವುದರಿಂದ ತಿಳಿದುಬರುತ್ತದೆ.

ಮಂಗಾರವಾಡಿಗರು ಮೂಲಃತಹ ಮಹಾರಾಷ್ಟ್ರದ ಬಾಂಬೆಯವರೆಂದು ಹೇಳುತ್ತಾರೆ. ಆದರೆ ಅವರ ಮೂಲದ ಬಗ್ಗೆ ಅನೇಕ ಗೊಂದಲಗಳಿವೆ, ನಿರ್ದಿಷ್ಟವಾಗಿ ಇದೇ ಪ್ರದೇಶದವರೆಂದು ಹೇಳಲು ವಿದ್ವಾಂಸರ ಅಭಿಪ್ರಾಯದಲ್ಲಿ ದ್ವಂದ್ವತೆ ಇದೆ. ಅವರ ಮೂಲವನ್ನು ಕಂಡುಹಿಡಯುವಲ್ಲಿ ಅವರ ಕುಲ, ವಂಶ, ಪರಂಪರೆಯನ್ನು ಗಮನಿಸಬೇಕಾದದು ಅಗತ್ಯ, ಮಂಗಾರವಾಡಿಗರು ನೀತಿ, ರೀತಿ, ಪರಂಪರೆ ಹಬ್ಬ-ಹರಿದಿನಗಳು ಆಚಾರ-ವಿಚಾರ ನಡೆ-ನುಡಿ ಇತ್ಯಾದಿಗಳನ್ನು ಸಾಧಾರಣವಾಗಿ ಈ ಒಂದು ಸಮುದಾಯದಲ್ಲಿ ಕಾಣಬಹುದಾಗಿದೆ. ಯಾವ ಕಾರಣಕ್ಕೂ ತಮ್ಮ ಮೂಲ ಸ್ಥಳವನ್ನು ಬಿಟ್ಟು ದೂರದ ಪ್ರದೇಶಗಳಿಗೆ ಹೋಗಿ ನೆಲೆಸುವುದಿಲ್ಲ. ಇವರು ಪ್ರಾದೇಶಿಕವಾಗಿಯೇ ಪರಿವರ್ತನೆಯನ್ನು ಹೊಂದುತ್ತಾರೆ. ಸಮುದಾಯವು ತಮ್ಮತನದೊಂದಿಗೆ ಮೂಲದ ಅಂಶಗಳನ್ನು ಸಂಪೂರ್ಣವಾಗಿ ಕಳೆದುಕೊಳ್ಳದೆ ಅವುಗಳನ್ನು ಉಳಿಸಿಕೊಂಡು ಬಂದಿರುವುದನ್ನು ಈಗಲೂ ಕಾಣಬಹುದಾಗಿದೆ. ಮೂಲತಃಹ ಮಂಗಾರವಾಡಿಗರು ಉಪಜೀವನಕ್ಕಾಗಿ ಅಲೆಮಾರಿಗಳಾಗಿ, ಸಂಚಾರಿಗಳಾಗಿ, ಅಂದಿನ ದಿನಗಳಲ್ಲಿ ಹೊಟ್ಟೆಗೆ

ಅನ್ನ ಸಿಗದ ಸಂದರ್ಭದಲ್ಲಿ ಪರಸ್ಥಿತಿಗಳು ಮನುಷ್ಯನನ್ನು ಸಮುದಾಯವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸುವಂತೆ ಮಾಡಿತ್ತು ಹಿಂದೂ ಧರ್ಮಾವಲಂಬಿಗಳಾದ ಮಂಗಾರವಾಡಿಗರಿಗೆ ತಮ್ಮದೇ ಆದ ಜಾತಿಯನ್ನು ಭಾರತೀಯ ಸಂವಿಧಾನದಲ್ಲಿ ಪರಿಶಿಷ್ಟ ಜಾತಿಗೆ ಸೇರಿಸಿದ್ದು ಕಂಡುಬರುತ್ತದೆ. ಭಾರತೀಯ ಸಂವಿಧಾನದಲ್ಲಿ ಬುಡಕಟ್ಟು ಸಮುದಾಯಗಳಿಗೆ ವಿಶೇಷಸ್ಥಾನಮಾನಗಳು ನೀಡಿದ್ದಾರೆ. ಭಾರತೀಯ ಬುಡಕಟ್ಟು ಇದರಿಂದ ಪರಿಶಿಷ್ಟ ಜಾತಿಗೆ ಸೇರಿದ ಮಂಗಾರವಾಡಿಗರು ಸಂವಿಧಾನದಿಂದ ಸಿಗುವ ಮತ್ತು ಕಾನೂನಿನ ಮೂಲಕ ಅವರಿಗೆ ಮೀಸಲಾತಿಯನ್ನು ನೀಡಿದೆ, ವಿಶೇಷ ಸೌಲಭ್ಯಗಳು ದೊರಕಿಸಿಕೊಟ್ಟಿದೆ, ಇದ್ದರಿಂದ ಅವರು ತಮ್ಮ ಬದುಕನ್ನು ಜೀವನ ಮಟ್ಟವನ್ನು ಬದಲಾಯಿಸಿಕೊಳ್ಳಲು ಅನುಕೂಲಕರವಾಗಿದೆಂದು ಹೇಳಬಹುದು ಅವರು ಅದೇ ಹಳೆಯ ಪರಿಸರದ ಪರಿಸ್ಥಿತಿಗಳು ಮತ್ತು ಸ್ಥಿತಿಗತಿಗಳನ್ನು ನಂಬಿಕೊಂಡು ಬಂದವರು ಅದರಿಂದ ದೂರ ಸರಿದು ತಮ್ಮ ಬದುಕನ್ನು ಮಾರ್ಪಾಡು ಮಾಡಿಕೊಳ್ಳಬಹುದಾಗಿದೆ. ಇಂಥಹ ಒಂದು ಸ್ಥಿತಿ ಸಮುದಾಯಗಳಲ್ಲಿ ನಿರ್ಮಾಣಮಾಡುವುದು ಅಗತ್ಯವಾಗಿದ್ದು ಮತ್ತು ಪ್ರಮುಖವಾದ ಕಾರ್ಯವಾಗಿದೆ. ಸಮುದಾಯವನ್ನು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮುಂದುವರಿಯಬೇಕಾದಂತಹ ಒಂದು ಪರಿಸ್ಥಿತಿಯು ಅವರಲ್ಲಿ ನಿರ್ಮಾಣವಾಗಬೇಕಾಗಿದೆ.

ಬ್ರಿಟೀಷರ ಅವಧಿಯಲ್ಲಿ ಮಂಗಾರವಾಡಿಗ ಮೂಲ ಮತ್ತು ವಲಸೆಯ ಬಗ್ಗೆ ಅನೇಕ ಕಾರಣವಾಗುವ ಅಂಶಗಳು ನೋಡಬಹುದಾಗಿದೆ. ಸಾಮಾಜಿಕ, ಆರ್ಥಿಕ ಜೀವನದಲ್ಲಿ ನಡೆಯುತ್ತಿರುವ ದೌರ್ಜನ್ಯಗಳಿಂದ ಮಂಗಾರವಾಡಿಗರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವುದು ಅನಿವಾರ್ಯವಾಗಿತ್ತು. ಮಂಗಾರವಾಡಿ ಸಮುದಾಯವು ನಿರ್ದಿಷ್ಟ ನೆಲೆ ನಿಲ್ಲುವುದಕ್ಕೆ ಸ್ಥಳ ಹೊಂದಿದೆ. ಮತ್ತೊಂದು ಸ್ಥಳಕ್ಕೆ ಸ್ಥಳಾಂತರ ಹೊಂದುತ್ತ ಹೋಗುತ್ತಿದ್ದರೂ ಬರಗಾಲದ ಒಂದು ಸಂದರ್ಭದಲ್ಲಿ ಉದ್ಭವಿಸಿರುವಂತಹ ಒಂದು ಋತುಮಾನಕ್ಕೆ ಮಂಗಾರವಾಡಿಗರ ಅಲೆಮಾರಿಗಳಾದರು ಭಾರತದ ಬಹುತೇಕ ಬುಡಕಟ್ಟು ಇದೇ ಸ್ಥಿತಿಯನ್ನು ಎದುರಿಸಿವೆ ಎಂದು ಹೇಳಬಹುದು.

‘ಅಲೆಮಾರಿಗಳ ಮತ್ತು ಕೆಳಜಾತಿಗಳ ಬದುಕಿನ ಚರಿತ್ರೆಯನ್ನು ಗುರ್ತಿಸಲು ಕ್ಲಾಸಿಕಲ್ ಆಕರಗಳ ಕೊರತೆ ಇದೆ. ಎಂದು ಖ್ಯಾತ ವಿದ್ವಾಂಸರಾದ ಚಿದಾನಂದ ಮೂರ್ತಿಯವರ ಅಭಿಪ್ರಾಯವಾಗಿದೆ’[೨] ಆಡಳಿತ ವರ್ಗದವರು ದಬ್ಬಾಳಿಕೆ, ದೌರ್ಜನ್ಯ, ಕಡಿಮೆ ಕೂಲಿ, ಬಡತನ, ಬರಗಾಲದಿಂದ ಬುಡಕಟ್ಟುಗಳ ಸ್ಥಿತಿ ಚಿಂತಾಜನಕವಾಗಿತ್ತು ಬ್ರಿಟೀಷರ ಆಳ್ವಿಕೆಯ ಆ ಕಾಲದಲ್ಲಿ ಭಾರತೀಯರ ಜೀವನ ಸ್ಥಿತಿ ಚಿಂತಾಜನಕವಾಗಿತ್ತೆಂದು ತಿಳಿದುಬರುತ್ತದೆ. ಅವರಿಂದ ಮುಕ್ತಿ ಹೊಂದಲು ದೇಶದ ನಾನಾ ರಾಜ್ಯಗಳಿಗೆ ವಲಸೆ ಹೋಗುವುದು ಅನಿವಾರ್ಯ ಪ್ರಸಂಗ ಮಂಗಾರವಾಡಿಗರಿಗೆ ಎದುರಾಯಿತ್ತೆಂದು ಹೇಳುತ್ತಾರೆ. ಮೂಲತಃಹ ಮಹಾರಾಷ್ಟ್ರ ಮುಂಬಾಯಿ

ನೆಲೆಯಾಗಿ ಹೊಂದಿರುವ ೧೯೨೦ರಲ್ಲಿ ಸಂದರ್ಭದಲ್ಲಿ ಕರ್ನಾಟಕ ನಾನಾ ಜಿಲ್ಲೆಗಳಲ್ಲಿ ಬಂದು ನೆಲೆನಿಂತದು ಅಂತಹ ಸಂದರ್ಭದಲ್ಲಿ ಸಂಕಷ್ಟಗಳನ್ನು ಎದುರಿಸಬೇಕಾಯಿತ್ತು. ಹೈದರಾಬಾದ, ಗೋವಾ ಮುಂತಾದ ಪ್ರದೇಶಗಳಿಗೆ ವಲಸೆ ಹೋದರೂ ಉಪಜೀವನಕ್ಕಾಗಿ ಪುರುಷರು ಎಮ್ಮೆ ಬೊಳಿಸುವ ವೃತ್ತಿಯಲ್ಲಿ ತೊಡಗಿಸಿಕೊಂಡರು ಇದ್ದರಿಂದ ಜೀವನವನ್ನು ಹೊಟ್ಟೆ ಪಾಡಿಗಾಗಿ ಕೆಲಸ ಮಾಡತೊಡಗಿದರು ಮಹಿಳೆಯರ ಕೂಡಾ ಪುರುಷರಿಂದ ಆರ್ಥಿಕ ಜೀವನ ನಡೆಸಲು ಸರಿ ಹೋಗಲಾರದೆ. ಮಹಿಳೆಯರು ಕೂಡ ಕೆಲಸ ಕಾರ್ಯಗಳು ಮಾಡುವುದರಲ್ಲಿ ತೊಡಗಿದರು ಅವರಲ್ಲಿ ಅಜ್ಞಾನ ಸಾಮಾಜಿಕ, ಆರ್ಥಿಕ ಬದುಕಿಗೆ ಮಾರಕವಾಗಿತ್ತು ಆದ್ದರಿಂದ ಅವರ ಬದುಕು ಚೆನ್ನಾಗಿ ನಡೆಸಲು ಸಾಧ್ಯವಿರಲಿಲ್ಲ. ಸಮುದಾಯವನ್ನು ನಡೆಸಬೇಕಾದರೆ ಅನೇಕ ತೊಂದರೆಗಳು ಎದುರಾದವು ಇದ್ದರಿಂದ ತಮ್ಮ ಬದುಕು ಉತ್ತಮ ಪಡಿಸಿಕೊಳ್ಳಲು ವಲಸೆ ಹೋಗುವುದು ಅನಿವಾರ್ಯವಾಯಿತ್ತು.

ಮಂಗಾರವಾಡಿ ಸಮುದಾಯವು ಪುರಷ ಪ್ರಧಾನವಾದರು ದುಡಿಮೆಯಲ್ಲಿ ಮಹಿಳೆಯೇ ದುಡಿದು ಸಾಕುವಂತಹ ಒಂದು ಪರಿಸ್ಥಿತಿಯ ಸಮುದಾಯದಲ್ಲಿದೆ. ದೈನಂದಿನ ಬದುಕಿನಲ್ಲಿ ಮಂಗಾರವಾಡಿಗರು ಹಲವಾರು ಸಂಕಷ್ಟಗಳನ್ನೆದುರಿಸುತ್ತಿದ್ದಾರೆ. ಮತ್ತು ಅನೇಕ ತೊಂದರೆಗಳು ಕಷ್ಟ ಕಾರ್ಪಣ್ಯಗಳು ಬಂದರೂ ಕೌಟುಂಬಿಕವಾಗಿ ಈ ಸಮುದಾಯದಲ್ಲಿ ಮಹಿಳೆಯರದೆ ಪ್ರಧಾನ ಪಾತ್ರವಾಗಿ ನಿಲ್ಲುವಂತಹದು ವಿಶೇಷವಾಗಿದೆ. ಸಾಮಾಜಿಕ ಪರಂಪರೆಯಲ್ಲಿ ಹಲವಾರು ಸಮುದಾಯಗಳು ಹುಟ್ಟಿಕೊಂಡು ತಮ್ಮದೇ ಆದ ಒಂದು ನೆಲೆಗಟ್ಟಿನ ಮೇಲೆ ಸಾಮಾಜಿಕ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಮುಂದುವರೆಯುವಲ್ಲಿ ವಿಫಲವಾಗಿವೆ.

ಭಾರತ ಸ್ವಾತಂತ್ರ ಬಂದು ೬೦ ವರ್ಷಗಳಾದರೂ ಇವರೆಗೆ ಮೂಲಭೂತಗಳಲ್ಲಿ ಸೌಕರ್ಯಗಳ ಕೊರತೆಯಿದೆ ರಿಯಾಯಿತಿ ದರದಲ್ಲಿ ಸಿಗುವ ಸೌಲಭ್ಯಗಳು ಸಿಗುತ್ತಿಲ್ಲ. ಕುಡಿಯುವ ನೀರು, ಶೌಚಾಲಯ ವ್ಯವಸ್ಥೆಯು ಕೆಲವೊಂದು ಬುಡಕಟ್ಟುಗಳಲ್ಲಿ ಕಂಡು ಬರುವುದಿಲ್ಲ. ಆದರೆ ಮಂಗಾರವಾಡಿಗರ ಸಮುದಾಯವು ನಗರ ಪ್ರದೇಶದಲ್ಲಿರುವುದರಿಂದ ಈ ಸವಲತ್ತುಗಳನ್ನು ಹೊಂದಿದೆ. ವಲಸೆ ಜನಾಂಗವನ್ನು ದೊಡ್ಡ ದೊಡ್ಡ ನಗರಗಳಲ್ಲಿ ಅವರುಗೆ ಸರಿಯಾಗಿ ಕೆಲಸ ಮಾಡಿಸಿಕೊಳ್ಳುತ್ತಾರೆ. ಅವರ ಬಡತನ ದ್ರಾರಿದ್ರ್ಯ, ನಿರುದ್ಯೋಗ ಕಡಿಮೆ ಕೂಲಿ, ಮುಂತಾದವುಗಳಿಂದ ಬಳಲುತ್ತಿದ್ದಾರೆ, ಅವರಿಗೆ ಸರಿಯಾಗಿ ಹಣ ಕೊಡುವುದಿಲ್ಲ ಇದಕ್ಕಾಗಿ ಅವರು ಇಂದಿನ ದಿನಗಳಲ್ಲಿ ಕೆಲವೊಂದು ಬುಡಕಟ್ಟುಗಳು ಮತ್ತು ದುಡಿಯುವ ಯುವಕರು ಮತ್ತು ಮಹಿಳೆಯರು ವಲಸೆ ಹೋಗುತ್ತಾರೆ. ಸಾಮಾನ್ಯವಾಗಿ ಜೊತೆಗೆ ಸಂಬಂಧಿಗಳ ಒಂದು ಕಾಳಜಿ ಕಡಿಮೆಯಾಗುತ್ತ ಸಾಗುವಂತಹ ಸ್ಥಿತಿ

ನಿರ್ಮಾಣವಾಗಿದೆ. 'ಸೋತ ಸಂಸ್ಕೃತಿಗಳ ನಡುವೆ ಬದುಕುವ ಛಲ ತುಂಬಿ ಅಲೆಮಾರಿಗಳ ಶಕ್ತಿಯನ್ನು ಎತ್ತಿ ಹಿಡಿದ ವೆರಿಯರ್ ಎಲ್ವಿನ್.'[೩] ವಲಸೆಯಿಂದ ಸರ್ಕಾರಿ ಸೌಲಭ್ಯಗಳಿಂದ ಅನೇಕ ಬುಡಕಟ್ಟುಗಳು ವಂಚಿತವಾಗಿವೆ.

ಬುಡಕಟ್ಟು ಸಮುದಾಯಗಳು ವ್ಯವಹಾರಕ್ಕಾಗಿ ದೈನಂದಿನ ಬದುಕಿಗಾಗಿ, ಬೇರೆ ಬೇರೆ ಪ್ರದೇಶಗಳಲ್ಲಿ ಹೋಗಿ ಅನೇಕ ಭಾಷೆಗಳನ್ನು ಮಾತನಾಡುತ್ತಾರೆ. ಬುಡಕಟ್ಟುಗಳು ಒಂದೇ ಕಡೆ ನೆಲೆ ನಿಂತು ಬಂದಿರುವಂತಹದು ಮಂಗಾರವಾಡಿಗರನ್ನು ಗುರ್ತಿಸಬಹುದಾಗಿದೆ. ಇಂದಿನ ದಿನಗಳಲ್ಲಿ ಮಂಗಾರವಾಡಿ ಬದುಕು ಸ್ವಲ್ಪ ಬದಲಾವಣೆಯತ್ತ ಸಾಗಿದೆ. ಸ್ತ್ರೀ ಮತ್ತು ಪುರುಷರು ಕೆಲಸ ಕಾರ್ಯಗಳಲ್ಲಿ ತೊಡಗಿದ್ದಾರೆ. ಆರ್ಥಿಕವಾಗಿ ಸ್ವಲ್ಪ ಬೆಳೆವಣಿಗೆಯನ್ನು ಹೊಂದುತ್ತಾ ಬಂದಿರುವಂತಹದು ಕಂಡುಬರುತ್ತದೆ. ಸ್ಥಳೀಯರು, ಶ್ರೀಮಂತರು ಕೂಲಿಕಾರರು ತಮ್ಮ ಹೊಲ ಗದ್ದೆಗಳನ್ನು ಮಾರಾಟ ಮಾಡುತ್ತಿದ್ದಾರೆ. ಮೇಲ್ವರ್ಗದ ಜನರ ಭೂಮಿಯನ್ನು ಖರೀದಿಸಿಕೊಂಡು ಸ್ವಃತ ದುಡಿಮೆಯಲ್ಲಿ ಮಂಗಾರವಾಡಿಗರು ತೊಡಗಿದ್ದಾರೆ. ಅನೇಕ ಕಡೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಹೋಟೆಲ್‌ಗಳಲ್ಲಿ, ಕಿರಾಣಿ ಅಂಗಡಿಗಳಲ್ಲಿ, ಮನೆಗಳಲ್ಲಿ ಟೇಪ್‌ರೆಕಾರ್ಡರ್, ಟಿ.ವಿ., ಮೋಟಾರ್ ಸೈಕಲ್, ಮಿಕ್ಸರ್ ಮುಂತಾದ ಆಧುನಿಕ ಉಪರಣಗಳನ್ನು ಮಂಗಾರವಾಡಿಗರು ಬಳಸುತ್ತಿದ್ದಾರೆ. ಒಂದು ಕಡೆ ಆರ್ಥಿಕವಾಗಿ ಚೇತರಿಸಿಕೊಂಡರೆ ಮತ್ತೊಂದು ಕಡೆ ಅಂದರೆ ಸರ್ಕಾರ ಕಲ್ಪಿಸಿರುವ ಮೀಸಲಾತಿ ಸೌಲಭ್ಯಗಳಿಂದ ಅನೇಕ ಬುಡಕಟ್ಟುಗಳು ಮತ್ತು ಅಲೆಮಾರಿಗಳು ವಂಚಿತರಾಗಿದ್ದಾರೆ.

ಮಂಗಾರವಾಡಿಗರು ಎಲ್ಲ ಸಮಸ್ಯೆಗೀಂದ ಬಳಲುತ್ತಿರುವಂತದ ಇದರಿಂದ ಸುಧಾರಣೆಗಳು ಕಂಡು ಬಂದರೂ ಅವುಗಳು ಅತ್ಯಲ್ಪ ಸಮುದಾಯವನ್ನು ಸರಿಯಾದ ನಿಟ್ಟಿನಲ್ಲಿ ಇನ್ನೊಬ್ಬರಿಗೆ ಮತ್ತು ಮತ್ತೊಂದು ಸಮುದಾಯಕ್ಕೆ ಮಾದರಿಯಾಗಬೇಕಾದರೆ ಸರ್ಕಾರ ಎಲ್ಲಾ ಸೌಕರ್ಯಗಳ ಒದಗಿಸಿದಾಗ ಮುಂದೆ ಬರಲು ಯಾವುದೇ ಸಂದೇಹವಿಲ್ಲವೆಂದು ಹೇಳಬಹುದು.

ಅಡಿ ಟಿಪ್ಪಣಿಗಳು

೧. ಡೊಂಬರು ಒಂದು ಚಾರಿತ್ರಿಕ ಹಿನ್ನೋಟ- ಸಂಪಾದಕರು, ಎ.ಎಸ್.ಪ್ರಭಾಕರ್, ಡಾ.ಟಿ.ಆರ್.ಚಂದ್ರಕಾಂತ, ಪು.ಸಂ-೧೧೩

೨. ಅದೇ, ಪು.ಸಂ-೧೧೪

೩. ಕಾಡು,ಕಾಂಕ್ರೀಟ್ ಮತ್ತು ಜಾನಪದ, ಹಿ.ಚಿ.ಬೋರಲಿಂಗಯ್ಯ, ಪು.ಸಂ-೧೨

ಅಧ್ಯಾಯ - ೩

ಮಂಗಾರವಾಡಿಗರ ಮೂಲ ಕಸುಬುಗಳು

ಅಧ್ಯಾಯ – ೩

ಮಂಗಾರವಾಡಿಗರ ಮೂಲ ಕಸುಬುಗಳು

ಮಂಗಾರವಾಡಿಗರು ಸಾವಿರಾರು ವರ್ಷಗಳಿಂದ ಮನುಷ್ಯನಿಗಿಂತಲೂ ಕಡೆಯಾದ ಒಂದು ಅಲೆಮಾರಿ ಮತ್ತು ಬುಡಕಟ್ಟು ಜನಾಂಗ, ಬ್ರಿಟಿಷ್ ಸರ್ಕಾರವಂತೂ ಈ ಒಂದು ಬುಡಕಟ್ಟಿಗೆ ಉಳಿದ ಸಮುದಾಯಗಳಿಗಿಂತ ಭಿನ್ನ ರೀತಿಯಲ್ಲಿ ನೋಡಲು ಆರಂಭಿಸಿತ್ತು ಸಾಮಾಜಿಕವಾಗಿ ದೌರ್ಜನ್ಯಕೊಳಗಾದ ಮಂಗಾರವಾಡಿಗರು ಉಪಜೀವನಕ್ಕಾಗಿ ಪ್ರದೇಶದಿಂದ ಪ್ರದೇಶಕ್ಕೆ ಹೋಗಿ, ಎಮ್ಮೆ ಬೋಳಿಸುವುದು, ಚರಗಹೊಡೆಯುವುದು, ರಸ್ತೆ ಬದಿಯಲ್ಲಿದ್ದ ಪ್ಲಾಸ್ಟಿಕ್ ಆಯ್ದುಕೊಂಡು ಹೋಗಿ ಮಾರಿ ಜೀವನ ನಡೆಸುತ್ತಿದ್ದರು ಬ್ರಿಟೀಷರ ಕಾಲದಲ್ಲಿ ಮೇಲ್ವರ್ಗದ ಜನ ತಮ್ಮ ಸ್ವಾರ್ಥಕ್ಕಾಗಿ ಬುಡಕಟ್ಟು ಜನಾಂಗವನ್ನು ಬಲಿತೆಗೆದುಕೊಳ್ಳುವಂತಹ ಹಿನಾಯ ಪರಸ್ಥಿತಿಯ ಕೆಲಸ ಮಾಡಿಸಿಕೊಳ್ಳುತ್ತಿದ್ದರು ಬ್ರಿಟೀಷರ ತುಳಿತಕ್ಕೆ ಒಳಗಾದ ಬುಡಕಟ್ಟುಗಳು ಆಯಾ ಕಾಲ ಘಟ್ಟದಲ್ಲಿ ಒಂದೊಂದೆಡೆ ಛಿದ್ರ ಛಿದ್ರವಾಗಿ ಹರಿದು ಹಂಚಿ ಹೋದವು.

ಮಂಗಾರವಾಡಿಗರ ಜನರ ದಾರಿದ್ರ್ಯ, ಸಂಕಟ, ವೇದನೆಗಳನ್ನೆಲ್ಲ ನೋಡುತ್ತಿದ್ದರೆ. ಈ ಸಮಾಜದಲ್ಲಿ ವಾಸಿಸುವ ಪ್ರತಿಯೊಬ್ಬನಿಗೂ ಉಸಿರು ಕಟ್ಟಿದಂತಾಗುತ್ತದೆ. ಮನುಷ್ಯ ಸ್ವಂತಹ ತಾನೆ ಬದುಕಬೇಕು ಇನ್ನೊಬರ ಅಡಿಯಾಳಾಗಿರಬಾರದು ಮನುಷ್ಯರಂತೆ ಬದುಕಲು ಅವರಿಗೂ ಹಕ್ಕಿದೆ ಆದರೆ ಬ್ರಿಟಿಷರ ದೌರ್ಜನ್ಯಕ್ಕೆ ಒಳಗಾಗಿ ಅವರು ತಮ್ಮ ಜೀವನವನ್ನು ಕಳ್ಳತನ ಪ್ರವೃತ್ತಿಯಲ್ಲಿ ತೊಡಗಿಸಿಕೊಂಡರು ಎಂಬುದು ವದಂತಿ ಇದೆ. ಈ ವ್ಯವಸಾಯ ಬಿಟ್ಟು ಸ್ವಂತಹ ಶಕ್ತಿಯ ಮೇಲೆ ಬದುಕಬೇಕು ಶಿಕ್ಷಣ ಪಡೆಯಬೇಕು ಅನ್ಯಾಯದ ವಿರುದ್ಧ ಸಂಘಟಿತರಾಗಬೇಕೆಂದು ಜನರಿಗೆ ತಿಳುವಳಿಕೆ ನೀಡುವ ಅವಕಾಶ ಕಲ್ಪಿಸಬೇಕಾಗಿದೆ.

ಮಂಗಾರವಾಡಿಗರು ಬರಗಾಲದಲ್ಲಿ ತೋರಿದ ಭೀಕರದ ಒಂದು ಪ್ರಭಾವದಿಂದ ಸ್ವಾತಂತ್ರ್ಯ ಪೂರ್ವದ ಮುಂಚೆ ಆರ್ಥಿಕವಾಗಿ ದುರ್ಬಲವಾಗಿರುವುದರಿಂದ ದೈನಂದಿನ ಬದುಕಿಗೆ ಬೇಕಾಗುವಂತಹ ಸಾಮಾಗ್ರಿಗಳನ್ನು ದೊರೆಯದೆ ಹೋದ ಸಂದರ್ಭದಲ್ಲಿ ಕಳ್ಳತನ, ಬೇಟೆ, ಅರಣ್ಯಗಳಿಂದ ಕಾನೂನು ಬಾಹಿರವಾಗಿ ಕಟ್ಟಿಗೆ ಸಂಗ್ರಹಣೆ, ಮೊದಲಾದ ಕೆಲಸಗಳಲ್ಲಿ ತೊಡಗಿಸಿಕೊಂಡರು. ಅನುವಂಶಿಕವಾಗಿ ತಮ್ಮ ಸ್ವಾಭಾವಿಕ ಹಾಗೂ ಪರಂಪರೆಗೆ ಒಗ್ಗದ ಅನಿಯಮಿತ ಕೂಲಿ ದುಡಿಮೆ, ಇಲ್ಲವೆ ವಾರ್ಷಿಕ ಸೇವೆಯ ಕೂಲಿ ಆಧಾರದ ದುಡಿಮೆಯನ್ನು ಕೈಗೊಳ್ಳಲು ಅವರು ಇಷ್ಟಪಡಲಿಲ್ಲ. 'ಈ ಸಮುದಾಯಗಳನ್ನು ಬ್ರಿಟೀಷರು ಅನುಮಾನಿಸುತ್ತಲೇ ಬಂದರು ಸಹಜವಾಗಿಯೇ ಈ ಸಮುದಾಯಗಳು ಅಪರಾಧಿ ಸಮುದಾಯಗಳ ಪಟ್ಟಿಗೆ ಸೇರಿಸಲ್ಪಟ್ಟವು.'[೧]

ಬ್ರಿಟೀಷ್ ಸರ್ಕಾರವು ಅನುಶಾಸನಗೊಳಿಸಿದ ಕಟ್ಟು ನಿಟ್ಟಿನ ನಿಯಮಗಳಿಂದಾಗಿ ಹಾಗೂ ಅವರ ಕಿರುಕುಳವನ್ನು ಸಹಿಸಿಕೊಳ್ಳಲಾಗದೆ. ಕೊಳ್ಳೆ ಹೊಡೆಯುವ ಅಥವಾ ಕಳ್ಳತನ ವೃತ್ತಿಗೆ ಅಂಟಿಕೊಂಡಿರುವಂತಹದು ಕಂಡುಬರುತ್ತದೆ. ೧೮೯೦ ಮತ್ತು ೧೯೦೦ರಲ್ಲಿ ಅರಣ್ಯಗಳಲ್ಲಿ ಕೆಲಸ ಹಾಗೂ ಅರಣ್ಯ ಉಪಉತ್ಪನ್ನಗಳ ಮಾರಾಟ, ಅವರ ಮುಖ್ಯ ಕಸುಬುಗಳಾದವು ಸನ್ನಿವೇಶ ಬೇರೆ ಬೇರೆ ವೃತ್ತಿಗಳತ್ತ ಗಮನಹರಿಸುವಂತೆ ಮಂಗಾರವಾಡಿಗರನ್ನು ಪ್ರೇರೇಪಿಸಿತ್ತು. ಕೂಲಿ ಆಧಾರದ ಮೇಲೆ ಕಟ್ಟಿಗೆ ಒಡೆಯುವುದು ಅಥವಾ ದುಡಿಯುವುದು ಹಾಗೂ ಸಾಗುವಳಿ ಕೆಲಸಗಳಿಗೂ, ಕೂಲಿಯಾಳಾಗಿ ದುಡಿಯುವುದು ಅನಿವಾರ್ಯವಾಗಿತ್ತು ಬದಲಾಗದ ಸಾಮಾಜಿಕ ಸನ್ನಿವೇಶದಲ್ಲಿ ಆರ್ಥಿಕ ಅಗತ್ಯಗಳ ಒತ್ತಡದಿಂದ ಕೂಲಿ ದುಡಿಯಬೇಕಾದ ವೃತ್ತಿಯನ್ನು ಅನುಸರಿಸುವುದು ಅನಿವಾರ್ಯವಾಯಿತು. ಮಹಿಳೆಯರ ಸಂಪಾದನೆಗೆ ಪೂರಕವಾಗುವಂತೆ ಅವರು ಹೀಗೆ ದುಡಿಸಬೇಕಾದದ್ದೇ ಅಗತ್ಯವಾಯಿತು. ಜೀವನಾವಶ್ಯಕ ವಸ್ತುಗಳ ಬೆಲೆಗಳ ಹೆಚ್ಚಳದಿಂದ ಕೇವಲ ಮಹಿಳೆಯರ ದುಡಿಮೆಯಿಂದ ಮಾತ್ರ ಜೀವನೋಪಾಯ ಮಾಡುವುದು ಸ್ತ್ರೀಯರ ಮೇಲೆ ಅವಲಂಬನೆಯಾಗಿತ್ತು ಸುಮಾರು ಒಂದು ನೂರು ವರ್ಷಗಳಿಂದ ಮಂಗಾರವಾಡಿ ಮಹಿಳೆಯರ ಆರ್ಥಿಕತೆಯಲ್ಲಿ ಜೀವನೋಪಾಯವೇ ಪ್ರಮುಖ ಕೆಲಸವೇ ಕಳ್ಳತನವಾಗಿತ್ತೆಂದು ಹೇಳುವಂತಹದು ತಿಳಿದುಬರುತ್ತದೆ.

ದಶಕಗಳ ಹಿಂದೆ ಭಾರತದಲ್ಲಿದ್ದ ಅನೇಕ ಬುಡಕಟ್ಟುಗಳು ಕೃಷಿ ಮತ್ತು ಆರ್ಥಿಕ ಜೀವನದ ತಳಹದಿಯ ಮೇಲೆ ಜೀವನೋಪಾಯದ ವೃತ್ತಿಯನ್ನಾಗಿ ಕಳ್ಳತನ ಮಾಡುವುದು ಆರಂಭಿಸಿದ್ದು "ತಮ್ಮ ಪಾರಂಪರಿಕ ಉದ್ಯೋಗಗಳನ್ನು ಕೈ ಬಿಡಲು ಅವಿಗೆ ಆ ದಿನಗಳಲ್ಲಿ ಅವಕಾಶವಿರಲಿಲ್ಲ."[೨]

ಅಲೆಮಾರಿಗಳು ಉಪಜೀವನಕ್ಕಾಗಿ ಮಾಡುತ್ತಿದ್ದ ಸಣ್ಣ ಪುಟ್ಟ ಕೆಲಸಗಳನ್ನು ಪ್ರಧಾನ ಜೀವನೋಪಾಯ ವೃತ್ತಿಯಾಗಿ ಸ್ವೀಕರಿಸಿದ ಮಂಗಾರವಾಡಿಗರು ಅಂದಿನ ಜೀವನ ಕ್ರಮ ಇಂದಿಗೆ ಹೋಲಿಸಿ ನೋಡಿದರೆ ಬಹಳ ಸುಲಭವಾದದು.

ಮಂಗಾರವಾಡಿಗರಿಗೆ ಇಂದಿನ ದಿನಗಳಲ್ಲಿ ಹೊಲ–ಮನೆಯಿಲ್ಲ. ನಿಶ್ಚಿತವಾದ ಊರಿಲ್ಲ "ಅಲೆಮಾರಿಗ ಭೂಮಿ ಹೊಂದಿರಲಿಲ್ಲ. ಅದಲ್ಲದೆ ಕೃಷಿ ಪೂರಕ ಚಟುವಟಿಕೆಗಳನ್ನು ಅವಲಂಬಿಸಿದೆ ಅಲೆಮಾರಿಗಳಾಗಿದ್ದರು."[೩] ದೂರದ ಊರುಗಳಿಗೆ ಹೋಗಿ ತಮ್ಮ ಉಪಜೀವನ ನಡೆಸಲು ಸಂತೆಗಳಲ್ಲಿ ಕಿಸೆ ಕತ್ತರಿಸಿ, ಗಂಟುಗಳು ಕದ್ದು ರಾತ್ರಿ ಹೊತ್ತಿಗೆ ಮನೆ ಸೇರುತ್ತಿದ್ದರು ನಿಜಾಮರ ಆಳ್ವಿಕೆಯಲ್ಲಿ ಕೆಳವರ್ಗಗಳು ದಬ್ಬಾಳಿಕೆಗೆ ಮಣಿದು ಹೋಗಿದ್ದವು. ಇಂಥಹ ವ್ಯವಸ್ಥೆಯಲ್ಲಿ ಜೀವನ ನಡೆಸುವುದು ಕಷ್ಟಕರವಾಗಿತ್ತು. ಮನೆಯ ಸಂಸಾರ ನಡೆಸಲು ಯಾರು ಗಂಡು ಮಕ್ಕಳಿಗೆ ಕೆಲಸ ಕೊಡುತ್ತಿರಲಿಲ್ಲ. ಹೊಲದ ಕೆಲಸಕ್ಕೆ ಹೋಗುತ್ತಿರಲಿಲ್ಲ. ಕೊನೆಗೆ ಮನೆಯ ಖರ್ಚು ಸಾಗಿಸಲು ಮಹಿಳೆಯರೇ ಕಳ್ಳತನ ಮಾಡಲು ಪ್ರಾರಂಭಿಸಿದರು ಜಾತ್ರೆಯಲ್ಲಿ ಹೆಂಗಸರ ಕೊರಳ ಹಾರ, ಓಲೆ, ರಿಂಗು, ಇತ್ಯಾದಿಗಳನ್ನು ಕಳ್ಳತನ ಮಾಡುತ್ತಿದ್ದರು ಒಮ್ಮೊಮ್ಮೆ ಪೋಲಿಸರು, ಬ್ರಿಟಿಷ್ ಅಧಿಕಾರಿಗಳು ಇವರ ಮನೆಗಳನ್ನು ತಪಾಸಣೆ ಮಾಡಲು ಬರುತ್ತಿದ್ದರು. ಆಗ ಕದ್ದುಕೊಂಡು ಬಂದ ವಸ್ತು ಊರಿನ ಹೊರವಲ್ಲಯದಲ್ಲಿ ಕದ್ದು ಇಡುತ್ತಿದ್ದರು ಮನೆಯಲ್ಲಿ ಇಡುತ್ತಿದ್ದರು ನಂತರ ಊರಿನ ಸಾಹುಕಾರ, ಒಂದಿಷ್ಟು ಹಣವನ್ನು ಕೊಟ್ಟು ಕಳುಹಿಸುತ್ತಿದ್ದರು ಅವರು ಊರಿಂದ ಊರಿಗೆ ಹೋಗಿ ದನಕರುಗಳನ್ನು ಮಾರಾಟ ಮಾಡುವ ಇಂಥ ಒಂದು ಪದ್ದತಿ ಬಳಕೆಯಲ್ಲಿತ್ತು ಯಾವುದೇ ಊರು, ಕೇರಿಗಳಿಗೆ ಹೋದರೆ ಜನರು ಅವರನ್ನು ಕಳ್ಳರೆಂದು ಗುರ್ತಿಸುತ್ತಿದ್ದರು ಪೋಲಿಸರಿಗೆ ಸಂಶಯಬಂದರೆ ಅವರನ್ನು ಬಂಧಿಸುತ್ತಿದ್ದರು ಅವರ ಮೇಲೆ ಕಳ್ಳತನದ ಆರೋಪ ಹೊರಿಸಿ ಹಣ ಕೀಳುತ್ತಿದ್ದರು.

ಮಂಗಾರವಾಡಿಗರಿಗೆ ಪೋಲಿಸ ಕಂಡರೆ ತುಂಬಾ ಹೆದರಿಕೆ, ಹಿಂದಿನವೊಂದು ದಿನಗಳಲ್ಲಿ ಮಕ್ಕಳ ಊಟವಿಲ್ಲದೆ ಉಪವಾಸ ಬೀಳುತ್ತಿದ್ದರು ಹಾಗಾಗಿ ಕಳ್ಳತನ ಮಾಡಿ ಸಂಸಾರ ನಡೆಸುತ್ತಿದ್ದರು ರಾತ್ರಿ ಮನೆಯಲ್ಲಿರುವಂತಹ ಎಲ್ಲಾ ವಸ್ತುಗಳನ್ನು ಕದ್ದು ತಂದು ಸುಮಾರು ನಾಲ್ಕು ಎಂಟು ದಿನಗಳವರೆಗೆ ಜೀವನ ಸಾಗಿಸುತ್ತಿದ್ದರು ಅವರು ಮೂಲತಹವಾಗಿ ಮರಾಠಿ ಭಾಷೆಯನ್ನು ಆಡುತ್ತಾರೆ. ಭಾರತದ ನಾನಾ ಭಾಗಗಳಲ್ಲಿ ಮಂಗಾರವಾಡಿಗರನ್ನು ಗುರ್ತಿಸುತ್ತಾರೆ. ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಒರಿಸ್ಸಾ, ಹರಿಯಾಣ, ಆಂಧ್ರಪ್ರದೇಶ ಮುಂತಾದ ಕಡೆಗಳಲ್ಲಿ ನೆಲೆಸಿರುವಂತಹದು ತಿಳಿದುಬರುತ್ತದೆ.

"ಈ ಸಮುದಾಯಗಳು ಸಲ್ಲಿಸುತ್ತಿದ್ದ ಸೇವೆಯನ್ನು ಭೂಮಾಲಿಕ ವರ್ಗವು ಆಳಿನ ಸೇವೆಯನ್ನು ಪಡೆದಂತೆಯೇ ಪಡೆಯುತ್ತಿತ್ತು."[೪] ಅಲ್ಲಿಂದ ತಪ್ಪಿಸಿಕೊಂಡು ಹೋಗಿ ಹೊಟ್ಟೆಗೆ

ತಿನ್ನಲು ಇಲ್ಲದಿದ್ದಾಗ ದೂರದ ಹೊಲಗಳಿಗೆ ರಾತ್ರಿ ಹೋಗಿ ಜೋಳದ ತೆನೆ ಅಥವಾ ಶೇಂಗಾ ಕದ್ದು ತರುತಿದ್ದರು ಅಂಥ ಅಪರಾತ್ರಿಯೂ ಕದ್ದು ತಂದ ತೆನೆಗಳನ್ನು ತಿನ್ನುತ್ತಿದ್ದರು ಕಳ್ಳತನಮಾಡುವಾಗ ಎಳ್ಳೆಯ ಮಕ್ಕಳಿಗೆ ಅಂಜಬಾರದು ಧೈರ್ಯ ಹೇಳುತ್ತಿದ್ದರು. ಪೋಲಿಸರು ಹಿಡಿದು ಎಷ್ಟು ಬಡಿದರೂ ಹೆಸರು ಹೇಳುವ ಹಾಗಿಲ್ಲ. ಕಳ್ಳತನ ಮಾಡುವುದು ಒಂದು ಚಾಣಾಕ್ಷ, ಕಳ್ಳತನ ಮಾಡಿದ್ದು, ಅಕ್ಕ, ಪಕ್ಕದವರಿಗೆ ಯಾರಿಗೂ ಗೊತ್ತಾಗುತ್ತಿರಲಿಲ್ಲ. ಹಣದ ಸಮಸ್ಯೆಯಿಂದ ಮನೆಯಲ್ಲಿ ಅಣ್ಣ ತಮ್ಮ ಅಕ್ಕ ತಂಗಿ ಅಪ್ಪ, ಅಮ್ಮ ಅವರವರ ಪಾಲಿಗೆ ಅವರೆ ಇರುತ್ತಿದ್ದರು.

ಮಂಗಾರವಾಡಿಗರ ಜೀವನದ ಬಗೆಗೆ ತಳೆದಿರುವ ಪರಂಪರೆಗಳು ಮತ್ತು ನಂಬಿಕೆಗಳೂ ಕೆಲವು ಮಟ್ಟಿಗೆ ನಂಬಿಕೊಂಡು ಬಂದ ಆಚರಿಸಿಕೊಂಡು ಬಂದಿರುವಂತಹದು ಕೃಷಿ ಭೂಮಿ ಹಾಗೂ ಜಾನುವಾರುಗಳನ್ನು ಕೊಂಡುಕೊಳ್ಳುವುದರಲ್ಲಿ ಆಸಕ್ತಿಯಿದೆಯಾದರು ಅವರಿಗೆ ಬಂಡವಾಳವನ್ನು ಕೂಡಿಸಲು ಅವಕಾಶವಿಲ್ಲ. ಆದರೆ ಭವಿಷ್ಯದ ಅಗತ್ಯತೆಗಳ ಬಗೆಗೆ ಅವರು ಯೋಚಿಸದೆ. ಮಾಡುವುದೊಂದೆ ದುಂದು ವೆಚ್ಚ ದುಂದುವೆಚ್ಚದಿಂದಾಗಿ ಜೀವನ ಮಟ್ಟ ಸುಧಾರಿಸಿಕೊಳ್ಳಲು ಆಗುತ್ತಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಕೆಲವು ಅಪರೂಪದ ಅಪವಾದಗಳಿವೆ. ಎಂಬುದ ಸತ್ಯವಾದರೂ ಬಹುಪಾಲು ಜನರ ಸ್ಥಿತಿ ಇದೆ ತೆರನಾಗಿದೆ. ಉಳಿತಾಯ ಮಾಡಲು ಸಾಧ್ಯವಾಗದಾಗ ಅಥವಾ ಹೆಚ್ಚು ಕೆಲಸ ಕಾರ್ಯಗಳು ಮಾಡದೆ ಇರುವುದರಿಂದ ಅಭಿವೃದ್ದಿ ಯೋಜನೆ ಮತ್ತು ನಿಯೋಜನೆಗಳಿಂದ ಉತ್ಪಾದನಾ ಉದ್ದೇಶಗಳಿಗಾಗಿ ಕೂಡಾ ಮಾಡಲಾದ ಸಾಲ ಮತ್ತು ಧನ ಸಹಾಯವನ್ನು ಅನುಭೋಗಕ್ಕಾಗಿ ಮತ್ತು ಆರ್ಥಿಕವಾಗಿ ಅನುತ್ಪಾದಕ ಚಟುವಟಿಕೆಗಳಲ್ಲಿ ಒಳಗಾಗುತ್ತಿದ್ದಾರೆ.

ಮಂಗಾರವಾಡಿಗರು ವರ್ತಮಾನ ಮೊತ್ತವೇ ಗಮನಿಸುವ ಅವರ ಮನೋ ಪ್ರವೃತ್ತಿಯ ಪರಂಪರೆಯಿಂದ ಸಹಜವಾಗಿ ಬಂದ ಗುಣಲಕ್ಷಣವಾಗಿದೆ. ಬಹುತೇಕ ಕೃಷಿಯಿಂದ ವಂಚಿತರಾಗಿದ್ದು ಭವಿಷ್ಯದ ದಿನಗಳ ಅಗತ್ಯಕ್ಕಾಗಿ ಸ್ವಲ್ಪ ಉಳಿತಾಯ ಮಾಡುವ ಪ್ರವೃತ್ತಿಯನ್ನು ಕಂಡು ಬಂದರೆ. ಇವರ ತೀರ ಇತ್ತೀಚ್ಚಿನವರೆಗೆ ತಾವಿದ್ದ ಸ್ಥಳಗಳಲಿಷ್ಟು ಯೋಚಿಸುವ ಸ್ವಭಾವವನ್ನು ಬಳಸಿಕೊಂಡಿದ್ದಾರೆ. ನಾವು ಬುಡಕಟ್ಟುಗಳ ಅಲೆಮಾರಿಗಳ ಜೀವನವನ್ನು ಬಯಸುವುದು ಎಂಬ ದಂತ ಕಥೆಗಳ ಉದಾಹರಣೆಗಳನ್ನು ಸ್ಮರಿಸಿಕೊಳ್ಳುತ್ತ ತಮ್ಮ ಬಡತನದ ಸ್ಥಿತಿಗತಿಗಳಿಗೆ ಅನುವಾಸಿತ ಸಮರ್ಥನೆಗಳನ್ನು ಅರ್ಥಹೀನ ತರ್ಕಗಳನ್ನು ಸಾದರ ಪಡಿಸುತ್ತಾ ತಮ್ಮ ಯಥಾ ಸ್ಥಿತಿಯನ್ನು ಬದಲಿಸಲು ಮುಂದಾಗದೇ ಇರುವುದು ಅವರ ದೌರ್ಬಲ್ಯವಾದರು ಅದನ್ನು ಒಪ್ಪಲು ಸಿದ್ದವಿಲ್ಲದ ಮನೋಭಾವ ಅವರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಹಿನ್ನೆಡೆಯ ಒಂದು ಕಾರಣವಾಗಿದೆ. ಅರ್ಥಿಕವಾಗಿ ಹಿಂದುಳಿದ ಇತರ ಜನರಂತೆಯೆ ಮಂಗಾರವಾಡಿಗರು ಕೂಡಾ ಉಳಿತಾಯ ಮಾಡುವ ಸಾಮಾರ್ಥ್ಯ ಹೊಂದಿಲ್ಲ.

ಅವರು ಸಾಲದ ರೂಪದಲ್ಲಿ ಪಡದ ಹಣವನ್ನು ಬಹುತೇಕವಾಗಿ ಉತ್ಪಾದಕ ಉದ್ದೇಶಗಳಿಗಾಗಿ ಬಳಸುವುದಿಲ್ಲ. ಸಾಲಕ್ಕೆ ಪ್ರತಿಯಾಗಿ ಅಡವಿಡಲು ಅವರಲ್ಲಿ ಬಹಳಷ್ಟು ಜನರಿಗೆ ಮೌಲ್ಯಯುತ ಆಸ್ತಿಗಳಲ್ಲಿ ಸಾಲ ಮರುಪಾವತಿಯ ಬಗೆಗಿನ ಅವರ ವಿಶ್ವಸಾರ್ಹತೆ ಹಾಗೂ ಅವಕಾಶಗಳೂ ಕೂಡ ತೀರ ಕಡಿಮೆ ಇದೆ. ಉಳಿತಾಯ ಮಾಡುವ ಸಾಮಾರ್ಥ್ಯ ತೀರಾ ಸೀಮಿತವಾದದ್ದು ಎಂಬುದು ತಿಳಿದು ಬರುತ್ತದೆ.

ಸಾಮಾಜಿಕ, ಧಾರ್ಮಿಕ, ಸಂಸ್ಕೃತಿಗಳಿಂದಾಗಿ ಹಲವು ವೆಚ್ಚಗಳು ವ್ಯರ್ಥವಾಗಿ ಕೂಡುವುದರಿಂದ ಬಂಡವಾಳದ ಕ್ರೋಢಿಕರಣವು ಸಾಧ್ಯವಿಲ್ಲ ಕೃಷಿಯ ಉದ್ದೇಶಗಳಿಗಾಗಿ ಮಾಡಿದ ಬಂಡವಾಳವು ಆಸ್ತಿಗಳನೊಳಗೊಂಡಿದೆ. ಜಮೀನು ಖರೀದಿ, ನಿರ್ದಿಷ್ಟ ಅವಧಿಯವರೆಗೆ ಜಮೀನುಗಳನ್ನು ಒತ್ತೆ ಇಟ್ಟುಕೊಳ್ಳಲು ನೀಡಲಾಗುವ ಮುಂಗಡ ಹಣ, ಜಮೀನು ಖರೀದಿ, ಕೃಷಿ ಉಪಕರಣಗಳು ಮೊದಲಾದ ಕೃಷಿಯ ಉದ್ದೇಶಗಳಿಗಾಗಿ ಮಾಡಿದ ಬಂಡವಾಳಗಾರರು ಆಸ್ತಿಗಳನ್ನು ಹೊಂದಿದ ಕೆಲವು ಜನರು ಉತ್ತಮ ಬದುಕು ಸಾಗಿಸುವಂತಹದು ಕಂಡು ಬರುತ್ತದೆ. ಪ್ರಮುಖವಾಗಿ ಜನರಲ್ಲಿ ಸಾಲ ಸೌಲಭ್ಯ ಪಡೆಯುವ ಇನ್ನು ಹೆಚ್ಚಾಗಿ ಮೂಡಿ ಬಂದಿಲ್ಲ. ಅದಕ್ಕೆ ಕೆಲವೇ ಜನರೂ ಮಾತ್ರ ಸೀಮಿತವಾಗಿದ್ದರೆ ಸಹಕಾರಿ ಸಂಘಗಳಲ್ಲಿ ತಮ್ಮ ಉಳಿತಾಯವನ್ನು ಠೇವಣಿ ರೂಪದಲ್ಲಿ ಇಟ್ಟಿದ್ದಾರೆ.

೩.೧ ವ್ಯಾಪಾರಿಗಳು

ಮಹಾರಾಷ್ಟ್ರದಲ್ಲಿ ಮಂಗಾರವಾಡಿಗರು ಅಲ್ಪಸ್ವಲ್ಪ ಅಲ್ಲಲ್ಲಿ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ ಬದುಕು ನಡೆಸಲು ಮೂಲಸ್ಥಾನವನ್ನು ಬಿಟ್ಟು ಗುಂಪುಗಳಲ್ಲಿ ಅಲಲ್ಲಿ, ಚದುರಿ ಅಲೆಮಾರಿಗಳಾಗಿ ನೆಲೆನಿಂತರು ಪ್ರತಿಯೊಬರಲ್ಲಿ ಆರ್ಥಿಕ ದುಸ್ಥಿತಿಯನ್ನು ಎದ್ದು ಕಾಣುತ್ತಿತ್ತು. ಸಾಕಷ್ಟು ಪ್ರಮಾಣದಲ್ಲಿ ದನಕರುಗಳಿದ್ದದರಿಂದ ಅವುಗಳ ಮೇಲೆ ಹೇರಿ ಪ್ರದೇಶದಿಂದ ಪ್ರದೇಶಕ್ಕೆ ಕೊಂಡ್ಯೊಯುವುದು ವ್ಯಾಪಾರ ಮಾಡುತ್ತಿದ್ದರು ಇನ್ನೂ ಕೆಲವರು ಆಹಾರ ಧಾನ್ಯ ಖಾದ್ಯ ಪದಾರ್ಥಗಳು ವ್ಯಾಪಾರವನ್ನು ಕೈಗೊಂಡಿರುವುದು ತಿಳಿದುಬರುತ್ತದೆ. ಹಿಂದೆ ಅಲೆಮಾರಿಗಳಾಗಿದ್ದು ಇಂದು ಗುಂಪುಗಳಲ್ಲಿ ನೆಲೆಸಿರುವ ಮಂಗಾರವಾಡಿಗರು ಬಹುತೇಕಡೆಗಳಲ್ಲಿ ಕಂಡುಬರುತ್ತಾರೆ. ಇಂದಿನ ಒಂದು ದಿನಗಳಲ್ಲಿ ಸಣ್ಣ ಪುಟ್ಟ ವ್ಯಾಪಾರ ಅಂಗಡಿ ಕೆಲಸ ಕಾರ್ಯಗಳು ಮಾಡುತ್ತಿರುವುದು ಕಂಡುಬರುತ್ತದೆ.

೩.೨ ಕೃಷಿ ಕಾರ್ಮಿಕರು

ಕೃಷಿಯನ್ನು ತಮ್ಮ ಉಪಜೀವನಕ್ಕಾಗಿ ಮಾತಿಕೊಂಡು ಉಪಜೀವಿಸುತ್ತಿದ್ದಾರೆ, ಕೃಷಿಕರಣ, ಕೃಷಿಕರಲ್ಲಿ ಒಣ ಬೇಸಾಯದವರೇ ಹೆಚ್ಚು ಜನ. ಗದ್ದೆ, ತೋಟಗಳಿರುವ ಜನ ತೀರ ಕಡಿಮೆ ಬಹಳ ಜನ ತಮಗೆ ಸ್ವಂತ ಜಮೀನು ಇಲ್ಲದೆ ಬೇರೆಯವರ ಜಮೀನಿನಲ್ಲಿ

ಕೂಲಿಕಾರರಾಗಿ ಕೆಲಸ ಮಾಡುತ್ತಾರೆ. ಮೊದಲೆ ಅಲೆಮಾರಿಗಳಾಗಿದ್ದು ಇಂದು ಗುಂಪಿನಲ್ಲಿ ನೆಲೆಸಿರುವ ಈ ಜನ ಪ್ರಕೃತಿಯ ಬೇಸುಗೆಯಾಗಿದ್ದಾರೆ. ಹೆಚ್ಚಾಗಿ ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ಈ ಜನ ಅಲ್ಪಸ್ವಲ್ಪ ಭೂಮಿಯನ್ನು ಖರೀದಿಸಿ ಸಾಗುವಳಿ ಮಾಡಿಕೊಂಡಿದ್ದರೂ ಹೆಚ್ಚು ಜನ ಕೂಲಿಯನ್ನೇ ಅವಲಂಬಿಸಿದ್ದಾರೆ. ಕೆಲವು ಜನರಲ್ಲಿ ವ್ಯಾಪಾರ ಮನೋವೃತ್ತಿ ಇಂದಿಗೂ ಉಳಿದು ಬಂದಿದೆ. ಕಾಡಿನಲ್ಲಿ ಸುಲಭವಾಗಿ ಸಿಕ್ಕುವ ಜೇನು ಕವಳಿ ಹಣ್ಣು, ನೆಲ್ಲಿಕಾಯಿ, ಇತ್ಯಾದಿಗಳು ತಂದು ಮಾರಿ ಹಣ ಸಂಪಾದಿಸುತ್ತಾರೆ. ಕೆಲವಾರು ಕಾಡಿನಲ್ಲಿಯ ಕಟ್ಟಿಗೆ ಕಡಿದು ತಲೆ ಮೇಲೆ ಹೊತ್ತು ದೂರದ ಪಟ್ಟಣಗಳಿಗೆ ಹೋಗಿ ಮಾರಾಟ ಮಾಡಿ ಉಪ ಜೀವನಸಾಗಿಸುತ್ತಾರೆ ಬೇರೆ ಪ್ರದೇಶಗಳಲ್ಲಿ ವಲಸೆ ಹೋಗಿ ಕಲ್ಲು ಒಡೆಯುವುದು, ಮಣ್ಣಿನ ಕೆಲಸ, ಕಟ್ಟಡ ಕೆಲಸ ರಸ್ತೆ ನಿರ್ಮಾಣ ಮೊದಲಾದ ಕೆಲಸಗಳನ್ನು ಮಾಡಿಕೊಂಡು ಜೀವಿಸುತ್ತಾರೆ.

೩.೩ ಭಟ್ಟಿ ಸಾರಾಯಿ ತಯಾರಿಕೆ

ಅಂದಿನ ಒಂದು ದಿನಗಳಲ್ಲಿ ಮಂಗಾರವಾಡಿಗರು ತಮ್ಮ ಬೇಸರ ಕಳೆಯಲು ಭಟ್ಟಿ ಸಾರಾಯಿ ತಯಾರಿಸಿಕೊಂಡು ಕುಡಿಯುತ್ತಿದ್ದರು ಬೇಟೆಯಾಡಿ, ಪ್ರಾಣಿಗಳನ್ನು ಹಿಡಿದು ದಣಿವುತ್ತಿದ್ದರು ಆದ್ದರಿಂದ ತಾವೇ ತೈಯಾರಿಸಿದ್ದ ಭಟ್ಟಿ ಸರಾಯಿ ಕುಡಿದು ಕಾಡುಗಳಲ್ಲಿ ಸಂಚರಿಸುವ ಧೈರ್ಯ, ಸಾಹಸ, ಹಾಗೂ ಶಕ್ತಿ ದೊರೆತಂತಿದೆ. ಹೀಗಾಗಿ ಒಂದು ಕಾಲದಲ್ಲಿ ಮಂಗಾರವಾಡಿಗರು ತಮಗಾಗಿ ಕುಡಿಯಲು ಭಟ್ಟಿ ಸಾರಾಯಿಯನ್ನು ತಯಾರಿಸಿಕೊಳ್ಳುತ್ತಿದ್ದರು ಇದಕ್ಕೆ ಹಲವಾರು ನಿರ್ಬಂಧಗಳಿದ್ದವು ಮುಂದೆ ಮುಂದೆ ಕಾಲಾಂತರಲ್ಲಿ ಭಟ್ಟಿ ಸಾರಾಯಿ ಕಳ್ಳಭಟ್ಟಿ ಸಾರಾಯಿಯಾಗಿ ಮಾರಾಟವಾಗ ತೊಡಗಿತ್ತು. ಸುತ್ತಲಿನ ಇತರೆ ಸಮಾಜದವರು ಆಗಾಗ ಅದರ ದರದಲ್ಲಿ ಸಿಗುವ ಈ ಸರಾಯಿಯನ್ನು ಕಳ್ಳತನದಿಂದ ಕುಡಿಯಲು ಪ್ರಾರಂಭಿಸಿದರು ಮೊದಲು ತಮ್ಮಗಷ್ಟೆ ಕುಡಿಯಲು ಒಳ್ಳೇ ಸಾರಾಯಿಯನ್ನು ತಯಾರಿಸಿಕೊಳ್ಳುತ್ತಿದ್ದರು ಇನ್ನುಳಿದರ ಬೇಡಿಕೆಯಿಂದ ಹಾಗೂ ಹಣಗಳಿಕೆಗಾಗಿ ಕೆಟ್ಟ ಸಾರಾಯಿಯನ್ನು ತಯಾರಿಸಲು ಮುಂದಾದರು ಇದ್ದರಿಂದ ದೇಹಾರೋಗ್ಯ ಕ್ಷೀಣಿಸತೊಡಗಿತ್ತು. ಸರ್ಕಾರ ಇದನ್ನು ಪ್ರತಿಬಂಧಿಸಿ ಮುಟ್ಟುಗೋಲುಹಾಕಿತು ಅಂದಿನಿಂದ ಅದು ಕಳ್ಳಭಟ್ಟಿ ಸಾರಾಯಿಯಾಗಿವೆ ಮುಂದುವರೆಯಿತು. ಕಳ್ಳಭಟ್ಟಿ ತಯಾರಿಸುವಿಕೆ ಕೆಲವು ಮಂಗಾರವಾಡಿಗರು ಉಪಜೀವನದ ಕಸುಬಾಗಿಯೂ ಪರಿಣಮಿಸಿತು.

ಮಂಗಾರವಾಡಿಗರು ತಮ್ಮ ಮಕ್ಕಳನ್ನು ಆಲಸಿಗಳಾಗಲಿ ಅಥವಾ ಸೋಮಾರಿಗಳಾಗಲಿ ಬಿಡುವುದಿಲ್ಲ, ಯಾವುದಾದರೂ ಕೆಲಸ ಕಾರ್ಯಗಳಲ್ಲಿ ತೊಡಗಿಸಿ ಬೇವರಿನ ಬೆಲೆ ಎಂಬುದನ್ನು ಮನವರಿಕೆ ಮಾಡಿಕೊಳ್ಳುತ್ತಾರೆ, ಕೆಲಸವಿಲ್ಲದ ವ್ಯರ್ಥವಾಗಿ ಅಲೆಯುತ್ತಿದ್ದರೆ. ಅವರನ್ನು ಯಾವುದಾದರೊಂದು ಕೆಲಸದ ಜವಾಬ್ದಾರಿ ವಹಿಸಿಕೊಡುತ್ತಾರೆ. ಅಲೆಮಾರಿಗಳಾಗಿರತಕ್ಕ

ಮಂಗಾರವಾಡಿಗರು ಸಮುದ್ರ ದಂಡೆಯಲ್ಲಿ ಸುಲಭವಾಗಿ ದೊರೆಯುವ ಲವಣವನ್ನು ಗೋಣಿ ಚೀಲಗಳಲ್ಲಿ ತುಂಬಿಕೊಂಡು ತಮ್ಮ ದನಕರುಗಳ ಮೇಲೆ ಹೇರಿಕೊಂಡು ವ್ಯಾಪಾರ ಮಾಡುತ್ತಿದ್ದರು ಇದಕ್ಕೆ ಯಾವುದೇ ಬಗೆಯ ವಿಶೇಷವಾದ ಉಪಕರಣಗಳನ್ನು ಬಳಸುತ್ತಿದ್ದರೂ ಎಂಬುದು ಕಂಡುಬರುವುದಿಲ್ಲ ಆದರೆ ಅವಿದ್ಯಾವಂತರಾದ ಅವರು ತಮ್ಮ ವ್ಯಾಪಾರ ವಹಿವಾಟಗಳ ಲಾಭ ನಷ್ಟ, ಹಣಕಾಸಿನ ಲೆಕ್ಕಾಚಾರಗಳಿಗೆ ಸ್ತ್ರೀಯರು ಕವಡೆಗಳನ್ನು ಬಳಸುತ್ತಿದ್ದ ಗಮನಾರ್ಹವಾಗಿದೆ. ಕೃಷಿ ಕಾರ್ಯಗಳಿಗೆ ಇತರರ ಬಳಸುವ ಉಪಕರಣಗಳೇನ್ನು ಬಳಸುತ್ತಾರೆ. ಅವರದೇ ಆದ ಯಾವ ವಿಶೇಷ ಉಪಕರಣಗಳಿಲ್ಲ.

೩.೪ ಕಸುಬುಗಳ ಬಗೆಗಿನ ನಂಬಿಕೆಳು

ಮಂಗಾರವಾಡಿಗರು ಮೂಲತಃ ಕೃಷಿಕರಲ್ಲದಲ್ಲಿ ತೆನೆ ಕೊಯ್ಯುವಾಗ ಕಣದಲ್ಲಿ ರಾಶಿ ಮಾಡುವಾಗ ಇಲ್ಲವ ಜೋಳ ಮೊದಲಾದ ಧಾನ್ಯಗಳನ್ನು ಹೊಲಗದ್ದೆಗಳಿಂದ ಮನೆಗೆ ತರುವಾಗ ಚೌಡಿ, ಚೆಂಡಿ ಇಲ್ಲವೆ ಭೂತಗಳಿಗೆ ಬಲಿಕೊಟ್ಟು ಸಂತೃಪ್ತಿಗೊಳಿಸಬೇಕು ಇಲ್ಲಾದರೆ ಮುಂದೆ ಏನಾದರೂ ಅನಾಹುತ ಇಲ್ಲವೆ ಅಪಘಾತಗಳು ಉಂಟಾಗುತ್ತವೆಂದು ಭಾವಿಸುತ್ತಿದ್ದರು.

೩.೫ ಬೇಟೆ

ಮೂಲತಃ ಅಲೆಮಾರಿಗಳಾದ ಮಂಗಾರವಾಡಿಗರು ಕಾಡು ಮೇಡುಗಳಲ್ಲಿ ಸಂಚರಿಸುವ ಸಮಯದಲ್ಲಿ ಅಲ್ಲಿ ಸಿಕ್ಕ ಪ್ರಾಣಿಗಳನ್ನು ಬೇಟೆಯಾಗಿ ತಮ್ಮ ಆಹಾರವನ್ನಾಗಿ ಬಳಸಿಕೊಂಡಿರುವುದು ಸಹಜ, ಬೇಟೆಗಳಲ್ಲಿ ಸಾಮಾನ್ಯವಾಗಿ ಮೊದಲ ಬೇಟೆ ಸಮುಖವಾಗಿತ್ತು. ಉಳಿದಂತೆ ಮೀನು ಏಡಿ ಹಿಡಿಯುವುದು ಉಡ ಹಿಡಿಯುವುದು ಕಾಡು ಹಂದಿ ಬೇಟೆ, ಕೌಜುಗದ ಬೇಟೆ ಮೊದಲಾದವುಗಳನ್ನು ಅವರಲ್ಲಿ ಕಂಡು ಬರುತ್ತಿದ್ದು ಅವುಗಳ ಮಾಂಸವನ್ನು ಸೇವಿಸುತ್ತಿದ್ದರು.

ವರ್ಷಕ್ಕೆ ಒಂದೆರಡು ಸಲ ಮೊಲದ ವಿಶೇಷ ಬೇಟೆಗೆಂದು ಹಲಗೆ ಬಾರಿಸುತ್ತ ಎಲ್ಲರನ್ನು ಹೊರಡಿಸುತ್ತಾರ. ಮೊಲ ಹಿಡಿಯಲು ಜೊತೆಗೆ ಅನೇಕ ನಾಯಿಗಳನ್ನು ಕರೆದೊಯ್ಯುತ್ತಾರೆ. ಈ ನಾಯಿಗಳು ಮೊಲದ ವಾಸನೆ ಹಿಡಿದು ದಾರಿ ಮಾಡಿಕೊಂಡು ಹೊಂದರಂತೆ ಅದು ಹಿಂಬಾಲಿಸಿಕೊಂಡು ಬೇರೆ ಬೇರೆ ದಿಕ್ಕಿನಲ್ಲಿ ಗುಂಪುಗಳಲ್ಲ ಚದುರಿ ಮೊಲದ ಮೇಲೆ ಆಕ್ರಮಣ ಮಾಡುತ್ತಾರೆ. ಕೆಲವೂ ಜಾತಿಯ ನಾಯಿಗಳಂತೂ ಬೆನ್ನು ಹತ್ತಿ ಮೊಲದ ಬೇಟೆಯನ್ನಾಡುತ್ತವೆ. ಸಾಮಾನ್ಯವಾಗಿ ಮಂಗಾರವಾಡಿನರು ಬಲೆ ಹಾಕಿ ಮೊಲವನ್ನು ಜೀವಂತವಾಗಿ ಹಿಡಿಯುವುದಿಲ್ಲ. ಮಾಂಸಾಹಾರಿಗಳಾದ ಇವರಿಗೆ ಮೊಲದ ಮಾಂಸವೆಂದರೆ ಪಂಚಪ್ರಾಣ, ಅದನ್ನು ಅತ್ಯಂತ ಶ್ರೇಷ್ಠವಾದ ಮಾಂಸವೆಂದು ಭಾವಿಸಿದ್ದಾರೆ. ಹೀಗಾಗಿ ಈ ಜನ ಬೇಟೆಯಾ ಮೊಲದ ಮಾಂಸವನ್ನು ತುಂಬಾ ಪ್ರೀತಿ ಹಾಗೂ

ಅಭಿಮಾನದಿಂದ ಸೇವಿಸುತ್ತಿದ್ದರೂ ಮಾಂಸದ ಪ್ರಮಾಣ ಇಲ್ಲಿ ಮುಖ್ಯವಿಲ್ಲ. ಅದರ ಒಂದು ತುಂಡು ದೊರೆತರೆ ಸಾಕು ಅದ್ದರಿಂದಲೆ ತೃಪ್ತಿಪಟ್ಟುಕೊಳ್ಳುತ್ತಿದ್ದರು.

ಬೇಸಿಗೆಯಲ್ಲಿ ಕೆರೆ ಹಳ್ಳ ಕೊಳ್ಳಗಳಲ್ಲಿ ನೀರು ಕಡಿಮೆಯಾಗ ಮಂಗಾರವಾಡಿಗರು ಬೇಟೆಗಾಗಿ ಹೋಗುತ್ತಿದ್ದರು ಇದು ಸಾಮೂಹಿಕ ಬೇಟೆಯಲ್ಲಿ ಯಾರು ಬೇಟೆಗಾಗಿ ಹೋಗುತ್ತಾರೋ ಅವರೇ ಅವರ ಹಕ್ಕುದಾದರೂ ತುಂಬಾ ಕಷ್ಟಪಟ್ಟು ಕೆಸರಾದ ನೀರಿನಲ್ಲಿ ಬಿದ್ದು, ದೊಡ್ಡ ದೊಡ್ಡ ಮೀನುಗಳನ್ನು ಹಿಡಿಯುವಲ್ಲಿ ಯಶಸ್ವಿಯಾಗುತ್ತಿದ್ದರು ಸಾಮಾನ್ಯವಾಗಿ ಅವರು ಬಲೆ ಬಿಸಿ ಮೀನು ಹಿಡಿಯುವುದು ಸರಳ ಕೈಚಳಕದಿಂದಲೇ ಅವುಗಳನ್ನು ವಶಪಡಿಸಿಕೊಳ್ಳುತ್ತಿದ್ದರು. ಆರ್ಥಿಕವಾಗಿ ದುರ್ಬಲದಾಗಿದರೂ, ಕಾಡುಗಳಲ್ಲಿರುವ ಅವರು ಕಾಡನೆ ಅವಲಂಬಿಸಬೇಕು ಗಡ್ಡೆ, ಕಾಯಿಗಳು, ಗೆಣಸು ಹಸಿರು, ಸೋಪ್ಪು ಮೊದಲಾದವುಗಳನ್ನು ಹುಡುಕಿ ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು ಕೆಲವರು ಸುಗ್ಗಿ ಸಂದರ್ಭದಲ್ಲಿ ಕೃಷಿ ಕಾರ್ಮಿಕರಾಗಿ ಕೆಲಸಮಾಡಿ ಅದಕ್ಕೆ ಬದಲಾಗಿ ದವಸ ಧಾನ್ಯವನ್ನು ಸಂಗ್ರಹಿಸಿಕೊಳ್ಳುತ್ತಿದ್ದರು ಹೀಗೆ ಯಾವ ಕೆಲಸಕ್ಕೂ ಹಿಂಜರಿಯದೆ ದುಡಿದ ಉಪಜೀವನ ನಡೆಸುತಿದರೆಂದು ತಿಳಿದು ಬರುತ್ತದೆ.

ಅಡಿ ಟಿಪ್ಪಣಿಗಳು

೧. ಆನ್ ಆಕ್ಟ್‌ವಾಸ್ ಬಾರ್ನ್ ಮಹಾಶ್ವೇತಾದೇವಿ, ಪು.ಸಂ-೩

೨. ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪಶ್ಯತೆ ಚಿದಾನಂದ ಮೂರ್ತಿ, ಪು.ಸಂ-೧೪೩

೩. ಜಾತಿಗಾರರ ಜಾತಿಕ, ಜ್ಯೋತಿ ಹೊಸೂರು, ಪು.ಸಂ-೧೧, ೧೯೮೫

೪. ಮೇಕಿಂಗ್, ಹಿಸ್ಟ್ರಿ, ಕರ್ನಾಟಕ ಪೀಪಲ್ ಅಂಡ್, ದೇರ್, ಪಾಸ್ಟ್, ಪು.ಸಂ-೧೭೫, ೧೯೯೫

ಅಧ್ಯಾಯ - ೪

ಮಂಗಾರವಾಡಿಗರ ಮಹಿಳಾ ಬದುಕು

ಅಧ್ಯಾಯ – ೪

ಮಂಗಾರವಾಡಿಗರ ಮಹಿಳಾ ಬದುಕು

೧೯೭೫ರಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ವರ್ಷದ ಆಚರಣೆಯಿಂದ ಸ್ತ್ರೀಯರಿಗೆ ಹೆಚ್ಚಿನ ಸವಲತ್ತುಗಳು ದೊರೆಯದಿದ್ದರೂ ಸ್ತ್ರೀಯರಲ್ಲಿ ಒಂದು ಸಾಮೂಹಿಕ ಜಾಗೃತಿ ಮೂಡಿಸುವಲ್ಲಿ ಪ್ರಯೋಜನಕಾರಿಯಾಯಿತ್ತು ಮಹಿಳೆ ದುಡಿಯಲು ಮನೆಯಿಂದ ಹೊರಗೆ ಹೋಗಿದ್ದು ನಿಜವೇ ಅವಳಿಗೆ ಅಲ್ಲಿಂದಲೇ ಅನೇಕ ಸಮಸ್ಯೆಗಳನ್ನು ಎದುರಿಸಲು ಅವುಗಳ ಜೊತೆ ಹೋರಾಡಲು ಸಿದ್ದಳಾಗಬೇಕಾಯಿತು. ಪಾರಂಪರಿಕವಾದ ಅವೈಚಾರಿಕ ಪದ್ದತಿಗೆ ದಾಸಳು ಎಂಬಂರ್ಥದಲ್ಲಿದೆ. ಮೂಢನಂಬಿಕೆಗಳು ಅವೈಜ್ಞಾನಿಕ ನಡವಳಿಕೆಗಳಿಗೆ ಮಾರುಹೋಗಿರುವಂತಹದು ಆದರೆ ತನ್ನ ಆಸೆ ಆಕಾಂಕ್ಷೆಗೆ ತನ್ನ ಒಳಧ್ವನಿ ಮತ್ತು ನಿಜಧ್ವನಿಗೆ ನೇರವಾಗಿ ನಡೆಯಲು ಸಮಾಜ ಹೆಣ್ಣಿಗೆ ಪ್ರತಿಬಂಧಕಗಳನ್ನು ಹೇರಿದೆ.

"ಸ್ತ್ರೀವಾದಿ ಸಿಮೊನ್ ದ ಬೊವಾ ಹೇಳುವಂತೆ ಸ್ತ್ರೀಯು ಕೇವಲ ಕ್ರಿಯಾತ್ಮಕ ಗುಣಗಳನ್ನು ಮೈಗೂಡಿಸಿಕೊಳ್ಳುವಂತೆ ಸಮುದಾಯದ ನೈಜ ಮಹಿಳೆಯನ್ನು ಬಳಕೆಯ ವಸ್ತುವಿನಂತೆ ಸೃಜಿಸುತ್ತದೆ. ಸಹಜ ಸ್ವಾಭಾವಿಕ ಮಹಿಳೆಯಾಗದೆ ಅಸ್ವಾಭಾವಿಕ ಪ್ರಾಣಿಯಂತೆ ಸಮುದಾಯ ಆಕೆಯನ್ನು ರೂಪಿಸಿದೆ ಎಂದು ಅಭಿಪ್ರಾಯಪಡುತ್ತಾರೆ."[೧] ಮೌಢ್ಯಗಳ ಪೊರೆ ಕಳಚಲು ಹೊರಟ ಹೆಣ್ಣಿಗೆ ಹೊನ್ನ ಸರಪಳಿ ಹಾಕಿ ಆವಿಸ್ಕಾರದ ಕೂಪಕ್ಕೆ ನೂಕುವ ಪುರುಷರ ದಬ್ಬಾಳಿಕೆಗೆ ಸಾಕ್ಷಿಯಾಗಿ ಮನುಷ್ಯನ ಇತಿಹಾಸದುದ್ದಕ್ಕೂ ಕಾಣುತ್ತೇವೆ. ಮಂಗಾರವಾಡಿ ಮಹಿಳೆಯರು ಸಮಾಜದಲ್ಲಿ, ಗಂಡಿನಷ್ಟೆ ಸಾಮರ್ಥ್ಯ ಹೊಂದಿದ್ದಾಳೆ. ಹೆಣ್ಣು, ಗೌಣವೆಂಬ ಭಾವನೆಗೆ ಅವರಲ್ಲಿ ಅವಕಾಶವಿಲ್ಲ. ಹೆಣ್ಣು ಮತ್ತು ಗಂಡು ಮಗುವಿಗೂ ಪ್ರೀತಿ ಪೂರ್ವಕವಾಗಿ ಆಧರಿಸುತ್ತಾರೆ. ಸ್ತ್ರೀಯು ಸಂಪ್ರದಾಯ ಆಚರಣೆಗಳಲ್ಲಿ ಕ್ರಿಯಾಶೀಲ

ಪಾತ್ರವಹಿಸುತ್ತಾಳೆ. ಆರ್ಥಿಕ ಮತ್ತು ಸಂಸಾರಿಕ ಜವಾಬ್ದಾರಿಯನ್ನು ಅರ್ಥಪೂರ್ಣವಾಗಿ ನಿರ್ವಹಿಸುತ್ತಾಳೆ. ಮಂಗಾರವಾಡಿಗ ಮಹಿಳೆ ಉತ್ತಮ ಸ್ಥಾನಮಾನಗಳು ಹೊಂದಿದ್ದಾಳೆ. ತಾಯಿಯ ಪರಿಕಲ್ಪನೆ ಅರ್ಥಪೂರ್ಣವಾಗಿ ಅಭಿವ್ಯಕ್ತಿಯಾಗವುದು ಬುಡಕಟ್ಟು ಜನಾಂಗಗಳಲ್ಲಿಯೇ, ಮಾರಿ, ಆದಿಶಕ್ತಿ, ಪಾರ್ವತಿ, ಹೀಗೆ ನಾನಾ ರೂಪದಲ್ಲಿ ಮಾತೃ ದೇವತಾರಾಧನೆಯು ಬುಡಕಟ್ಟು ಜನಾಂಗಗಳಲ್ಲಿ ಪ್ರಚಲಿತವಿದೆ.

೧. ಮಾತೃಪ್ರಧಾನ ಸಂಸ್ಕೃತಿ

ಬುಡಕಟ್ಟುಗಳಲ್ಲಿ ಎಲ್ಲಾ ಕಾಲದ ಸಂದರ್ಭದಲ್ಲಿಯೂ ಎಂದಿನಂತೆ ಇರಲಿಲ್ಲ. ಮನುಷ್ಯ ಹಿಂದಿನ ವ್ಯವಸ್ಥೆಗಿಂತ ಇಲ್ಲಿಯವರೆಗೆ ಅನೇಕ ವ್ಯಾತ್ಯಾಸಗಳು ಕಂಡು ಕೊಂಡಿದ್ದಾರೆ. ಇಂದಿಗೂ ಸಮುದಾಯಗಳಲ್ಲಿ ಪರಿವರ್ತನೆಗಳು ಆಗುತ್ತಲೇ ಇವೆ. ಈ ಕಾರಣದಿಂದ ಇಂದು ಕಾಣುತ್ತಿರುವ ಪಿತೃಪ್ರಧಾನತೆಯ ಅನೇಕ ಶತಮಾನಗಳ ಹಿಂದೆ ಅನೇಕ ಕಡೆಗಳಲ್ಲಿ ಪಿತೃಪ್ರಧಾನತೆ ಇತ್ತು. ಈಗ ಕುಟುಂಬಗಳ ಅಥವಾ ಸಮುದಾಯಗಳಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಇರುವುದು ಕಂಡು ಬರುತ್ತದೆ. ಭಾರತದಲ್ಲಿ ಖಾಸಿ, ಗಾರೋನಾಯರ್, ಬಂಟರೂ ಮತ್ತು ಮಂಗಾರವಾಡಿಗರ ಬುಡಕಟ್ಟುಗಳಲ್ಲಿ ಇಂಥಹ ಜೀವನ ಕ್ರಮವನ್ನು ಕಾಣುತ್ತೇವೆ.

ಮಾತೃ ಪ್ರಧಾನ ಕುಟುಂಬದಲ್ಲಿ ಸಮುದಾಯಗಳಲ್ಲಿ ಸೊದರ ಮಾವ ಮತ್ತು ತಾಯಿ ಒಂದೇ ವಂಶದವರು ಆದರೆ ಮಾವನ ಮಕ್ಕಳು ಆತನ ಹೆಂಡತಿಯ ವಂಶಕ್ಕೆ ಸೇರುತ್ತಾರೆ. ತಾಯಿಯಿಂದ ಮಗಳಿಗೆ ಆಸ್ತಿ ರವಾನೆಯಾಗುತ್ತದೆ. ಪುರಷರಿಗೆ ಯಾವ ಅಧಿಕಾರವು ಇರುವುದಿಲ್ಲ. ಸಮುದಾಯಗಳಲ್ಲಿ ತಂದೆ ತಾಯಿ, ಅಣ್ಣ ತಮ್ಮಂದಿರು, ಅಕ್ಕ ತಂಗಿಯರು, ದೊಡ್ಡಪ್ಪ, ಚಿಕ್ಕಪ್ಪ, ಚಿಕ್ಕಮ್ಮ, ಒಂದೇ ಕುಟುಂಬದಲ್ಲಿ ವಾಸಿಸುವಂತಹದು ಮಾತೃ ಪ್ರಧಾನ ಸಂಸ್ಕೃತಿಗೆ ಸಂಬಂಧಗಳ ಒಂದು ಬೇಸುಗೆ ಇರುವುದನ್ನು ನಾವು ಮುಖ್ಯವಾಗಿ ಕಾಣುತ್ತೇವೆ.

ಮಾತೃವಂಶಿಯ ಕುಟುಂಬಗಳಲ್ಲಿ ವರದಕ್ಷಿಣೆ, ಹಾವಳಿ ಹೆಚ್ಚಾಗಿರುವಂತಹದು ಕುಟುಂಬ ನಿರ್ವಹಣೆಯಲ್ಲಿ ಪುರುಷರ ಪಾತ್ರ ಪ್ರಾತಿನಿಧ್ಯವಾದದು ಇಲ್ಲಿ ಮಹಿಳೆಯೇ ಮೇಲು ಎಂಬುದು ಈ ಜನಾಂಗದಲ್ಲಿ ಪ್ರಚುರಪಡಿಸುತ್ತಾರೆ. ಮಾತೃಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀ ಹುಟ್ಟಿದ ಮನೆಯಲ್ಲಿಯೇ ಜೀವನ ಪೂರ್ತಿ ನೆಲೆಸುವುದನ್ನು ಸೂಚಿಸುತ್ತದೆ. ಮಾತೃಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರು ಮದುವೆಯ ಅನಂತರದಲ್ಲಿ ಗಂಡನ ಮನೆಗೆ ಹೋಗಿ ವಾಸಿಸುತ್ತಾರೆ. ತವರು ಮನೆಗೆ ಬರುತ್ತಿರಲಿಲ್ಲ ಆದರೆ ಇಂದಿನ ದಿನಗಳಲ್ಲಿ ಮಹಿಳೆ ಮದುವೆಯಾದ ಮೇಲೆ ಗಂಡನ ಮನೆಯಲ್ಲಿ ವಾಸ ಮಾಡುತ್ತಾಳೆ ಸಮುದಾಯಗಳಲ್ಲಿ

ಎಲ್ಲರೂ ಕೂಡಿ ಚೆನ್ನಾಗಿ ಸಹಬಾಳ್ವೆಯಿಂದ ಕೂಡಿಕೊಂಡು ಆಚಾರ, ವಿಚಾರ, ನಡೆ, ನುಡಿ, ಸಂಸ್ಕೃತಿಯಲ್ಲಿ ಚೆನ್ನಾಗಿರುವಂತಹುದು ಕಂಡು ಬರುತ್ತದೆ. "ಆಯಾ ಸಮುದಾಯಗಳು, ಸಾಂಸ್ಕೃತಿಕ, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಪಿಳಿಗೆಯಿಂದ ಪಿಳಿಗೆಗೆ ವರ್ಗಾಯಿಸುತ್ತದೆ."[೨] ಮಹಿಳೆಯು ಒಂದು ಕುಟುಂಬವನ್ನು ರೂಡಿಸಬಲ್ಲಳು ಇಲ್ಲವೆ ನಾಶಪಡಿಸಬಲ್ಲಳು ಅದು ಅವಳ ಕೈಯಲ್ಲಿದೆ ಪ್ರೀತಿ ವಿಶ್ವಾಸ ನೆಮ್ಮದಿ ಸೌಹಾರ್ದತೆಯಿಂದ ಕೂಡಿಕೊಂಡುಬಾಳುವಂತಹ ಮಂಗಾರವಾಡಿಗರಲ್ಲಿ ಕಂಡುಬರುತ್ತದೆ. ಸಾಮಾಜಿಕ ಬದುಕಿನ ಒಂದು ನೆಲೆಯಲ್ಲಿ ಬದುಕುವುದನ್ನು ಸಾಮಾನ್ಯವಾಗಿ ಕೆಲವೊಂದು ಬುಡಕಟ್ಟುಗಳಲ್ಲಿ ಕಂಡು ಕೊಳ್ಳಬಹುದು ಇವರಲ್ಲಿ ಮಾತೃರೂಪಿ ಆರಾಧನೆಯೇ ಹೆಚ್ಚು ಗಂಡು ದೇವತೆಗಳಿಗೂ ಸ್ತ್ರೀ ದೇವತೆಗಳಿಗೆ ಹೆಚ್ಚು ಆರಾಧನೆಯನ್ನು ಕೈಗೊಳ್ಳುತ್ತಾರೆ. ದೇವರು ನಮ್ಮನ್ನು ಸುಖವಾಗಿ ಚೆನ್ನಾಗಿ ಇಡಲೆಂದು ಪ್ರಾರ್ಥಿಸುವಂತಹದು.

೪.೨.೧ ಜನನ

ಸಾಮಾಜಿಕ ಚೌಕಟ್ಟಿನಲ್ಲಿ ಬೆಳೆದ ಮನುಷ್ಯನಿಗೆ ಅನೇಕ ವಿಧಿವಿಧಾನಗಳು ನಿಷೇದಗಳು ಬೆಳೆದು ಬಂದವು ಆ ಪರಿಸರಕ್ಕೆ ಸಂಭಂದಿಸಿದಂತೆ ಆ ಜನರ ಒಂದು ನಂಬಿಕೆ ಮತ್ತು ಆಲೋಚನಾ ಕ್ರಮಗಳು ಕಾರಣವಾದವುಗಳು ಮಗುವಿನ ಜನನದ ಸಂದರ್ಭದಲ್ಲಿ ಅನೇಕ ತೊಂದರೆಗಳುಂಟು ಮಾಟ ಮಂತ್ರ ಭೂತ ಪ್ರೇಥಗಳು ತೊಂದರೆ ನೀಡುತ್ತಿವೆ ಎಂಬುದು ಅವರ ಆಲೋಚನಾ ಕ್ರಮವಾಗಿದೆ. ಮನುಷ್ಯನಿಗೆ ಅವಶ್ಯಕವೆನಿಸಿದ ಅನೇಕ ವಿಧಿ, ವಿಧಾನ ವಿಚಾರಗಳು ಆಚರಣೆಗೆ ತಂದನು ಹಾಗೆಯೇ ತಂದೆ, ತಾಯಿ ಕುಟುಂಬ ವರ್ಗದವರು ಹುಟ್ಟಿದ ಮಗುವಿನ ಜೀವನದ ಭವಿಷ್ಯಕ್ಕಾಗಿ ದೇವರಲ್ಲಿ ಮೊರೆ ಹೋಗಿರುವಂತಹುದು ಮಕ್ಕಳಿಗೆ ಜನ್ಮ ನೀಡುವಾಗ ಹೆಣ್ಣು ಮಕ್ಕಳು ಎಚ್ಚರ ತಪ್ಪುವಂತಹ ಆಗ ಎಲ್ಲಾ ದೇವರ ಮಹಿಮೆ ಎಂದು ನಂಬಿಕೊಂಡು ಹೋಗಿ ಯಾವುದೇ ತೊಂದರೆಯಾಗದಂತೆ ಚೆನ್ನಾಗಿ ರಕ್ಷಿಸುತ್ತಾನೆ ಎಂಬ ನಂಬಿಕೆ ಹೊಂದಿದವರಾಗಿದ್ದಾರೆ. ಹೀಗೆ ಹಲವಾರು ಕಾರಣಗಳಿಂದ ಮಗುವಿನ ಒಂದು ಜನನಕ್ಕೆ ಸಂಭಂದಿಸಿದಂತೆ ಅನೇಕ ಆಚರಣೆಗಳು ಮಾಡುತ್ತ ಬಂದಿರುವಂತಹದು ಕಂಡುಬರತ್ತದೆ.

ಮಗುವಿನ ಗರ್ಭಾವಸ್ಥೆಯಿಂದ ಹಿಡಿದು ಸಾವಿನವರೆಗೆ ವಿವಿಧ ಹಂತಗಳಲ್ಲಿ ನಿರ್ದಿಷ್ಟವಾದ ನೆಲೆಯಲ್ಲಿ ಧಾರ್ಮಿಕ ಸಂಸ್ಕಾರಗಳಿಗೆ ನಂಬಿಕೆಗಳಿಗೆ ಮಹಿಳೆಯರು ಒಳಗಾಗುವಂತಹದು ಈ ಬಗೆಯ ಆಚರಣೆಗಳು ಮಂಗಾರವಾಡಿ ಮಹಿಳೆಯರಲ್ಲಿ ಕಂಡುಬರುತ್ತದೆ. ಹಾಗು ಪ್ರತಿಯೊಂದು ಜನಾಂಗಗಳಲ್ಲಿ ಆಚರಣೆಗಳು ಇದ್ದೇ ಇರುತ್ತವೆ. ಧಾರ್ಮಿಕ ವಿಧಿ ವಿಧಾನಗಳು ವ್ಯಕ್ತಿಯ ಬಾಹ್ಯ ಮತ್ತು ಆಂತರಿಕ ಬೆಳವಣಿಗೆ ಮೇಲೆ

ಪ್ರಭಾವ ಬೀರುತ್ತವೆ ಇದರ ಒಂದು ನೆಲೆಯಲ್ಲಿ ಆ ಸಮಾಜದಲ್ಲಿ ಅವರವರ ಪ್ರತಿಭೆ ಹಾಗೂ ವ್ಯಕ್ತಿತ್ವ ಸೃಷ್ಟಿಯಾಗುತ್ತದೆ. ಪ್ರಕೃತಿಯ ಸಹಜ ಒಂದು ಪರಿಸರ ಮನುಷ್ಯ ಮಾಡಿಕೊಂಡ ಅಥವಾ ಹೆಣೆದುಕೊಂಡ ಒಂದು ಬಲೆಯಲ್ಲಿ ನಾನು ನನ್ನದು ತನ್ನದು ಎಂಬುದು ಸೃಷ್ಟಿಸಿಕೊಂಡು ರಸಿಕ ಪ್ರವೃತ್ತಿಯು ಹೊಂದಿದ ಮಂಗಾರವಾಡಿಗರು ಸಹಜವಾಗಿಯೇ ಜನನವಾದಂತಹ ಮನೆಯಲ್ಲಿ ಸಂತೋಷದಾಯಕ ಸಮಾರಂಭವನ್ನು ಸಂಭ್ರಮದಿಂದ ಉಲ್ಲಾಸದಿಂದ ಆಚರಿಸುವಂತಹದು ಕಂಡುಬರುತ್ತದೆ.

ಮಹಿಳೆ ಗರ್ಭಿಣಿಯಾದಾಗ ಹಿಂದೂ ಧರ್ಮದಲ್ಲಿ ಪುರಷರು ಅನುಸರಿಸುವ ಅನೇಕ ನಂಬಿಕೆಗಳನ್ನು ಮಂಗಾರವಾಡಿಗರು ಅನುಸರಿಸಿಕೊಂಡು ಹೋಗುತ್ತಾರೆ. ಇಲ್ಲಿ ಮುಖ್ಯವಾಗಿ ಮಹಿಳೆಯರು ರಕ್ತಪಾತವನ್ನು ನೋಡುವಂತಿಲ್ಲ. ಆ ಆಚರಣೆಗಳು ಪಾಪ ಪುಣ್ಯದ ಕಲ್ಪನೆಯ ಹಿನ್ನೆಲೆಯಲ್ಲಿ ಹುಟ್ಟಿದವುಗಳಾಗಿದ್ದು ಇಂದು ಇವುಗಳು ಸಮಾಜದಲ್ಲಿನ ಒಂದು ಬದಲಾವಣೆಯಿಂದ ಬೇರೆಯಾಗಿ ಮಾರ್ಪಟುಗಳಾಗಿವೆ. ಮಂಗಾರವಾಡಿಗರು ಜನನ ಮತ್ತು ಮರಣಗಳಿಗೆ ಸಂಬಂಧಿಸಿದಂತೆ ಮಡಿ ಮೈಲಿಗೆಯನ್ನು ಕಟ್ಟು ನಿಟ್ಟಾಗಿ ಪಾಲಿಸುತ್ತಾರೆ. ಭಾರತೀಯ ಬುಡಕಟ್ಟುಗಳಲ್ಲಿ ಮುಖ್ಯವಾಗಿ ವಸತಿಯಿಂದ ದೂರ ಇರುವಂತಹ ಒಂದು ಸಂದರ್ಭವೆಂದ ಪ್ರಸೂತಿಯ ಒಂದು ಸಮಯದಲ್ಲಿ ಅವರು ಮೂಲದಲ್ಲಿ ಮನೆಯಿಂದ ದೂರವಿರುವ ಏಕೈಕ ಕೊಠಡಿಯೆಯಾಗಿತ್ತು. ಆಗ ಬಾಣಂತಿಗೆ ಪ್ರತ್ಯೇಕ ವ್ಯವಸ್ಥೆ ಮಾಡುವ ಅಗತ್ಯವಿತ್ತು. ಕುಟುಂಬದವರು ಕುಲದೇವತೆಗಳು ಜಾತಕದಲ್ಲಿ ಸೂತಕದಲ್ಲಿ ಅಪವಿತ್ರರಾಗುತ್ತಾರೆಂಬ ನಂಬಿಕೆಯು ಇದಕ್ಕೆ ಕಾರಣವಿರಬಹುದು. ಕುಟುಂಬದವರನ್ನು ಸ್ನಾನ ಮಾಡುವ ಬಚ್ಚಲಿನಲ್ಲಿ ಬಾಣಂತಿಗೆ ಸ್ನಾನ ಮಾಡಿಸುತ್ತಿರಲಿಲ್ಲ. ಪ್ರತ್ಯೇಕ ಸ್ನಾನ ಮಾಡುವ ವ್ಯವಸ್ಥೆ ಮಾಡುತ್ತಿದ್ದರು ಈ ನೀರು ಯಾರಾದರೂ ದಾಟಿ ಹೋದರೆ ತಾಯಿಯ ಎದೆ ಹಾಲು ಬತ್ತಿ ಹೋಗುವುದೆಂದು ನಂಬಿಕೆ ಹೊಂದಿದ್ದರು ಅಲ್ಲದೆ ಭೂತ ಪ್ರೇತಗಳು ಬಾಣಂತಿ ಮತ್ತು ಮಗುವಿಗೆ ಹಿಂಸೆಯನ್ನು ಕೊಡುತ್ತವೆಂದು ನಂಬಿದ್ದರು ಈ ಮೂಢನಂಬಿಕೆಗಳು ಜನರಲ್ಲಿ ಇಂದಿಗೂ ಇವೆ.

ಮಂಗಾರವಾಡಿ ಮಹಿಳೆಯರಿಗೆ ಮೊದಲು ಹೆರಿಗೆಗೆ ತವರುಮನೆಗೆ ಕಳಿಸುತ್ತಿಲಿಲ್ಲ. ಇದಕ್ಕೆ ಹಲವಾರು ಕಾರಣ ಕಂಡು ಬರುತ್ತವೆ ಅಲೆಮಾರಿಗಳಾದ ಇವರಿಗೆ ಗಂಡು ಹೆಣ್ಣಿಗೆ ಮದುವೆ ಮಾಡಿ ಬಿಟ್ಟಿದೆ ಮತ್ತು ಆ ಎರಡು ಕುಟುಂಬಗಳು ಹಬ್ಬಹರಿದಿನ ಜಾತ್ರೆ ಉತ್ಸವಗಳಲ್ಲಿ ಕೂಡಿ ಕೊಳ್ಳುತ್ತಿದ್ದರು ಹೆರಿಗೆಯನ್ನು ಮಂಗಾರವಾಡಿ ಮಹಿಳೆಯಲ್ಲಿ ಹೆಚ್ಚು ಅನುಭವಿ ಹೆಂಗಸರು ಮನೆಯಲ್ಲಿಯೇ ಮಾಡಿಸುತ್ತಿದ್ದರು ಹಿರಿಯ ಹೆಂಗಸರು ಪ್ರಸೂತಿಯಲ್ಲಿ ಅನುಭವವನ್ನುಳವರಾಗಿದ್ದರು ಹೆರಿಗೆ ಕಷ್ಟವಾದಾಗ ಸ್ವಚ್ಛ ಹರಿತವಾದ ಬಿಳಿಯ ಕಲ್ಲಿನ ಚೂರಿನಿಂದ ಗರ್ಭದ್ವಾರವನ್ನು ಸೀಳಿ ಪ್ರಸೂತಿ ಮಾಡುವ ನೈಪುಣ್ಯ ಈ ಹೆಂಗಸರು ಹೊಂದಿದ್ದರು ಹುಟ್ಟಿದ ಮಕ್ಕಳಿಗೆ ಜೀವವಾಯುವಿಲ್ಲದೆ ನಿಶ್ಚಲವಾಗಿದ್ದರೆ ಹೊಕ್ಕಳ ಬಳ್ಳಿಯನ್ನು

ಕತ್ತರಿಸದೆ. ಕಸದ ಚೀಲವನ್ನು ಹೆಂಚಿನ ಮೇಲಿಟ್ಟು ಬಿಸಿಮಾಡಿ ಮಗುವಿಗೆ ಜೀವಬರಿಸುವ ವಿಧಾನವೊಂದನ್ನು ಹೊಂದಿದ್ದರು ಇದು ಎಷ್ಟರ ಮಟ್ಟಿಗೆ ಸತ್ಯವೆಂಬುದು ಚರ್ಚೆಗೆ ಎಡವು ಮಾಡಿಕೊಡುತ್ತದೆ ಹೆರಿಗೆಯ ಸಮಯದಲ್ಲಿ ಗಂಡನು ಸಮೀಪವಿರುವಂತಿಲ್ಲ. ಇತರ ಹೆಣ್ಣು ಮಕ್ಕಳಾಗಲಿ ಗಂಡು ಮಕ್ಕಳಾಗಲಿ ಆ ಸಮಯದಲ್ಲಿ ಸಹಕರಿಸಬಹುದಾಗಿತ್ತು. ಈಗ ಅತ್ತೆ, ಮಾವ ಎಲ್ಲರೂ ಕೂಡಿ ಒಳ್ಳೆಯ ಒಂದು ರೀತಿಯಲ್ಲಿ ಪ್ರಸೂತಿ ಸಹಾಯ ಮಾಡುತ್ತಾರೆ.

ಮಂಗಾರವಾಡಿಗರಲ್ಲಿ ಗಂಡು ಮಗುವಿನ ಜನನವಾದರೆ ಕುಟುಂಬದಲ್ಲಿ ಶಾಸ್ತ್ರವನ್ನು ಮಾಡುತ್ತಾರೆ ಹರ್ಷ ಸಂತೋಷ ಉಲ್ಲಾಸದಿಂದ ಮನೆಮಂದಿಯಲ್ಲಾ ಕೂಡಿಕೊಂಡು ಇರುತ್ತಾರೆ. ಗಂಡು ಎಂದು ತಿಳಿದಾಗ ಕುಟುಂಬ ಮತ್ತು ತಮ್ಮ ಸಮುದಾಯದ ಗಂಡಸರು ಮತ್ತು ಹೆಂಗಸರು ಕೂಡಿಯೇ ಸಂತೋಷ ಕ್ರಿಯೆಯಲ್ಲಿ ಭಾಗಿಯಾಗುತ್ತಾರೆ. ಮಗುವಿನ ಹೆಸರೂ ಹುಟ್ಟಿದ ಮೂಹೂರ್ತಗಳನ್ನು ತಿಳಿದುಕೊಂಡು ಬರುವಾಗ ಬಾಣಂತಿಗೆ ಬೇಕಾಗುವ ಶಕ್ತಿ ದಾಯಕ ತಿನಿಸುಗಳನ್ನು ಮಂತ್ರಿಸಿದ ಕೊಬ್ಬರಿ ಮತ್ತು ಇತರ ಸಾಮಾನುಗಳು ತರುತ್ತಾರೆ. ನಂತರ ಮಗುವಿಗೆ ಮೈ ಮೇಲೆ ನೀರು ಹಾಕುತ್ತಾರೆ. ಕುಲದೇವತೆಗಳಿಗೆ ಪೂಜೆ ಪುನಸ್ಕಾರ ಮಾಡುತ್ತಾರೆ. ನಮ್ಮ ಮಕ್ಕಳಿಗೆ ಚನ್ನಾಗಿ ಇಡಲೆಂದು ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ. ಅದೇ ಸಂದರ್ಭದಲ್ಲಿ ಹಿರಿಯ ಅನುಭವಿ ಮಹಿಳೆಯರು ಮನೆಯ ಮಧ್ಯದಲ್ಲಿ ಸಾಲಾಗಿ ನಿಂತು ದೇವರಿಗೆ ಪ್ರಾರ್ಥನೆ ಮಾಡುತ್ತಾರೆ. ಪ್ರಾರ್ಥನೆ ಪೂಜೆ ಪುನಸ್ಕಾರದ ಶಾಸ್ತ್ರಗಳೆಲ್ಲ ಮುಗಿದ ನಂತರ ಮಕ್ಕಳಿಲ್ಲದ ಇಬ್ಬರು ಮುತ್ತೈದೆಯರಿಗೆ ಆ ಮಗುವನ್ನು ಮಡಿಲಲ್ಲಿ ಹಾಕುತ್ತಾರೆ. ಮುಂದೆ ಮುತ್ತೈದೆಯರಿಗೆ ತಪ್ಪದೆ ಮಕ್ಕಳಾಗುತ್ತವೆಂಬ ನಂಬಿಕೆ ಈ ಜನರಲ್ಲಿದೆ ಅಲ್ಲಿ ಸೇರಿದ ಎಲ್ಲಾ ಹಿರಿಯರು ಕಿರಿಯಲ್ಲರಿಗೂ ಸಿಹಿ ತಿಂಡಿಗಳನ್ನು ಹಂಚುತ್ತಾರೆ.

ಮಂಗಾರವಾಡಿ ಸಮಾಜದಲ್ಲಿ ಹೆಣ್ಣಿಗೆ ಗೌರವದ ಸ್ಥಾನವಿದೆ. ಉತ್ತಮವಾದ ಕುಟುಂಬ ಸಮುದಾಯದಲ್ಲಿ ಪ್ರಚಲಿತವಿದ್ದೂ ಇದರರ್ಥ ಗಂಡಹೆಂಡತಿಯರೂ ಒಂದೇ ಅಂದರೆ ಗಂಡು ಹೆಣ್ಣು ಸರಿ ಸಮಾನರೂ ಎಂಬುದು ಅವರ ಒಪ್ಪಿದ ಮೌಲ್ಯವಾಗಿದೆ ಸಭೆ ಸಮಾರಂಭಗಳಲ್ಲಿ ಹೆಂಗಸರು ಗಂಡಸರು ಕೂಡಿಯೇ ನಿರ್ಣಯ ಮಾಡುತ್ತಾರೆ. ಅಷ್ಟರ ಮಟ್ಟಿಗೆ ಸ್ತ್ರೀಯ ಸಮಾನತೆಯನ್ನು ಒಪ್ಪಿಕೊಂಡ ಅಲೆಮಾರಿಗಳು ಭಿನ್ನ ರೀತಿಯಲ್ಲಿ ಅವರಲ್ಲಿ ನಿಲುವಿದೆ. ಗಂಡು ಮಗುವಿನ ಜನನದ ಪಕ್ಷಪಾತಿಗಳು ಎಂಬಂತಿರುವ ಸಂಸ್ಕೃತಿಯ ಸಂಪರ್ಕದಿಂದ ಬಂದಿರುವ ಸಾಧ್ಯತೆಯಿದೆ.

ಬಾಣಂತಿ ಮತ್ತು ಮಗುವನ್ನು, ಎಚ್ಚರಿಕೆಯಿಂದ ಕಾಪಾಡುತ್ತಾರೆ. ಮಗುವಿಗೆ ಹೆಚ್ಚು ಕಮ್ಮಿಯಾದರೆ ದಿನಕ್ಕೆ ಎರಡೆರಡು ಸಲ ಎಣ್ಣೆ ಹಚ್ಚಿ ಮಾಲಿಸು ಮಾಡಿ ಸ್ನಾನ ಮಾಡಿಸುತ್ತಾರೆ. ಬಾಣಂತಿಗೆ ಬೆಳಿಗ್ಗೆ ಮತ್ತು ಸಂಜೆ ಬಿಸಿ ನೀರಿನಿಂದ ಸ್ನಾನ ಮಾಡಿಸಿ ಕುಡಿಯಲು ತಪ್ಪದೆ

ಬಿಸಿ ನೀರು ಕೊಡುತ್ತಾರೆ ಮತ್ತು ಬೇಗ ಗುಣಮುಖಳಾಗುತ್ತಾಳೆ ಎಂಬ ನಂಬಿಕೆ ಹೊಂದಿದ್ದಾರೆ ದಿನಕ್ಕೆ ಸರಿಯಾಗಿ ಮೂರು ಹೊತ್ತು ಊಟ ಕೊಡುತ್ತಾರೆ. ಬಾಣಂತಿ ಮತ್ತು ಜನಿಸಿದ ಮಗುವಿನ ಸೂತಕವನ್ನು ಕಳೆಯುವ ವಿಧಿಗಳು ಬೇರೆ ಬೇರೆ ಬುಡಕಟ್ಟು ಜನಾಂಗಗಳಲ್ಲಿ ಬೇರೆ ಬೇರೆಯ ರೀತಿಯಲ್ಲಿ ಆಚರಣೆಯಲ್ಲಿವೆ, ಬಾಣಂತಿಯ ತಲೆಯ ಮೇಲೆ ನೀರನ್ನು ಸುರಿಸುತ್ತಾರೆ. ಅಂದು ಸಂಜೆ ಹೆರಿಗೆಯ ಮನೆಯ ಮುಂದೆ ಒಂದು ಸಣ್ಣ ಗುಂಡಿಯನ್ನು ತೋಡಿ ಅವರ ಸುತ್ತ ಸಗಣಿಯಿಂದ ಸಾರಿಸುತ್ತಾರೆ. ಹಿರಿಯ ಹೆಂಗಸರ ಬಾಣಂತಿಯ ಉಡಿಯಲ್ಲಿ ಅಕ್ಕಿ ಮತ್ತು ಮಗುವಿನ ಬಟ್ಟೆಯನ್ನು ಹಾಕುತ್ತಾರೆ. ನಂತರ ದೇವರಿಗೆ ನಮಸ್ಕಾರ ಮಾಡುತ್ತ ಹುಟ್ಟು ಸಾವಿನ ಅಧಿದೇವತೆ ಅವಳೆಂಬುದು ಮಂಗಾರವಾಡಿಗರ ಭಾವನೆ ಈ ಒಂದು ಸಮುದಾಯದಲ್ಲಿ ಗಂಡು ಹೆಣ್ಣು ಎಂಬ ಒಂದು ಮೇಲು-ಕೀಳು ಶ್ರೇಷ್ಠ ಕನಿಷ್ಠ ಎಂಬ ಭಾವನೆ ಇವರಲ್ಲಿ ಕಂಡು ಬರುವುದಿಲ್ಲ. ನಾವೆಲ್ಲರೂ ಒಂದೇ ಎಂಬ ಭಾವನೆ ಕಂಡು ಬರುತ್ತದೆ.

ಮಂಗಾರವಾಡಿಗರ ಆರ್ಥಿಕ, ಪರಿಸ್ಥಿತಿ ಗಂಭೀರವಾಗಿರುವುದರಿಂದ ಬಾಣಂತಿಯರಿಗೆ ವಿಶ್ರಾಂತಿ ಸಿಗುವಂತಹದು ದುರ್ಬಲ. ಬಹುಪಾಲು ತಿಂಗಳು ಬಾಣಂತಿಯರು ಮತ್ತು ಗರ್ಭಿಣಿಯರು ದೈಹಿಕವಾಗಿ ದೃಢಕಾಯರಾಗಿರುವುದರಿಂದ ಈ ಮಹಿಳೆಯರಿಗೆ ಹೆರಿಗೆ ಅಷ್ಟು ಕಷ್ಟವಲ್ಲ. ಅದೇನೆ ಇದ್ದರೂ ಬುಡಕಟ್ಟು ಜನಾಂಗವೊಂದು ಹೊಸ ಜೀವನವನ್ನು ಸ್ವಾಗತಿಸುವ ವಿಧಾನ ಪ್ರಸವದ ಸಮಯದಲ್ಲಿ ತೋರುವ ಜಾಣ್ಮೆ, ಸೂತಕ ಕಳೆದುಕೊಳ್ಳಲು ಆಚರಿಸುವಂತಹ ಆಚರಣೆಗಳು ಬಾಣಂತಿ ಮತ್ತು ಮಗುವಿನ ಬಗೆಗೆ ತೋರುವ ಕಾಳಜಿ, ಈ ಎಲ್ಲ ಕ್ರಿಯೆಗಳು ಶತಶತಮಾನದ ಹಿಂದೆ ದಟ್ಟವಾದ ಜೀವನಾನುಭವಿದೆ.

ಜನನ ಮತ್ತು ಮರಣ ಮಾನವ ಜೀವನದ ಎರಡು ಮಹತ್ವದ ಸಂಗತಿಗಳು ಇವುಗಳಿಗೆ ಸಂಬಂಧಿಸಿದಂತೆ ಕೆಲವು ವಿಧಿ-ವಿಧಾನಗಳು ಸಂಸ್ಕಾರ ಸಂಪ್ರದಾಯಗಳು ಎಲ್ಲ ಜಾತಿ, ಜನಾಂಗಗಳಲ್ಲಿರುವುದು ವಿಶಿಷ್ಟವಾಗಿದೆ. ಈ ಸಂದರ್ಭದಲ್ಲಿ ಆಚರಿಸುವ ಆಚರಣೆಗಳು ಮತ್ತು ಸಂಪ್ರದಾಯಗಳು ಕೆಲವು ಜನಾಂಗಗಳಲ್ಲಿ ತುಂಬಾ ಕಟ್ಟು ನಿಟ್ಟಾಗಿವೆ. ಮಂಗಾರವಾಡಿಗರು ಪ್ರಚಲಿತವಿರುವ ಸಂಪ್ರದಾಯಗಳು ಆಚರಣೆಗಳು ತುಂಬ ವಿಶಿಷ್ಟವಾಗಿವೆ.

೪.೨.೨ ಋತುಮತಿ

ಹುಡುಗಿಯರಿಗೆ ಯೌವ್ವನಾವಸ್ಥೆಯ ಪ್ರಾರಂಭವು ಒಂದು ನೈಸರ್ಗಿಕಕ್ರಿಯೆ ಮಂಗಾರವಾಡಿಗರಲ್ಲಿ ಯಾವ ವಿಶೇಷ ಆಚರಣೆಗಳೂ ಕಂಡುಬರುವುದಿಲ್ಲ. ಹೆಣ್ಣು ಮೈನೆರೆಯುವುದನ್ನು ಅಂದರೆ "ಮಹಿಳೆಯರ ಸಮನಾಳಿ" ಎಂದು ಹೇಳುತ್ತಾರೆ. ತಮ್ಮ

ಸಂಬಂಧಿಕರನೆಲ್ಲಾ ಕರೆದು ಎಲ್ಲರಿಗೆ ಸಿಹಿ ಊಟ ಹಾಕಿಸಿಸುತ್ತಾರೆ. ನಗರದ ಹಿರಿಯರು ಕೂಡಿಕೊಮಡು ಈ ಒಂದು ಕಾರಣದಲ್ಲಿ ಎಲ್ಲರೂ ಸಂತೋಷದಿಂದ ಊಟ ಮಾಡಿಕೊಂಡುಹೋಗುತ್ತಾರೆ. ಹಿರಿಯರು ಮಹಿಳೆಗೆ ೭ ದಿನಗಳ ಕಾಲ ಆಕೆಗೆ ಕೂಡರಿಸಿ ಹಾಡುತ್ತಾರೆ. ಏಳು ದಿನಗಳ ನಂತರ ಅವಳು ಬಳಸಿದ ವಸ್ತುಗಳನ್ನು ತೊಳೆದು ಅಲ್ಲಿಗೆ ಸೂತಕವು ಕಳೆದಂತಾಯಿತು. ಅಲೆಮಾರಿಗಳಾದ ಮಂಗಾರವಾಡಿಗರು ಪ್ರತ್ಯೇಕ ಗುಡಿಸಲು ನಿರ್ಮಾಣ ಮಾಡುತ್ತಿದ್ದರೆಂಬುದು ಅವರ ವೃತ್ತಿಯ ಸ್ವರೂಪ ಮತ್ತು ಅದರಿಂದ ನಿರ್ಬಂಧಿತವಾಗುವ ಶಾಸ್ತ್ರೋಕ್ತವಾದ ಆಚರಣೆಗಳೂ ಪರಸ್ಪರ ಆಂತರಿಕ ಸಂಬಂಧವನ್ನು ಅಲ್ಲಗಳೆದಂತಾಗುತ್ತದೆ ಇತ್ತೀಚಿನ ದಿನಗಳಲ್ಲಿ ಆಧುನಿಕತೆಯ ಪರಿಣಾಮದಿಂದ ಮಡಿ ಮೈಲಿಗೆಯ ಭಾವನೆ ಸಕಾರವಾಗಿ ತೀರಾ ಗೌಣವಾಗುತ್ತಿದೆ.

೪.೨.೩ ಮದುವೆ

ಮಾನವ ಸಮಾಜದ ಮತ್ತು ಸಮುದಾಯದ ಅತ್ಯಂತ ಪ್ರಾಚೀನ ಮತ್ತು ಪ್ರಧಾನ ಸಂಸ್ಥೆಗಳಾಗಿವೆ. ಕುಟುಂಬ ಮತ್ತು ಮದುವೆ ಒಂದು ಪರಂಪರೆಯ ಹಿನ್ನೆಲೆಯಲ್ಲಿ ಆಚರಿಸಿಕೊಂಡು ಬಂದಿರುವ ಸಂಪ್ರದಾಯಗಳು ಪ್ರತಿಯೊಂದು ಸಮುದಾಯಗಳಲ್ಲಿ ಕಂಡುಬರುತ್ತದೆ. ಸಂಸ್ಕೃತಿಯ ಪೋಷಣೆ ಮತ್ತು ಲೈಂಗಿಕ ಅಗತ್ಯಗಳ ಪೂರೈಕೆ ಇವುಗಳ ಮುಖ್ಯ ಉದ್ದೇಶ ಮದುವೆ ಹೆಣ್ಣು ಮತ್ತು ಗಂಡಿಗೆ ಸಂತಾನೋತ್ಪತ್ತಿ ಮತ್ತು ಲೈಂಗಿಕ ತೃಪ್ತಿಗೆ ಸಮಾಜ ಕೊಡುವ ಒಪ್ಪಿಗೆ ಸಮುದಾಯಗಳಲ್ಲಿ ನಡೆಯಬಹುದಾದ ಅಕ್ರಮಗಳನ್ನು ನಿಯಂತ್ರಿಸಿ ಹೆಣ್ಣು ಗಂಡಿನ ಬದುಕಿಗೆ ಭದ್ರತೆಯನ್ನು ಒದಗಿಸಿ ಸಾಮಾಜಿಕ ಬದುಕು ಸುಗಮವಾಗಿಸುವಲ್ಲಿ ವಿವಾಹವು ವಿಶೇಷವಾಗಿದೆ.

ಮಂಗಾರವಾಡಿಗರು ಇತ್ತೀಚಿನ ದಿನಗಳಲ್ಲಿ ಕೆಲವರು ಅಂತರಜಾತಿಯ ವಿವಾಹವನ್ನು ಮಾಡಿಕೊಂಡಿದ್ದಾರೆ. ಯಾವುದೇ ಜಾತಿಯ ಗಂಡು ಮಕ್ಕಳುಗಳೊಂದಿಗೆ ಪ್ರೀತಿ, ಪ್ರೇಮ ಎಂಬ ಬಲೆಗೆ ನಿಲುಕಿ ಮದುವೆಯ ಹಂತದವರೆಗೆ ಬಂದಾಗ ಕೊನೆಯ ಹಿರಿಯ ಒಂದು ಸಲಹೆಯ ಮೇರೆಗೆ ಮದುವೆ ಮಾಡಿಕೊಂಡು ತಮ್ಮ ಸಮುದಾಯಗಳಲ್ಲಿ ಸೇರಿಸಿಕೊಳ್ಳುತ್ತಾರೆ ಮತ್ತು ಒಂದೇ ಜಾತಿಯವರನ್ನು ಕೂಡಾ ಶಾಸ್ತ್ರೋಕ್ತವಾಗಿ ಕಟ್ಟು ನಿಟ್ಟಾಗಿ ನಿಯಮಗಳು ಪಾಲಿಸಿರುವುದರಿಂದ ಬುಡಕಟ್ಟಿನ ಒಳಗಡೆ ಲೈಂಗಿಕ ಶಿಸ್ತನ್ನು ಕಾಪಾಡಿಕೊಳ್ಳಲು ಸಾಧ್ಯವಾಗಿದೆ. ಮಂಗಾರವಾಡಿಗರು ಸಂಪ್ರದಾಯದ ಮದುವೆ ಮನೆಯಲ್ಲಿ ಹೆಣ್ಣು ಗಂಡುಗಳಿಗೆ ತಮ್ಮ ಬಾಳ ಸಂಗಾತಿಯನ್ನು ಆಯ್ದೆ ಮಾಡಿಕೊಳ್ಳುವ ಸ್ವಾತಂತ್ರ್ಯವಿದೆ. ತಂದೆ ತಾಯಿಯರು ಆ ಜವಾಬ್ದಾರಿಯನ್ನು ನಿಭಾಯಿಸುತ್ತಾರೆ.

ಮದುವೆಯ ಸಮಯದಲ್ಲಿ ಮುಖ್ಯವಾಗಿ ನಾಲ್ಕು ಹಂತಗಳಲ್ಲಿ ನಡೆಯುತ್ತವೆ, ಮಾತುಕತೆ, ನಿಶ್ಚಯಾ ವೀಳ್ಯೆ ಶಾಸ್ತ್ರ, ಮದುವೆ ಮುಂತಾದವುಗಳಾಗಿವೆ.

*** ಮದುವೆ ಮಾತುಕತೆ**

ಗಂಡಿನ ಮನೆಯವರು ಹೆಣ್ಣಿನ ಮನೆಗೆ ಹೋಗಿ ತನ್ನ ಮಗನಿಗೆ ಹೆಣ್ಣು ಕೊಡಬೇಕೆಂದು ಕೇಳಿಕೊಳ್ಳುತ್ತಾರೆ. ಅವರು ಒಪ್ಪಿದರೆ ಸಿಹಿ ಊಟ ತಂದು ಉಣಿಸುತ್ತಾರೆ. ಮಂಗಾರವಾಡಿಗಳಲ್ಲಿ ಗಂಡಿನವರು ಹೆಣ್ಣಿನ ಮನೆಗೆ ಹೋಗಿ ಹೆಣ್ಣು ಬೇಡುವ ಪದ್ದತಿ ಇಂದಿಗೂ ರೂಢಿಯಲ್ಲಿದೆ, ಗಂಡಿನ ಮನೆಗೆ ಮದುವೆಯ ಮಾತು ಕತೆಗೆ ಹೆಣ್ಣಿನವರು ಹೋಗುವುದು ಅವಮಾನವೆಂದು ಭಾವಿಸುತ್ತಾರೆ. ಹಿಂದೂ ಸಮಾಜದ ಇತರ ಜಾತಿಗಳಲ್ಲಿ ಇದಕ್ಕೆ ವ್ಯತಿರಿಕ್ತ ಆಚರಣೆಯ ಗಮನಾರ್ಹ ವ್ಯತ್ಯಾಸವೊಂದನ್ನು ಇಲ್ಲಿ ಕಾಣುತ್ತೇವೆ. ಸಾಮಾಜಿಕ ಪ್ರತಿಷ್ಠೆ ತಾವು ಗಂಡಿನ ಕಡೆಯವರೆಂಬ ಅಹಂಬಾವ, ಸ್ಥಾನಮಾನಗಳ ಪೂರ್ವಾಗ್ರಹ, ವರದಕ್ಷಿಣೆ, ಇತ್ಯಾದಿಗಳನ್ನು ಚೌಕಾಸಿಯನ್ನಾಗಿ ಹೆಣ್ಣಿನ ಕಡೆಯವರೇ ಮೊದಲು ಬೇಡಿಕೆ ಕಳಿಸಲಿ ಎಂಬ ಇತರ ಹಿಂದೂ ಸಮಾಜಗಳ ಇತ್ತೀಚ್ಚಿನ ರೂಢಿ ಇವರಲ್ಲಿ ಗಂಡಿನ ಬೇಡಿಕೆ ಅಧಿಕವಾಗಿರುವ ಈ ದಿನಗಳಲ್ಲೂ ಮಂಗಾರವಾಡಿಗರು ಗಂಡಿನವರೇ ಮುಂದಾಗಿ ಹೆಣ್ಣನ್ನು ಬೇಡುವ ವಾಡಿಕೆಯನ್ನು ಗಟ್ಟಿಯಾಗಿ ಉಳಿಸಿಕೊಂಡು ಬಂದಿದ್ದಾರೆ. ಮಾತಕತೆ ಮದುವೆ ಶಾಸ್ತ್ರದ ಮೊದಲನೆ ಹಂತವಾಗಿದೆ.

*** ಮದುವೆ ನಿಶ್ಚಯ**

ಈ ಒಂದು ಸಂದರ್ಭದಲ್ಲಿ ಗಂಡಿನ ಕಡೆಯವರು ತಮ್ಮ ಸಮುದಾಯದ ಹಿರಿಯರೊಂದಿಗೆ ಕೂಡಿ ಹೆಣ್ಣಿನ ಮನೆಗೆ ಹೋಗುತ್ತಾರೆ. ಅಲ್ಲಿ ಎರಡು ಸಮುದಾಯಗಳ ಅಥವಾ ಕುಟುಂಬಗಳ ಹಿರಿಯರುಗಳ ಸಮಕ್ಷಮದಲ್ಲಿ ಮದುವೆಗೆ ಸಂಬಂಧಿಸಿದ ಮಾತುಕತೆಗಳ ನಡೆಯುತ್ತವೆ. ಮಾತುಕತೆಗಳು ಮುಗಿದ ಮೇಲೆ ಗಂಡಿನ ಕಡೆಯವರು ತಮ್ಮ ಸಂಪ್ರದಾಯದಂತೆ ಬಂದುಗಳಿಗೆ ಸಿಹಿ ಊಟ ಬಡಿಸುತ್ತಾರೆ.

ನಿಶ್ಚಯವಾದ ಮೇಲೆ ಗಂಡು ಮತ್ತು ಹೆಣ್ಣು ಮಕ್ಕಳ ಎರಡು ಕುಟುಂಬದವರು ಉಳಿಯುತ್ತಾರೆ. ಒಟ್ಟು ಸಮಾಜದವರೆಂದು ಪರಿಗಣಿಸಲ್ಪಡುತ್ತಾರೆ. ನಿಶ್ಚಯವಾದ ಮೇಲೂ ಸಂಬಂಧಿಕರಲ್ಲಿ ಭಿನ್ನಾಪ್ರಾಯಗಳು ಬಂದರೆ ಸಮುದಾಯದ ನಾಯಕರುಗಳಿಗೆ ತಿಳಿಸದೆ ಯಾವ ತೀರ್ಮಾನಕ್ಕೂ ಬರುವುದಿಲ್ಲ. ಸಂಬಂಧ ಬಿಡುಗಡೆ ಅನಿವಾರ್ಯವಾಗಿದ್ದರೆ ಎರಡು ಸಮುದಾಯಗಳ ಹಿರಿಯರಿಗೆ ವಿಷಯವನ್ನು ತಿಳಿಸಿ ಪರಸ್ಪರರ ಅಭ್ಯಂತರವಿಲ್ಲದಿದ್ದರೆ. ಬೇರೆ ಕಡೆಗೆ ಸಂಬಂಧವನ್ನು ಬೆಳೆಸಬಹುದು ತಪ್ಪು ಒಂದು ಕುಟುಂಬದ್ದಾಗಿದ್ದರೆ ಎರಡು

ಸಮುದಾಯಗಳ ಕುಟುಂಬಗಳ ಹಿರಿಯರು ಸಭೆ ಸೇರಿ ಸೂಕ್ತ ರೀತಿಯಲ್ಲಿ ತೀರ್ಮಾನ ಕೈಗೊಳ್ಳುತ್ತಾರೆ. ಸಾಮಾನ್ಯವಾಗಿ ಈ ಹಂತದಲ್ಲಿ ಮದುವೆ ಸಂಬಂಧಗಳು ಬೇರ್ಪಡುವುದು ಬಹಳ ವಿರಳ. ನಿಶ್ಚಯದ ತರುವಾಯ ಗಂಡು ಅಥವಾ ಹೆಣ್ಣು ಅಕಾಲಿಕ ಮೃತ್ಯುವಿಗೆ ತುತ್ತಾದರೆ ಅದಕ್ಕೆ ಯಾರು ಹೊಣೆಯಿಲ್ಲ. ನಂತರದಲ್ಲಿ ಗಂಡು ಅಥವಾ ಹೆಣ್ಣು ಮಕ್ಕಳ ಮನೆಯವರು ಬೇರೆ ಕಡೆ ಸಂಬಂಧವನ್ನು ಬೆಳಸಬಹುದು ನಿಶ್ಚಯವೆ ಹೆಣ್ಣಿಗೆ ಪರಮ ಭಾಗ್ಯವೆಂದು ತಿಳಿದು ಮತ್ತೆ ಬೇರೆ ಮದುವೆ ಮಾಡಿಕೊಳ್ಳಲು ಸಮುದಾಯದವರು ಹಿರಿಯರ ಒಂದು ಒಪ್ಪಿಗೆ ಮೇರೆ ಮತ್ತೊಬ್ಬನನ್ನು ಮದುವೆಯಾಗುವಂತಹದು ಕಂಡು ಬರುತ್ತದೆ.

* ವೀಳ್ಯೆ ಶಾಸ್ತ್ರ

ವಿವಾಹದ ಮಧ್ಯದಲ್ಲಿ ವೀಳ್ಯೆ ಶಾಸ್ತ್ರವು ಬಹು ಮುಖ್ಯವಾದ ಘಟ್ಟ ಮದುವೆ ಮೊದಲು ಈ ಶಾಸ್ತ್ರ ನಡೆಯುತ್ತದೆ. ಈ ಶಾಸ್ತ್ರದ ಗಾಂಭೀರ್ಯವನ್ನು ನೋಡಿದರೆ ಇದು ವಿವಾಹ ಪೂರ್ವದ ಉಪವಿವಾಹ ಎನ್ನಬಹುದು ಈ ಸಂದರ್ಭದಲ್ಲಿ ಹೆಣ್ಣು ಗಂಡಿನ ಸಮುದಾಯದವರು ಮತ್ತು ಕುಟುಂಬದವರು ಸೇರಿ ನೆಡೆಸುವ ವೀಳ್ಯೆ ಶಾಸ್ತ್ರದ ಕಾರ್ಯಕಲಾಪಗಳಿಗೆ ಸಂಪ್ರದಾಯ ಬದ್ದವಾಗಿ ಮಾಡುತ್ತಾರೆ. ಶಾಸ್ತ್ರದಲ್ಲಿ ಹೆಣ್ಣಿನ ಕುಟುಂಬದವರೆಲ್ಲರನ್ನು ಬೆಲ್ಲ ಹಂಚುವುದು ಸಕ್ಕರೆ ಹಂಚುವುದು ಇತ್ತೀಚೆಗೆ ಬೆಲ್ಲದ ಬದಲಾಗಿ ಬೂಂದೆ ಸಿಹಿ ಪದಾರ್ಥಗಳು ಕೊಡುವಂತಹದ ಕಂಡು ಬರುತ್ತದೆ.

ಗಂಡಿನ ಮನೆಯವರು ವೀಳ್ಯೆಯ ದಿನವನ್ನು ಹೆಣ್ಣಿನ ಮನೆಯವರಿಗೆ ಮುಂಚಿತವಾಗಿ ತಿಳಿಸುತ್ತಾರೆ. ಸೋಮವಾರ, ಗುರುವಾರು, ಶುಕ್ರವಾರ ದಿನಗಳಿಗೆ ಶುಭಕಾರ್ಯಗಳಿಗೆ ಉಚಿತವಾದ ದಿನಗಳೆಂಬುದು ಮಂಗಾರವಾಡಿಗರ ನಂಬಿಕೆ ನಿಶ್ಚಿತ ದಿನದಂದು ಗಂಡಿನ ಮನೆಯವರು ತಮ್ಮ ಸಮುದಾಯದ ಮನೆ ಮನೆಗೂ ಹೋಗಿ ಇಂದು ವೀಳ್ಯಶಾಸ್ತ್ರಕ್ಕೆ ಬರಬೇಕು ಎಲ್ಲರೂ ಮನೆಯಲ್ಲಿ ಇರಬೇಕು ಎಂದು ವೀಳ್ಯೆ ಕೊಟ್ಟು ಬರುತ್ತಾರೆ. ಹೆಣ್ಣಿನ ಕಡೆಯವರು ಹೀಗೆಯೇ ತಮ್ಮ ಸಮುದಾಯದವರನ್ನು ಬರಬೇಕೆಂದು ತಿಳಿಸುತ್ತಾರೆ. ವಲಸೆಯ ದಿನಗಳಲ್ಲಿ ಅನಿವಾರ್ಯವಾದ ಈ ಒಂದು ಕರೆ ಒಂದು ಆಚರಣೆಯಾಗಿ ಇಂದಿಗೂ ಉಳಿದಿದೆ. ಇದು ತಮ್ಮ ಯಾವುದೇ ಶುಭ ಸಮಾರಂಭಗಳನ್ನು ಸಮುದಾಯದವರೆಲ್ಲರೂ ಸೇರಿ ಮಾಡುವ ಅಂತರ ಸಂಭಂಧಕ್ಕೆ ನಿದರ್ಶನವಾಗಿದೆ. ಸಣ್ಣ ಪುಟ್ಟ ಸಮುದಾಯಗಳು ಮತ್ತು ಬುಡಕಟ್ಟುಗಳು ಒಂದು ಗೂಡಿಸಿ ಮದುವೆಯ ಸಮಾರಂಭಕ್ಕೆ ಹಬ್ಬದ ವಾತಾವರಣವನ್ನು ಮೂಡಿಸಿ ಗಂಡು ಹೆಣ್ಣು ಒಂದಾಗಲಿರುವ ಕ್ರಿಯೆಗೆ ಸಾಮಾಜಿಕ ಮನ್ನಣೆಯನ್ನು ನೀಡಬೇಕಾದ ಅಗತ್ಯದ ನಿಮಿತ್ತ. ಈ ಸಂಪ್ರದಾಯಗಳು ರೂಢಿಗೆ

ಬಂದಿರಬಹುದು ಎಂಬುದು ತಿಳಿದುಬರುತ್ತದೆ. ಸಂದರ್ಭದಲ್ಲಿನ ಇವರ ತರ್ಕವು ಅತ್ಯಂತ ವೈಜ್ಞಾನಿಕವಾಗಿದೆ. ರಾಶಿ ನೋಡಿದ ನಂತರ ಸರಿ ಜೋಡಿಯಾದರೆ ಎರಡು ಕಡೆಯ ಗಂಡಸರು ಹೆಂಗಸರು ಹೆಣ್ಣಿನ ಕುಟುಂಬ ಮಧ್ಯದಲ್ಲಿ ಪ್ರತ್ಯೇಕ ಗುಂಪುಗಳಾಗಿ ಕುಳಿತುಕೊಳ್ಳುತ್ತಾರೆ. ಗಂಡಿನ ಮನೆಯವರು ಜೋಡಿಯಾದ ಮೇಲೆ ಬಟ್ಟೆಯನ್ನು ತಂದು ಉಡಿಸುತ್ತಾರೆ. ಮತ್ತು ತಾಂಬೂಲ ಜೊತೆಗೆ ಇವುಗಳಲ್ಲಿ ಒಂದು ಚೀಲದಲ್ಲಿ ಮೆಂತೆಕಾಳು ಅಕ್ಕಿ ಮತ್ತೊಂದರಲ್ಲಿ ಕೊಬ್ಬರಿ, ಇಟ್ಟು ಸ್ವಲ್ಪ ದುಡ್ಡನ್ನು ಹಾಕಿರುತ್ತಾರೆ. ಹೆಣ್ಣಿನ ಮನೆಯಿಂದಲೂ ಇದೆ. ಬಗೆಯ ಎರಡು ಪದ್ದತಿಗಳು ನಡೆಯುತ್ತವೆ. ಮುಂದೆ ಈ ಶಾಸ್ತ್ರಮುಗಿದ ನಂತರ ತಮ್ಮ ತಮ್ಮ ಸಮುದಾಯಗಳಿಗೆ ಹಿಂದಿರುಗಿದಾಗ ನೇರವಾಗಿ ಗಂಡು ಹೆಣ್ಣಿನ ಮನೆಯವರು ತಮಗೆ ಅನುಕೂಲಕರವಾದ ಒಂದು ದಿನ ತಮ್ಮ ನೆಯಲ್ಲಿ ವಿಶೇಷ ಔತಣವನ್ನೇರ್ಪಡಿಸಿ ಎಲ್ಲರೂ ಕೂಡಿ ಇಬ್ಬರನ್ನು ಕರೆಸಿಕೊಳ್ಳುತ್ತಾರೆ. ನಂತರ ಧಾನ್ಯಗಳನ್ನು ತುಂಬುತ್ತಿದರು ಸತ್ಯಕ್ಕೆ ಅಡಿ ಇಡುವ-ವಧು-ವರರು ಸುಖಸಮೃದ್ದಿಯಿಂದ ಜೀವನ ನಡೆಸಲೆಂಬ ಆಶಯವಿಡುತ್ತಾರೆ.

ವರದಕ್ಷಿಣೆ ವರೋಪಚಾರ ಹೆಣ್ಣಿನ ಸಮುದಾಯದವರು ಗಂಡಿನ ತಂದೆ ತಾಯಿ ಇಲ್ಲವೆ ಹಿರಿಯರಿಗೆ ಕೊಟ್ಟರೆ ಸಂಬಂಧ ಉಳಿಸಿಕೊಳ್ಳುವಂತೆ ಹಿತೋಪದೇಶವನ್ನು ನೀಡುತ್ತಾರೆ. ಇದಾದ ಮೇಲೆ ಗಂಡಿನವರು ತಂದಿರುವ ಸಿಹಿ ತಿಂಡಿಯನ್ನು ಹಂಚುತ್ತಾರೆ. ಬೆಲ್ಲ, ಸಕ್ಕರೆ, ಎಲೆ, ಅಡಿಕೆ, ಬೀಡಿ ಹಂಚಿದ ನಂತರ ಎಲ್ಲರೂ ಸಂತೋಷದಿಂದ ಮನೆಯ ಕಡೆಗೆ ಹೋಗುತ್ತಾರೆ. ಲೈಂಗಿಕ ರಮ್ಯತೆಯ ಸಂಕೇತವಾಗಿ ರಂಗು ಕೊಡುವುದಕ್ಕೆ ಬೇಕಾದ ಬಣ್ಣವನ್ನು ಮನೆಯವರು ತಂದಿರುತ್ತಾರೆ. ಇಲ್ಲಿಗೆ ವೀಳ್ಯೆ ಶಾಸ್ತ್ರವು ಮುಗಿಯುತ್ತದೆ. ಹೀಗೆ ಮಂಗಾರವಾಡಿಗರು ವೀಳ್ಯ ಶಾಸ್ತ್ರವು ಮದುವೆ ಪ್ರಕ್ರಿಯೆಯ ಮುಖ್ಯ ಘಟ್ಟವಾಗಿದು ಹೆಣ್ಣು ಗಂಡಿನ ವೈವಾಹಿಕ ಸಂಬಂಧಕ್ಕೆ ವಿದ್ಯುಕ್ತ ರೂಪವನ್ನು ನೀಡುತ್ತದೆ.

*** ಮದುವೆ ತೆರೆ**

ಹಿಂದೂಗಳು ಪ್ರತಿಯೊಂದು ಸಮಾಜದಲ್ಲಿ ವರದಕ್ಷಿಣೆ ಎಂಬುದು ಹೆಣ್ಣು ಹೆತ್ತವರಿಗೆ ದೊಡ್ಡ ಭೂತವಾಗಿ ಸಮಾಜಕ್ಕೆ ಕಂಟಕ ಪ್ರಾಯವಾಗಿರುವುದು ಎಲ್ಲರೂ ಇದನ್ನು ತಿಳಿಯುವ ಸಂಗತಿ ಮಂಗಾರವಾಡಿಗಳಲ್ಲಿ ವರದಕ್ಷಿಣೆ ಇಂದಿಗೂ ಪ್ರಚಲಿತವಿದೆ. ಇತ್ತೀಚಿನ ದಿನಗಳಲ್ಲಿ ವರದಕ್ಷಿಣೆಯಂತಹ ಸಾಮಾಜಿಕ ಪಿಡುಗು ಈ ಸಮಾಜಕ್ಕೂ ವ್ಯಾಪಿಸಿಕೊಳ್ಳುತ್ತಿದೆಯಾದರೂ ಪರಂಪರೆಯ ಉಳಿಕೆಗಾಗಿ ವಧುದಕ್ಷಿಣೆ ಚಾಲ್ತಿಯಲ್ಲಿದೆ ಬುಡಕಟ್ಟುಗಳಲ್ಲಿ ವರದಕ್ಷಿಣೆಯನ್ನು ತೆರದ ರೂಪದಲ್ಲಿ ತೆಗೆದುಕೊಳ್ಳುತ್ತಾರೆ.

* ಮದುವೆ ಚಪ್ಪರ ರಚನೆ

ಮಂಗಾರವಾಡಿಗರು ಮದುವೆ ಚಪ್ಪರ ಇದೊಂದು ವಿಶಿಷ್ಟವಾದ ಚಪ್ಪರ ವಧು-ವರರ ಮನೆಬಾಗಿಲಿನ ಎದುರು ಪೂರ್ವಾಭಿಮುಖವಾಗಿ ಎರಡು ಕಂಬಳಿಯನ್ನು ಜೋಡಿಸಿ ಹೊಲೆದು ನಾಲ್ಕು ಮೂಲೆಗಳಿಗೂ ನಾಲ್ಕು ಹಗ್ಗಗಳನ್ನು ಕಟ್ಟಿ ಭದ್ರವಾಗಿ ನೆಟ್ಟಿರುವ ಗೂಟಗಳಿಗೆ ಕಟ್ಟುತ್ತಾರೆ. ಮಧ್ಯದಲ್ಲಿ ಉದ್ದನೆಯ ಒಂದು ಗೂಟವನ್ನು ಕೊಟ್ಟು ಸ್ಥಿರವಾಗಿ ನಿಲ್ಲಿಸುತ್ತಾರೆ. ಇದು ಒಟ್ಟಾರೆ ಒಂದೇ ಗೂಟದ ಟೆಂಟಿನ ಮಾದರಿಯ ಚಪ್ಪರವಾಗಿರುತ್ತದೆ. ಈ ಗೂಟದ ತುದಿಗೆ ಕಂಬಳಿಯ ಮೇಲ್ಭಾಗದಲ್ಲಿ ಸಿಂಬೆಯನ್ನು ಕಟ್ಟಿರುತ್ತಾರೆ ಒಟ್ಟಾರೆಯಾಗಿ ಅದು ಕೊಳದ ಆಕಾರದಲ್ಲಿ ಕಂಡುಬರುತ್ತದೆ. ಇದರಲ್ಲಿ, ಅಕ್ಕಿ ಬೆಲ್ಲ, ಗೋದಿಯನ್ನು ಹಾಕಿ ಕಟ್ಟಿರುತ್ತಾರೆ. ಹಳೆಯ ಪರಂಪರೆಯ ಸಂಪ್ರದಾಯಗಳಿಗೆ ಬದ್ದರಾಗಿದ್ದಾರೆ. ಈ ಒಂದು ನಂಬಿಕೆಯ ಮೇಲೆ ಇವರ ಬೆಳಕು ಗತಕಾಲದ ಅಲೆಮಾರಿ ಬದುಕಿನ ಬೆಳಕು ಚಲ್ಲುತ್ತದೆ. ಚಪ್ಪರ ಸಿದ್ದಪಡಿಸಿದ ಮೇಲೆ ಯುವಕರು ಬಂದು ಅಲ್ಪ ಆಹಾರವನ್ನು ಸೇವಿಸುತ್ತಾರೆ. ಇಲ್ಲವೆ ಸಿಹಿ ತಿಂಡಿಗಳು ಇದ್ದರೆ ಅದನ್ನು ಸೇವಿಸುತ್ತಾರೆ. ಇದೊಂದು ಬಗೆಯ ಎಲ್ಲಾರು ಬಂದು ಊಟ ಮಾಡುವುವಂತಹದು ತಿಳಿದುಬರುತ್ತದೆ. ನಂತರದಲ್ಲಿ ಮದುವೆಯ ಮನೆಯ ಚಪ್ಪರವನ್ನು ಎಲ್ಲಾ ವಸ್ತುಗಳಿಂದ ಅಲಂಕಾರ ಮಾಡಿರುತ್ತಾರೆ ಮತ್ತು ಆತನ ದಾಂಪತ್ಯದ ಹೊಂಗನಸುಗಳನ್ನು ಹೆಂಗಸರು ತಿಳಿಯಾದ ಹಾಸ್ಯದ ಮೂಲಕ ಅದನ್ನು ಮುದಗೊಳ್ಳುವ ಆತ್ಮೀಯ ಸನ್ನಿವೇಶವನ್ನು ನಿರ್ಮಾಣ ಮಾಡುತ್ತಾರೆ.

* ಮದುವೆ ಶಾಸ್ತ್ರ

ಮಂಗಾರವಾಡಿಗರು ಮದುವೆಯ ಶಾಸ್ತ್ರಗಳು ಸಂಪ್ರದಾಯ ಬದ್ದವಾಗಿ ಮಾಡುತ್ತಿದ್ದರು. ಮದುಮಗನೊಂದಿಗೆ, ಮನೆಗೆ ಬರುವುದು ತಂದೆ ತಾಯಿ ಬಂದು ಬಳಗದವರಿಗೆ ಬರುತ್ತಿದ್ದರು ಮದುಮಗನ ಜೊತೆಗಾರನ ಹೊರತಾಗಿ ಬೇರಾರೂ ಹೋಗುತ್ತಿರಲಿಲ್ಲ, ಮದುಮಗಳನ್ನು ಬೀಳ್ಕೊಟ್ಟ ಮೇಲೆ ಅಥವಾ ಸಂಬಂಧಿಕರನ್ನು ಬಿಟ್ಟುಕೊಟ್ಟ ಮೇಲೆ ಮದುಮಗಳನ್ನು ಹೆಣ್ಣುಮಕ್ಕಳು ಮನೆ ತುಂಬಿಸಿಕೊಳ್ಳುವವರಿಗೆ ಅವರು ಮದುಮಗ ಮದುಮಗಳು ಇಬ್ಬರು ಮನೆಯೊಳಗೆ ಬರುವಂತಹ ಒಂದು ಪದ್ದತಿ ಅವರಲ್ಲಿ ಜಾರಿಯಿರುವುದು ಕಂಡುಬರುತ್ತಿದೆ ಆದರೆ ಇಂದಿನ ಒಂದು ದಿನಗಳಲ್ಲಿ ಹೆಚ್ಚಾಗಿ ಯಾವುದೇ ಸಂಪ್ರದಾಯ ಮತ್ತು ಆಚರಣೆಗಳು ಮಾಡುವಂತಹ ಬಹಳ ಕಡಿಮೆಯಾಗಿರುವಂತಹದು ಕಂಡು ಬರುತ್ತಿದೆ. ಏಕೆಂದರೆ ಪ್ರೇಮ ವಿವಾಹ ಹೆಚ್ಚಾಗಿ ಆಗುವಂತಹ ಒಂದು ಕಾಲದಲ್ಲಿ ಶಾಸ್ತ್ರೋಕ್ತವಾಗಿ ಮದುವೆಯಾಗುವುದು ತುಂಬಾ ಕಷ್ಟಕರವಾಗಿರುವಂತಹ ಒಂದು ಮಾತಾಗಿದೆ. "ಮಹಿಳೆಯರ ಶೋಷಣೆಗಳು, ಲಿಂಗ

ಸಂಬಂಧಿ ತಾರತಮ್ಯಗಳಿಗೆ ಜಾತಿ ಸಂಬಂಧ ಹಿಂಸೆಗೆ 'ಪ್ರೇಮವಿವಾಹ' ಮತ್ತು ಅಂತರಜಾತಿಯ ವಿವಾಹಗಳನ್ನು ಪರಿಹಾರವಾಗಿ ಸೂಚಿಸಿದ್ದಾರೆ."[೩] ನೋಂದಣಿ ಮುಖಾಂತರ ರೆಜಿಸ್ಟಾರ್ ಆಫೀಸಿನಲ್ಲಿ ಮದುವೆಯಾದರೆ ಮುಗಿಯಿತು ಅದು ಕಾನೂನಿನ ಚೌಕಟ್ಟಿನಿಂದ ಬಾಹಿರವಾಗಿರಬಾರದು ಮತ್ತು ಕಾನೂನಿಗೆ ವಿರುದ್ದವಾಗಿರಬಾರದು ಇದು ಸರ್ವೇ ಸಾಮಾನ್ಯವಾಗಿ ಎಲ್ಲಾ ಜನರಿಗೂ ಗೊತ್ತಿರುವಂತಹ ಒಂದು ವಿಷಯವಾಗಿದೆ. ನೋಂದಣಿ ಮುಖಾಂತರ ಮದುವೆಯಾಗಬೇಕು ಪುರುಷನಿಗೆ ೨೧ ವರ್ಷ ಮಹಿಳೆಗೆ ೧೮ ವರ್ಷ ವೈಯಸಾದರೆ ಸಾಕು ಜೊತೆಗೆ ಇಬ್ಬರು ಸಾಕ್ಷಿದಾರರು ಹೊಂದಿದ್ದರೆ. ಮದುವೆ ಕೇವಲ ಒಂದು ಗಂಟೆಯೊಳಗೆ ಮುಗಿದು ಹೋಗುತ್ತದೆ. ಮಂಗಾರವಾಡಿ ಸಮುದಾಯದಲ್ಲಿ ಪ್ರೇಮವಿವಾಹಗಳು ಹೆಚ್ಚಾಗಿ ಕಂಡುಬರುತ್ತಿವೆ. ಯಾವುದೇ ವರದಕ್ಷಿಣೆ ಇಲ್ಲದೆ ಹುಡುಗ ಹುಡುಗಿಯರು ಒಬ್ಬರಿಗೊಬ್ಬರು ಮನಸಾಕ್ಷಿಯಾಗಿ ಒಪ್ಪಿಕೊಂಡರೆ ಸಾಕು ಮದುವೆ ಮಾಡಿ ಬಿಡುತ್ತಾರೆ. ಸಂಸಾರ ಚೆನ್ನಾಗಿ ನಡೆಸುತ್ತಾರೆ ಆತ್ಮವಿಶ್ವಾಸ ಹೊಂದಿದ್ದಾರೆ.

ಮದುಮಗನ ಮನೆಯಲ್ಲಿ ನಡೆಯುವಂತಹ ಅನೇಕ ಸಂಪ್ರದಾಯಗಳು ಬಳಸಿಕೊಂಡು ಬಂದಿರುವುದು ಮಂಗಾರವಾಡಿಗರಲ್ಲಿ ಕಂಡುಬರುತ್ತದೆ. ಹೆಣ್ಣಿನ ಮನೆಯಲ್ಲಿ ತಿಲಕ ಹಚ್ಚುವ ಶಾಸ್ತ್ರವು ನಡೆಯುತ್ತದೆ. ಅದು ಏರುವ ಹೊತ್ತಿನಲ್ಲಿ ಈ ಶಾಸ್ತ್ರವನ್ನು ಆರಂಭಿಸುತ್ತಾರೆ. ಸೂರ್ಯ ದೇವನು ಮೇಲೇರುವಂತ ದಂಪತಿಗಳು ಬದುಕಿನಲ್ಲಿ ಒಳ್ಳೆಯದು ಏರುಮುಖವಾಗಲೆಂದು ಆಶಯವೇ ಇದಕ್ಕೆ ಕಾರಣ ಅಲ್ಪಸ್ವಲ್ಪ ಅಕ್ಕಿ ಒಂದು ಕುಪ್ಪಸ ಅರಿಸಿನವುಳ್ಳವೀಳ್ಯದೆಲೆ. ಮದುಮಗನ ಕೈ ಕಡಗ ಒಂದು ಕಂಚಿನ ಗಂಗಳದಲ್ಲಟ್ಟುಕೊಂಡು ಪೂರ್ವಾಭಿಮುಖವಾಗಿ ಕುಳಿತ ಮದುಮಗಳ ಎದುರು ಇಡುತ್ತಾರೆ. ಮಂಗಾರವಾಡಿ ಮಹಿಳೆಯರು ಧರಿಸುವಂತಹ ಒಂದು ಬಂಗಾರದ ಮೂಗುಬೊಟ್ಟನ್ನು ತವರು ಮನೆಯವರು ಕೊಡುತ್ತಾರೆ. ಅದಕ್ಕೆ ಪ್ರತಿಯಾಗಿ ಗಂಡಿನವರೂ ಅದರ ಬೆಲೆಯ ರೂಪವಾಗಿ ಹಣವನ್ನು ಮದು ಮಕ್ಕಳನ್ನು ಮಧ್ಯದಲ್ಲಿ ಕೂಡಿಸಿ, ಹಾಡುತ್ತ ಎಲ್ಲಾ ಹಿರಿಯರು ಏಳುಸುತ್ತುಗಳುಹಸಿ ದಾರಗಳಿಂದ ಸುತ್ತುವರು ಆ ದಾರವನ್ನು ಕುಡಿಕೆಗಳ ಕಂಠದಿಂದ ತೆಗೆದು ಮದುಮಗಳ ಕೊರಳಿಗೆ ಹಾರದಂತೆ ಸುತ್ತಿ ಅದಕ್ಕೆ ಮತ್ತೆ ಏಳುಗಂಟುಗಳನ್ನು ಬಿಗಿಯುತ್ತಾರೆ. ಮದುಮಗಳನ್ನು ಯುವತಿಯರು ಸ್ನಾನ ಮಾಡಿಸುತ್ತಾರೆ. ಹಿರಿಯ ಹೆಂಗಸರು ಅವರ ಸೌಂದರ್ಯ ವರ್ಣಿಸುತ್ತಾ ಹಾಡುತ್ತಾರೆ. ಅಲ್ಲದೆ ಧೈರ್ಯವನ್ನು ಹೇಳುತ್ತಾರೆ. ಮದುಮಗಳ ಭಯ ನೋವು ಅರ್ಥರಹಿತವೆಂದು ತಂದೆ ತಾಯಿ ಬಂದು ಬಳಗವೆಲ್ಲ ಸಂದರ್ಭಾನುಸಾರವಾಗಿ ಸಹಕರಿಸುವ ಹಾಡಿನ ರೂಪದಲ್ಲಿ ಹೇಳುತ್ತಾರೆ. ಆಕೆಗೆ ಧೈರ್ಯವನ್ನು ತುಂಬುತ್ತಾರೆ ಯಾವುದೇ ರೀತಿಯಲ್ಲಿ ಅವಳಿಗೆ ನೋವಾಗದಂತೆ ಸಮುದಾಯದವರೆಲ್ಲ ಮಗಳನ್ನು ಬಹಳ ಸೂಕ್ಷ್ಮ ರೀತಿಯಲ್ಲಿ

ಹೇಳುತ್ತ ಅವಳನ್ನು ಸಮಾಧಾನ ಪಡಿಸುತ್ತಾರೆ. ಮಂಗಾರವಾಡಿಗರು ಸಂಪ್ರದಾಯಿಕ ಮದುವೆಗಳಲ್ಲಿ ಯಾವ ಶಾಸ್ತ್ರಗಳನ್ನು ವೈದಿಕರಿಂದ ಮಾಡುಸುವುದಿಲ್ಲ. ಆದರೆ ಅವರಲ್ಲಯೇ ಒಬ್ಬನು ಹಿರಿಯನ್ನು ಶಾಸ್ತ್ರಗಳನ್ನು ಪೂರೈಸುತ್ತಾನೆ. ತನಗೆ ಸರಿ ಕಂಡಂತೆ ಶ್ಲೋಕಗಳನ್ನು ಹೇಳುತ್ತಾನೆ. ವೈದಿಕರ ಮದುವೆಯಲ್ಲಿ ಹೋಮವು ಅತ್ಯಂತ ಅವಶ್ಯಕ ಒಂದು ವಿಧಿಯಾಗಿದೆ. ಹೋಮಗಳಲ್ಲಿ ಅನೇಕ ಪ್ರಕಾರಗಳಿವೆ. ಅವುಗಳನ್ನು ಲಾಜಾ, ಹೋಮವು ಸಂತಾನಾಭಿವೃದ್ಧಿ ಮತ್ತು ಅಭ್ಯುದಯದ ಸಂಕೇತವಾಗಿದೆ ಈ ಹೋಮಗಳಲ್ಲಿ ಧಾನ್ಯಗಳನ್ನು ಅವುಗಳ ಎಲೆಯೊಂದಿಗೆ ಅಗ್ನಿ ದೇವನಿಗೆ ಅರ್ಪಿಸುತ್ತಾರೆ. ಈ ವಿಧಿ-ವಿಧಾನಗಳನ್ನು ಕಂಡು ಮಂಗಾರವಾಡಿಗರು ತಮ್ಮ ವಿವಾಹಗಳಲಿಯೂ ಅದೇ ಬಗ್ಗೆ ಆಚರಣೆಯನ್ನು ಅನುಸರಿಸುವ ಪ್ರಯತ್ನ ಹಿಂದಿನ ಒಂದು ದಿನಗಳಲ್ಲಿ ಮಾಡಿರುವಂತಹದು ತಿಳಿದುಬರುತ್ತದೆ.

ಸಪ್ತಪದಿ ಮುಗಿದ ನಂತರ ಮುತ್ತೈದೆಯೊಬ್ಬಳು ರಂಗೋಲಿಯ ಮೇಲೆ ಮದುಮಕ್ಕಳನ್ನು ಕುಳ್ಳರಿಸಿ, ಇಬ್ಬರಿಗೂ ನಗುನಗುತ್ತಾ ಇದ್ದರೆ ದಾಂಪತ್ಯ ಜೀವನ ಚೆನ್ನಾಗಿರುತ್ತದೆ. ರಸಮಯವಾಗಿರುತ್ತದೆಂದೂ ಇಬ್ಬರು ಒಟ್ಟಿಗೆ ತಿನ್ನಬೇಕು.

ದಾಂಪತ್ಯ ಜೀವನ ಸುಗಮವಾಗಲಿ ಹೆಣ್ಣು ಗಂಡು ಮದುವೆ ಪೂರ್ವದಲ್ಲಿ ಒಬ್ಬರನ್ನೊಬ್ಬರು ಅರಿತುಕೊಂಡಿರುವುದು ಹಿತಕರ, ಮದುವೆ ಆಗುವವರೆಗೆ ಒಬ್ಬರನ್ನೊಬ್ಬರು ನೋಡಿರದ ಮಾತಾಡಿರದ ಮಂಗಾರವಾಡಿಗ ವದು-ವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟಾಗ ಅವರ ಭಾವನೆಗಳು ಪರಸ್ಪರವಾಗಿ ಸ್ವಲ್ಪ ಮಟ್ಟಿಗಾದರೂ ಪರಿಚಯ ಮಾಡಿಕೊಂಡಿರಬೇಕು ಈ ಹಿನ್ನೆಲೆಯಲ್ಲಿ ಎಂಜಲು ಹಂಚಿಕೊಳ್ಳುವ ಶಾಸ್ತ್ರವು ಮುಖ್ಯವಾಗಿರುತ್ತದೆ. ಅದು ವಧು-ವರರಲ್ಲಿ ಆತ್ಮೀಯತೆಯನ್ನು ಮೂಡಿಸಿ ಅವರನ್ನು ಹತ್ತಿರ ತರುತ್ತದೆ. ಮದುವೆಯಾದ ಮೇಲೆ ದಂಪತಿಗಳು ಪರಸ್ಪರರು ಕಷ್ಟ ಸುಖಗಳಲ್ಲಿ ಸಮಭಾಗಿಗಳಾಗಿ ನಗುನಗುತ ಬಾಳಲೆಂಬ ಸದಾಶಯ ಹೊಂದಿರುತ್ತಾರೆ. ಪರಸ್ಪರ ಪರಿಚಯವಿರದ ವಧು-ವರರು ಉತ್ತಮ ದಂಪತಿಗಳಾಗುವಂತಹದು ಮಂಗಾರವಾಡಿ ಮಹಿಳೆಯರಲ್ಲಿ ಕಂಡುಬರುತ್ತದೆ..

* ವಿದವಾ ವಿವಾಹ

ವಿದವಾ ವಿವಾಹವು ಮಂಗಾರವಾಡಿ ಸಮುದಾಯದಲ್ಲಿ ಇಂದಿಗೂ ರೂಢಿಯಲ್ಲಿದೆ ವಿದವೆ ವಿದುರರು ಮದುವೆಯಾಗಲು ಒಪ್ಪಿಕೊಂಡರೆ ಕೂಡಿಕೆ ಶಾಸ್ತ್ರದಂತೆ ಅವರಿಬ್ಬರಿಗೂ ಮದುವೆ ಮಾಡುತ್ತಾರೆ. ಇವರು ಶಾಸ್ತ್ರೋಕ್ತವಾಗಿ ಮದುವೆಯಾಗುವಂತಿಲ್ಲ. ಅಂದರೆ ಹೆಂಡತಿಯನ್ನು ಬಿಟ್ಟವನ್ನು ವಿಧುರನಾದವನು ಮದುವೆಯಾದ ಯುವತಿಯೊಂದಿಗೆ ಶಾಸ್ತ್ರೋಕ್ತವಾಗಿ ಮದುವೆಯಾಗಬಹುದು ಗಂಡನನ್ನು ಬಿಟ್ಟವಳು ಬೇರೊಬ್ಬ ಗಂಡಸಿನೊಂದಿಗೆ

ಮದುವೆಯಾದರೆ ಅವಳು ಮದುವೆಯಾಗುವ ಗಂಡಿನಿಂದ ಕವ್ಯಶುಲ್ಕವನ್ನು ಇಲ್ಲವೆ ತಂದೆಯ ಮನೆಯಿಂದ ಕನ್ಯಾಶುಲ್ಕದ ಹಣವನ್ನು ವಸೂಲಿ ಮಾಡಿ ಸಮುದಾಯದ ನಾಯಕರೊಂದಿಗೆ ಹಿರಿಯರೊಂದಿಗೆ ಹಿಂದಿನ ಗಂಡನಿಗೆ ತೆರವು ಕಳಸಿಕೊಡಬೇಕು ಈ ಎಲ್ಲಾ ಬಗೆಯ ಮದುವೆಯ ಮಾತು ಕತೆಗಳನ್ನು ಸಮುದಾಯದವರು ಸಭೆ ಸೇರಿಯೇ ನಿರ್ಧರಿಸುತ್ತಾರೆ. ಭಾರತದ ಹಲವಾರು ಬುಡಕಟ್ಟುಗಳಲ್ಲಿ ವಿದವಾ ವಿವಾಹ ಪದ್ದತಿಯು ರೂಢಿಯಲ್ಲಿದೆ ಮಂಗಾರವಾಡಿರಲ್ಲಿ ಈ ಪದ್ದತಿ ಬೆಳೆದು ಬರಲು ಹಲವಾರು ಕಾರಣಗಳನ್ನು ಗುರುತಿಸಬಹುದು ಮದುವೆಯಾದ ಹೊಸದರಲ್ಲಿ ಅಂದರೆ ಮೂರು-ನಾಲ್ಕು ವರ್ಷಗಳಲ್ಲಿ ಗಂಡ ತೀರಿಕೊಂಡರೆ. ಹೆಂಡತಿಯಾದವಳು ಜೀವನ ಪೂರ್ತಿಯಾಗಿ ಹಾಗೆ ಇರುವ ಒಂದು ಸಂಪ್ರದಾಯ ಕಂಡುಬರುವುದಿಲ್ಲ. ಮತ್ತು ಹೆಂಡತಿ ತೀರಿಹೋದರೆ ಮತ್ತೊಂದು ಮದುವೆಗೆ ಈ ಒಂದು ಸಮುದಾಯಗಳಲ್ಲಿ ಅವಕಾಶವಿದೆ. ಹೆಣ್ಣಿಗೂ ಮತ್ತು ಗಂಡಿಗೂ ಬೇರೊಂದು ಮದುವೆಗೆ ಅವಕಾಶ ನೀಡುತ್ತಾರೆ. ಇದು ಅವರ ಸಂಪ್ರದಾಯ ಬೆಳಸಿಕೊಂಡು ಬಂದಿರುವಂತಹುದು ಗಮರ್ನಾಹವಾದದ್ದು.

ಸಮುದಾಯಗಳಲ್ಲಿ. ವಿವಾಹ ಮತ್ತು ವಿದವಾ ವಿವಾಹ ಪದ್ದತಿ ಮದುವೆಯಾದ ದಂಪತಿಗಳು ಸಾಮಾಜಿಕ ಸ್ಥಾನಮಾನಗಳಿಗೆ ಧಕ್ಕೆಯಾಗುವುದಿಲ್ಲ, ಮದುವೆಯಾದ ಹೆಣ್ಣಿಗೆ ಮುತ್ತೈದೆಯರಿಗೆ ಸಿಗುವ ಎಲ್ಲ ಸ್ಥಾನಗಳು ಹೊಂದಿರುತ್ತಾರೆ. ನಾಗರೀಕತೆಯಿಂದ ದೂರವಿರುವ ಅಲೆಮಾರಿ ಜನಾಂಗವೊಂದು ಹೆಣ್ಣಿನ ಅಂತರಂಗದ ನೋವನ್ನು ಅರಿತುಕೊಂಡು ಅತ್ಯಂತ ಮಾನವೀಯವಾಗಿ ನಡೆದುಕೊಂಡಿರುವುದು ಅಶ್ಚರ್ಯಕರವಾಗಿದೆ. ಆದ್ದರಿಂದಲೇ ಮಂಗಾರವಾಡಿ ಸಮುದಾಯದಲ್ಲಿ ಆಧುನಿಕ ಸಮಾಜವನ್ನು ಕಿತ್ತು, ತಿನ್ನುತಿರುವ ವಿದವಾ ಸಮಸ್ಯೆ, ವೇಶ್ಯಾ ಸಮಸ್ಯೆ, ಬಾಲಾಪರಾಧ ಮೊದಲಾದ ಸಮಸ್ಯೆಗಳು ಕಡಿಮೆಯಾಗುತ್ತದೆ. ಬಂದಿರುತ್ತಿವೆ, ಭಾರತೀಯ ಸಮಾಜಕ್ಕೆ ಪರೋಕ್ಷವಾಗಿ ಸಲ್ಲಿಸಿರುವ ಬಹುದೊಡ್ಡ ಕೊಡುಗೆ ಎಂದರೆ ತಪ್ಪಾಗಲಾರದು ಎಂದು ಬಾವಿಸಬಹುದು.

೪.೨.೪ ಉದ್ಯೋಗ

ಭಾರತೀಯ ಬುಡಕಟ್ಟುಗಳ ಸ್ತ್ರೀಯರ ಸ್ಥಿತಿಗತಿಯನ್ನು ಅವಲೋಕಿಸಿದರೆ ಸಮಸ್ಯೆಯ ಮೂಲವನ್ನು ಕೆದಕುವುದಾದರೆ. ಕಡು ಬಡತನವು ಹೊಂದಿದ್ದ ಅನೇಕ ಬುಡಕಟ್ಟುಗಳು ಕಂಡುಬರುತ್ತವೆ. ಅದರಲ್ಲಿ ಮುಖ್ಯವಾಗಿ ಮಂಗಾರವಾಡಿ ಮಹಿಳೆಯರ ಒಂದು ಸ್ಥಿತಿಗತಿ ನೋಡಿದರೆ ಅವರ ವಾಸ್ತವಿಕ ಜೀವನ ಹೇಳುವುದಾದರೆ. ಅನಾಗರೀಕತೆಯ ಹಾದಿಯಲ್ಲಿ ಬೆಳೆದುಬಂದಿರುವಂತಹ ಒಂದು ಸಮುದಾಯವೇ ಆಗಿದೆ. ಸಮುದಾಯ ಮಹಿಳೆಯರು ಆರ್ಥಿಕವಾಗಿ ತಮ್ಮ ದೈನಂದಿನ ಬದುಕು ಸಾಗಿಸಬೇಕಾದರೆ. ಸಣ್ಣಪುಟ್ಟ ಕೆಲಸಗಳನ್ನು

ಮಾಡಿಕೊಂಡು ಬಂದಿರುವಂತಹದು ತಿಳಿದುಬರುತ್ತದೆ. ಮೂಲಃತಹವಾಗಿ ಉಪಜೀವನಕ್ಕಾಗಿ ಬದುಕು ಸಾಗಿಸಲು ಕಳ್ಳತನ ಮಾಡುತ್ತಿದ್ದರೆಂದು ವದಂತಿ ಇದೆ. ಇದರ ಜೊತೆಗೆ ಮಹಿಳೆಯರು ಸಮುದಾಯದ ಹೆಣ್ಣು ಮಕ್ಕಳು ರಸ್ತೆ ಅಕ್ಕ ಪಕ್ಕದಲ್ಲಿನ ಪ್ಲಾಸ್ಟಿಕ್ ಚೀಲಗಳು ಅರಿಸಿಕೊಂಡು ಬಂದು ಅದನ್ನು ಮಾರಿ ತಮ್ಮ ಜೀವನ ನಡೆಸುತ್ತಿದ್ದಾರೆ. ಯಾವುದೇ ಶೈಕ್ಷಣಿಕ ಸೌಲಭ್ಯ ಹೊಂದಿರದ ಮಹಿಳೆಯ ಈ ಒಂದು ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆಂದು ಹೇಳುತ್ತಾರೆ ಮತ್ತು ಮನೆಗಳಲ್ಲಿ ಹೊಲಗಳಲ್ಲಿ ಕೆಲಸ ಮಾಡಲು ದಿನಕ್ಕೆ ಇಂತಿಷ್ಟು ಹಣ ಪಡೆದುಕೊಂಡು ಜೀವನ ಸಾಗಿಸುತ್ತಿದ್ದರು ಮತ್ತು ಕೃಷಿಗೆ ಪೂರಕವಾಗಿ ಸಹಾಯವಾಗುವ ನಿಟ್ಟಿನಲ್ಲಿ ಬಿತ್ತುವ, ಕಸತೆಗೆಯುವ, ಹತ್ತಿ ಬಿಡಿಸುವ, ರಾಶಿಮಾಡುವ ಮುಂತಾದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಮಕ್ಕಳ ಲಾಲನೆ ಪಾಲನೆಗಾಗಲಿ ಮತ್ತು ಮನೆ ಕೆಲಸಗಳಿಗಾಗಲಿ ಭಾರತೀಯ ಮುಂದುವರೆದ ಮಹಿಳಾ ಸಮಾಜವು ಬೇರೆ ಬೇರೆ ಜಾತಿಯ ಮಹಿಳೆಯರು ಶ್ರೀಮಂತ ಮನೆತನದ ಹೆಣ್ಣು ಮಕ್ಕಳು ಉದ್ಯೋಗವನ್ನರಿಸಿ ಹೋಗಲಿಲ್ಲ, ಆದರೆ ಇಂಥವರ ಸಂಖ್ಯೆ ಅತ್ಯಲ್ಪವೆಂದೇ ಹೇಳಬಹುದು ಬಡತನ ಮತ್ತು ಸ್ವಲ್ಪ ಪ್ರಮಾಣದಲ್ಲಿ ಆರ್ಥಿಕ ಚಟುವಟಿಕೆಗಳನ್ನು ಹೊಂದಿದ ಸಮಾಜವು ತಲೆ ತಲಾಂತರಗಳಿಂದ ಉದ್ಯೋಗಿಗಳಾಗಿದ್ದಾರೆ. ಒಕ್ಕಲುತನ, ಕೈಗಾರಿಕೆ ಇತ್ಯಾದಿ ಕೆಲಸಗಳ ಚೌಕಟ್ಟಿನಲ್ಲಿ ದುಡಿಯುತ್ತಿರುವ ಮಹಿಳೆಯರು ಇಂದು ವಿವಿಧ ಉದ್ಯೋಗ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಇಂದಿನ ಸುಶಿಕ್ಷಿತ ಉದ್ಯೋಗಸ್ಥ ಮಹಿಳೆ, ತನ್ನ ವ್ಯಕ್ತಿತ್ವ ವೈಶಿಷ್ಟ್ಯತೆಯಿಂದ ಮೆರೆಯುತ್ತಿದ್ದಾಳೆ ಆರ್ಥಿಕವಾಗಿ, ಸ್ವತಂತ್ರಳಾದ ಅವಳು ಸರಿಸಮಾನತೆಯನ್ನು ಬಯಸುತ್ತಾಳೆ. ಅವಳು ತನ್ನ ಬೇಕು ಬೇಡಗಳನ್ನು ಅರಿತ ಬಗೆಗೆ ಹೆಚ್ಚು ನಿಷ್ಠೂರಳಾಗಿದ್ದಾಳೆ. ತನ್ನ ಹಕ್ಕುಗಳನ್ನು ನೋಡಿಕೊಳ್ಳುವುದರತ್ತ ಹೆಚ್ಚು ಲಕ್ಷ್ಯ ವಹಿಸುತ್ತಿದ್ದಾಳೆ. ಹೆಚ್ಚು ಆದರ್ಶ ನೈತಿಕ ಮೌಲ್ಯಗಳನ್ನು ಕಾಯ್ದುಕೊಂಡು ಬರುವುದರಲ್ಲಿ ಮೇಲ್ಪಂಕ್ತಿಯಾದ ಮಧ್ಯಮವರ್ಗದ ಕುಟುಂಬಗಳು ಇಂದು ಅವು ತಮ್ಮ ಜೀವನದ ರೀತಿ–ನೀತಿಗಳನ್ನು ಮೌಲ್ಯಗಳನ್ನು ಬದಲಾಯಿಸತೊಡಗಿವೆ. ಇಂಥ ಸಮುದಾಯಗಳು ಸಂಬಂಧಪಟ್ಟ ಪುರುಷರು ಬದಲಾಗುತ್ತಿದ್ದು ಮಧ್ಯಮವರ್ಗದ ಕುಟುಂಬಗಳಲ್ಲಿ ಉದ್ಯೋಗ ಸಿಕ್ಕ ಮಹಿಳೆಯರು ಬದಲಾಗುತ್ತಿರುವ ರೀತಿ ನೀತಿಗಳನ್ನು ಅವಳ ಕೌಟುಂಬಿಕ ಜೀವನಕ್ಕೆ ಸಹಾಯಕಾರಿಯಾಗಿದೆ. ಆಕೆ ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಬಹುದಾಗಿದೆ. ಉದ್ಯೋಗದಿಂದ ಮಹಿಳೆ ಕುಟುಂಬಕ್ಕೆ ಒಂದು ವರವಾಗಿ ಪರಿಣಮಿಸುವಂತೆ ಮಾಡಲು ಸಾಧ್ಯವಾಗಿದೆ. ಮಹಿಳೆಯರಿಗಾಗಿ ಶಿಕ್ಷಣಕೊಡಬೇಕೆಂದು ಹಲವಾರು ಸಮಾಜ ಸುಧಾರಕರು ತಮ್ಮ ಜೀವನವನ್ನೆ ಮುಡುಪಾಗಿಟ್ಟು ಮಹಿಳೆಯ ಒಂದು

ಉಳಿಗೆಗೆ ಕಾರಣವಾಗಿದ್ದಾರೆ. ಅವರು ಅನಿಷ್ಠ ಸಂಪ್ರದಾಯಗಳಾದ ಸತಿಸಹಗಮನ ಪದ್ಧತಿ, ಬಾಲ್ಯವಿವಾಹ, ಹೆಣ್ಣು ಶಿಶುಹತ್ಯೆ, ಇತ್ಯಾದಿಗಳನ್ನು ತೊಡೆದು ಹಾಕಲು ಹೋರಾಡುವುದರ ಜೊತೆಗೆ ಸ್ತ್ರೀಯರ ಔಪಚಾರಿಕ ಶಿಕ್ಷಣದ ಮೂಲಕ ಜೀವನಮಟ್ಟ ಸುಧಾರಿಸಲು ಪ್ರಯತ್ನಿಸಿದ್ದರು ಹೊಸ ವಿಚಾರಗಳನ್ನು ಹೊಂದಿದ ಹಲವು ಕುಟುಂಬಗಳು ಮತ್ತು ಬುಡಕಟ್ಟುಗಳು ಬೆಳವಣಿಗೆ ಹೊಂದಿವೆ.

ಹಿಂದೂ ಸಮಾಜದಲ್ಲಿ ಮಧ್ಯಮ ವರ್ಗದ ಕುಟುಂಬ ಮಹಿಳೆಯರು ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ ಶಿಕ್ಷಕಿಯರೆಂದು, ಗುಮಾಸ್ತರೆಂದು ಬಾನುಲಿ ಕಲಾವಿದರೆಂದು ವಿವಿಧ ಬಗೆಯ ಕೆಲಸಗಳಲ್ಲಿ ತೊಡಗಿದ್ದಾರೆ. ಕುಟುಂಬದ ಹೆಚ್ಚು ಸದಸ್ಯರನ್ನು ಹೊಂದಿದ ಪಾಲಕರಿಗೆ ದುಡಿಯುವ ಮಹಿಳೆಯರು ಆಶ್ರಯದಾತರಾಗಿದ್ದಾರೆ. ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಮೊದಮೊದಲು ದುಡಿಯುತ್ತಿರುವ ಮಹಿಳೆ ಬಗ್ಗೆ ತಂದೆ–ತಾಯಿಗಳು ಉದಾಸೀನ ಭಾವನೆಯನ್ನು ತಳೆಯತ್ತಿದ್ದರೂ ಕಾರಣ ಅವರಲ್ಲಿ ಸ್ವಾರ್ಥ ಅಡಗಿತ್ತು. ಕೆಲವು ಸಲ ತಂದೆ ತಾಯಿಯಂದಿರು ಉದ್ಯೋಗದಲ್ಲಿ ತೊಡಗಿದ ಸುಶಿಕ್ಷಿತ ಹುಡುಗಿಯನ್ನು ಸೊಸೆಯಾಗಿ ಸ್ವೀಕರಿಸಲು ಮಾನಸಿಕವಾಗಿ ಸಿದ್ದರಿರಲಿಲ್ಲ. ಉದ್ಯೋಗಸ್ಥ ಮಹಿಳೆಗೆ ದೊರಕುವ ಸ್ವಾತಂತ್ರ್ಯ ಅವರಿಗೊಂದು ಬಗೆಯ "ವೈಭವ ಜೀವನ" ಕಲ್ಪನೆಯನ್ನು ಒದಗಿಸಿಕೊಟ್ಟಿತ್ತು.

ಇಂದು ಭಾರತೀಯ ಮಹಿಳೆಯರು ಅಧಿಕಾರಿಯಾಗಿ ಉನ್ನತ ಮಟ್ಟದ ವಿದ್ಯಾ ಸಂಸ್ಥೆಗಳಲ್ಲಿ, ಚಲನ ಚಿತ್ರರಂಗಮಂದಿರದಲ್ಲಿ, ವಾಣಿಜ್ಯ ಉದ್ದಿಮೆಗಳಲ್ಲಿ, ಪತ್ರಿಕೋದ್ಯಮದಲ್ಲಿ, ಸಕ್ರೀಯ ರಾಜಕಾರಣದಲ್ಲಿ ಹಾಗೂ ಇನ್ನಿತರ ಉದ್ಯೋಗಗಳಲ್ಲಿ ತೊಡಗಿರುವಂತಹದು ಕಂಡುಬರುತ್ತದೆ. ಬೃಹತ್‌ನಗರದಲ್ಲಿ ವಾಸಿಸುವ ಮಹಿಳೆಯರಿಗೆ ದುಬಾರಿಯಾದ ಮನೆಯ ವೆಚ್ಚವನ್ನು ಉನ್ನತ ಮಟ್ಟದ ಶಿಕ್ಷಣ ಸಾರಿಗೆ ವೆಚ್ಚ, ಬಟ್ಟೆ ಬರಿಗಳು ವೆಚ್ಚ ಉತ್ತಮ ಜೀವನ ಮಟ್ಟ ಇತ್ಯಾದಿಗಳನ್ನು ಹೊಂದಲು ಉದ್ಯೋಗಾವಕಾಶಗಳನ್ನರಸುವುದು ಆರ್ಥಿಕವಾಗಿ ಅನಿವಾರ್ಯವಾಗಿದೆ ಎಂದು ಹೇಳಬಹುದು. ಆದರೆ ಮಂಗಾರವಾಡಿಗರಲ್ಲಿ ಇದ್ಯಾವುದೇ ಬದಲಾವಣೆಗಳು ಕಂಡು ಬರುವುದಿಲ್ಲ ಹಳೆಯ ಸಂಪ್ರದಾಯ ಸಂಸ್ಕೃತಿ ಮುಂತಾದವುಗಳ ಸೆರೆಯಲ್ಲಿಯೇ ತೊಡಗಿಸಿಕೊಂಡಿದ್ದಾರೆ. ಅವರಿಗೆ ಶಿಕ್ಷಣದ ಅರಿವು ಮೂಡಿಸುವುದು ಬಹಳ ಮುಖ್ಯವಾಗಿದೆ ಇಂದಿನ ದಿನಗಳಲ್ಲಿ ಅಲ್ಪಸ್ವಲ್ಪ ಮಹಿಳೆಯರು ಗುಮಾಸ್ತರಾಗಿ, ಆಯಾಗಳಾಗಿ, ಶಿಕ್ಷಕಿಯರಾಗಿರುವ ಮಹಿಳೆಯರು ಕಂಡುಬರುತ್ತಾರೆ. ಚಲನ ಚಿತ್ರ ಮಂಡಳಿಯಲ್ಲಿ ನಾನಾ ಪಾಟೇಕರ್ ಇವರು ಮಂಗಾರವಾಡಿ ಸಮುದಾಯದಲ್ಲಿ ಮಹತ್ತರ ಸಾಧನೆ ಮಾಡಿದ್ದಾರೆ. ಈಗ ಎಲ್ಲಾ ಹೆಣ್ಣು ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಮುಂದೆ ಅವರು ಅನಿಷ್ಠ ಪದ್ದತಿಗಳು ಬಿಟ್ಟು ಒಳ್ಳೆಯ ಕೆಲಸ ಕಾರ್ಯಗಳಲ್ಲಿ ತೊಡಗುತ್ತಾರೆಂಬುದು ನಂಬಿಕೆ ಹೊಂದಿದ್ದಾರೆ.

ಇದರಿಂದ ಸಮುದಾಯವು ಮುಂದೆ ಬರುವುದರಲ್ಲಿ ಸಂಶಯವಿಲ್ಲ. ಹುಡಗರು–ಹುಡುಗಿಯರು ಶಿಕ್ಷಣವಂತರಾಗಬೇಕು ತಮಗೆ ಬರುವಂತಹ ಒಂದು ಸರ್ಕಾರದ ಶೈಕ್ಷಣಿಕ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುತ್ತೆವೆ ಎಂಬ ನಂಬಿಕೆಯನ್ನು ಹೊಂದಿದ್ದಾರೆ.

ಮಹಿಳೆಯರಿಗೆ ಕೆಲವು ಸಲ ಉದ್ಯೋಗಸ್ಥಳಾಗಿರಲಿಕ್ಕಿಲ್ಲ. ಆದರೆ ಶಿಕ್ಷಣ ಅವಳಲ್ಲಿ ಕೆಲವು ಮಾರ್ಪಾಡು ತರುತ್ತದೆ. ಸರ್ವಶಿಕ್ಷಿತಳಾದ ಮಹಿಳೆ ತನ್ನ ಬೇಕು ಬೇಡಗಳನ್ನು ನಿರ್ಧರಿಸುತ್ತಾಳೆ. ಅವಳ ವ್ಯಕ್ತಿತ್ವ ಒಂದು ವಿಶಿಷ್ಟವಾದ ರೀತಿಯಲ್ಲಿ ವಿಶ್ವಾಸಗೊಳುತ್ತದೆ. ಅವಳಲ್ಲಿ ಸ್ವಾಭಿಮಾನದ ಕಲ್ಪನೆ ಜಾಗೃತವಾಗುತ್ತದೆ. ವಯಕ್ತಿಕ ಸಾಮರ್ಥ್ಯದ ಆಧಾರದ ಮೇಲಿಂದ ಜೀವನವನ್ನು ನಡೆಸುವ ಅರಿವು ಅವಳಲ್ಲಿ ಮೂಡುತ್ತದೆ. ಪ್ರತಿಯೊಬ್ಬರು ತನ್ನನ್ನು ಸಮಾನ ದೃಷ್ಠಿಯಿಂದ ನೋಡಬೇಕೆಂದು ಬಯಸುತ್ತಾಳೆ. ತನ್ನ ವಯಕ್ತಿಕ ವಿಷಯಗಳಲ್ಲಿ ಸ್ವತಃ ತೀರ್ಮಾನ ತೆಗೆದುಕೊಳ್ಳಲು ಬಯಸುತ್ತಾಳೆ. ಸಾಧ್ಯವಾದರೆ ತನ್ನ ಮಕ್ಕಳ ಬಗೆಗೆ ಮತ್ತು ಕುಟುಂಬದ ಉಳಿದ ಸದಸ್ಯರ ಬಗೆಗೂ ಸಹ ನಿರ್ಧಾರ ಕೈಗೊಳ್ಳುತ್ತಾಳೆ. ಹೀಗಾಗಿ ಅವಳು ಧೈರ್ಯವಂತಳಾಗಿ ಸಾಮಾಜಿಕ ನೆಮ್ಮದಿಯನ್ನು ಹೊಂದಿದ್ದಾಳೆ. ಸಾಮಾಜಿಕ ಸ್ಥಾನಮಾನವಗಳನ್ನು ಅರಿವನ್ನು ಬೆಳಸಿಕೊಳ್ಳುತ್ತಾಳೆ. ಇವೆಲ್ಲ ಗುಣಗಳನ್ನು ನೋಡಿದರೆ ಸಂಪ್ರದಾಯಿಕ ಪರಿಸರದಲ್ಲಿ ಬೆಳೆದ ಎಲ್ಲ ವಿಷಯಗಳಲ್ಲಿ ಎಲ್ಲ ಸಂದರ್ಭಗಳಲ್ಲಿ ಎಲ್ಲರೊಡನೆ ಸುಲಭವಾಗಿ ಹೊಂದಾಣಿಕೆ ಮಾಡಿಕೊಳ್ಳುವ ಆದರ್ಶವನ್ನು ಬೆಳಸಿಕೊಳ್ಳುತ್ತಾಳೆ. ಹೀಗಾಗಿ ಕುಟುಂಬದ ಅಭದ್ರತೆಗೆ ವಿರಸಕ್ಕೆ ಮಕ್ಕಳ ಪಾಲನೆ ಪೋಷಣೆಗಳ ಬಗ್ಗೆ ತಾತ್ಸಾರ ಭಾವನೆ ತೊಡುವುದಕ್ಕೆ ಸುಶಿಕ್ಷಿತ ಮತ್ತು ಉದ್ಯೋಗಸ್ಥ ಮಹಿಳೆಯೇ ಮೂಲ ಕಾರಣವೆಂದು ಸ್ಪಷ್ಟವಾಗಿ ನಂಬಲಾಗುತ್ತದೆ. ಶಿಕ್ಷಣವನ್ನು ಪಡೆಯುತ್ತಿರುವ ಮಹಿಳೆಯ ಈ ಎಲ್ಲಾ ಅಂಶಗಳು ಅವರಿಗೆ ಮಾದರಿಯಾಗಿವೆ. ಮಂಗಾರವಾಡಿಗರ ಶಿಕ್ಷಣದಿಂದ ಈ ಎಲ್ಲಾ ಅಂಶಗಳು ಅವರ ಬದುಕಿಗೆ ಸ್ಫೂರ್ತಿದಾಯಕವಾಗಿವೆ.

ಇವೆಲ್ಲ ಕೌಟುಂಬಿಕ ಬದುಕಿನ ಮೇಲೆ ಎಂಥಹ ಒಂದು ಬದುಕನ್ನು ರೂಪಿಸಬಹುದು ಸುಶಿಕ್ಷಿತ ಮಧ್ಯಮ ವರ್ಗದ ಮಕ್ಕಳು ಆರೋಗ್ಯವಂತರಾಗಿ ಬೆಳೆಯಲು ಸ್ಪರ್ಧಾತ್ಮಕ ವೃತ್ತಿ ಶಿಕ್ಷಣಕ್ಕೆ ಅರ್ಹರಾಗಲು ಮತ್ತು ಬೆಳೆಯಲು ಪಠ್ಯೇತರ ಚಟುವಟಿಕೆಗಳಲ್ಲಿ ಪರಿಣತಿ ಹೊಂದಲು ವಿಶೇಷ ತರಬೇತಿ ಪಡೆಯಬೇಕಾಗುತ್ತದೆ. ಇಲ್ಲದಿದ್ದರೆ, ಆಧುನಿಕ ಬದುಕಿಗೆ ಮಗುವಿನ ಸಾಮಾಜಿಕ ನೆಮ್ಮದಿ ಆತ್ಮವಿಶ್ವಾಸ ದೃಢ ನಿರ್ಧಾರ ಮತ್ತು ಉತ್ಸಾಹ ಮತ್ತು ಲವಲವಿಕೆಯ ಪ್ರವೃತಿಯನ್ನು ಜೀವನದಲ್ಲಿ ಬೆಳಸಿಕೊಳ್ಳಲಾರದು ದುಡಿಯುತ್ತಿರುವ ಮಹಿಳೆಯರಿಗೆ ಸಮಾಜದ ಪ್ರತಿಕ್ರಿಯೇ ಎನ್ನುವ ಅವಳಿಗೆ ಉಚ್ಚಶಿಕ್ಷಣ ಸುಧಾರಿಸಲು ಉದ್ಯೋಗ ಮತ್ತು ಶಿಕ್ಷಣ ಪೂರಕವಾದಂತಹ ಅಂಶಗಳೆಂದು ಹೇಳಬೇಕಾಗಿದೆ. ಇದ್ದರಿಂದ ಜೀವನ ವಿಧಾನವನ್ನು ಮಾರ್ಪಡುವಂತಹುದು ಕಂಡುಬರುತ್ತವೆ. ಇಂದಿನ ಯುಗದವು ಸ್ಪರ್ಧಾತ್ಮಕವಾಗಿದೆ. ಅಂದಿನ ದಿನಗಳಲ್ಲಿ ಮಹಿಳೆಯರಿಗೆ ಒಂದು ಶಿಕ್ಷಣ ಮತ್ತು ಉದ್ಯೋಗ

[illegible]

ಕೊಡುತ್ತಿರಲಿಲ್ಲ. ಈಗ ಅವರ ಬದುಕು ಬದಲಾಗಿದೆ. ಶಿಕ್ಷಣ ಪಡೆಯುತ್ತಿದ್ದಾಳೆ ಸಮಾಜದಲ್ಲಿ ಅವಳೆದೇ ಆದ ಒಂದು ಸ್ಥಾನಮಾನ ಹೊಂದಿದ್ದಾಳೆ. ಕುಟುಂಬದ ಜೀವನ ಮಟ್ಟ ಹೆಚ್ಚಿಸಲು ಸಮುದಾಯಗಳನ್ನು ಬೆಳೆಸಲು ಶೈಕ್ಷಣಿಕ ಹಾಗೂ ಕಲಾತ್ಮಕ ಯೋಗ್ಯತೆಗಳನ್ನು ಪ್ರಕಟಪಡಿಸಲು ದುಡಿಯುವುದು ಅನಿವಾರ್ಯವಾಗಿದೆ. ಪ್ರತಿಯೊಂದು ಸಮುದಾಯಗಳಲ್ಲಿ ಸೀಮಿತ ಸಂಖ್ಯೆಯಲ್ಲಿ ಬೌದ್ಧಿಕ ಹಾಗೂ ಸೃಜನಶೀಲತೆವುಳ್ಳವರಿದ್ದಾರೆ. ಮಂಗಾರವಾಡಿಗರಲ್ಲಿ ಕೆಲವೇ ಕೇಲವು ವರ್ಷಗಳಲ್ಲಿ ಈ ಒಂದು ಸ್ಥಾನವನ್ನು ಅವರು ದೊರಕಿಸಿಕೊಳ್ಳುತ್ತಾರೆ. ಎಂಬ ಒಂದು ನಂಬಿಕೆಯನ್ನು ಹೊಂದಿದ್ದಾರೆ. ಸಮುದಾಯದಲ್ಲಿ ವಿಶಿಷ್ಟಸ್ಥಾನಮಾನ ಹಾಗೂ ವ್ಯಕ್ತಿತ್ವ ಪಡೆಯುವ ಧೈರ್ಯವುಳ್ಳ ಅನುಭವಿ ಮಹಿಳೆರು ತಮ್ಮ ಮಕ್ಕಳಿಗೆ ಉತ್ತಮ ಮಟ್ಟದ ಸಾಮಾಜಿಕ ಭದ್ರತೆಯನ್ನು ಒದಗಿಸುತ್ತಾಳೆ ಹೀಗೆ ಅವರು ವ್ಯಕ್ತಿತ್ವ ವಿಕಸನ ಮಾಡಿಕೊಳ್ಳುವುದರಲ್ಲಿ ಯಾವುದೇ ಸಂಶಯವೇ ಇಲ್ಲ. ಮಂಗಾರವಾಡಿಗ ಮಹಿಳೆಯರೂ ಕೆಲವೇ ಕೆಲವು ವರ್ಷಗಳಲ್ಲಿ ಸಾಮಾಜಿಕ, ಶೈಕ್ಷಣಿಕ ಸ್ಥಾನಪಡೆದುಕೊಂಡಿದ್ದ ಅವರು ಉದ್ಯೋಗಗಳಲ್ಲಿ ಸಕ್ರೀಯರಾಗುತ್ತಾರೆ. ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಅವಳು ಸಮುದಾಯಕ್ಕೆ ಹಿತಕರ ಹಾಗೂ ಶ್ರೇಯಸ್ಸನ್ನು ಹೊಂದುತ್ತಾಳೆಂದು ತಿಳಿದು ಬರುವಂತಹ ಒಂದು ಮಹತ್ವದ ವಿಚಾರವಾಗಿದೆ.

೪.೨.೫ ಶಿಕ್ಷಣ

ಸ್ವತಂತ್ರ್ಯ ಬಂದು ಐದು ದಶಕಗಳು ಕಳೆದರೂ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರು ಹಾಗೆಯೇ ಉಳಿದ್ದಿದ್ದಾರೆ. ಸಮುದಾಯದಲ್ಲಿನ ಬಡತನ, ಜನಸಂಖ್ಯೆ ಏರಿಕೆಯ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಹಿಂಸಾಚಾರಗಳನ್ನು ನೋಡಿದರೆ ಹಿಂದಿನ ಸಮಾಜದಲ್ಲಿ ಇದ್ದ ನಂಬಿಕೆ, ವಿಶ್ವಾಸ, ಗೌರವ ಕಣ್ಮರೆಯಾಗುತ್ತಿದೆ. "ಗಾಂಧೀಜಿ ಹುಟ್ಟು ಹಾಕಿದ 'ಚರಕ'ದ ಪ್ರತಿಭೆಯಲ್ಲಿ ಕಾಣುವಂತೆ ಪ್ರತ್ಯಕ್ಷ ಮಹಿಳಾ ತೊಡಗುವಿಕೆ 'ಮಹಿಳಾ ಶಿಕ್ಷಣ'ದ ಕಾರ್ಯಕ್ರಮವಾಗಬೇಕು."[೪] ಸಮುದಾಯಗಳ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಮಹಿಳೆಯರನ್ನು ಜಾಗೃತಗೊಳಿಸಲು ಅವರಿಗೆ ಮೂಲಭೂತ ಹಕ್ಕುಗಳಾದ ಶಿಕ್ಷಣ–ಉದ್ಯೋಗ, ಉದ್ಯೋಗಸ್ತ ಮಹಿಳೆಯರಿಂದ ತಿಳಿಯುವಂತೆ ಉಪನ್ಯಾಸ ಚರ್ಚಾಕೂಟಗಳನ್ನು ಏರ್ಪಡಿಸಿ ಅವರ ಜ್ಞಾನವನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಬುಡಕಟ್ಟು ಸಮುದಾಯಗಳ ಮಹಿಳೆಯರಿಗೆ ಶಿಕ್ಷಣ ಇಲ್ಲದೆ, ಅನಕ್ಷರಸ್ತಗಳಾಗಿ ಬದುಕುವಂತ ಹಲವಾರು ಬುಡಕಟ್ಟುಗಳಲ್ಲಿ ಮಂಗಾರವಾಡಿಗರು ಕೂಡಾ ಒಬ್ಬರಾಗಿದ್ದಾರೆ. ಶಿಕ್ಷಣದಲ್ಲಿ ಸಮಾನತೆಯ ಪ್ರಶ್ನೆಬಂದಾಗ ನಾವು ಕಂಡ ಕನಸುಗಳಲ್ಲಿ ಅನೇಕವು ಕನಸುಗಳಾಗಿಯೇ ಉಳಿದವು ಸಂವಿಧಾನವು ಸರ್ವರಿಗೂ ಸಮಾನತೆಯನ್ನು ನೀಡಿ, ಲಿಂಗ

ಭೇದವನ್ನು ನಿಷೇಧಿಸಿದೆ. ವಾಸ್ತವದಲ್ಲಿ ಸ್ತ್ರೀ ಶಿಕ್ಷಣ ಅಷ್ಟೇನು ಪ್ರಗತಿಯಲ್ಲಿ ಇಲ್ಲ ಸಮುದಾಯಗಳಲ್ಲಿ ಶಿಕ್ಷಣ ಅವಕಾಶಗಳು ಬಳಕೆಯಲ್ಲಿ ಲಿಂಗ ತಾರತಮ್ಯ ಎಷ್ಟರ ಮಟ್ಟಿಗೆ ಕಾರ್ಯ ಪ್ರವೃತ್ತವಾಗಿದೆ. ಎಂಬುದಕ್ಕೆ ಮನಗಾಣಬೇಕಾಗಿದೆ. "೧೮೨೪ರಲ್ಲಿ ಮೊಟ್ಟ ಮೊದಲು ಮುಂಬಯಿಯಲ್ಲಿ ಸ್ತ್ರೀಯರಿಗೆಂದೇ ಶಾಲೆಯನ್ನು ತೆರೆಯಲಾಯಿತು. ೧೮೪೯ರಲ್ಲಿ ಕಲ್ಕತ್ತಾದಲ್ಲಿ ಬೆಥುನೆ ಶಾಲೆಯ ಪ್ರಾರಂಭವಾಯಿತ್ತು. ೧೮೩೫ರಲ್ಲಿ ಚಾರ್ಲ್ಸ್ ಮೆಕಾಲೇ ಸ್ತ್ರೀ ಶಿಕ್ಷಣ ವಿಧೇಯರನ್ನು ಅನುಮೋದಿಸಿದ್ದ ಸ್ತ್ರೀ ಶಿಕ್ಷಣದ ಅವಶ್ಯಕತೆಯನ್ನು ವುಡ್ ರವರ ಸರ್ಕಾರಿ ರಾಜಪತ್ರದಲ್ಲಿ ಕೂಡಾ ಉಲ್ಲೇಖಿಸಲಾಯಿತ್ತು. ಹಂಟರ್ ಆಯೋಗದಲ್ಲೂ ಮಹಿಳಾ ಶಿಕ್ಷಣದ ಬಗ್ಗೆ ಪ್ರಸ್ತಾಪವಾಯಿತು."[೫] ಹಿಂದಿನ ರೈತ ಇಂದು ಶಿಕ್ಷಣದ ಎಲ್ಲ ಏಪ್ರಿಲ್‌ಗಳಲ್ಲೂ ಮಹಿಳೆಯರ ದಾಖಲಾತಿಯ ಪ್ರಮಾಣದಲ್ಲಿ ಹೆಚ್ಚಳ ಉಂಟಾಗಿದೆಯಾದರು ದೇಶದ ಅನೇಕ ಸಮುದಾಯಗಳು ಬುಡಕಟ್ಟುಗಳು ಬಹಳ ಹಿಂದೆ ಉಳಿದಿದ್ದಾರೆ ಮತ್ತು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಅನೇಕ ಭಾಗಗಳಲ್ಲಿ ಮಹಿಳೆಯರ ಅನಕ್ಷರತೆ, ಪ್ರಮಾಣವು ದಿಗ್ಭ್ರಮೆ ಹುಟ್ಟಿಸುವಷ್ಟು ಕೆಳಮಟ್ಟದಲ್ಲಿದೆ ಇದು ಮಂಗಾರವಾಡಿ ಸಮುದಾಯಗಳಲ್ಲಿ ಕಂಡುಬರುತ್ತದೆ.

ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣವೆನ್ನುವುದು ಅನೇಕ ಸಂದರ್ಭಗಳಲ್ಲಿ ಘೋಷಣೆಯ ಮಟ್ಟದಲ್ಲಿಯೇ ಉಳಿದಿರುವುದು ಶೋಚನೀಯ ಸಾರ್ವತ್ರಿಕ ಶಿಕ್ಷಣದ ಗುರಿಯನ್ನು ಕೆಲವು ದಶಕಗಳ ಹಿಂದೇ ಸಾಧಿಸುವ ಮಹಾದಾಸೆಯನ್ನು ಹೊಂದಿದ್ದರೂ ಕೂಡಾ ಹೊಸದೊಂದು ಶತಮಾನವೇ ನೋಡುವ ಒಂದು ದಿಸೆಯಲ್ಲಿ ಸರ್ವರಂಗಗಳಲ್ಲಿ ಮಹಿಳೆಯರ ಸಂಖ್ಯೆ ಕಡಿಮೆಯಾಗಿರುವುದೇ ಕಂಡುಬರುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ನಾವು ಸಾಧಿಸಿರುವ ಪ್ರಗತಿ ಕೇವಲ ಸಂಖ್ಯಾತ್ಮಕ ಸ್ವರೂಪದೇ ಈ ಪ್ರಶ್ನೆಗಳಿಗೆ ನಾವು ಸಮರ್ಥ ಹಾಗೂ ಸಮರ್ಪಕ ಉತ್ತರಗಳನ್ನು ಹುಡುಕುವುದರಲ್ಲಿಯೇ ಕಾಲಗಣನೆ ಮಾಡುತ್ತಲಿದ್ದೇವೆ. ಆಧುನಿಕ ಭಾರತದಲ್ಲಿ ಅನೇಕ ಬುಡಕಟ್ಟುಗಳು ಶಿಕ್ಷಣದಿಂದ ವಂಚಿತವಾಗಿರುವಂತಹದು ಕಂಡುಬರುತ್ತವೆ. ಸಮುದಾಯಗಳಲ್ಲಿ ಲಿಂಗಾಧಾರಿತ ಶೈಕ್ಷಣಿಕ ಅಸಮಾನತೆಯನ್ನು ಸೃಷ್ಟಿಸುವ ಮೊದಲನೆಯ ಮೂಲ ಎಂದು ಹೇಳಿದರೆ ತಪ್ಪಾಗಲಾರದು ಸಮುದಾಯವು ಆರ್ಥಿಕವಾಗಿ ಅನಾನುಕೂಲವಾದ ಪರಿಸ್ಥಿತಿಯಲ್ಲಿರುವಾಗಲೇ ಅನೇಕ ಪೋಷಕರು ತಮ್ಮ ಹೆಣ್ಣು ಮಕ್ಕಳಿಗೆ ಮದುವೆ ಮಾಡಿಕೊಡುತ್ತಾರೆ. ಶಿಕ್ಷಣಕ್ಕಿಂತ ಅವರ ವಿವಾಹಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವಂತ ಪರಿಸ್ಥಿತಿ ಇರುವಾಗ ಸಮುದಾಯಗಳು ಆರ್ಥಿಕವಾಗಿ ತೊಡಗಿರುವಂತಹದು ತಿಳಿದುಬರುತ್ತದೆ. ಮಗಳ ಮದುವೆ ನಂತರ ಪರರ ಮನೆಗೆ ಹೋಗುವವಳು ಆಕೆಯು ಕೆಲಸಕ್ಕೆ ಸೇರಿದಕ್ಕೆ ಆಕೆಯ ಗಳಿಕೆಯ ಮೇಲಿನ ಅಧಿಕಾರ ಆಕೆಯ ಪತಿ ಅಥವಾ ಆತನ ಮನೆಯವರಿಗೆ ಇರತಕ್ಕಂಥದು ತಮಗೆ ಈ ಶಿಕ್ಷಣದಿಂದ ಯಾವುದೇ ಬಗೆಯ ಪ್ರಯೋಜನವಿಲ್ಲ ಎನ್ನುವ

ವಾದ ಕಂಡುಬರುತ್ತದೆ. ಪುರುಷ ಪ್ರಧಾನ ಮೌಲ್ಯಗಳಿಂದ ಆವೃತ್ತವಾಗಿರುವ ನಮ್ಮ ಸಮುದಾಯಗಳ ವ್ಯವಸ್ಥೆಯಲ್ಲಿ ವಿವಾಹವೇ ಹೆಣ್ಣಿನ ಜೀವನದ ಪರಮ ಗುರಿ, ಆಕೆಯ ಬದುಕನ್ನು ಕುರಿತು ನಿರ್ಧಾರಗಳನ್ನು ತೆಗೆದುಕೊಳ್ಳುವ ಪರಮಾಧಿಕಾರ ಆಕೆಯ ಪತಿಗೆ ಹೊರತು ಇತರರಿಗಿಲ್ಲ. ಎನ್ನುವ ನಂಬಿಕೆಯಲ್ಲಿ ಹೆಚ್ಚಾಗಿ ಚಾಲ್ತಿಯಲ್ಲಿರುವುದರಿಂದ ಸ್ತ್ರೀ ಶಿಕ್ಷಣವು ಹೆಚ್ಚಾಗಿ ಕುಸಿಯುತ್ತಿರುವಂತೆ ಮಂಗಾರವಾಡಿಗರಲ್ಲಿ ತಿಳಿದುಬರುತ್ತದೆ. ಮಗಳಿಗೆ ಮದುವೆ ಮಾಡಿ ತಮ್ಮ ಜವಾಬ್ದಾರಿಯನ್ನು ಕಳೆದುಕೊಂಡರೆ ಸಾಕೆನ್ನುವ ನಿಟ್ಟಿನಲ್ಲಿ ಪೋಷಕರಿಗೆ ಅನೇಕ ಬಾರಿ ತಾವು ಮಾಡಿದ ತಪ್ಪಿನ ಅರಿವಾಗುವುದು ತಮ್ಮ ಮಗಳ ಪಾಲಿಗೆ ಆ ವಿವಾಹ ಎನ್ನುವುದು ಅಹಿತಕರವಾದ ಅನುಭವವಾಗಿ ಪರಿಣಮಿಸಿದಾಗ ಮಾತ್ರ ಗೊತ್ತಾಗುತ್ತದೆ.

ಆಹಾರ, ನೀರು, ವಸತಿ, ಮುಂತಾದವು ಹೇಗೆ ಮೂಲಭೂತವಾದ ಅವಶ್ಯಕತೆಗಳು ಹಾಗೆ[೬] "ವರ್ಜಿನಿಯ ವೋಲ್ಫ್ ಹೇಳಿದ ಮಾತು "Man is terribly hampered and partial in his knowledge of women as a women. Is her, knowledge of man" ಪ್ರಾಯಶಃ ಸತ್ಯದ ಮಾತು ಮಹಿಳೆ ಮತ್ತು ಸ್ವಾವಲಂಬನೆ."[೭] ಶಿಕ್ಷಣವು ಒಂದು ಜೀವನಾಧಾರ ಎನ್ನುವುದರಲ್ಲಿ ಯಾವುದೇ ಬಗೆಯ ಸಂದೇಹ ಇಲ್ಲವಾದರೂ ವಾಸ್ತವ್ಯದಲ್ಲಿ ಹಾಗಾಗುತ್ತಿಲ್ಲ, ಹೆಣ್ಣು ಮಕ್ಕಳ ಬಗೆ ನಕಾರಾತ್ಮಕ ಭಾವನೆಗಳು ತುಂಬಿ ತುಳುಕಾಡುತ್ತಿರುವ ಈ ಒಂದು ಸಮುದಾಯದಲ್ಲಿ ಹೆಣ್ಣು ಓದಿ ಏನು ಮಾಡಬೇಕಾಗಿದೆ ಅವಳು ಎಂದಾದರೂ ಗೃಹಕೃತ್ಯದ ಜವಾಬ್ದಾರಿಗಳನ್ನು ನಿರ್ವಹಿಸಬೇಕಾದದ್ದು ಎನ್ನುವವರು ಇಂದಿಗೂ ಬಹು ಸಮುದಾಯಗಳಲ್ಲಿ ಮಂಗಾರವಾಡಿ ಸಮುದಾಯವು ಒಂದಾಗಿದೆ. ಓದಿ, ಆಡಿ, ನಲಿದು ಬೆಳೆಯ ಬೇಕಾದ ಹೆಣ್ಣು ಮಗು ತನಗಿಂತ ವಯಸ್ಸಿನಲ್ಲಿ ಸ್ವಲ್ಪವೇ ಕಿರಿಯನಾದ ಮಗವೊಂದನ್ನು ಕಂಕುಳಲ್ಲಿ ಎತ್ತಿಕೊಂಡು ತಲೆಯ ಮೇಲೆ ಹೊತ್ತಿಕೊಂಡು ಓಡಾಡುವ ದೃಶ್ಯ ಅನೇಕ ಬುಡಕಟ್ಟು ಸಮುದಾಯಗಳಲ್ಲಿ ಸರ್ವೇ ಸಾಮಾನ್ಯ, ಮನೆಗೆಲಸದ ಹೊರೆ ಬಹುಸುಲಭದಲ್ಲಿ ಬೀಳುವುದು ಹೆಣ್ಣು ಮಕ್ಕಳ ಪಾತ್ರೆ ತೊಳೆಯುವ, ಬಟ್ಟೆ ಒಗೆಯುವ, ಮನೆಯನ್ನು ಓರಣ ಮಾಡುವ, ನೀರು ಹೊರುವ, ಆಹಾರ ತಯಾರಿಸುವ, ಜವಾಬ್ದಾರಿಗಳನ್ನು ಆಕೆಯ ಮೇಲೆಯೇ ಹೇರಿ, ಆಕೆಯನ್ನು ಶಾಲೆಗೆ ಕಳುಹಿಸದೆ ಇರುವುದಕ್ಕೆ ಇದೊಂದು ಕಾರಣವಾಗಿದೆ.

ಬುಡಕಟ್ಟುಗಳ ಸಮುದಾಯಗಳು ಒಂದೆಡೆ ಖರ್ಚು ವೆಚ್ಚಗಳ ಲೆಕ್ಕಾಚಾರ ಮತ್ತೊಂದೆಡೆ ನಕಾರಾತ್ಮಕ ಸಾಮಾಜಿಕ ಧೋರಣೆ ಇವೆರಡು ಹೆಣ್ಣು ಮಕ್ಕಳು ಅಧಿಕ ಸಂಖ್ಯೆಯಲ್ಲಿ ಶಾಲೆಗಳನ್ನು ಸೇರದಿರುವುದಕ್ಕೆ ಶಿಕ್ಷಣವನ್ನು ಮಧ್ಯದಲ್ಲಿ ಬಿಡುವುದಕ್ಕೆ ಪ್ರಮುಖ ಕಾರಣಗಳು ಇದಲ್ಲದೇ ನಮ್ಮ ದೇಶದ ಅನೇಕ ಭಾಗಗಳಲ್ಲಿ ಶಾಲೆಗಳನ್ನು ತಲುಪಲು ಇರುವ

ಅಡಚಣೆಗಳೂ ಕೂಡಾ ಇವೆ ಹೆಣ್ಣು ಮಕ್ಕಳು ಶಾಲಾ ಮನೆಯ ಪಕ್ಕದಲ್ಲಿಯೇ ಇದ್ದರೂ ಹೆಣ್ಣು ಮಕ್ಕಳನ್ನು ಕಳುಹಿಸಲು ಹಿಂಜರಿಯುವ ಪೋಷಕರು ಇನ್ನೂ ಶಾಲೆಯನ್ನು ತಲುಪಲು ಸುಮಾರು ದೂರ ಕಾಲ್ನಡಿಗೆಯಲ್ಲಿ ತೆರಳಬೇಕಾದಂಥ ಪರಿಸ್ಥಿತಿ ಇರುವಾಗ ತಮ್ಮ ಹೆಣ್ಣು ಮಕ್ಕಳನ್ನು ಅಲ್ಲಿಗೆ ಕಳುಹಿಸಲು ಅಂಜುವುದು ಸಹಜವೇ ಹೀಗೆ ನಡೆದು ಹೋಗುವಾಗ

ಬುಡಕಟ್ಟು ಮಹಿಳೆಯರಿಗೆ ಶಿಕ್ಷಣಾವಕಾಶಗಳನ್ನು ಹೆಚ್ಚಿಸಬೇಕೇಂಬ ವಿಚಾರರಕ್ಕೆ ವ್ಯಾಪಕ ಮನ್ನಣೆಯಿದ್ದರೂ ಸ್ತ್ರೀ ಮತ್ತು ಪುರಷರಿಗಾಗಿ ಪ್ರತ್ಯೇಕ ಪಠ್ಯಕ್ರಮವನ್ನು ತಯಾರಿಸಬೇಕೆಂಬ ಒಂದು ಸಲಹೆ ಕೂಡ ಆಗಿನ ಶಿಕ್ಷಣ ತಜ್ಞರನ್ನು ಶಿಕ್ಷಣ ಸಮಿತಿಗಳನ್ನು ಬಾದಿಸಿತ್ತು ಸ್ತ್ರೀ ಪುರಷರ ದೈಹಿಕ ಮತ್ತು ಮಾನಸಿಕ ಶಕ್ತಿಗಳು ಭಿನ್ನವಾಗಿರುವುದರಿಂದ ಅವರೂ ಬೇರೆ ಬೇರೆ ಪಠ್ಯಕ್ರಮಗಳನ್ನೇ ಅಭ್ಯಸಿಸಬೇಕೆಂಬ ಸಮರ್ಥನೆಯನ್ನು ಸಮಿತಿಗಳು ನೀಡಿದವು. ಭಾರತದಲ್ಲಿ ಸ್ಥಾಪಿಸಲ್ಪಟ್ಟು ಎಲ್ಲ ಸಮಿತಿಗಳು ಹಾಗೂ ಶಿಕ್ಷಣ ಆಯೋಗಗಳು ಮಹಿಳೆಯರ ಶೈಕ್ಷಣಿಕ ಅಭಿವೃದ್ದಿಗೆ ಹೆಚ್ಚಿನ ಮಹತ್ವವನ್ನು ನೀಡಿರುವಂತಹುದು ಗಮನಾರ್ಹವಾದುದು.

"ಸರ್ಕಾರ ಬಾಲಕಿಯರಿಗಾಗಿ ಶಾಲೆಗಳನ್ನು ಸ್ಥಾಪಿಸಿ ಸ್ತ್ರಿ, ಶಿಕ್ಷಣದ ಕ್ರಾಂತಿಯ ಆರಂಭ ಮಾಡಿತೆನ್ನಬಹುದು. ಇದೇ ವೇಳೆಗೆ ಸುಧಾರಣಾವಾದಿ ಸಂಸ್ಥೆಗಳು, ಧಾರ್ಮಿಕ, ಸಂಸ್ಥೆಗಳು ಎಂದರೆ, ಬ್ರಹ್ಮ ಸಮಾಜ ಪ್ರಾರ್ಥನಾ ಸಾಮಾಜ, ಆರ್ಯ ಸಮಾಜ ಹಾಗೂ ಥಿಯೋಸಾಫಿಕಲ್ ಸೊಸೈಟಿಗಳಲ್ಲಿ ಕೂಡಾ ಸ್ತ್ರೀಯರಿಗಾಗಿ ಶಾಲೆಗಳನ್ನು ತೆಗೆದು ಸ್ತ್ರೀ ಶಿಕ್ಷಣಕ್ಕೆ ಪ್ರತ್ಯಕ್ಷ ಬೆಂಬಲವನ್ನೇದಗಿಸಿದವು."[೭] ಶಿಕ್ಷಣದ ಮೂಲಕ ಮಹಿಳೆಯರ ಅಭಿವೃದ್ಧಿಯತ್ತ ನಡೆಯಬೇಕಾದರೆ. ಸಮುದಾಯಗಳ ವ್ಯವಸ್ಥೆಯಲ್ಲಿ ಆರ್ಥಿಕವಾಗಿ, ಸಾಮಾಜಿಕ, ಹಿಂದುಳಿದ ಬುಡಕಟ್ಟುಗಳು ಅಲೆಮಾರಿಗಳು ಮುಂದೆ ಬರಲು ಸಾಧ್ಯವೆಂದು ಹೇಳಬಹುದು ಶಾಲೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತೆರೆಯುವುದೇ ಅಲ್ಲದೆ ಅವುಗಳನ್ನು ಎಲ್ಲಿ ತೆರೆಯಬೇಕು ಯಾವ ಯಾವ ಮೂಲಭೂತ ಸೌಕರ್ಯಗಳನ್ನು ಆ ಶಾಲೆಗೆ ಒದಗಿಸಬೇಕು ಅಲ್ಲಿ ಬರುವ ಹೆಣ್ಣು ಮಕ್ಕಳಿಗೆ ನೆಮ್ಮದಿಯಿಂದ ಕಲಿಕೆಯಲ್ಲಿ ತೊಡಗಲು ಯಾವ ಬಗೆಯ ವಾತಾವರಣವನ್ನು ಸೃಷ್ಟಿಸಬೇಕು. ಇವೇ ಮುಂತಾದ ಪ್ರಶ್ನೆಗಳನ್ನು ಎತ್ತಿ ಅವುಗಳಿಗೆ ಸೂಕ್ತವಾದ ಉತ್ತರಗಳನ್ನು ಹುಡಕಬೇಕು. ಗೃಹಕೃತ್ಯ, ಸಣ್ಣ ಮಕ್ಕಳ ಲಾಲನೆ, ಪಾಲನೆ, ನಕಾರಾತ್ಮಕ ಸಾಮಾಜಿಕ ಧೋರಣೆಗಳೂ ಪೋಷಕರ ನಿರಾಸಕ್ತಿ ಬಡತನ ಹಾಗೂ ಮೌಢ್ಯ- ಇವೆಲ್ಲವೂ ಅನೇಕ ಹೆಣ್ಣು ಮಕ್ಕಳನ್ನು ಸುತ್ತುವರೆದಿರುವ ವಿಷವರ್ತುಲ ಈ ವಿಷ ವರ್ತುಲದಿಂದ ಬಿಡುಗಡೆಯನ್ನು ಪಡೆಯುವವರೆಗೂ ಶಿಕ್ಷಣಾವಕಾಶಗಳನ್ನು ಬಳಸಿಕೊಳ್ಳಲು ಅವರಿಗೆ ಅನುಕೂಲವಾಗುವುದಿಲ್ಲ. ಪ್ರತಿಯೊಂದು ಸಮುದಾಯಕ್ಕೂ ಬುಡಕಟ್ಟಿಗೂ ಆದಿವಾಸಿಗಳಿಗೂ ಸೇರಿದಂತೆ ಎಲ್ಲಾ ಮಕ್ಕಳಿಗೆ

ಎಲ್ಲಾ ವರ್ಗದವರಿಗೂ ಶಿಕ್ಷಣಕಲ್ಪಿಸಿದರೂ ಶಿಕ್ಷಣದಿಂದ ವಂಚಿತವಾದ ಅನೇಕ ಸಮುದಾಯಗಳು ಕಂಡುಬರುತ್ತವೆ.

ಮಂಗಾರವಾಡಿ ಸಮುದಾಯದವರು ಮಕ್ಕಳ ಉನ್ನತಿಗೆ ಸ್ವಲ್ಪ ಮಟ್ಟಿಗೆ ಮಹತ್ವ ನೀಡುರುವಂತಹದು ಇಂದಿನ ದಿನಗಳಲ್ಲಿ ಶಾಲೆಗಳಿಗೆ, ಕಾಲೇಜುಗಳಿಗೆ ಮತ್ತು ವಿಶ್ವವಿದ್ಯಾಲಯದ ಮಟ್ಟದವರ ಶಿಕ್ಷಣ ವ್ಯವಸ್ಥೆಯ್ಲಲಿರುವಂತಹದು ಕಂಡು ಬರುತ್ತದೆ. ಆದರಿಂದ ಅವರ ಒಂದು ಬದುಕು ಅಭಿವೃದ್ಧಿಯತ್ತ ಸಾಗಲು ಅನುಕೂಲವಾಗಬಹುದಾಗಿದೆ. ಅದರ ಜೊತೆಗೆ ಜೊತೆಗೆ ಆದಾಯಗಳಿಕೆಗೂ ಪೂರಕವಾದಂಥ ಶಿಕ್ಷಣ ಕ್ರಮದ ಅಗತ್ಯವಿದೆ. ಅವರವರ ಆಸಕ್ತಿ ಹಾಗೂ ಸೂಕ್ತ ಪ್ರತಿಭೆಗಳಿಗುಣವಾಗಿ ಕೌಶಲ್ಯಗಳನ್ನು ರೂಢಿಸಿಕೊಳ್ಳುವ, ವೃದ್ದಿಸಿಕೊಳ್ಳುವ ಅವಕಾಶಗಳನ್ನು ಶಿಕ್ಷಣವ್ಯವಸ್ಥೆಯಲ್ಲಿ ಕಲ್ಪಿಸಲಾಗಿದೆ. ಒಂದೆಡೆ ಆರ್ಥಿಕ ಸ್ವಾವಲಂಬನೆಗೆ ತಯಾರಿ ಮತ್ತೊಂದೆಡೆ ಅನವಶ್ಯ, ಅಪ್ರಯೋಜಕ ಆಚರಣೆಗಳನ್ನು ಪ್ರಶ್ನಿಸಿ ಪ್ರತಿಭಟಿಸುವ ಕಾರ್ಯಕ್ಕೆ ಮಹಿಳೆಯರು ಬೆಳೆಯಬೇಕಾಗಿದೆ.

೪.೩ ಹಬ್ಬ ಮತ್ತು ಆಚರಣೆಗಳು

ಹಬ್ಬ ಮತ್ತು ಆಚರಣೆಗಳು ಧರ್ಮ ಶ್ರದ್ದೆಯಿಂದ ಮತ್ತು ಸಾಧನ ವ್ರತಗಳ ಸಂಸ್ಕೃತಿಯ ಒಂದು ಕಾಯಕಗಳು ಇವುಗಳ ಆಚರಣೆ ದೇಶದ ಎಲ್ಲಾ ಜನಾಂಗದಲ್ಲೂ ಕಂಡುಬರುತ್ತವೆ. ಅಲೆಮಾರಿಗಳಾದ ಮಂಗಾರವಾಡಿಗರು ಮೊದಲನಿಂದಲೂ ಹಿಂದೂ ಸಂಪ್ರದಾಯದಂತೆ ತಮ್ಮದೇ ಆದ ವಿಶಿಷ್ಟತೆಯಿಂದ ಕೂಡಿಕೊಂಡು ಬಂದ ಹಬ್ಬಗಳೂ ಮತ್ತು ಆಚರಣೆಯನ್ನು ಮಾಡುತ್ತಾ ಬಂದಿದ್ದಾರೆ. ಮಂಗಾರವಾಡಿ ಅಲೆಮಾರಿ ಜನಾಂಗವಾಗಿದ್ದು ಒಂದು ನಿರ್ದಿಷ್ಟ ಸ್ಥಳದಲ್ಲಿ ನೆಲೆಯೂರಲು ಆರಂಭಿಸಿದರು ಅವರ ಸಂಸ್ಕೃತಿಯ ಮೇಲೆ ಬದುಕಿನ ರೀತಿ ರಿವಾಜುಗಳ ಮೇಲೆ ವೇಷಭೂಷಣ ಹಾಗೂ ಪ್ರಾದೇಶಿ ನೆಲೆಯಲ್ಲಿ ತಮ್ಮ ತಮ್ಮ ಸಂಪ್ರದಾಯತೆ ಬೆಳೆಯತೊಡಗಿದ್ದರು ಈ ಹಲವಾರು ಅಂಶಗಳು ತೀವ್ರವಾದ ಬದಲಾವಣೆಯ ಛಾಯೆ ಕಾಣಿಸುವುದು ಸಹಜವಾದರೂ ಸಂಪ್ರದಾಗಳು ಮನುಷ್ಯನ ಜೀವನದ ಪ್ರಮುಖವಾಗಿ ದೈವಶಕ್ತಿ ಪ್ರಧಾನವಾದದು ಎಂಬುದು ನಂಬುತ್ತಾರೆ. ಸಾಮಾನ್ಯವಾಗಿ ತಮ್ಮ ಮನೆಯ ದೇವರು ಕುಲದೇವರು ಊರ ದೇವರು, ಶ್ರೀವಿಠ್ಠಲ ಎಂದು ನಂಬುತ್ತಾರೆ. ದೇವರು ಈ ದೇವರಿಗೆ ಭಕ್ತಿ ಶ್ರದ್ದೆಗಳಿಂದ ನಂಬಿಕೆಯಿಂದ ಸಂಪ್ರದಾಯ ಬದ್ದವಾಗಿ ಪೂಜೆ ಪುನಸ್ಕಾರಗಳು ನೆರವೇರಿಸಿಕೊಂಡು ಬರುತ್ತಿದ್ದಾರೆ.

ಸಮುದಾಯಗಳು ತಲೆತಲಾಂತರದಿಂದ ಆಚರಿಸಲ್ಪಡುತ್ತಿರುವ ಹಬ್ಬಗಳು, ಹರಿದಿನಗಳು, ಶುಭಕಾರ್ಯಗಳು ಭಾರತೀಯ ಸಮುದಾಯಗಳ ಸಂಸ್ಕೃತಿಯ ಒಂದು ವಿಶೇಷ ಇಂತಹ

ಕಾರ್ಯಕ್ರಮಗಳ ಆಚರಣೆಯಿಂದ ಮನಸ್ಸಿಗೆ ನೆಮ್ಮದಿ ಮನೆಯಲ್ಲಿ ಹರುಷ ಜೊತೆಗೆ ದೇವಿ ಕೃಪೆ ಎಂದು ಮಂಗಾರವಾಡಿಗರು ಅಚಲವಾದ ನಂಬಿಕೆ ಇಟ್ಟಿದ್ದಾರೆ.

ಇತ್ತೀಚ್ಚಿನ ದಿನಗಳಲ್ಲಿ ಮನುಷ್ಯನ ಅತ್ಯಾಧುನಿಕತೆಯ ಬದುಕು ಬದಲಾಗುತ್ತಿರುವುದರಿಂದ ಬುಡಕಟ್ಟುಗಳ ಸಂಸ್ಕೃತಿಯನ್ನು ಸಂಪ್ರದಾಯವನ್ನು ಕಂದಾಚಾರವೆಂದು ತೀರ್ಮಾನಿಸಿ ಕ್ಷಣಿಕ ಸುಖದತ್ತ ವಾಲುತ್ತಿದ್ದು ಅನೇಕ ಸಮುದಾಯಗಳು ಕಂಡುಬರುತ್ತವೆ. ಪ್ರಸ್ತುತ ಜನಾಂಗಗಳಲ್ಲಿ ಹಬ್ಬ ಹರಿದಿನಗಳಿಗೆ ತೋರಿಸುತ್ತಿರುವ ತಾತ್ಸಾರ ಅಸಡ್ಡೆಗಳನ್ನು ಗಮನಿಸಿದಾಗ ಶೋಚನಿಯವೆನಿಸುತ್ತದೆ. ಹಬ್ಬ ಹರಿದಿನಗಳು ಆಚರಣೆಗಳು ಶುಭ ಕಾರ್ಯಗಳನ್ನು ಆಚರಿಸುವುದರಲ್ಲಿ ಅರ್ಥವಿದೆ ವೈಶಿಷ್ಟ್ಯವಿದೆ ಎಂದು ಮಂಗಾರವಾಡಿಗರ ಬದುಕಾಗಿದೆ. ಬುಡಕಟ್ಟುಗಳ ಜೀವನದ ಪ್ರತಿಯೊಂದು ವಿಷಯವನ್ನು ಅರ್ಥಬರುವಂತೆ ನಿಯಮಪೂರಕವಾಗಿ ಶ್ರೇಯಸ್ಸನು ಗಮನದಲ್ಲಿಟ್ಟುಕೊಂಡು ಹಬ್ಬಗಳ ಆಚರಣೆಯನ್ನು ರಾಜ ಮಾರ್ಗದಲ್ಲಿ ಹಾಕಿ ಕೊಟ್ಟಿದ್ದಾರೆ. ಇದನು ಅನುಸರಿಸಿ ಮನುಷ್ಯನು ಸುಖಿಯಾಗಲಿ ಎನ್ನುವುದೇ ಆ ಹಿರಿಯರ ಆಶಯವಾಗಿದೆ.

ಒಟ್ಟಾರೆ ಎಲ್ಲಾ ಹಬ್ಬಗಳು ನಮ್ಮಲ್ಲಿ ಉತ್ಸಾಹ ತುಂಬಿಹಳೆಯ ನೋವು ಮರೆಸಿ ಬಾಂಧವ್ಯದ ಕೊಂಡಿ ಕಳಚಿದಂತೆ ಮಾಡಿ ಸಾಮುದಾಯಿಕ ಮನೋರಂಜನೆ ದೈವಭಕ್ತಿ, ಭಾವೈಕ್ಯತೆ, ಮನಶಾಂತಿ ಉಂಟು ಮಾಡಿ ಜೀವನಕ್ಕೆ ಹರ್ಷ ತಂದು ಕೊಡುತ್ತವೆ ಎನ್ನುತ್ತಾರೆ. ಪ್ರಸ್ತುತದಲ್ಲಿ ಆಚರಿಸುವಂತಹ ಹಬ್ಬಗಳು ಹಲವಾರು ಯುಗಾದಿ ಹಬ್ಬ, ಶ್ರೀರಾಮನವಮಿ, ನಾಗರಪಂಚಮಿ, ಶಿವರಾತ್ರಿ, ದೀಪಾವಳಿ, ಹೋಳಿ ಹುಣ್ಣಿಮೆ, ದೊಡ್ಡವರ ಹಬ್ಬ ಮುಂತಾದವುಗಳು ಆಚರಿಸುತ್ತಾರೆ.

೪.೩.೧ ಯುಗಾದಿ ಹಬ್ಬ

ಸುದೀರ್ಘವಾದ ಅಂಧಕಾರ ಮತ್ತು ಶೀತಕಾಲಕಳೆದು ಸಂತೋಷ ಸಂವತ್ಸರ ಆಗಮನವನ್ನು ಸೂಚಿಸಲು ಯುಗಾದಿ ಮರಳಿ ಬರುತ್ತದೆ "ಇದು ನಿದ್ರಿಸಿದ ಭೂತಾಯಿಯನ್ನು ಎಬ್ಬಿಸುವಹಬ್ಬ" ಋತುರಾಜ ವಸಂತನಿಗೆ ಸ್ವಾಗತಹೇಳುವ ದಿನ. ಯುಗಾದಿ ದಿನ ಮಂಗಾರವಾಡಿಗರು ಭಗವಂತನನ್ನು ನೆನೆಸುತ್ತಾ ದೇವರ ಪೂಜೆ, ಗುರು–ಹಿರಿಯರಿಗೆ ನಮಸ್ಕಾರ ಮಾಡಿ ಅವರಿಂದ ಆರ್ಶಿವಾದ ಪಡೆಯುವುದು ಅನಂತರ ಪಾಯಸ ಊಟ ಮಾಡುವುದು ಸಿಹಿ ಊಟಮಾಡುವುದು ಒಂದು ವಾಡಿಕೆ ತಿಳಿದುಬರುತ್ತದೆ. ಬೇವು ಬೆಲ್ಲ ತಿಂದು ಅನಂತರ ಹೋಳಿಗೆ ಪಾಯಸಗಳನ್ನು ಊಟ ಮಾಡುವುದು ರೂಢಿ ಸಂಜೆ ಪಂಚಾಂಗ ಶ್ರಾವಣ–ಚಂದ್ರೋದಯ ಕಾಲದಲ್ಲಿ ಪೂರ್ವದಿಗಂತರಲ್ಲಿ ಮೂಢಿಬರುವ ಒಂದು ಕಲೆಯಿಂದ ಬೆಳಗುವ ಚಂದ್ರನನ್ನು ಕಂಡು ನಮಿಸುವುದು.

* ಬೇವು-ಬೆಲ್ಲ

ಯುಗಾದಿ ಎಂದ ಕೂಡಲೆ ನಮ್ಮ ನೆನಪಿಗೆ ಬರುವುದು ಇವೆರಡು ಬದುಕಿನ ಪ್ರತೀಕ ನೋವು-ನಲಿವುಗಳ ಸಂಕೇತ, ದೃಷ್ಟ-ಅದೃಷ್ಟಗಳ ಪ್ರತಿಬಿಂಬವೆಂದು ನಂಬಿಕೊಂಡಿದ್ದಾರೆ. ಮುಂಗಾರವಾಡಿಗರು ಹಿಂದಿನ ಬೇವನ್ನು ಜೀರ್ಣಿಸಿಕೊಂಡು ಇಂದಿನ ಬೆಲ್ಲವನ್ನು ಸವಿಯಲು ಯೋಗಬೇಕು ನಮ್ಮ ನಾಲಿಗೆ "ಸಿಹಿಬೇಕು ಕಹಿಬೇಡ" ಎನ್ನುತ್ತದೆ. ಈ ದೃಷ್ಟಿಯಿಂದ ಸಿಹಿ-ಕಹಿಗಳೆರಡನ್ನು ಯುಕ್ತ ಪ್ರಮಾಣದಲ್ಲಿ ಸೇವಿಸುವುದು ಜಾಣತನ

ನಮ್ಮ ಬದುಕಿನಲ್ಲಿ ನಮಗೆಂದು ಕಹಿ ಬೇಡ-ಸಹಿಬೇಕು ಇದು ಎಲ್ಲರ ಬಯಕೆ, ಎಲ್ಲಾ ಸಮುದಾಯಗಳ ಬಯಕೆ, ಎಲ್ಲರ ಜೀವನನವೂ ಸುಖ ದುಃಖ ಲಾಭ-ನಷ್ಟ, ಮಾನ-ಅಪಮಾನ, ಜಯ-ಪರಾಜಯ ಈ ದ್ವಂದ್ವಗಳ ಸಮ್ಮಿಲನ ಯಾರಿಗೆ ಸುಖ, ಲಾಭ, ಮಾನ, ಜಯಗಳೂ ಶಾಶ್ವತವಿಲ್ಲ ಅಂತೆಯೇ ದುಃಖ, ನಷ್ಟ ಅಪಮಾನ ಪರಾಜಯಗಳು ಸ್ಥಿರವಲ್ಲ, ಇವೆಲ್ಲ ಬಂದಾದ ಮೇಲೆ ಒಂದರಂತೆ ಚಕ್ರದ ಪಟ್ಟಿಗಳಂತೆ ಬಂದು ಹೋಗುತ್ತಿರುತ್ತವೆ ಎಂಬುದು ತಿಳಿಯಬೇಕಾದ ಮುಖ್ಯ ಸಂಗತಿಯೆಂದು ಮಂಗಾರವಾಡಿಗರ ಅಭಿಪ್ರಾಯ ಪಡುತ್ತಾರೆ. ಆದ್ದರಿಂದ ಮಾನವನು ಸುಖ ಬಂದಾಗ ಹಿಗ್ಗದೆ ಕಷ್ಟ ಬಂದಾಗ ಕುಗ್ಗದೆ, ಈ ಎಲ್ಲ ದ್ವಂದ್ವಗಳನ್ನು ಜಯಿಸಿ ಸಮಾನತೆ ಸಾಧಿಸಬೇಕು ಸ್ಥಿತ ಪ್ರಜ್ಞನಾಗಬೇಕು ಇದು ಯುಗಾದಿಯ ಹಬ್ಬದ ಬೇವು-ಬೆಲ್ಲಗಳ ಸಂದೇಶವೆಂದು ಹೇಳುತ್ತಾರೆ.

೪.೩.೨ ಶ್ರೀರಾಮನವಮಿ

ಮಹಾವಿಷ್ಣುವಿನ ಏಳನೇ ಅವತಾರಿಯಾದ ಶ್ರೀ ರಾಮನು ಧರೆಗವತರಿಸಿದ ದಿನ ಶ್ರೀ ರಾಮನವಮಿ ಅಂದು ಶ್ರೀ ರಾಮಭಜನೆ ಪೂಜೆ, ಪುರಾಣ, ಕೆಲವರು ಚಂದ್ರಯುಗಾದಿಯಿಂದ ಆರಂಭಿಸಿ ನವಮಿ ಪರ್ಯಂತ, ರಾಮೋತ್ಸವ ಆಚರಿಸಿದರೆ ಮತ್ತೆ ಕೆಲವರು ನವಮಿಯಿಂದ ಹಿಡಿದು ಮುಂದಿನ ಒಂಭತ್ತು ದಿನಗಳವರೆಗೆ ಉತ್ಸವ ಆಚರಿಸುತ್ತಾರೆ. ಸಾಂಸ್ಕೃತಿಕ- ಧಾರ್ಮಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ ಉತ್ತಮ ಹೃದಯ ಸಂಸ್ಕಾರ ನೀಡುವ ಪ್ರಯತ್ನ ಅನೇಕ ಕಡೆಗಳಲ್ಲಿ ನಡೆಯುತ್ತದೆ ಅನೇಕ ಸಮುದಾಯಗಳು ಹಿಂದೂ ಸಮುದಾಯಗಳಲ್ಲಿ ಏರ್ಪಡುತ್ತದೆ. ಇದನ್ನು ಮಂಗಾರವಾಡಿಗರು ಕೂಡ ಆಚರಿಸಿಕೊಂಡು ಬಂದ ಒಂದು ಹಬ್ಬವಾಗಿದೆ. ಮತ್ತು ವಿಶೇಷತೆಯಿಂದ ಕೂಡಿದೆ.

೪.೩.೩ ನಾಡಿನ ಹಬ್ಬ- ನಾಗರ ಪಂಚಮಿ

ಭಾರತೀಯ ಸಮುದಾಯಗಳು ಅದರಲ್ಲಿ ಬುಡಕಟ್ಟುಗಳಲ್ಲಿ ಆದಿವಾಸಿಗಳಲ್ಲಿ ಆಚರಣೆ ಮಾಡಿಕೊಂಡು ಬಂದಿರುವ ಹಬ್ಬಗಳೆಲ್ಲ ಒಂದರ್ಥದಲ್ಲಿ ಧಾರ್ಮಿಕ ಉತ್ಸವಗಳೇ ಧಾರ್ಮಿಕ ಶ್ರದ್ಧೆ, ಪೂಜಾ ಭಾವನೆಗಳಿಗೆ ಅಲ್ಲಿ ಪ್ರಾಧಾನ್ಯತೆ, ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ ಅಂಶಗಳು ಅಲ್ಲಿ ಸೇರಿಕೊಂಡಿವೆ.

* ನಾಗರಾಧನೆ ಪ್ರಾಚೀನತೆ

ಶತಶತಮಾನಗಳ ಸಂಸ್ಕೃತಿಯ ಹಬ್ಬಗಳು ಭಾರತೀಯರಿಂದಲೇ ಆರಂಭವಾದವು ಅವು ದಿವ್ಯಶಕ್ತಿಗಳ ಸಂಕೇತವಾಗಿ ಭಾರತೀಯ ಸಂಸ್ಕೃತಿ, ಮಾನ್ಯತೆ ಮಾಡಿದೆ. ಆನೆಯ ಸೊಂಡಿಲು ಗಣಪತಿ, ಕುದುರೆಯ ಮುಖದ ಹಯಗ್ರೀವ, ಹಂದಿಯ ಮುಖದ ವರಹಾವತಾರಿ ವಿಷ್ಣು, ಇವರೆಲ್ಲ ದೇವತಾಮೂರ್ತಿಗಳಾದರೆ, ಹಂಸ, ಶೇಷ, ಆನೆ, ಮೀನು, ಆಮೆ, ಸಿಂಹ ಇಲ್ಲಿ, ನಂದಿ, ನವಿಲು ಮುಂತಾದ ಪ್ರಾಣಿಗಳ, ಹಂಸ, ಗರುಡ, ಮೊದಲಾದ ಹಕ್ಕಿಗಳು ದೇವತಾ ಸಾನಿಧ್ಯದಲ್ಲಿ ಸೇವೆ ಸಲ್ಲಿಸುತ್ತಿವೆ. ಭಾರತದ ಸಮುದಾಯಗಳಲ್ಲಿ ಮತ್ತು ಬುಡಕಟ್ಟುಗಳಲ್ಲಿ ವೇದ, ಪುರಾಣ, ಮಹಾಕಾವ್ಯ, ಕಾವ್ಯ, ಜನಪದ ಸಾಹಿತ್ಯ ಇಲ್ಲೆಲ್ಲ ನಾಗನಿಗೆ ಸಂಬಂಧಿಸಿದ ಹಲವಾರು ಉಲ್ಲೇಖಗಳಿವೆ.

* ನಾಡಿಗೆ ಹಬ್ಬ

ಸಮುದಾಯಗಳು ರಾಜಮಹಾರಾಜರ ಕಾಲದಿಂದಲೂ ತಾವು ಮಾಡುತ್ತಿದ್ದ ಸರ್ಪಯಜ್ಞವನ್ನು ನಿಲ್ಲಿಸಿ ಮಹಾಭಾರತವನ್ನು ಕೇಳಲು ಆರಂಭಿಸಿದರು ಶ್ರಾವಣಶುದ್ಧ, ಪಂಚಮಿಯದಿನ "ನಾಗಪಂಚಮಿ" ಎಂದು ಪ್ರಸಿದ್ದವಾದ ಈ ದಿನ ಗೋಮಯದಿಂದ ಯಾವುದೇ ಭಾಗವಿಲ್ಲ ಗೃಹ ತಾರೆಗಳು ಭೂಮ್ಯಾಕಾಶಗಳು, ಪಶುಪಕ್ಷಿಗಳು ಗಿಡಮರಗಳು ಕಾಡುಗಳು ಹೀಗೆ ನಿಸರ್ಗದ ಮಡಿಲಲ್ಲಿ ಬುಡಕಟ್ಟಗುಳು ಸಮುದಾಯಗಳು ಈ ಹಬ್ಬಗಳ ಆಚರಣೆಗಳನ್ನು ಮಾಡುತ್ತಿದ್ದನೆಂದು ಮಂಗಾರವಾಡಿಗರು ಹೇಳುತ್ತಾರೆ.

೪.೩.೪ ಹೋಳಿ ಹಬ್ಬದ ಪ್ರಾಚೀನತೆ

ಹೋಳಿ ಹಬ್ಬದ ಆಚರಣೆಯು ಪುರಾಣಗಳ ಮತ್ತು ವೇದಗಳ ಕಾಲದಷ್ಟೆ ಹಳೆಯದು ಕೃಷ್ಣ ರಾಧೆಯರು ಬಣ್ಣದ ಓಕುಳಿ ಆಡುತ್ತಿದ್ದರೆಂದು ಹೇಳುತ್ತಾರೆ. ಶತಮಾನಗಳ ಹಿಂದೆ ಈ ಹಬ್ಬವನ್ನು ಪ್ರೇಮದೇವತೆಯ ಉತ್ಸವವಾಗಿ ಆಚರಿಸುತ್ತಿದ್ದರು ಎಂದು ನಂಬಿದ್ದಾರೆ. ಉಚ್ಚ-ನೀಚ, ಬಡವ-ಶ್ರೀಮಂತ, ಎಂಬ ಬೇದ ಭಾವವಿಲ್ಲದೆ ಎಲ್ಲರು ಹರ್ಷೋಲ್ಲಾಸದಿಂದ ಈ ಹಬ್ಬದಲ್ಲಿ ಭಾಗವಹಿಸುತ್ತಿದ್ದರು ಎಂಬುದು ಅವರ ಅಭಿಪ್ರಾಯವಾಗಿದೆ.

* ಕಾಮದಹನ

ಶಿವಪುರಾಣ, ವಿಷ್ಣುಪುರಾಣ, ಗಿರಿಜಾ ಕಲ್ಯಾಣದಲ್ಲಿ, ಹುಣ್ಣಿಮೆಯ ದಿನದ ಕಾಮದಹನ ವೃತ್ತಾಂತವಿದೆ, ಬ್ರಹ್ಮನಿಂದ ಪಡೆದು ಸ್ವರ್ಗ- ಮರ್ತ್ಯ ಪಾತಾಳಗಳಲ್ಲಿ ಸುರ-ನರ, ಉರಗಗಳಿಗೆಲ್ಲ, ಉಪಟಳಕೊಡುತ್ತಿದ್ದ. ಇದನ್ನು ಸಹಿಸಲಾರದ ದೇವತೆಗಳು, ತೋಕ, ಸೃಷ್ಠಿ ಬ್ರಹ್ಮನಿಗೆ ಶರಣಾದರು, ಶಿವ.ಪಾರ್ವತಿಯ ಸಂಗಮದಿಂದ ಜನಿಸಿದ ಏಳು-ದಿನದ

ಮಗು ಷಣ್ಮುಖ ತಾರರ್ಕ ಸಂವಾಹದ ಸಂಹಾರ ಮಾಡುತ್ತದೆಂದು ಬ್ರಹ್ಮ ಅನುಗ್ರಹಿಸಿದ. ಆದರೆ ಆದ ಶಿವ ಗಾಢವಾಡ ತಪ್ಪಸಿನಲ್ಲಿ ಮಗ್ನನಾಗಿದ್ದ ಪಾರ್ವತಿಯೂ ವ್ರತ ನಿರತಳಾಗಿದ್ದಳು ಶಿವನ ಧ್ಯಾನಭಂಗ ಮಾಡಲು ಯಾರಿಗೂ ಧೈರ್ಯ ಸಾಲದು ಆಗ ದೇವತೆಗಳಿಂದ ಪ್ರೇರೇಪಿತನಾದ ಕಾಮ ಲೋಕಕಲ್ಯಾಣಾರ್ಥವಾಗಿ ಶಿವನ ಪೂಜೆಗೆ ತಪೋಭಂಗ ಮಾಡಲು ಯತ್ನಿಸಿ ತನ್ನ ಹೂಬಾಣವನ್ನು ಶಿವನ ಮೇಲೆ ಪ್ರಯೋಗಿಸಿದ ವಿಚಲಿತನಾದ ಶಿವನು ಕ್ಷಣಕಾಲ ಕಾಮವಿಚಾರಕ್ಕೆ ತುತ್ತಾಗಿ ಹಣೆಗಣ್ಣು ತೆರೆದ[೮] "ಶಿವನ ತನ್ನ ಉರಿ ನೇತ್ರದಿಂದ ಕಾಮನನ್ನು ಸುಟ್ಟು ಹಾಕುವ ಪ್ರತೀಕವಾಗಿ ಈ ಹಬ್ಬ ಆಚರಣೆಯಲ್ಲಿದೆ" ಅಗ್ನಿರೂಪದ ಆ ಫಾಲಾಕ್ಷವನ್ನು ತೆರೆದದ್ದೆ ತಡ, ಮನ್ಮಥ ಬೂದಿಗಾಳಿಯಾಗಿ ಧರೆಗುರುಳಿದ ಶಾಮ ಅಂಗನಾದ, ಅವನ ಸ್ಮರಣೆಗಾಗಿ ಪಾಲ್ಗುಣದ ಶುದ್ದ ಹುಣ್ಣಿಮೆಯಂದು "ಕಾಮದಹನ" ಮಾಡುವ ರೂಡಿ ಬೆಳಸಿಕೊಂಡಿದ್ದರು ಎಂದು ವಿವರವಾಗಿ ಹೇಳುತ್ತಾರೆ. ಮಂಗಾರವಾಡಿಗರು ಧಾರ್ಮಿಕವಾಗಿ ಸಂಪ್ರದಾಯಬದ್ದವಾಗಿ ಮಾಡುತ್ತಾರೆ.

*** ಆಚರಣೆ**

ಈ ಹಬ್ಬದಲ್ಲಿ ಜನ ಕಟ್ಟಿಗೆಗಳನ್ನು ಮತ್ತು ಕುಳ್ಳುಗಳನ್ನು ರಾಶಿಹಾಕಿ ಕಾಮವನ್ನು ಸುಡುತ್ತಾರೆ. ಆ ಬೂದಿಯನ್ನು ಭೂಮಿಗೆ ಸೇರಿಸಿದರೆ ಸಮೃದ್ಧ ಬೆಳೆಬರುತ್ತದೆಂದು ರೈತರ ನಂಬಿಕೆ ಕೆಲವು ಕಡೆ "ಕಾಮದಹನ"ದ ಬೂದಿಯನ್ನು ಮನೆಗೆ ತಂದು ಅದನ್ನು ಬಿತ್ತುವ ಬೀಜಗಳಿಗೆ ಬೆರಸಿ ಇಡುತ್ತಾರೆ, ಎಂದು ಹೇಳುತ್ತಾರೆ. ಮತ್ತು ರಂಗು ರಂಗಿನ ಓಕುಳಿ ನೀರ. ಈ ಎರಜಾತಕ್ಕೆ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆ ಇವೆ, ಕೃಷ್ಣ, ಗೋಪಿಕೆಯರ, ಸರಸ ಕ್ರೀಡೆಗಳಲ್ಲಿ ಈ ರಂಗಿನಾಟ ಅಮರತ್ವ ಪಡೆದಿದೆ. ಚೆಂಬಣ್ಣದ ಓಕುಳಿ ನೀರು ಪ್ರೀತಿಯ ಸಂಕೇತ ಹೋಳಿ ದಿನದಂದು ಹೋಳಿಗೆ ಊಟಮಾಡುವ ರೂಢಿ ಪ್ರಚಲಿತದಲ್ಲಿದೆ. ಮತ್ತೆ ಕೆಲವೊಂದು ಸಮುದಾಯಗಳು ಮತ್ತು ಬುಡಕಟ್ಟುಗಳು ಆದಿವಾಸಿಗಳು ವಸಂತಮಾಸದ ರಂಗ ಪಂಚಮಿಯವರೆಗೂ ನಡೆದು ಹಬ್ಬದ ಸಡಗರ ಮತ್ತಷ್ಟು ಹೆಚ್ಚುಸಿತ್ತಾರೆ. ಹೀಗೆ ಹಬ್ಬಗಳು ಮತ್ತು ಆಚರಣೆಗಳು ಯಥವತ್ತಾಗಿ ಕಾಲಕ್ಕೆ ತಕ್ಕಂತೆ ಮುಂದುವರೆಸಿಕೊಂಡು ಹೊತ್ತಿರುವ ಬುಡಕಟ್ಟುಗಳಲ್ಲಿ ಮಂಗಾರಡಿಗರ ಮಹತ್ವ ಪಾತ್ರ ನಿರ್ವಹಿಸುತ್ತಾರೆಂಬುದು ಅಧ್ಯಯನ ಮೂಲಕ ತಿಳಿದುಬರುತ್ತದೆ.

೪.೩.೫ ಹಿರಿಯರ ಹಬ್ಬ

ದಸರೆಯ ಹಬ್ಬದ ದಿನದಂದು ಮಂಗಾರವಾಡಿಗರು ಹಿರಿಯರ ಹಬ್ಬವನ್ನು ಆಚರಿಸುತ್ತ ಬಂದಿರುವಂತಹ ಒಂದು ಪದ್ಧತಿಯಾಗಿದೆ. ಸಾಮಾನ್ಯವಾಗಿ ಒಂದು ವರ್ಷದಲ್ಲಿ ಒಳ್ಳೆಯ ದಿನವನ್ನು ನೋಡಿ ಈ ಹಬ್ಬವನ್ನು ಆಚರಿಸಿದರೆ ಮುಂದಿನ ದಿನಗಳು ಅಲ್ಪಸ್ವಲ್ಪ

ವ್ಯತ್ಯಾಸಗಳು ಕಂಡು ಬರುತ್ತವೆ. ಈ ಹಬ್ಬವನ್ನು ಒಂದೆರಡು ದಿನಗಳು ಹಿಂದೆ-ಮುಂದೆ ಆಚರಿಸುತ್ತಾ ಬಂದಿದ್ದಾರೆ. ಪ್ರತಿವರ್ಷವು ಈ ಹಬ್ಬವನ್ನಾಚರಿಸುವ ತಿಥಿಗಳು ಬೇರೆ ಬೇರೆಯಾಗಿರುತ್ತವೆ, ಹಬ್ಬ ಆಚರಿಸುವುದು ಸಂಪ್ರದಾಯ ತಮ್ಮೊಂದಿಗಿಲ್ಲದ ತಮ್ಮ ಕುಲದ ಹಿರಿಯರನ್ನು ನೆನಪಿಸಿಕೊಳ್ಳುವ ಆ ಮೂಲಕ ತಮ್ಮ ಕುಲದ ಹೆಚ್ಚುಗಾರಿಕೆಯನ್ನು ಸಂಭ್ರಮಿಸುವ ಹಬ್ಬ ಹಿರಿಯರ ಹಬ್ಬವೆಂದು ಆಚರಿಸುತ್ತಾರೆ. ಈ ಹಬ್ಬವನ್ನು ಆಚರಿಸುವಾಗ ಮಂಗಾರವಾಡಿಗರು ತಮ್ಮ ಬಂಧುಬಾಂದವರನ್ನು ಕರೆತಂದು ಸಂಭ್ರಮ ಸಡಗರಗಳಿಂದ ಹಿರಿಯರ ಹಬ್ಬವನ್ನು ಆಚರಿಸುತ್ತಾರೆ. ಮನೆಯ ಹಿರಿಯರ ಆಚರಣೆಗೆ ಬಂಧುಬಳಗದವರು ಬಂದು ಆಚರಣೆಯಲ್ಲಿ ಭಾಗವಹಿಸುತ್ತಾರೆ. ಮಂಗಾರವಾಡಿಗರು ಹಿರಿಯ ನೆನಪಿನ ಗೋಷ್ಠಿಯ ಆಸೆ, ಆಕಾಂಕ್ಷೆಗಳ ಮೇರೆಗೆ, ಮನೆಗೊಂದು ಕೋಳಿಗಳನ್ನು ಬಲಿಕೊಡುವುದು ಕಂಡು ಬರುತ್ತದೆ.

ಬಲಿಕೊಟ್ಟು ಕೋಳಿಗಳನ್ನು ಅಡುಗೆ ಮಾಡಿ ಎಲ್ಲ ಬಂಧು ಬಳಗದವರು ಕೂಡಿ ಊಟ ಮಾಡಿಕೊಂಡು ಹೋಗುತ್ತಾರೆ. ಮತ್ತೆ ಮನೆ ದೇವತೆಗಳನ್ನು ಸಹ ಪೂಜೆ ಮಾಡಿ ನಮಸ್ಕರಿಸಿ ನಮ್ಮನ್ನು ಚನ್ನಾಗಿ ಇಡಲೆಂದು ಬೇಡಿಕೊಳ್ಳುತ್ತ, ತಮ್ಮ ಕುಲದ ಹಬ್ಬಗಳು ಆಚರಿಸುತ್ತಾ ಬಂದಿರುವಂತಹದು ತಿಳಿದು ಬರುತ್ತದೆ.

ಹೀಗೆ ಮಂಗಾರವಾಡಿಗರಲ್ಲಿ ಹಬ್ಬ ಮತ್ತು ಆಚರಣೆಗಳು ಮಾಡುತ ಬಂದಿರುವುದು ಕಂಡು ಬರುತ್ತದೆ. ಭಾರತದ ಬುಡಕಟ್ಟುಗಳಲ್ಲಿ ಮತ್ತು ಅಲೆಮಾರಿಗಳು ಎಲ್ಲಾ ಕಡೆಗಳಲ್ಲು ಹಬ್ಬ ಆಚರಿಸುತ್ತ ಒಲೆಯಿಲ್ಲದ ಮನೆಯಿಲ್ಲ, "ತಮಟೆಯಿಲ್ಲದ ಊರಿಲ್ಲ ಮತ್ತು ಹಬ್ಬವಿಲ್ಲದ ಸಮುದಾಯಗಳಿಲ್ಲ" ಎಂಬಂತೆ ಸಣ್ಣ ಪುಟ್ಟ ಸಮುದಾಯಗಳಲ್ಲಿಯು ಒಂದಲ್ಲ ಒಂದು ಹಬ್ಬದ ಆಚರಣೆಯನ್ನು ನೋಡಬಹುದು ಬಹುಃಶ ಮನುಷ್ಯನ ನಂಬಿಕೆ ಅಂದರೆ ಒಳ್ಳೆಯದನ್ನು ಮಾಡಿದವರ ಉಪಕಾರವನ್ನು ಮರೆಯಬಾರದು ಹಾಗೆ ಮರೆತರೆ ಅದು ಒಳ್ಳೆಯದಲ್ಲ ಎಂಬ ಭಾವನೆಯಿಂದ ಈ ಆಚರಣೆಗಳನ್ನು ಆರಂಭಿಸಿಕೊಂಡು ಬಂದಿರುವಂತಹದು ಕಂಡುಬರುತ್ತದೆ ಹಬ್ಬದ ಸಂಪ್ರದಾಯಗಳು ಋತುಮಾನಕ್ಕನುಸಾರವಾಗಿ ತಮ್ಮ ತಮ್ಮ ಜನಾಂಗದಲ್ಲಿ ಬೆಳೆಸಿಕೊಂಡು ಬಂದಿದ್ದಾರೆ. ಬುಡಕಟ್ಟುಗಳ ಹಬ್ಬಗಳ ಒಂದು ಹಿನ್ನೆಲೆಯಲ್ಲಿ ನೋಡುವುದಾದರೆ ಅವುಗಳಲ್ಲಿ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಬದುಕಿನ ಪ್ರತೀಕದ ಆಚರಣೆಗಳಾಗಿವೆ. ಹೀಗೆ ಆಚರಣೆಯ ಎಲ್ಲಾ ಸಮುದಾಯ ಆದಿವಾಸಿ ಬುಡಕಟ್ಟುಗಳು ಅಲೆಮಾರಿಗಳು ನಗರಗಳಲ್ಲಿ ಸಂಪ್ರದಾಯ ಮತ್ತು ಸಂಸ್ಕೃತಿಗಳಲ್ಲಿ ರೂಪುಗೊಂಡಿರುವ ಹಬ್ಬ ಹರಿದಿನಗಳ ನಾನಾ ವಿಶಿಷ್ಟತೆಗಳಿಂದ ಕೂಡಿದೆ ಎಂಬುದು ಈ ಅಧ್ಯಯನದಿಂದ ಕಂಡುಬರುತ್ತದೆ.

೪.೪ ನಂಬಿಕೆ ಮತ್ತು ಸಂಪ್ರದಾಯಗಳು

ಆಚರಣೆ ಮತ್ತು ನಂಬಿಕೆಗಳ ಮೊತ್ತವೇ ಸಂಪ್ರದಾಯಗಳು "ವರ್ಜಿಲ್ ಹೇಳುವಂತೆ ಮೂಢನಂಬಿಕೆಗಳು ಒಂದು ಆಧಾರ ರಹಿತ ಪದ್ದತಿ ಅಥವಾ ನಂಬಿಕೆ." ಹೆಣ್ಣು ಮಕ್ಕಳಲ್ಲಿರುವ ನಂಬಿಕೆಗಳು ಸಂಪ್ರದಾಯಗಳು ಆಕೆಯನ್ನು ಆಚರಣೆಯಲ್ಲಿ ತೊಡಗುವಂತೆ ಮಾಡುವಂತಹದು ಕಂಡುಬರುತ್ತದೆ. ಆಕೆಯ ಪಡೆಯಬೇಕಾದ ಸ್ಥಾನಕ್ಕಾಗಿ ಅದರ ಔನತ್ಯ ರಕ್ಷಿಸಿಕೊಳ್ಳುವಲ್ಲಿ ಹಲವಾರು ಸಮುದಾಯಗಳು ಬುಡಕಟ್ಟುಗಳು ಒಂದಲ್ಲ ಒಂದು ನಂಬಿಕೆ ಮತ್ತು ಸಂಪ್ರದಾಯಗಳನ್ನು ಆಚರಿಸಿಕೊಂಡು ಬರುತ್ತಿವೆ. ಅನೇಕ ಶತಶತಮಾನಗಳಿಂದ ಶೋಷಣೆಗೆ ಒಳಗಾದ ಮಹಿಳೆಯು ಪುರುಷನ ಆಧೀನ ಅವಳಿಗೆ ಯಾವುದೇ ಒಂದು ಸ್ವಾತಂತ್ರ್ಯ ಹಿಂದೂ ಸಂಪ್ರದಾಯದಲ್ಲಿ ಕಂಡುಬರುವುದಿಲ್ಲ. ಮಂಗಾರವಾಡಿಗರು ತಮ್ಮ ಸಂಸ್ಕೃತಿಯ ಒಂದು ನೆಲೆಯಲ್ಲಿ ಬೆಳಸಿಕೊಂಡು ಬಂದಿರುವಂತಹ ಅನೇಕ ಆಚರಣೆಗಳು ಮತ್ತು ಸಂಪ್ರದಾಯಗಳು ಇಂದಿನ ದಿನಗಳಲ್ಲಿ ಯಥಾವತ್ತಾಗಿ ಮುಂದುವರೆಸಿಕೊಂಡು ಸಮುದಾಯಗಳಲ್ಲಿ ಬುಡಕಟ್ಟುಗಳಲ್ಲಿ ಆಚಾರ, ವಿಚಾರ, ನಡೆ–ನುಡಿ ಹಾವ ಭಾವಗಳು ತಮ್ಮ ಸಂಸ್ಕೃತಿಯ ನೆಲೆಯಲ್ಲಿ ಅಧೀನದಲ್ಲಿದ್ದಾಳೆಂದು ಹೇಳಬಹುದಾಗಿದೆ. ಬುಡಕಟ್ಟುಗಳ ಒತ್ತಡ, ಅವಳ–ಜೀವನ ಕ್ರಮದ ಅಭದ್ರತೆಯಿಂದ ಕೂಡಿದು ಇಂಥಹ ಒಂದು ಬದುಕು ಸೃಷ್ಠಿಯಾಗಿತೆಂದು ಹೇಳುತ್ತದೆ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಪ್ರತಿಯೊಂದು ಸಮುದಾಯಗಳು ಕಾರಣಿ ಪುರುಷರೆಂದರೆ ಪುರಷರೆ, ಈ ಕಾರಣಕ್ಕಾಗಿ ಪುರುಷನ ಸಂರಕ್ಷಣೆಯ ಹೆಣ್ಣಿನ ಜವಾಬ್ದಾರಿಯಾಗಿ ಮಂಗಾರವಾಡಿಗರಲ್ಲಿ ಮುಖ್ಯವಾಗಿರುವಂತಹದು ಕಂಡುಬರುತ್ತದೆ. ಮಹಿಳೆಯು ಪಾತ್ರ ಪ್ರಮುಖವಾಗಿರುವಂತಹದು ಕಂಡುಬರುತ್ತದೆ.

ಮಹಿಳೆಯ ಸಂಪ್ರದಾಯ ಮತ್ತು ಆಚರಣೆಯಲ್ಲಿ ಬೆಳೆದುಬಂದಿರುವ ಅನೇಕ ಸಾಂಸ್ಕೃತಿಕ ವಿಚಾರಗಳು ಮೂಲಸೃಷ್ಠಿಕರ್ತ ಎಂದರೆ ಮಹಿಳೆ[೧೦] "ಡಿ.ಡಿ.ಕೊಸಾಂಬಿಯವರು ಹೇಗೆ ವಿವರಿಸುತ್ತಾರೆ. "ನಾಶಗೊಳಿಸುವ ಪ್ರವೃತ್ತಿಗಿಂತ ವಿಲೀನಗೊಳಿಸಿಕೊಳ್ಳುವ ಪ್ರವೃತ್ತಿಯೇ ನಮ್ಮ ಇತಿಹಾಸದಲ್ಲಿ ಕಂಡುಬರುತ್ತದೆ. ಈ ವಿಲೀನಗೊಳಿಸಿಕೊಳ್ಳುವ ಕ್ರಿಯೆಯಲ್ಲಿ ಸಮಾನತೆಯ ಸಮಾವೇಶವಿಲ್ಲ. ಅರಣ್ಯವಾಸಿಗಳು ನಾಗರೀಕರ ಅಧೀನದಲ್ಲಿ ಬಂದು ಸೇರುತ್ತಾರಷ್ಟೇ ಈ. ವಿಲೀನ ಕ್ರಿಯೆಯಲ್ಲಿ ಸಾಮಾಜಿಕ ಸಂಗತಿಗಳು ಆರಾಧನೆಗಳು, ಒಳಗೊಳ್ಳುವಾಗ, ಅಲೆಮಾರಿಗಳು ದೈವಗಳು ನಾಗರಿಕರ ದೇವರುಗಳ ಹೆಂಡತಿಯರಾಗಿ, ವಾಹನಗಳಾಗಿ, ಭಕ್ತರಾಗಿ ಅವತಾರಗೊಂಡು ಅಂಗೀಕಾರಗೊಳ್ಳುತ್ತವೆ. ಈ ವಿಲೀನದ ನಂತರವೂ ನಾಗರೀಕರ ಪೂಜೆಗಳದೇ ಮೇಲುಗೈಯಾಗುತ್ತದೆ" ಎನ್ನುತ್ತಾರೆ.ನಂಬಿಕೆ, ಪೂಜೆ ಪುನಸ್ಕಾರ ಹಬ್ಬಗಳು

ಹರಿದಿನಗಳು, ವೃತ್ತಗಳು ಹಿಂದೆ ಕೆಲಸ ಮಾಡಿರುವುದನ್ನು ಬುಡಕಟ್ಟುಗಳೆಂದು ತಿಳಿಯಬಹುದಾಗಿದೆ ಸಂಸ್ಕೃತಿಯು ತನ್ನಲ್ಲಿ ತನಗಿರುವ ನಂಬಿಕೆಯಾಗಿರಬಹುದು ಅಥವಾ ಸಮುದಾಯಗಳಲ್ಲಿ ನಂಬಕೆಯಿಲ್ಲದೆ ಹೋದರೆ ಸ್ಥಿತಿ ಭೂಮಿನಾಶವಾದರು ಈ ಸ್ಥಿತಿಯಲ್ಲಿರುವವರು ವ್ಯಕ್ತಿಗಳು ಮಹಿಳೆಯರು, ಹುಚ್ಚನಾಗಬಹುದು ಸಿನಿಕನಾಗುತ್ತಾರೆ. ಹೀಗಾಗಿ ಪ್ರತಿಯೊಬ್ಬರ ಬಾಳಿನಲ್ಲಿ ನಂಬಿಕೆ ಅಗತ್ಯ ಯಾವ ನಂಬಿಕೆಗಳು ಸಮುದಾಯಗಳು ಜೀವನದ್ವಂದಕ್ಕೂ ಬೆಳಸಿಕೊಂಡು ಬಂದಿರುತ್ತವೆ. ಅವೇ ಸಮರ್ಪಕವೆಂದು ತಿಳಿಯಬಹುದಾಗಿದೆ. ಹಾಗೆಯೇ ಸಮರ್ಪಕವಾದ ನಂಬಿಕೆಗಳು ಎಂದು ಭಾವಿಸಲಾಗಿದ್ದು ನಂಬಿಕೆಗಳು ಮೂಢನಂಬಿಕೆಗಳೆಂದು ತಿಳಿದುಬರುತ್ತದೆ.

ಬುಡಕಟ್ಟುಗಳ ಒಂದು ಸಾಮಾಜಿಕ, ಸ್ಥಿತಿಗತಿ ನೋಡಿದಾಗ ಪರಂಪರಾನುಗತವಾಗಿ ಅನುಸರಿಸುತ್ತಾ ಬಂದಿರುವರು ಕ್ರಿಯಾ ವಿನ್ಯಾಸವನ್ನು ಸಂಪ್ರದಾಯವೆಂದು ಹೇಳುತ್ತೇವೆ. ಕೇವಲ ಒಬ್ಬ ವ್ಯಕ್ತಿಯ ನಡವಳಿಕೆ ಸಂಪ್ರದಾಯ ಎನಿಸಿಕೊಳ್ಳುವುದಿಲ್ಲ. ಅದು ಸಾಮೂಹಿಕವಾಗಿ ಒಪ್ಪಿತವಾದದಾಗಿರಬೇಕು ಸೃಷ್ಠಿ ಶಕ್ತಿ ಮತ್ತು ವಿನಾಶದಶಕ್ತಿ ಈ ಎರಡು ಗಣಗಳನ್ನು ಹೊಂದಿರುವವಳು ನಾರಿ ಎಂಬ ಭಾವನೆ ಇದೆ ನಂಬಿಕೆ ಭಾರತೀಯ ಬುಡಕಟ್ಟುಗಳಲ್ಲಿ ಮುಖ್ಯವಾಗಿಕಂಡುಬರುತ್ತದೆ ಒಂದು ಕಡೆ ಸೃಷ್ಠಿಯಾಗಿ ಮೂಢಿಬಂದಿರುವ ಆದಿಶಕ್ತಿಯನ್ನೇ ನಾಶ ಮಾಡುವವಳಾಗಿ ಮಾರಿಯ ರೂಪದಲ್ಲಿ ಕಂಡುಬರುತ್ತಾಳೆ. ಮಾತೃಪ್ರಧಾನತೆಯಲ್ಲಿ ಶಕ್ತಿ ರೂಪಿಣಿಯಾದ ಸ್ತ್ರೀ ಪಿತೃ ಪ್ರಧಾನತೆಯ ವ್ಯವಸ್ಥೆಗೆ ಸಮಾಜ ಪರಿವರ್ತಿತವಾಗುತ್ತ ಬಂದಂತೆ ನಾಶಮಾಡುವವಳಾಗಿ ಮಾರ್ಪಟ್ಟಳ್ಳು ಎಂಬುದು ಇವರ ವಾದವಾಗಿದೆ.

ಭಾರತ ಅನೇಕ ಬುಡಕಟ್ಟುಗಳಲ್ಲಿ ದೇವದಾಸಿ ಪಂಥದ ಉಲ್ಲೆಖಗಳು ಕಂಡು ಬರುತ್ತವೆ. ೬–೭ನೇ ಶತಮಾನದಲ್ಲಿ ದೊರೆಯುತ್ತವೆ. ಅಂದರೆ ಮಂಗಾರವಾಡಿಗರಲ್ಲಿ ಈ ಪದ್ದತಿ ಕಂಡುಬರುವುದಿಲ್ಲ. ಮಹಿಳೆಯ ಮೇಲಿನ ಲೈಂಗಿಕ ಹಿಡಿತ ಹೆಚ್ಚಾಗುತ್ತಾ ಬಂದಂತೆ ಅದನ್ನು ದಾಸ್ಯದ ಸ್ವರೂಪವಾಗಿ ದೇವದಾಸಿ ಪದ್ದತಿ, ಕಂಡುಬರುತ್ತದೆ. ದೇವದಾಸಿಯರು ತಾವು ನಂಬುವ ಎಲ್ಲಮ್ಮನಿಗೆ ತಮ್ಮನು ಅರ್ಪಿಸಿಕೊಂಡಿದ್ದನ್ನು ಆಚರಣೆಯಲ್ಲಿ ಹಿಂದೂ ಸಂಪ್ರದಾಯದಲ್ಲಿ ಕಂಡುಬರುತ್ತದೆ. ಈ ಪಂಥವು ಇನ್ನೂ ಪ್ರಚಲಿತದಲ್ಲಿದೆ ಲೈಂಗಿಕ ಆಪಾದನೆಯಿಂದ ಗಂಡನ ಶಾಪಕ್ಕೆ ಒಳಗಾದ ರೇಣುಖಾ ಎಲ್ಲಮ್ಮನಾಗಿ ಈ ಸಂಪ್ರದಾಯದೊಂದಿಗೆ ಹೆಣೆದುಕೊಂಡಿರುವುದು ಮತ್ತಷ್ಟು ಅಧ್ಯಯನಕ್ಕೆ ಎಡೆಮಾಡಿಕೊಂಡಿದೆ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಕಾಲಕಳೆದಂತೆ ಸಂಪ್ರದಾಯಗಳನ್ನು ತನ್ನ ಹಿಡಿತಕ್ಕೆ ತೆಗದುಕೊಂಡ ದುರಂತ ಈ ಆಚರಣೆಯಲ್ಲಿರುವುದು ಕಂಡುಬರುತ್ತದೆ, ಮಾತೃಪ್ರಧಾನತೆಯಿಂದ ಪಿತೃಪ್ರಧಾನತೆಯ ಕಡೆಗೆ ಸಾಗಿಬಂದ ಸಮಾಜದ ಚಿತ್ರಣ ಸಮುದಾಯಗಳಲ್ಲಿ ಕಂಡುಬರುತ್ತದೆ.

ಮಾತೃಪ್ರಧಾನತೆಯಿಂದ ಎಲ್ಲಮ್ಮ ಶಿವನ ಆರಾಧಕರನ್ನು, ಭಕ್ತರನ್ನು ತನ್ನ ಆಚರಣೆಯ ಕಡೆಗೆ ಬದಲಿಸಿಕೊಳ್ಳುವುದರಲ್ಲಿದೆ. ಸ್ತ್ರೀಯನ್ನು ಲೈಂಗಿಕವಾಗಿ ಶೋಷಿಸುವ ಪುರಷ ಸಮಾಜದ ಸಂಕೇತವಾಗಿ ರಾಜನನ್ನು ತನ್ನ ಭಕ್ತನನ್ನಾಗಿ ಪರಿವರ್ತಿಸಿಕೊಳ್ಳುತ್ತಾಳೆ. ಈ ಸಂಪ್ರದಾಯದಲ್ಲಿ ಸ್ತ್ರೀಯರಿಗೆ ಗೌರವ ಹೆಚ್ಚು ಇವರು ಯಾರೊಂದಿಗೆ ಬೇಕಾದರೂ ಯಾವ ಸಮುದಾಯದಲ್ಲಿಯೂ ಹೆಚ್ಚಾಗಿ ಜನಪ್ರಿಯತೆಯನ್ನು ಸಾಧಿಸುತ್ತಾರೆ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ನಿರ್ಬಂಧಗಳನ್ನು ಮೆಟ್ಟಿನಿಲ್ಲುವ ಆಶಯ ಈ ಸಂಪ್ರದಾಯದಲ್ಲಿ ಕಂಡುಬರುತ್ತದೆ. ಆದರೆ ಕಾಲ ಕಳೆದಂತೆ ಮಹಿಳೆಯ ಈ ರೀತಿಯ ಬದುಕು ಬದಲಾವಣೆಯನ್ನು ಬಯಸುವಂತಹದು ಪಿತೃಪ್ರಧಾನ ವ್ಯವಸ್ಥೆಯಲ್ಲಿ ಶೋಷಣೆಗೆ ಒಳಗಾಗಿ ಲೈಂಗಿಕ ಕಾರಣಕ್ಕಾಗಿಯೇ ಬಡವರ ಹೆಣ್ಣು ಮಕ್ಕಳನ್ನು ಈ ಆಚರಣೆಯಲ್ಲಿ ತಳ್ಳಲಾದ ಸಂದರ್ಭಗಳು ಬುಡಕಟ್ಟುಗಳಲ್ಲಿ ಮುಖ್ಯವಾಗಿ ಕಂಡುಬರುತ್ತವೆ. ಸಂದರ್ಭಗಳು ಬುಡಕಟ್ಟುಗಳಲ್ಲಿ ಕಂಡುಬರುತ್ತವೆ. ಈ ಸಂಪ್ರದಾಯದಲ್ಲಿ ದೇವದಾಸಿಯಾಗಿ ದೀಕ್ಷೆ ಪಡೆದ ಮಹಿಳೆ ಮಾಡಬೇಕಾದ ಆಚರಣೆಗಳು ಅದರೊಂದಿಗೆ ಹೆಣೆಯಲ್ಪಟ್ಟ ನಂಬಿಕೆಗಳಿಗೆ ಅನಂತರದಲ್ಲಿ ಸ್ಥಾನವಿಲ್ಲದಂತಾಗಿ ಮೂಲವಾಗಿ ಅವರು ಮೋಹವನ್ನು ಮಾರಿಕೊಳ್ಳುವ ಸಂದರ್ಭಗಳು ಎದುರಾಗುತ್ತಿದ್ದವೆಂದು ಹೇಳುತ್ತಾರೆ.

ಈ ಪಂಥದಲ್ಲಿ ದೀಕ್ಷೆ ಪಡೆದ ಮಹಿಳೆಯರನ್ನು ಪುರುಷರು ಮದುವೆ ಆಗುವಂತಿಲ್ಲ, ದೀಕ್ಷೆ ಪಡೆದ ಮಹಿಳೆಯರು ಸೀರೆ, ಉಟ್ಟು ಬಳೆ ತೊಟ್ಟು ಹಣೆಗೆ ಕುಂಕುಮ ಇಟ್ಟಿರಬೇಕು ಇವರು ಚೌಡಿಕೆಯನ್ನು ಜೊತೆಯಲ್ಲಿಟ್ಟಿರಬೇಕು ಹಾಡು ಹಾಡುತ್ತಿರುವ ಈ ಹಾಡುಗಾರಿಕೆ ಹಿಂದಿನವರು ಕೂಡಾ ಹಾಡಬೇಕು. ಮಹಿಳೆಯರು ಎದುರಿಸುತ್ತಿರುವ ಅಪಾಯಗಳನ್ನು ಈ ಸಂಪ್ರದಾಯದ ಹಿನ್ನೆಲೆಯನ್ನು ಅರಿತು ಕೊಂಡು ಮುಂದೆ ಸಾಗಬೇಕಾಗಿದೆ ಬುಡಕಟ್ಟು ಸಮುದಾಯಗಳು ಮಹಿಳೆಯರು ತಮ್ಮ ಬೌದ್ಧಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಕಡೆ ಹೆಚ್ಚಿನ ಗಮನ ಹರಿಸುವುದಲ್ಲದೆ ಎಲ್ಲೆಲ್ಲಿ ಹೆಣ್ಣೆಂದರೆ ದೇಹವೆಂಬ ಭಾವನೆ ವ್ಯಕ್ತವಾಗುತ್ತದೋ ಅಲ್ಲಿನ ಅಪಾಯಗಳನ್ನು ಎದುರಿಸುವ ಬುಡಕಟ್ಟುಗಳು ಹೆಚ್ಚಾಗಿ ಕಂಡು ಬರುತ್ತಿವೆ. ಅವುಗಳು ಒಂದು ಸರಿಯಾದ ದಿಸೆಯಲ್ಲಿ ಮಾರ್ಗದರ್ಶನ ನೀಡಬೇಕಾದ ಕರ್ತವ್ಯವು ಸಮುದಾಯದಾಗಬೇಕಾಗಿದೆ. ದೇವದಾಸಿ ಪದ್ದತಿ ಬಹುಪಾಲು ಆಚರಣೆಗಳಲ್ಲಿ ಬುಡಕಟ್ಟುಗಳಲ್ಲಿ ಹೆಚ್ಚಾಗಿದೆ. ಅವರನ್ನು ಬಡಜನರ ಹಾಗೂ ಶ್ರೇಣೀಕರಣದಲ್ಲಿ ಕೆಳಜಾತಿಯವರಲ್ಲಿ ಮಾತ್ರ ರೂಢಿಯಲ್ಲಿರುವಂತಹದು ತಿಳಿದುಬರುತ್ತದೆ. ಸಾಮಾಜಿಕ ಮನ್ನಣೆಯ ದೊರೆತು ಇಂಥ ಆಚರಣೆಗಳು ಹೆಚ್ಚಾಗುತ್ತಾ ಬಂದಿತ್ತು. ಆದರೆ ಮೇಲ್ವರ್ಗಗಳಲ್ಲಿ ಆಳುವವರ್ಗದಲ್ಲಿ ಹೆಣ್ಣು ದೂರ ಇಡುವ ನಿರ್ಭಂದ ಹಾಕುತ್ತಿದ್ದರು ಹೆಣ್ಣಿನ ದೇಹಕ್ಕೆ ಕೊಟ್ಟ ವಿಶೇಷ ಒತ್ತು ನಿಷೇಧಗಳಿಗೆ ಕಾರಣವಾಯಿತ್ತು.

ಸಂಪ್ರದಾಯಗಳಾಗಲಿ, ಮೂಢನಂಬಿಕೆಗಳಾಗಲಿ, ಯಾವುದೋ ಒಂದರಲ್ಲಿ ರೂಪುಗೊಂಡು ಅವಶೇಷಗಳಾಗಿ ಉಳಿದುಬಂದಿವೆಯೆಂದು ಅವು ಅವಿದ್ಯಾವಂತರಿಗೆ ಸೀಮಿತವಾದುದೆಂದು ಭಾವಿಸುವುದು ಸರಿಯಲ್ಲ, ಸಮುದಾಯಗಳ ಮನುಷ್ಯರು ಮೂಢ ನಂಬಿಕೆಗೆ ಒಳಗಾದವರೇ, ಹಲವಾರು ಮೂಢನಂಬಿಕೆಗೆ ಹೆಚ್ಚಾಗಿಯೂ ಕೆಲವರು ಕಡಿಮೆ ಪ್ರಮಾಣದಲ್ಲಿ ಒಳಗಾಗಿರಬಹುದ ತಿಳುವಳಿಕೆ ಹೆಚ್ಚಾದಂತೆ ಮೂಢನಂಬಿಕೆಯ ಪ್ರಮಾಣ ಕಡಿಮೆಯಾಗಬಹುದು ಎಂಬುದು ಮನುಷ್ಯ ಬಯಕೆಯಾಗಿದೆ ಅದು ಸಹಜವಾದುದು ಎಂಬುದು ಗೋಚರಿಸುವಂತಹ ಪ್ರಮುಖ ವಿಷಯವೆಂದು ಹೇಳಬಹುದಾಗಿದೆ.

ಬುಡಕಟ್ಟು ಸಮುದಾಯದ ವ್ಯಕ್ತಿ ಯಾವ ಸಂದರ್ಭದಲ್ಲಿ ಹೇಗೆ ಮೂಢನಂಬಿಕೆಗೆ ಒಳಗಾಗುತ್ತಾನೆ ಎಂಬುದು ತಿಳಿಯಬೇಕಾದರೆ ಆಯಾ ವ್ಯಕ್ತಿಗಳ ಮತ್ತು ಮಹಿಳೆಯರ ಮಾನಸಿಕ ಸ್ಥೈರ್ಯ ಹಾಗೂ ಆಯಾ ಸಂದರ್ಭಗಳನ್ನು ಗಮನಿಸುವುದು ಅಗತ್ಯ, ಅನಿಶ್ಚಿತ ಪರಿಸ್ಥಿತಿಯನ್ನು ತೆಗೆದು ಕೊಳ್ಳುವ ಶಕ್ತಿ ಎಲ್ಲರಲ್ಲಿಯೂ ಒಂದೇ ರೀತಿಯಾಗಿ ಇರುವುದಿಲ್ಲ. ಇದು ವ್ಯಕ್ತಿಯಿಂದ ವ್ಯಕ್ತಿಗೆ ಸಮಾಜದಿಂದ ಸಮಾಜಕ್ಕೆ ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುತ್ತವೆ. ವ್ಯಕ್ತಿ ಮತ್ತು ಮಹಿಳೆಯರು ಸಂಪ್ರದಾಯದಲ್ಲಿ ತೊಡಗುತ್ತಾರೆ. ಈ ಸಂಪ್ರದಾಯಗಳು ನಂಬಿಕೆಗೆ ಹತ್ತಿರವಾಗಿರುತ್ತವೆ ಎಂಬುದು ಬುಡಕಟ್ಟುಗಳ ಒಂದು ಅಭಿಪ್ರಾಯವಾಗಿದೆ.

ಮಂಗಾರವಾಡಿ ಸಮುದಾಯದವರು ನಂಬಿಕೆಗಳಿಗೆ ಮೂಢ ಸಂಪ್ರದಾಯಗಳಿಗೆ ಬದ್ದರಾಗಿರುವಂತಹದು ಕೆಲವು ನಂಬಿಕೆಗಳಿಗೆ ಒಳಗಾಗಿದ್ದಾರೆ. ಆಧುನಿಕ ಯುಗದಲ್ಲಿ ಮೂಢನಂಬಿಕೆಗಳು ಮೂಢ ಸಂಪ್ರದಾಯಗಳ ಅಸ್ತಿತ್ವದಲ್ಲಿರುವುದು ಮಾತ್ರವಲ್ಲದೆ ಹುಲುಸಾಗಿಯೂ ಬೆಳೆಯಬಹುದೆಂದು ಹೇಳಬಹುದಾಗಿದೆ. ಸ್ತ್ರೀ ಪ್ರಧಾನ ಸಾಮಾಜಿಕ ವ್ಯವಸ್ಥೆಯು ಈ ದೇವತೆಗಳ ಉಗಮದೊಂದಿಗೆ ಪಿತೃಪ್ರಧಾನಕಡೆಗೆ ಜಾರಿಕೊಂಡಿರುವುದು ತಿಳಿದು ಬರುತ್ತದೆ. ದೇವರ ಜಾತ್ರೆಯ ಸಂದರ್ಭದಲ್ಲಿ ಸಮುದಾಯದ ದೇವತೆಗಳಿಗೆ ಕುರಿ, ಕೋಣ, ಕೋಳಿ, ಬಲಿಕೊಡುವುದು ಕಾಡುವ ರೋಗಗಳು ಕಾಯಿಲೆಗಳು ದೂರಹೋಗುತ್ತವೆಂದು ನಂಬಿಕೆ ಹೊಂದಿದ್ದಾರೆ. ಈ ನಂಬಿಕೆಗಳು ಹೆಣ್ಣು ಮಕ್ಕಳಲ್ಲಿ ಬೇರೂರಿರುವಂತಹದು ಎಂಬುದು ತಿಳಿಯಬಹುದಾಗಿದೆ. ಮಹಿಳೆಯ ಹಲವಾರು, ನಂಬಿಕೆ, ಸಂಪ್ರದಾಯ ಆಚರಣೆಗಳಲ್ಲಿ ಭಕ್ತಿ ಪೂರಕವಾಗಿ ಶತಶತಮಾನಗಳಿಂದ ಹಾಗೆಯೇ ಮುಂದುವರೆದುಕೊಂಡುಬಂದಿರುವಂತಹದು ಇಂದಿನ ಅನೇಕ ಸಮುದಾಯಗಳಲ್ಲಿ ಕಂಡುಬರುತ್ತವೆ. ಮಂಗಾರವಾಡಿಗರ ಸಮುದಾಯದಲ್ಲಿ ಇಂಥಹ ಒಂದು ನಂಬಿಕೆ ಆಚಾರ, ವಿಚಾರ, ನಡೆ–ನುಡಿ, ಸಂಸ್ಕೃತಿ, ಸಂಪ್ರದಾಯಗಳೆಲ್ಲವು ಹಾಗೆಯೇ ಉಳಿಸಿಕೊಂಡು ಬಂದಿರುವುದು ತಿಳಿದುಬರುತ್ತದೆ. ಸಾಮಾಜಿಕ ಬದುಕಿನ ಜೊತೆಗೆ ಅವರುಗಳು ಹೆಣೆದುಕೊಂಡು ಬಂದ ಅನೇಕ ವಿಚಾರಗಳು ಇನ್ನು ಬಿಡದೇ ಅದೇ ರೀತಿಯಲ್ಲಿ

ಮುಂದುವರೆಸಿಕೊಂಡು ಹೋಗುವಂತಹದು ತಿಳಿಯುತ್ತದೆ ಇಂಥಹ ವ್ಯವಸ್ಥೆಯಿಂದ ದೂರ ಸರಿಯಬೇಕಾದರೆ ಮೊದಲು ಶಿಕ್ಷಣ ವ್ಯವಸ್ಥೆ ಅವರಿಗೆ ಮೊದಲು ಮೂಡಲು ಸಾಮಾಜಿಕ ಬದುಕಿನ ಎಲ್ಲಾ ಆಗುಹೋಗುಗಳನ್ನು ಅರಿಯಬೇಕಾದರೆ ಶಿಕ್ಷಣವ್ಯವಸ್ಥೆಯು ಮುಖ್ಯವಾದದುವೆಂಬುದು ತಿಳಿದುಕೊಳ್ಳಬೇಕಾಗಿದೆ. ಪರಂಪರೆಯ ಹಿನ್ನೆಲೆಗೆ ಸಾಕ್ಷಿಯಾದ ಅನೇಕ ಚಟುವಟಿಕೆಗಳು ತಮ್ಮ ವಂಶಿಕ ನೆಲೆಯಲ್ಲಿ ಹಿಂದಿನಿಂದಲೂ ಬೆಳೆದು ಬಂದಿರುವ ಅನೇಕ ವಿಚಾರಗಳು ಮುಂದುವರೆಸಿಕೊಂಡು ಹೋಗುತ್ತಿರುವ ವಿಷಯ ನಮಗೆ ಅಧ್ಯಯನದಿಂದ ತಿಳಿದುಬರುತ್ತದೆ.

ಅಡಿ ಟಿಪ್ಪಣಿಗಳು

೧. ಮಹಿಳಾ ಸಾಮಾಜಿಕತೆ –ಡಾ.ಜ್ಯೋತಿ ಶಶಿಕುಮಾರ್, ಪು.ಸಂ–೩೧

೨. ಮಹಿಳಾ ಅಧ್ಯಯನ ಸಂ–೨, ಜುಲೈ–೨೦೦೦, ಪುಟ.ಸಂ.–೪೫

೩. ಅದೇ ಪುಟ.ಸಂಖ್ಯೆ –೬೫

೪. ಮಹಿಳಾ ಅಧ್ಯಯನ, ಸಂ.೬, ಸಂಯುಕ್ತ ಸಂ,೧–೨ ಜನವರಿ–ಡಿಸೆಂಬರ್, ೨೦೦೪, ಪುಟ.ಸಂ–೧೪೧

೫. ಮಹಿಳಾ ಸಾಮಾಜಿಕತೆ ಡಾ.ಜ್ಯೋತಿ ಶಶಿಕುಮಾರ್, ಪು.ಸಂ–೮೪

೬. ವೈ.ಎಸ್.ಜ್ಯೋತಿದೇವಿ, ಪು.ಸಂ–೬೮, ೨೦೦೩(ಅಪ್ರಕಟಿತ ಪ್ರಬಂಧ)

೭. ಹಿಸ್ಟರಿ ಆಫ್ ಎಜುಕೇಷನ್ ಇನ್ ಇಂಡಿಯಾ ಡ್ಯೂರಿಂಗ್ ದಿ. ಬ್ರಿಟೀಷ್, ಪೀರಿಯಲ್, ದಿ ಚೇಂಜಿಂಗ್ ರೋಲ್ ಆಫ್ ನಮನ್, ಮುಂಬಯಿ ಸೈಯದ್ ನೂರಲ್ ಮತ್ತು ಜೆ.ಪಿ.ನಾಯಕ್, – ಪು.ಸಂ.೨೧, ೧೯೪೩

೮. ದಲಿತರ ಬದುಕು ಮತ್ತು ಸಂಸ್ಕೃತಿ ಡಾ. ಅರ್ಜುನಗೊಳಸಂಗಿ, ಪು.ಸಂ– ೨೯೮

೯. ಅದೇ ಪುಟ. ಸಂ. ३೦३

೧೦ ಪ್ರಾಚೀನ ಭಾರತದ ಚರಿತ್ರೆ, ಡಿ.ಡಿ.ಕೋಸಾಂಬಿ, ಪು.ಸಂ–೨೬, ೧೯೯೮

ಅಧ್ಯಾಯ – ೫

ಸಮಕಾಲೀನ ಸಂದರ್ಭ ಮತ್ತು ಮಹಿಳೆಯರ ಸ್ಥಿತಿಗತಿಗಳು

ಅಧ್ಯಾಯ – ೫

ಸಮಕಾಲೀನ ಸಂದರ್ಭ ಮತ್ತು ಮಹಿಳೆಯರ ಸ್ಥಿತಿಗತಿಗಳು

ಬುಡಕಟ್ಟು ಸಮುದಾಯದಲ್ಲಿ ಮಹಿಳೆ ಸ್ಥಾನ ಬಹಳ ಪ್ರಮುಖವಾದದು ಅವಳು ಎದುರಿಸುವ ಸವಾಲುಗಳು ಇಂದು ನಿನ್ನೆಯದಲ್ಲ. ಸಮಕಾಲೀನ ಸಂದರ್ಭದಲ್ಲಿ ಮಹಿಳಾ ಸ್ಥಿತಿಗತಿಗಳ ಬಗ್ಗೆ ಮಾಧ್ಯಗಳ ಮೂಲಕ ಅರಿವನ್ನು ಮೂಡಿಸುವ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನ ಭರದಿಂದ ನಡೆಸಿದರೂ ಮಂಗಾರವಾಡಿ ಸಮುದಾಯಗಳಲ್ಲಿ ಮಹಿಳೆಯರು ಸ್ವಲ್ಪ ಮಟ್ಟಿಗೆ ಬದಲಾವಣೆಯನ್ನು ಹೊಂದುತ್ತಿರುವುದು ಕಂಡು ಬರುತ್ತದೆ. ಆದರೆ "ಅಂದಿನ ಕಾಲದಲ್ಲಿ ಮಹಿಳೆಯರ ಆತ್ಮ ಚರಿತ್ರೆ, ಕಾವ್ಯ, ಕಾದಂಬರಿ ಕೃತಿಗಳಲ್ಲದೆ ಇಪ್ಪತ್ತಕ್ಕೂ ಹೆಚ್ಚು ಪತ್ರಿಕೆಗಳನ್ನು ಮಹಿಳೆಯರು ನಡೆಸುತ್ತಿದ್ದ ಬಗ್ಗೆ ಆಧಾರಗಳಿವೆ"[1] ಸ್ತ್ರೀ ಪುರಷರನ್ನು ಯಾವುದೇ ಸಮಾಜದಲ್ಲಿ ಸಂಪೂರ್ಣವಾಗಿ ಸಮಾನವೆಂದು ಪರಿಗಣಿಸುವ ಕ್ರಮ ಬೆಳೆದು ಬಂದುದೇ ಬಹಳ ಕ್ಷಣಿಕ, ಸ್ತ್ರೀಯರು ಎದುರಿಸಿದ ಮತ್ತು ಎದುರಿಸುತ್ತಿರುವ ಸಮಸ್ಯೆಗಳತ್ತ ಸವಾಲುಗಳ ಚಿಂತನೆ ನಡೆದಿರುವುದು ಇಂದಿನ ದಿನಗಳಲ್ಲಿ ಅತಿ ಅವಶ್ಯಕವೆಂದು ಹೇಳಬಹುದಾಗಿದೆ. ಮಂಗಾರವಾಡಿ ಸ್ತ್ರೀ ಸಾಮಾಜಿಕ ಜೀವನದ ಬಹುತೇಕ ಸ್ವಲ್ಪ ಮಟ್ಟಿಗೆ ನಗರ ಪ್ರದೇಶಗಳಲ್ಲಿ ವಾಸಿಸುವುದರಿಂದ ಅದರ ಬದುಕಿಗೆ ಸರ್ಕಾರ ಕೈಗೊಂಡಿರುವಂತಹ, ಕಾರ್ಯಕ್ರಮಗಳಾವುವು ಮಾಧ್ಯಮಗಳ ಮೂಲಕ ಪತ್ರಿಕೆಗಳ ಮೂಲಕ ತಿಳಿಹೇಳುವ ಕೆಲಸ ನಡೆದಿದೆ. ಅವರಲ್ಲಿಯ ಹಲವಾರು ಸಂಘ ಸಂಸ್ಥೆಗಳು ಸ್ವಸಹಾಯ ಗುಂಪುಗಳಲ್ಲಿ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ.

ಮಹಿಳೆಯರಿಗೆ ಇರುವ ಹಕ್ಕುಗಳು ಇದನ್ನು ಪಡೆಯಲು ಕಾನೂನಿನ ವಿಚಾರಗಳು ತಿಳಿಹೇಳುವ ಜಾಗೃತಿಯನ್ನುಂಟುಮಾಡುವ ಜವಾಬ್ದಾರಿ ಕುಟುಂಬಕ್ಕೆ ಸಮುದಾಯಗಳಿಗೆ

[illegible]

[illegible]

[illegible]

[illegible]

ಬುಡಕಟ್ಟುಗಳಿಗೆ ಸೇರಿರುವುದಲ್ಲದೆ ಸರ್ಕಾರಕ್ಕೆ ಸೇರಿದ್ದಾಗಿದೆ. ಇಂದು ತಕ್ಕಮಟ್ಟಿಗೆ ಕಾನೂನು ಮತ್ತು ಶಿಕ್ಷಣದ ಅಗತ್ಯವಿದೆ. ಈ ಕಾರ್ಯವನ್ನು ಸಮರ್ಪಕವಾಗಿ ನಡೆಯಬೇಕಾದರೆ. ಬುಡಕಟ್ಟುಗಳು ಆದಿವಾಸಿಗಳು ಸುಧಾರಣೆಯಾಗಬೇಕಾದರೆ ಕಾನೂನಿನ ಮತ್ತು ಶಿಕ್ಷಣದ ಅಗತ್ಯವಿದೆ. ಸರ್ಕಾರದ ಸೌಲಭ್ಯಗಳ ಬಗ್ಗೆ ಮಹಿಳೆಯರಿಗೆ ಹಕ್ಕುಗಳನ್ನು ತಿಳಿಸುವ ಕಾರ್ಯ, ದೂರದರ್ಶನ, ಆಕಾಶವಾಣಿ ಮೂಲಕ ಆಗಾಗ್ಗೆ ಪ್ರಚಾರ ಕಾರ್ಯಕ್ರಮಗಳು ಏರ್ಪಡಿಸುತ್ತಲೇ ಇರುವುದರಿಂದ ನ್ಯಾಯ ಪಡೆಯುವ ಸೌಲಭ್ಯಪಡೆಯುವ ವಿಧಾನವನ್ನು ಪ್ರತಿಯೊಬ್ಬ ಮಹಿಳೆಯು ತಿಳಿದುಕೊಳ್ಳಬಹುದು ಇಂದಿನ ದಿನಗಳಲ್ಲಿ ಮಹಿಳೆಯರು ಅಭಿವೃದ್ಧಿಯತ್ತ ಸಾಗಿರುವಂತಹ ಗಮನಾರ್ಹವಾದ ಸಂಗತಿ ಆದರೆ ಮಂಗಾರವಾಡಿ ಮಹಿಳೆಯರು ಯಾವುದೇ ಒಂದು ಸರ್ಕಾರಿ ಸೌಲಭ್ಯಗಳು ದೊರೆಯದೇ ಮತ್ತು ಶಿಕ್ಷಣದಿಂದ ಬಹಳ ದೂರ ಉಳಿದಿರುವಂತಹದು ತಿಳಿದು ಬರುತ್ತದೆ. ಅವರ ಜೀವನ ಕ್ರಮವು ಹಲವಾರು ಹಂತಗಳಲ್ಲಿ ಕಷ್ಟಕರ ಸಂಗತಿಗಳ ಒಂದು ಹಿನ್ನಲೆಯಲ್ಲಿ ಸಾಗಿಬಂದಿರುವಂತಹದು ತಿಳಿದು ಬರುತ್ತದೆ. ಸಾಮಾಜಿಕ, ಆರ್ಥಿಕವಾಗಿ, ಶೈಕ್ಷಣಿಕ ಎಲ್ಲಾ ಹಂತಗಳಲ್ಲಿ ದೂರ ಉಳಿದ್ದಿದ್ದರೆಂದು ತಿಳಿದುಬರುತ್ತದೆ.

ಇಂದಿನ ಆಧುನಿಕ ಯುಗದಲ್ಲಿ ಅವರು ಮುಂದೆ ಸಾಗಲೆಬೇಕಾದ ಸರ್ಕಾರದ ಸೌಲಭ್ಯಗಳಾದ, ವಿದ್ಯಾಭ್ಯಾಸ, ಉದ್ಯೋಗಳು ಪ್ರಶ್ನಾರ್ಥಕವಾಗಿಯೆ ಉಳಿದಿವೆ. “ಮಹಿಳೆಯರ ಪ್ರಶ್ನೆಗಳು ಹಾಗೆಯೇ ಉಳಿದವು”[೨] ಸಾಮಾಜಿಕ ಮತ್ತು ರಾಜಕೀಯ ಸರಿಸಮಾನ ಹಕ್ಕುಗಳನ್ನು ಹೊಂದಿದರೂ ಅವುಗಳಿಂದ ವಂಚಿತರಾಗಿದ್ದಾರೆ. ಹಲವಾರು ವರ್ಷಗಳ ಹಿಂದೆ ಮಹೆಳೆಯರಿಗೆ ಸೀಮಿತ ಕೆಲಸಗಳಲ್ಲಿ ಸ್ಥಾನವಿತ್ತು. ಅಂದರೆ, ಶಿಕ್ಷಕಿಯಾಗಿ, ಟೈಪಿಸ್ಟ್, ಟೆಲಿಪೋನ್ ಆಪರೇಟರ್, ನರ್ಸ್, ಈ ಹುದ್ದೆಗಳಲ್ಲಿ ಮಾತ್ರ ಕೆಲಸ ಮಾಡಬೇಕಾಗಿತ್ತು ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ಯಾವ ಅಡೆ ತಡೆ ಇಲ್ಲದೆ ಎಲ್ಲಾ ಕ್ಷೇತ್ರದಲ್ಲಿ ಭಾಗವಹಿಸುತ್ತಿದ್ದಾಳೆ. ಆದರೆ ಬುಡಕಟ್ಟು ಸಮುದಾಯ ಮಾತ್ರ ಮಹಿಳೆಯನ್ನು ಕಡೆಗಣಿಸಿರುವುದು ಆಕೆಯ ಮೇಲೆ ಅನೇಕ ಸಾಮಾಜಿಕ ನಿರ್ಬಂಧಗಳು ಹೇರಿದ್ದಾರೆ, ಅದಲ್ಲದೆ ದೌರ್ಜನ್ಯ, ವರದಕ್ಷಿಣೆಗಾಗಿ ಹಿಂಸೆ ಕೃತ್ಯಗಳು ಹೆಚ್ಚಾಗಿ ಕಂಡುಬರುತ್ತವೆ. ಬಡ ಕುಟುಂಬಗಳಲ್ಲಿ ಈಗಲೂ ಮಹಿಳೆಯರು ಅನಕ್ಷರಸ್ತರಾಗಿ ತಮ್ಮ ತಮ್ಮ ಮನೆ ಸಂಸಾರ ಮತ್ತು ಗಂಡನ ಅಧೀನದಲ್ಲಿದ್ದಾರೆ. ಬೇರೆ ಬೇರೆ ಸಮುದಾಯಗಳಲ್ಲಿ ಮಹಿಳೆಯ ಹೆಚ್ಚಿನ ಒಂದು ಪಂಥದಲ್ಲಿ ಶೈಕ್ಷಣಿಕವಾಗಿ ಮುಂದುವರೆದಿದ್ದಾರೆ. ಅವರ ಎಲ್ಲಾ ರಂಗಗಳಲ್ಲಿ ಉದ್ಯೋಗಗಳು ಮಾಡುತ್ತಿದ್ದಾರೆ, ಎನ್.ಜಿ.ಓ, ವಿದ್ಯಾಸಂಸ್ಥೆಗಳು ದೂರದರ್ಶನ ಮತ್ತು ಆಕಾಶವಾಣಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಮನೆಯವರ ತಂದೆ ತಾಯಿಗಳ ಸಹಕಾರವು ಅಷ್ಟೆ ಮುಖ್ಯವೆಂಬುದು ತಿಳಿಯಬಹುದು ಅದಕ್ಕೆ ಅವರ ಸಹಕಾರವು ಅಗತ್ಯವಾಗಿ ಬೇಕೆ ಬೇಕು.

"ಬಹುತೇಕ ಹಿಂದು ಕುಟುಂಬಗಳಲ್ಲಿ ಓದುಬರಹವನ್ನು ಕಲಿತ ಹುಡಗಿ ಮದುವೆಯಾದ ಹೊಸದರಲ್ಲೆ ವಿದವೆಯಾಗಿ ಬಿಡುತ್ತಾಳೆ. ಒಂದು ನಂಬಿಕೆ ಪ್ರಚಲಿತವಿದ್ದು ಇದನ್ನು ಸ್ವತಃ ಹೆಂಗಸರು ಗಾಢವಾಗಿ ನಂಬುತ್ತಾರಾದರೆ ಪುರುಷರು ಅದನ್ನೇ ಬೆಂಬಲಿಸುತ್ತಾರೆ. ಹಿಂದೂಗಳಲ್ಲೂ, ಮುಸ್ಲಿಂರಲ್ಲೂ ಅಕ್ಷರ ಜ್ಞಾನವು ಹೆಂಗಸರನ್ನು ಕೆಡಿಸಿ ಬಿಡುತ್ತದೆ. ಎಂದು ಕೂಡ ಆಡ್ಯಂ ಹೇಳಿದ್ದಾನೆ."[೩] ಮಂಗಾರವಾಡಿ ಮಹಿಳೆಯರು ಹೆಚ್ಚು ಶೋಷಿತರು ಗೃಹಣಿಯರಾಗೇ ಬದುಕು ಕೆಳಯುತ್ತಿರುವುದರು ಆದರೆ ಮಂಗಾರವಾಡಿ ಸಮುದಾಯ ಕಳ್ಳತನ ಎಂಬ ಸುದ್ದಿ ಇಂದು ನಿನ್ನೆಯದಲ್ಲ ಹಲವಾರು ವರ್ಷಗಳಿಂದ ಕಳ್ಳತನ ಮಾಡಿ, ಬದುಕುತ್ತಾರೆಂಬ ಒಂದು ವದಂತಿ ಇದೆ. ಅದರ ಜೊತೆ, ಪ್ಲಾಸ್ಟಿಕ್ ಚೀಲಗಳೂ ಮತ್ತು ಕೃಷಿ ಹಾಗೂ ಮನೆಯ ಎಲ್ಲಾ ಕೆಲಸಗಳಲ್ಲಿ ನಿಭಾಯಿಸುವವಳಾಗಿದ್ದಾಳೆ.

ಮಹಿಳೆಯು ಸ್ವಾವಲಂಬನೆಯ ಹಾದಿಯಲ್ಲಿ ಸಾಗುತ್ತಿದ್ದಾಳೆ ಶಿಕ್ಷಣ, ಉದ್ಯೋಗ, ಸಂಘಸಂಸ್ಥೆಗಳೂ ಸ್ವಸಹಾಯ ಸಂಘಗಳು ಅಪಾರ ನೆರವು ನೀಡುತ್ತಿವೆ. ಸ್ವಸಹಾಯ ಸಂಘಗಳು ಬ್ಯಾಂಕಿನಿಂದ ಸಾಲ ಸೌಲಭ್ಯ ಪಡೆದಿವೆ. ಗೃಹ ಕೈಗಾರಿಕೆಗಳನ್ನು ಕೈಗೊಂಡಿವೆ. ಮಾವು, ಬಾಳೆಹಣ್ಣು, ದ್ರಾಕ್ಷಿ, ಪೇರಲೆ ಹಣ್ಣುಗಳ ಮಾರಾಟ ಮಾಡುವುದುರಿಂದ ಬಂದ ಹಣದಿಂದ ಸಾಲ ಮರು ಪಾವತಿ ಮಾಡುವುದು ಇಂದಿನ ದಿನಗಳಲ್ಲಿ ಅನೇಕ ಸಮುದಾಯಗಳಲ್ಲಿ ಮಹಿಳೆಯ ಮುಂದೆ ಬಂದಿರುವಂತಹದು ತಿಳಿದುಬರುತ್ತದೆ. ಇಂದು ಮಹಿಳೆ ಮಾನಸಿಕವಾಗಿ, ದೈಹಿಕವಾಗಿ, ಸಾಮಾಜಿಕವಾಗಿ, ವೈವಾಹಿಕ ವಿಚಾರಗಳಲ್ಲಿ ಭಾವನಾತ್ಮಕ ಒತ್ತಡಗಳು ಅವಳನ್ನು ಕಾಣುತ್ತೆವೆ ಅಡುಗೆ ಮನೆ ಹಾಗೂ ವ್ಯವಹಾರಿಕ ಜಗತ್ತು ಆಕೆಯ ಕೌಟುಂಬಿಕ ಜೀವನ ಅರಿವು ತುಂಬಾ ಚೆನ್ನಾಗಿ ಅರಿತಿದ್ದಾಳೆ. ಕುಟುಂಬದ ಸಮುದಾಯದ ದುಡಿಮೆ ಜೊತೆಗೆ ಹೊರಗೆ ಹೋಗಿ ದುಡಿದುಕೊಂಡು ತನ್ನ ಬದುಕನ್ನು ಸುಧಾರಿಸಿಕೊಳ್ಳಲು ಅನುಮಾನಾಷ್ಪದವಾಗಿ ನೋಡುತ್ತಿವೆ. ಸಮುದಾಯದಲ್ಲಿ ಅತ್ತೆ, ಮಾವ, ನಾದಿನಿ, ಮೈದುನ ಇವರ ಕಿರುಕುಳಗಳಿಗೆ ನಿರಂತರವಾಗಿ ಮಹಿಳೆ ಬಲಿಯಾಗುತ್ತಿದ್ದಾಳೆ ಇವುಗಳನ್ನು ತಡೆಯಲು ಸರ್ಕಾರ ಹಲವಾರು ಕಟ್ಟು ನಿಟ್ಟಿನ ಕ್ರಮ ಕೈಗೊಂಡಿದೆ.

ಶ್ರೇಣಿಕೃತವಾದ ನಮ್ಮ ಸಮುದಾಯದಲ್ಲಿ ಜಾತಿ ವರ್ಗ ಮತಗಳ ಆಧಾರದ ಮೇಲೆ ತಾರತಮ್ಯಗಳ ವ್ಯತ್ಯಾಸಗಳನ್ನು ಕಾಣಬಹುದು ಲಿಂಗವ್ಯವಸ್ಥೆಯ ಆಧಾರದ ಮೇಲೆ ಪುರುಷರು ತಮ್ಮ ಆಶಯ ತಕ್ಕಂತೆ ಮಹಿಳೆಯರನ್ನು ಜೀವನ ಪೂರ್ತಿ ಅವರ ಆಸೆ, ಆಕಾಂಕ್ಷೆ ಬದಿಗೊತ್ತುತಿದ್ದಾರೆ. ಇಂದಿನ ಸಮಕಾಲೀನ ಸಂದರ್ಭದಲ್ಲಿ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ನಿಯಂತ್ರಣ ಹೊಂದಿರುವ ಪುರುಷರು ಹೇರಿರುವ ಹಲವಾರು ನಿರ್ಭಂದಗಳನ್ನು ಸಮಾಜದಲ್ಲಿ ಸಮುದಾಯದಲ್ಲಿ ಮಹಿಳೆಯರಿಗೆ ಹೇರಿರುವಂತಹದು

ತಿಳಿದುಬರುತ್ತದೆ. ಪುರುಷರು ಪ್ರಧಾನ ಸಮುದಾಯದಲ್ಲಿ ಸ್ತ್ರೀ ಶೋಷಣೆಯ ಮೂಲ ಎನ್ನಬಹುದು ಮಕ್ಕಳ ಪಾಲನೆ, ಪೋಷಣೆ, ಮನೆಕೆಲಸ, ಜವಾಬ್ದಾರಿ ಹೊಂದಿದ್ದಾಳೆ, ಬುಡಕಟ್ಟುಗಳಲ್ಲಿ ಪುರುಷರಸ್ಥಾನವೇ ಪ್ರಮುಖ ಪಾತ್ರವಾಗಿ ಕಾಣುತ್ತದೆ. ಹುಟ್ಟಿನಿಂದಲೇ, ಹೆಣ್ಣು ಮಗುವನ್ನು ಪರರ ಮನೆಯ ಸೊತ್ತು ಎಂಬಂತೆ ಬೆಳೆಸುತ್ತಾರೆ. ಹೀಗಾಗಿ ಆಕೆಯ ವ್ಯಕ್ತಿತ್ವ, ಶಿಕ್ಷಣ, ಆತ್ಮಗೌರವ, ರಕ್ಷಣೆಯನ್ನು ಪ್ರೋತ್ಸಾಹಿಸುವುದಕ್ಕೆ ಬದಲಾಗಿ, ಸಹನೆ, ವಿಧೇಯತೆ, ಕ್ಷಮೆ, ಪ್ರೀತಿ, ವಿಶ್ವಾಸ ಇವುಗಳನ್ನೆ ಬೋಧಿಸುತ್ತಾರೆ ಅವಳು ಮುಂದೆ ವಹಿಸಬೇಕಾದ ಕಾರ್ಯಗಳನ್ನು ತಾಯಾಗಿ, ಹೆಂಡತಿಯಾಗಿ, ಸೊಸೆಯಾಗಿ ಪರರ ಮನೆಗೆ ಹೋಗುತ್ತಾಳೆ ಎಂಬ ನಂಬಿಕೆ ಹೊಂದಿದ್ದಾರೆ. ಸಾಮಾಜಿಕ ವ್ಯವಸ್ಥೆಗೆ ಈಗ ಮತ್ತೊಂದು ಪರಿವರ್ತನೆ ಕಾಲಬಂದಿರುವಂತಹದೂ ತಮ್ಮ ಆಂತರಿಕ ಹಾಗೂ ಆಲೋಚನೆ, ಸಾಮರ್ಥ್ಯವನ್ನು ಮನಗಂಡ ಸ್ತ್ರೀ ಸಮುದಾಯ ತಮ್ಮನ್ನು ತಾವು ಗ್ರಹಿಸಿಕೊಳ್ಳಲು ನಿರೂಪಿಸಿ ನಿರ್ವಹಿಸಲು ಮುಂದಾಗಬೇಕಾಗಿದೆ. ಕಾನೂನಿನ, ಅರಿವು ವೈಜ್ಞಾನಿಕ ನಿಲುವುಗಳಿಂದ ಮಹಿಳೆ ತನ್ನ ಹುಟ್ಟು ಬೆಳವಣಿಗೆಯ ಜೊತೆಗೆ ಸ್ತ್ರೀ ಸಂತತಿ, ನಾಶವಾಗದಂತೆ ಹೋರಾಡುವ ಛಲ ಹೊಂದಿದ್ದಾಳೆ ಬುಡಕಟ್ಟುಗಳಲ್ಲಿ ಹೆಣ್ಣು ಗಂಡು ಎಂಬ ತಾರತಮ್ಯವಿಲ್ಲದೆ ಸಮಾನ ಸ್ಥಾನಮಾನ, ಅವಕಾಶಗಳನ್ನು ಬಳಸಿಕೊಂಡು ಅಭಿವೃದ್ಧಿ ಹೊಂದುವ ನಿಟ್ಟಿನಲ್ಲಿ ಮಂಗಾರವಾಡಿ ಮಹಿಳೆಯರಿದ್ದಾರೆ. ಮಹಿಳೆಯರನ್ನು ಕಾಲ ದೇಶ ಪರಿಸರಕ್ಕೆ ತಕ್ಕಂತೆ. ನಡೆದು ಕೊಳ್ಳಬೇಕಾದ ಕ್ರಮ ಧರ್ಮ ನ್ಯಾಯ ನೀತಿಯ ಒಂದು ವಿಚಾರ ತಿಳಿ ಹೇಳಬೇಕಾದದ್ದು ಬುಡಕಟ್ಟುಗಳಲ್ಲಿ ಅವಶ್ಯಕ, ಜಗತ್ತಿನ ಬಹುತೇಕ ಸಂಸ್ಕೃತಿಯಲ್ಲಿ ಮಾತೃ ಆರಾಧನೆಗೆ ಪ್ರಾಮುಖ್ಯತೆ ಮತ್ತು ಧಾರ್ಮಿಕ ಆಚರಣೆಗಳಿಗೆ ಕೂಡಾ ಗೌರವ ನೀಡುತ್ತಿದ್ದರು ಧಾರ್ಮಿಕ ಆಚರಣೆಗಳ ಮಟ್ಟಿಗೆ ಮಹಿಳೆ ಸಮುದಾಯದ ಗೌರವಾನ್ವಿತದಿಂದ ಮರೆಯುತ್ತಿದ್ದಳು ಸಾವಿರಾರು ವರ್ಷಗಳಲ್ಲಿ ಭಾರತವು ಕಂಡ ಸಾಮಾಜಿಕ, ರಾಜಕೀಯ, ಧಾರ್ಮಿಕ ಸ್ಥಿತಿಗತಿಗಳನ್ನು ನೋಡಿದಾಗ ಹೆಣ್ಣು ಕೇವಲ ನಾಲ್ಕು ಗೋಡೆಗಳ ನಡುವೆ ಕೈದಿಯಾಗಿದ್ದಳು ಬಾಲ್ಯವಿವಾಹ, ಆಕೆಯ ಸ್ಥಿತಿ ಬುಡಕಟ್ಟುಗಳಲ್ಲಿ ಶೋಚನಿಯವಾಗಿದೆ. ಹಿಂಸೆಗಳಿಗೆ ಗುರಿಮಾಡಿದ ಪುರುಷರೂ ತಮ್ಮ ದೋಷಗಳನ್ನು ಸಹಜವಾಗಿ ಪೌರುಷವೆಂದು ಸಾರಿಕೊಂಡರು ಆದರೆ ಎಲ್ಲ ನೋವು ಯಾತನೆ, ವಂಚನೆಗೆ ಬಲಿಪಶುವಾದ ಸ್ತ್ರೀಯನ್ನು ಕ್ರೂರಿ. ಸುಳ್ಳುಗಾರರು ವಂಚನೆ, ಮೋಸಗಾತಿ, ಚಂಚಲೆಯರೆಂದು ಹೇಳುತ್ತಿದ್ದರು, ಹೀಗಾಗಿ ಮಹಿಳೆಯರು ಜನ, ಜೀವನ ಮತ್ತು ಅಸ್ತಿತ್ವವೇ, ಅನಪೇಕ್ಷಣೀಯವಾಗಿ ತಿರಸ್ಥರಕ್ಕೆ ಗುರಿಯಾಗುತ್ತಿದ್ದರು ಬಾಲ್ಯದಲ್ಲಿ ಮಹಿಳೆಯರು, ತಂದೆಯ ಆಶ್ರಯದಲ್ಲಿ, ಯೌವ್ವನದಲ್ಲಿ ಗಂಡ ಹಾಗೂ ಮುಪ್ಪಿನಾವಸ್ಥೆಯಲ್ಲಿ ಗಂಡು ಮಕ್ಕಳು ರಕ್ಷಣೆಯಲ್ಲಿರಬೇಕಾಗಿತ್ತು. ಆಕೆಗೆ ಎಂದಿಗೂ ಸ್ವತಂತ್ರಳಾಗಿರುವ ಅರ್ಹತೆಯಿಲ್ಲ ಎಂಬುದು

ಬುಡಕಟ್ಟುಗಳಲ್ಲಿ ಬೇರೂರಿರುವಂತಹದು ಸಹಜವಾಗಿ ಕಂಡುಬರುತ್ತದೆ. ಇದ್ದರಿಂದ ಮುಕ್ತಿ ಹೊಂದಲು ಅವಳಲ್ಲಿ ಸ್ವಾಭಿಮಾನ ಮೂಡಬೇಕಾಗಿರುವುದು ಅಗತ್ಯವಾಗಿದೆ.

ಇಂದಿನ ದಿನಗಳಲ್ಲಿ ಮಹಿಳೆಯರಿಗೆ ಜ್ಞಾನ ನೀಡುವುದು ತುರ್ತಾಗಿ ನಡೆದಿದೆ. ನಗರಗಳಲ್ಲಿ ಸ್ತ್ರೀಯರಿಗೆ ಶಿಕ್ಷಣಾವಕಾಶಗಳು ವಿಪುಲವಾಗಿದೆ. ಆದರೆ "ವೈಚಾರಿಕ ಜಾಗೃತಿಯೇ ನಿಜವಾದ ಶಿಕ್ಷಣದ ಉದ್ದೇಶ, ಕೇವಲ ಸಾಕ್ಷರತೆಯನ್ನು ತರುವುದಲ್ಲ, ಓದುವುದು, ಬರೆಯುವುದು, ಕಲಿಯುವುದು ಒಂದು ಪ್ರಾಥಮಿಕ ಹಂತ. ಆದರೆ ಈ ಕಲಿಕೆ ಈ ಸಾಕ್ಷರತೆ ನಮ್ಮನ್ನು ಆರೋಗ್ಯವನ್ನಾಗಿ ಸಾಮಾಜಿಕ ರಕ್ಷಣೆಯ ಕಡೆಗೆ ಒಯ್ಯಬೇಕು ಅಂದಾಗಲೇ ಅಕ್ಷರಕ್ಕೆ ಬೆಲೆ ಈ ಎಲ್ಲ ದಿಕ್ಕನು ಸಾಕ್ಷರತೆ ನಮ್ಮ ವಿಚಾರ ಪರರನ್ನಾಗಿಸುತ್ತದೆ. ಆಲೋಚನೆಯಿಂದ ವಿಮೋಚನೆ, ವಿಮೋಚನೆಯಿಂದ ಆಲೋಚಯಿಲ್ಲದೆ, ಆಲೋಚನೆಲ್ಲದೆ, ವಿಮೋಚನೆ. ಕುರುಡು ಅನುಕರಣೆ ಎನ್ನುತ್ತಾರೆ."[೪] ಬೇರೆ ಬೇರೆ ಪ್ರದೇಶಗಳಲ್ಲಿ ಬುಡಕಟ್ಟುಗಳಲ್ಲಿ ಅಜ್ಞಾನ, ಅನಕ್ಷರತೆ, ಮೂಢನಂಬಿಕೆ ತಾಂಡವಾಡುತ್ತಿದೆ. ಹಾಗೆಯೇ ನಗರ ಪ್ರದೇಶಗಳಲ್ಲಿ ಅಷ್ಟಾಗಿ ಕಾಣುವುದಿಲ್ಲ. ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರನ್ನು ಮುಂದುವರೆಯುವಂತೆ ಮಾಡುವುದು ಶಿಕ್ಷಣದ ಪ್ರಮುಖ ಉದ್ದೇಶವಾಗಿವೆ. ಅದಕ್ಕೆ ತಕ್ಕಂತೆ ಶಿಕ್ಷಣದ ತರಬೇತಿಯನ್ನು ನೀಡಬೇಕಾಗಿದೆ. "ಈಗ ಮಹಿಳೆಯರು ತಾವು ಸ್ವತಂತ್ರರಾಗಲು ಸಾಧ್ಯವೇ, ಇಲ್ಲವೆಂದು ಭಾವಿಸಿದ್ದು ಹಿಂದಿನ ಕಾಲದಲ್ಲಿ ಗುಲಾಮರಂತೆ ಇದ್ದಾರೆ, ಮಹಿಳೆಯರು ತಮ್ಮ ಘನತೆ, ಗೌರವಗಳ ಪೂರ್ಣ ಸ್ವರೂಪವನ್ನು ಅರಿತು ಪುರುಷರಿಗೆ ಸಮಾನ್ಯವಾಗಿ ಕರ್ತವ್ಯ ನಿರ್ವಹಿಸಲು ನೆರವಾಗಬೇಕು. ೧೯೭೬ನೇ ಇಸವಿಯ ಸಂವಿಧಾನದ ೧೪೨ನೇ ತಿದ್ದುಪಡಿ ಅಧಿನಿಯಮದ೩ನೇ ಪ್ರಕರಣದ ಮೂಲಕ ದಿ.೨೦.೦೬.೧೯೭೭ರಿಂದ ಜಾರಿಯಲ್ಲಿ ಬರುವಂತೆ ಸೇರಿಸಲಾಯಿತು."[೫]

ವೈಜ್ಞಾನಿಕ, ತಂತ್ರಜ್ಞಾನ, ಕ್ರೀಡೆ, ಪತ್ರಿಕೋದ್ಯಮ ಮೊದಲಾದಂತಹ ಕ್ಷೇತ್ರಗಳಲ್ಲಿ ಕೂಡಾ ಮಹಿಳೆ ಮುಂದುವರೆಯುತ್ತಿರುವುದು ತಿಳಿದು ಬರುತ್ತದೆ ಆದರೆ ಮಂಗಾರವಾಡಿಗರ ಯಥಾ ಸ್ಥಿತಿಯನ್ನು ಕಾಪಾಡಿಕೊಂಡು ಹೋಗುತ್ತಿದ್ದಾರೆ. ಇದನೆಲ್ಲಾ ಬದಿಗೊತ್ತಿ ಶಿಕ್ಷಣ ಹೊಂದಿ ಮುನ್ನೆಡೆದು ಸ್ವಾವಲಂಬಿಯಾಗಿ ಮುನ್ನೆಡೆಯುವುದು ಯಾವಾಗ ಆದರೆ ಗುಡ್ಡಗಾಡು ದೂರದ ಮೂಲೆಯಲ್ಲಿರುವ ಬುಡಕಟ್ಟು ಮಹಿಳೆಯನ್ನು ಕೂಡ ಶಿಕ್ಷಣದ ಮೂಲಕ ಮೇಲೆತ್ತುವ ಕಾರ್ಯ ಮಹಿಳೆಯರಿಂದಲೇ ಆಗಬೆಕು ಆಗ ಒಂದಿಲ್ಲೊಂದು ದಿನ ಅಂಥ ಮಹಿಳೆಯರು ಸಾಧನೆಯ ಮೂಲಕ ತಮ್ಮ ಸಾರ್ಥಕತೆಯನ್ನು ಹೊಂದಲು ಮಂಗಾವಾಡಿಗರು ಸಾಧ್ಯವಾಗುತ್ತದೆ.

ಸಮುದಾಯಗಳಲ್ಲಿ ಮಹಿಳೆಯರು ವ್ಯವಸ್ಥಿತ ರೂಪದಲ್ಲಿ ನಿಯಮಗಳನ್ನು ರೂಡಿಸುವುದು ನಿಯಮಪಾಲನೆಯ ಮಾಡುವುದು ಹಾಗು ನಿಯಮಗಳನ್ನು ಎಲ್ಲಂಘಿಸಿದವರಿಗೆ

ಶಿಕ್ಷಿಸುವುದು ಸಮುದಾಯದ ಹಿರಿಯ ಅಥವಾ ಮಹಿಳೆಯರು ಪ್ರಧಾನ್ಯತೆ ಮೇರೆಗೆ ನಡೆಯುತ್ತದೆ. ಸ್ವಂತ ಸೇವೆ, ಪ್ರತಿಭೆ ಸಮಾಜ ಸೇವೆ ಮುಂತಾದವುಗಳ ಮೂಲಕ ಜನನಾಯಕಿಯರಾದವರನ್ನು ಒಂದಿಲ್ಲೊಂದು ರೀತಿಯಿಂದ ಕುಟಿಲತೆಯಿಂದ, ಹತ್ತಿಕ್ಕುವ ಹುನ್ನಾರಗಳು ವಂಚನೆಯಗಳು ನಡೆಯುತ್ತಿವೆ. ರಾಜಕೀಯ ಕ್ಷೇತ್ರದಲ್ಲಿ ಸಾರ್ವಜನಿಕ ಕ್ಷೇತ್ರವಾಗಿರುವುದರಿಂದ ಮಹಿಳೆಯರ ಕಂಡುಬರುತ್ತದೆ. ಶತಶತಮಾನಗಳಿಂದ ರಾಜಕೀಯ ಅಧಿಕಾರವನ್ನು ತಮ್ಮ ಬಿಗಿಮುಷ್ಠಿಯಲ್ಲಿಟ್ಟುಕೊಂಡು ತಮ್ಮ ಕೈಯಿಂದ ಅದು ಜಾರಿಹೋಗಿತೆಂಬ ಭಯದಿಂದ ಅವ್ಯೆಚಾರಿಕ ಕಾರಣಗಳನ್ನು ನೀಡುತ್ತಾರೆ. ಮೀಸಲಾತಿಯಿಂದಾಗಿ ಮಹಿಳೆಯರು ಕೆಳಹಂತದಲ್ಲಿದ ಕೊಂಡ ರಾಜಕೀಯದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಮಹಿಳಾ ಪ್ರತಿನಿಧಿಗಳು ತಮ್ಮ ಸ್ಥಾನಮಾನ ಅಧಿಕಾರ ಬಲವನ್ನು ಸ್ತ್ರೀಪರ ನೆಲೆಯ ಪ್ರಮುಖ ಕಾರ್ಯಕ್ರಮಗಳು ನಡೆಯುವಂತೆ ಜವಾಬ್ದಾರಿ ವಹಿಸುತ್ತಿರುವುದು ಇಂದಿನ ದಿನಗಳಲ್ಲಿ ಮಹಿಳೆಯರಿಗೆ ವಿಪುಲವಾದ ಅವಕಾಶಗಳು ಹೊಂದಿದ್ದಾರೆ.

ಬುಡಕಟ್ಟುಗಳಲ್ಲಿ ಮಹಿಳೆಯರು ಕೆಳಮಟ್ಟದಲ್ಲಿರಲು ಸಮಸ್ಯೆಗಳನ್ನು ಗುರ್ತಿಸಲು ಹಾಗೂ ಪರಿಹಾರ ಸೂಚಿಸಲು ಪ್ರಯತ್ನಗಳು ನಡೆದಿದೆ. ಸ್ತ್ರೀಯರಿಗೆ ಸ್ವಾತಂತ್ರ್ಯ, ಸಮಾನತೆ, ವಿಮೋಚನೆ ಮುಂತಾದ ಪದಗಳನ್ನು ಈಗ ಸ್ತ್ರೀಯರ ಸ್ಥಾನಮಾನದ ಬಗ್ಗೆ ಮೊಟ್ಟ ಮೊದಲ ಜಾಗೃತಿ ಧ್ವನಿಗಳು ಇಂಥ ಪದಗಳಿಂದಲೇ ಮೂಡಿದ್ದವೂ ಎಂಬುದನ್ನು ಮರೆಯಲಾಗದು ಸ್ತ್ರೀಯರು ದೌರ್ಬಲ್ಯಗಳಿಗೆ ಆರ್ಥಿಕ ದಾಸ್ಯ ಅಥವಾ ಅವಲಂಭನೆ ಮತ್ತು ಸಂತಾನವೇ ಕಾರಣವೆಂದು ಹೇಳಬಹುದಾಗಿದೆ ಉತ್ಪಾದನೆ ಸಂತಾನ, ಸಾಮಾಜಿಕತೆ, ಲೈಂಗಿಕತೆ ಈ ನಾಲ್ಕು ಅಂಶಗಳು ವಿವಿಧ ಹಂತಗಳಲ್ಲಿ ಬೇರೆ ಬೇರೆಯಾಗಿ ಕೂಡಿಕೊಂಡು ಹೆಣ್ಣಿನ ಪರಿಸ್ಥಿತಿಯನ್ನು ನಿಯಂತ್ರಿಸುತ್ತಿದ್ದಾರೆ. ಮನುಷ್ಯನ ಮೂಲಭೂತ ಅಂಶಗಳಾದ ಆಹಾರ, ಆಶ್ರಯ ಇವುಗಳ ಜೊತೆಗೆ ಜ್ಞಾನ ವೃದ್ಧಿ, ಬೆಳವಣಿಗೆಗೆ ಅವಕಾಶ ಇವು ಕೂಡಾ ಅತ್ಯಾವಶ್ಯಕ ವಿಷಯಗಳಾಗಿವೆ, ಸಮುದಾಯ ಆರ್ಥಿಕ ಪರಸ್ಥಿತಿ ಹೇಗೆ ಇದ್ದರೂ ಆಹಾರ ಇನ್ನಿತರ ಸೌಕರ್ಯಗಳನ್ನು ಒದಗಿಸುವಾಗ, ಹೆಣ್ಣು ಮಕ್ಕಳಿಗೆ ಅಪ್ರೌಢ ಆಹಾರವನ್ನು ಕೊಡುವುದು ಆದರೆ ಗಂಡು ಮಕ್ಕಳಿಗೆ ವಂಶೋದ್ದಾರಕರೂ ಸಂಪಾದನೆ ಮಾಡುತ್ತಾರೆಂದು ತಾಯ್ತಂದೆಯರನ್ನು ಸಲಹುವವರೆಂದು ಹೇಳುತ್ತಾ ಪುಷ್ಠಿಕರವಾದ ಸಮೃದ್ದನಾದ ಆಗಲೇ ಸಿದ್ದಪಡಿಸಿದ ಆಹಾರ ನೀಡುವುದು ಗಂಡು ಮಕ್ಕಳಿಗೆ ಇದು ಹೆಚ್ಚು ಪ್ರಚಲಿತದಲ್ಲಿದೆ. ಸ್ತ್ರೀ ಅಬಲೆ ದೈಹಿಕ ಶಕ್ತಿ ಮಾನಸಿಕ, ವಿವೇಚನಾ ಚಾತುರ್ಯ ಇಲ್ಲದೆ ಅಜ್ಞಾನಿ ಮೂರ್ಖಳು ಚಂಚಲೆ ಕೋಮಲೆ, ಮುಂತಾದ ಗುಣ ಸ್ವಭಾವಗಳನ್ನು ಆರೋಪಿಸಿದ ಪುರುಷ ಪ್ರಧಾನ ಸಮಾಜ ಆಕೆಯನ್ನು ಹೀಗೆ ಹೇಳುತ್ತಾರೆ. ಮಾನವ ಜನಾಂಗಕ್ಕೆ ಪ್ರಕೃತಿಯು ಸ್ವಭಾವ, ದೌರ್ಬಲ್ಯ ಸಾಮರ್ಥ್ಯ

ಎಲ್ಲವನ್ನು ಸ್ತ್ರೀ ಪುರುಷರು ಬೇವಿಲ್ಲದೆ ಹಿಂದೂ ಸಮುದಾಯಗಳಲ್ಲಿ ಕಾಣುತ್ತವೆ. ಲಿಂಗ ವ್ಯವಸ್ಥೆಯಲ್ಲಿ ತಾರತಮ್ಯ ಉದ್ಯೋಗ ಕ್ಷೇತ್ರದಲ್ಲಿ ಬೇರೂರಿಕೆ ಎಂದರೆ ತಪ್ಪಾಗಲಾರದು ಅವಳು ಬಯಸಿದ ಜೀವನ ಮಾರ್ಗವನ್ನು ಕಾಯ್ದುಕೊಳ್ಳಲು ಅವಕಾಶಕಲ್ಪಿಸಿದೆ ಇನ್ನೂ ಮಹಿಳೆ ಸಾಕಷ್ಟು ಶಿಕ್ಷಣ ಪಡೆದು ಉದ್ಯೋಗಕ್ಕಾಗಿ ಹೊರಗೆ ಹೋದಾಗ ಆಕೆ ವಹಿಸಬೇಕಾದ ಪಾತ್ರ ಪ್ರಮುಖವಾದದು ಆಧುನಿಕ ಶಿಕ್ಷಣದ ಪದ್ದತಿಯಲ್ಲಿ ಮಹಿಳೆಯರಿಗೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸಲಾಗಿದೆ.

ಮಹಿಳೆಯು ಪುರುಷನ ಬೌದ್ಧಿಕ ಬೆಳವಣಿಗೆಗೆ ಸೃಜನ ಶೀಲತೆ ಸಂವಹನ ಶಕ್ತಿಯನ್ನು ಸಮಾನವಾಗಿ ಹೊಂದಿದ್ದಾಳೆ. ಸ್ತ್ರೀ ಪುರಷರ, ಬೌದ್ಧಿಕ ಬೆಳವಣಿಗೆಗೆ ಸೃಜನ ಶೀಲತೆ, ಬೌದ್ದಿಕತೆ, ಹಿಂದುಳಿವಂತಹ ವಾತಾವಣ ಶಿಕ್ಷಣ ವ್ಯವಸ್ಥೆಯಲ್ಲಿದೆ. ಏಕೆಂದರೆ ಲಿಂಗ ತಾರತಮ್ಯದ ಶಿಕ್ಷಣ ಚಿಂತನೆಯ ಸಾಮಾಜಿಕ ಸಂರಚನೆಯಲ್ಲಿ ಬೇರುಬಿಟ್ಟಿದೆ, ಏಕೆಂದರೆ ಕೌಟುಂಬಿಕ ಜೀವನದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ನೆಲೆಗಳಲ್ಲಿನ ಪಕ್ಷಪಾತದ ಧೋರಣೆಗಳಿಂದ ಮಹಿಳಾ ಶಿಕ್ಷಣ ನಿರೀಕ್ಷಿತ ವೇಗದಲ್ಲಿ ಮುಂದುವರೆಯುತ್ತಿದೆ. ಮೂಲಭೂತ ಹಕ್ಕುಗಳು ನೀಡುವುದು ಕಾನೂನಿನಡಿಯಲ್ಲಿ ಸಮನತೆ ಎಲ್ಲರಿಗೂ ಮುಂದುವರೆಯಲು ಅವಕಾಶ ಸರ್ಕಾರದ ನೀತಿಗಳನ್ನು ಖಂಡಿಸುವ ಅಧಿಕಾರ ಮತ್ತು ಶಿಕ್ಷಣ ಪಡೆಯುವುದು ರಾಜಕೀಯ ಸಂಘಟನೆ, ಆರ್ಥಿಕ ಅಭಿವೃದ್ದಿ ಹೊಂದುವ ಅವಕಾಶಗಳು ಸ್ತ್ರೀ ಸಮಾನತೆಗೆ ಪೂರಕ ಅಂಶಗಳಾಗಿವೆ. ಬುಡಕಟ್ಟು ಜನರು ನೇರವಾಗಿ ಭಾಗವಹಿಸದೆ ವಿವಿಧ ಸಂಘಟನಾತ್ಮಕ ಚಳುವಳಿ, ಮೂಲಕ ಸರ್ಕಾರದ ಮೇಲೆ ಒತ್ತಡ ಹೇರುತ್ತಾರೆ.

೫.೧ ಸಂಘಗಗಳ ರಚನೆ

ಸಂಘಗಗಳನ್ನು ರಚನೆ ಮಾಡಿಕೊಂಡು ಹೋರಾಟದಲ್ಲಿ ಜನರು ಮತ್ತು ಮಹಿಳೆಯರು ಸಂಘಟಗಳ ಮೂಲಕ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡುತ್ತಾರೆ. "ಸಹಕಾರ ಸಂಘಗಳ ರಚನೆಗೆ ಉತ್ತೇಜಿಸಲು ಸರ್ಕಾರವು ಸ್ಟಾಂಡ್ ಶುಲ್ಕ ನೋಂದಣಿ ಮತ್ತು ವರಮಾನ ತೆರಿಗೆಗಳಿಗೆ ವಿನಾಯಿತಿ ನೀಡಿತ್ತು ಈ ಅಧಿನಿಯಮವನ್ನು ಕಾರ್ಯನುಷ್ಠಾನಗೊಳಿಸಿದ ಹತ್ತು ವರ್ಷಗಳಲ್ಲಿಯೇ ಅದರಲ್ಲೂ ಲೋಪದೋಷಗಳು ಬೆಳಕಿಗೆ ಬಂದವು ಅದರಲ್ಲಿ ಸಾಲದ ಹೊರತಾಗಿ ಇವರ ಉದ್ದೇಶಗಳಿಗೆ ಸಂಘಗಳಿಗೆ, ಸಹಕಾರ ಸಂಘಗಳಿಗೆ ಶಾಸನಾತ್ಮಕ ರಕ್ಷಣೆಯನ್ನು ನೀಡಲಾಗಿರಲಿಲ್ಲ."[೬] ಅವರ ಬೇಡಿಕೆಗಳನ್ನು ನಿರ್ಲಕ್ಷಿಸಿದಾಗ ಅಥವಾ ಆ ಬೇಡಿಕೆಗಳನ್ನು ಈಡೇರಿಸದೇ ಇದ್ದಾಗ ಅವರು ಸಂಘಗಳ ಮೂಲಕ ಹೋರಾಟ ನಡೆಸಿ ಸರ್ಕಾರದ ಮೇಲೆ ಒತ್ತಡ ಹೇರುತ್ತಾರೆ.

೫.೨ ಮನವೊಲಿಸುವಿಕೆ

ಕೆಲವು ಗುಂಪುಗಳು ಆಡಳಿತ ವರ್ಗದವರನ್ನು ಮನವೊಲಿಸಿಕೊಳ್ಳುವುದರ ಮೂಲಕ ಬೇಡಿಕೆಗಳನ್ನು ಈಡೇರಿಸಿಕೊಳ್ಳುತ್ತಾರೆ. ಇಂದಿನ ದಿನಗಳಲ್ಲಿ ಮಹಿಳಾ ಸಂಘ ಸಂಸ್ಥೆಗಳು ವಿವಿಧಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತವೆ. ಮೆರವಣಿಗೆ, ಧರಣಿ, ಉಪವಾಸ ಸತ್ಯಗ್ರಹ, ಪ್ರತಿಭಟನೆ, ಕೆಲವೊಮ್ಮೆ ಹಿಂಸಾತ್ಮಕ ಕಾರ್ಯಗಳು ಕೂಡ ಸಂಭವಿಸುತ್ತವೆ. ಹೊರಗನಿಂದ ಒತ್ತಡ ತರುತ್ತಾರೆ. ಉದಾ:–ಮಹಿಳಾ ಕಾರ್ಮಿಕರ ಹೋರಾಟ, ದಲಿತಹೋರಾಟಗಳು ಮಹಿಳಾ ಚಳುವಳಿ ಇತ್ಯಾದಿಗಳು ಒಟ್ಟಿನಲ್ಲಿ ಧ್ಯೇಯವನ್ನಿಟ್ಟುಕೊಂಡು ಅನೌಪಚಾರಿಕವಾಗಿ ಪ್ರಾರಂಭಗೊಂಡು ಸಂಘಟನೆಗಳು, ಸಂಘಗಳು ಚಳುವಳಿಗಳು ಬುಡಕಟ್ಟು ಮಹಿಳೆಯ ಭಾರತೀಯ ಹಿಂದೂ ಮಹಿಳೆಯ ರಾಜಕೀಯದಲ್ಲಿ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುತ್ತವೆ.

[1]ಮಹಿಳೆಯರು ಒಂದು ನಿದಿಷ್ಠ ಸಮಸ್ಯೆಯನ್ನಿಟ್ಟುಕೊಂಡು ಮಹಿಳೆಯರು ಸಂಘಟಿತರಾಗಿ ಹೋರಾಟ, ಚಳುವಳಿ, ಧಾರಣಿ, ಮೆರವಣಿಗೆ ಬಿತ್ತಿ ಪತ್ರ ಹಂಚುವಿಕೆ, ಮನವಿ ಸಲ್ಲಿಕೆ ಮುಂತಾದವುಗಳ ಮೂಲಕ ಸರ್ಕಾರದ ಮೇಲೆ ಒತ್ತಡ ತಂದು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದು ಕಂಡುಬರುತತದೆ. ಹೋರಾಟದ ಮೂಲಕ ಪ್ರತಿಭಟನೆಯ ಹಾದಿಯಲ್ಲಿ ತಮ್ಮ ಮೂಲಭೂತ ಹಕ್ಕುಗಳನ್ನು ಮಹಿಳೆಯರು ಪಡೆದಕೊಳ್ಳುತ್ತಿರುವುದು ಕಂಡು ಬರುತ್ತದೆ.

೫.೩ ವಿವಿಧ ಹೋರಾಟಗಳಲ್ಲಿ ಮಹಿಳೆಯರು

ಭಾರತೀಯ ಮಹಿಳೆಯರು ದುಡಿಯುತ್ತಿರುವ ಕಾರ್ಖಾನೆಗಳಲ್ಲಿ ಸಂಘ ಕಟ್ಟಿಕೊಂಡು ಅವುಗಳಲ್ಲಿ ಸಕ್ರಿಯವಾಗಿ ಭಾಗವಸುತ್ತಿದ್ದಾರೆ. ಆಗಿನ ಸಮಾಜದಲ್ಲಿದ್ದ ಸಾಮಾಜಿಕ ಕಟ್ಟು ಪಾಡುಗಳೂ ಪುರುಷ ಪ್ರಧಾನತೆ ಮುಂತಾದವುಗಳು ಕಾರ್ಮಿಕ ಚಳುವಳಿಯಲ್ಲಿ ಅವರ ಪಾತ್ರವನ್ನು ಮಿತಗೊಳಿಸಿತು.

ಕಾರ್ಮಿಕ ಸಂಘಗಳಲ್ಲಿ ಮಹಿಳೆಯರ ತೊಡುಗುವಿಕೆ. ಅವರ ತಮ್ಮ ಕೆಲಸ ಎಷ್ಟು ಬದ್ದರಾಗಿದ್ದರೆಂದು ಅವರಲ್ಲಿರುವ ಸಾಮರ್ಥ್ಯ ಎಷ್ಟು ಎನ್ನುವುದನ್ನು ಅವಲಂಬಿತವಾಗಿದೆ. ಕೆಲಸದ ಹೊರೆ ಮತ್ತು ಸಮಯದ ಅಭಾವ ಮಹಿಳೆಯ ಸಂಘದ ಚಟುವಟಿಕೆಯಲ್ಲಿರುವಂತಹದು ಗುರ್ತಿಸಬಹುದು ಇಂದಿನ ಪ್ರಸ್ತುತ ದಿನಗಳಲ್ಲಿ ಮಂಗಾರವಾಡಿಗರ ಬದುಕು ಆರ್ಥಿಕವಾಗಿ ಹಿಂದೂಳಿದಿರುವುದು ಬದುಕಿನ ಹಲವಾರು ಏರು ಪೇರುಗಳ ಜೊತೆ ತಮ್ಮ ಜೀವನವನ್ನು ಸಾಗಿಸಿಕೊಂಡು ಬಂದಿರುವಂತಹದು ಗಮನಾರ್ಹವಾದುದು ಮಹಿಳೆಯರು ಸಂಘಟಿತರಾಗಿರುವ

ಪ್ರಮಾಣ ಕಡಿಮೆ ಏಕೆಂದರೆ, ಅನಕ್ಷರತೆ, ಬಡತನದ ದಾರಿದ್ರ್ಯ ಮುಂತಾದಗಳು ಮೂಲಃತಹವಾಗಿ ಅಂಟಿಕೊಂಡು ಬಂದವುಗಳಾಗಿವೆ.

ನಮ್ಮ ಸಮುದಾಯವು ಆರ್ಥಿಕತೆಯಿಂದ ಕೂಡಿಕೊಂಡಿದೆ ಮಹಿಳೆಯರ ಆರ್ಥಿಕತೆ ಹೆಚ್ಚುತ್ತಾ ಹೋದಂತೆ, ಅವರ ಉದ್ಯೋಗದ ಹಕ್ಕು ಮತ್ತು ಅಭಿವೃದ್ದಿ ದೃಷ್ಟಿಯಿಂದ ಸಂಘಟನಾತ್ಮಕ ಹೋರಾಟಗಳು ಅವಶ್ಯಕ ಆದರೆ ಸಾಮಾನ್ಯ ನಂಬಿಕೆಯೆಂದರೆ ಪುರುಷರ ಜೀವನ, ಅನುಭವ ಮತ್ತು ಮಹಿಳೆಯರ ಜೀವನದ ಅನುಭವ ಬೇರೆ ಬೇರೆಯಾಗಿರುವುದರಿಂದ ಮಹಿಳೆಯರು ಪುರುಷರಷ್ಟು ಚುರುಕಿರುವುದಿಲ್ಲ ಹೀಗಾಗಿ ಕಾರ್ಮಿಕ ಸಂಘಗಳು ಹೋರಾಟದಲ್ಲಿಯೂ ಅವರಿಗೆ ಯಶಸ್ವಿಯನ್ನು ಸುಲಭವಾದುದ್ದಲ್ಲ. ಅವರಲ್ಲಿ ಸೂಕ್ಷ್ಮ ಮನೋಭಾವನೆಯನ್ನು ಹೊಂದಿದ್ದಾರೆ. ಮನೆಯಲ್ಲಿಯ ಅಥವಾ ಕುಟುಂಬದಲ್ಲಿಯೂ ಸಮುದಾಯದಲ್ಲಿಯೂ ಸೂಕ್ತ ವಾತಾವಾರಣ ಸದಸ್ಯರ ಬೆಂಬಲ ಜೊತೆಗೆ ಕಾರ್ಮಿಕ ನಾಯಕರ ಪ್ರಜಾಸತ್ತಾತ್ಮಕ, ನಡುವಳಿಕೆ ಸಮಾನ ಅವಕಾಶ ಮಹಿಳೆಯರಲ್ಲಿ ಒಗ್ಗಟ್ಟು ಇವೆಲ್ಲವೂ ಮಹಿಳೆಯರಲ್ಲಿ ಪೂರಕ ಅಂಶಗಳಾಗಿದ್ದು ಸಮಾನ ಉದ್ಯೋಗಾವಕಾಶ ಮತ್ತು ನಿಶ್ಚಿತ ಪೂರ ಕ್ರಿಯಾಚಟುವಟಿಕೆಗಳು ಮಹಿಳೆಯರ ಇತ್ತೀಚ್ಚಿನ ಆರ್ಥಿಕ ಬದಲಾವಣೆಗಳು ಅಂದರೆ ಉತ್ಪಾದನಾ ವಿಧಾನ, ಮಾರಕಟ್ಟೆಯ ವಿಸ್ತಾರ ಅಧಿಕವಾಗುತ್ತಿರುವ ಮಹಿಳಾ ಜನಸಂಖ್ಯೆ ಸಮುದಾಯದಲ್ಲಿ ತಮಗಾಗಿರುವ ಅನ್ಯಾಯ ಅರಿತುಕೊಂಡು ಸಂಘಗಳ ಸಂಘಟನೆಗಳ ಮೂಲಕ ಆತ್ಮವಿಶ್ವಾಸವನ್ನುಮತ್ತು ಸ್ವಯಂ ನಿಯಂತ್ರಣವನ್ನು ಹೊಂದುತ್ತಿವೆ. ಸಮಕಾಲೀನ ಸಂದರ್ಭದಲ್ಲಿ ಮಹಿಳೆಯರ ಸ್ಥಾನ ಕುಸಿಯುತ್ತಿರುವುದು ಮಂಗಾರವಾಡಿ ಮಹಿಳೆಯರಲ್ಲಿ ಕಂಡು ಬರುತ್ತದೆ, ಅಭಿವೃದ್ದಿ ಹೊಂದುತ್ತಿರುವ ಇತರ ಸಮುದಾಯಗಳಲ್ಲಿ ಸಾಮಾಜಿಕ ನಿರ್ವಾಹಣೆ ಮಹಿಳೆಯರದಾಗಿದೆ, ಹೀಗಾಗಿ ಪ್ರಕೃತಿಯಲ್ಲಿ ಏನೇ ವಿನಾಶ ಉಂಟಾದರು ಅದು ನೇರವಾಗಿ ತಟ್ಟುವುದು ಮಹಿಳೆಯರನ್ನು ಸಮುದಾಯ ದವರನ್ನು ಬುಡಕಟ್ಟು ಜನಾಂಗದವರನ್ನು ಅಭಿವೃದ್ದಿ ಹೆಸರಿನಲ್ಲಿ ಮಹಿಳೆಯರನ್ನು ದಬ್ಬಾಳಿಕೆ ಶೋಷಣೆ ಮಾಡುತ್ತಾ ಬಂದಿರುವುದು ದಬ್ಬಾಳಿಕೆಯ ಮನೋಭಾವ ಮತ್ತು ದರೋಡೆ ಮಾಡುವ ಪ್ರವೃತ್ತಿ ಇಂದಿಗೂ ಹೆಚ್ಚಾಗಿ ಕಂಡುಬರುವುದು ನಗರ ಪ್ರದೇಶಗಳಲ್ಲಿ ಸ್ತ್ರೀಯು ಅದನ್ನು ಮೂಕ ನಾಯಕಿಯಂತೆ ಅನ್ಯಾಯವನ್ನು ಮರೆಮಾಚುತ್ತ ಹಲವಾರು ವರ್ಷಗಳಿಂದ ಹೀಗೆ ಮಾಡಿದನ್ನು ಸಹಿಕೊಂಡು ಬಂದಿರುವಂತಹುದು ತಿಳಿದುಬರುತ್ತದೆ.

ಮಹಿಳೆ ಮತ್ತು ಸಮುದಾಯದ ನಡುವಿನ ಸಂಬಂಧ ಅವಳು ಅಭಿವೃದ್ಧಿ ಹೊಂದದೇ ಸೈದ್ದಾಂತಿಕ ಸಂಬಂಧವನೇ ಇದರೂ ಪರಿಸರ ಸಂರಕ್ಷಣೆಗೆ ಸಮಾಜದ ಸಂರಕ್ಷಣೆ ಬುಡಕಟ್ಟುಗಳ ಸಂರಕ್ಷಣೆಗೆ, ಮುಂತಾದವುಗಳನ್ನು ಮಾಡುತ್ತ ಬಂದಿರುವುದು "ಸದಸ್ಯರೆ

ಸಂಪೂರ್ಣ, ಒಡೆತನ, ಹೊಂದಿರುವ ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದು ಸ್ವಾವಲಂಬಿ ಆರ್ಥಿಕ ಬದುಕನ್ನು ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ"[೭] ಇದ್ದಕ್ಕಾಗಿ ಬುಡಕಟ್ಟು ಮಹಿಳೆಯು ತನ್ನ ಪ್ರಾಣವನ್ನೇ ಒತ್ತೆ ಇಡಬೇಕಾದ ಪ್ರಸಂಗಗಳು ಸಮುದಾಯಗಳಲ್ಲಿ ಸೃಷ್ಠಿ ಮಾಡಿರುವಂತಹ ಅನೇಕ ಕ್ರೌರ್ಯದ ವಿಷಯಗಳು ಕುಲಂಕೋಶವಾಗಿ ನೋಡಬಹುದಾಗಿದೆ. ಒಟ್ಟಿನಲ್ಲಿ ಮಹಿಳೆಯರನ್ನು ಕುರಿತು ದ್ವಿಮುಖ ಧೋರಣೆ ಹೊಂದಿರುವುದು ಕಂಡುಬರುತ್ತದೆ. ಪ್ರಣ್ನಾಳಿಕೆ, ಭಾಷಣ, ಹೇಳಿಕೆಗಳಲ್ಲಿ ಆಶ್ವಾಸನೆ ಭರವಸೆಗಳು ಕಂಡು ಬಂದರೂ ಕಾರ್ಯರೂಪಕ್ಕೆ ಬರುವಷ್ಟರಲ್ಲಿ ಅಳಿಸಿ ಹೋಗಿರುತ್ತವೆ. ಅವರ ಜೀವನಾಂಶಗಳು ಮಾರ್ಪಾಡು ಮಾಡುವಲ್ಲಿ ಕೌಟುಂಬಿಕ ಜೀವನದ ಬದುಕು ಬೆಸೆಯಾಗಿ ವರ್ಗಾವಣೆ ಹೊಂದಿದ್ದಾಗ ಅಭಿವೃದ್ದಿ ಹೊಂದುತ್ತ ಉತ್ತಮ ಜೀವನ ಸಾಗಿಸುವುದು ಅಂದರೆ, ಮೊದಲು ಅವಳು ಅಕ್ಷರಸ್ತೆಯಾಗಬೇಕು ಅಂದರೆ, ಸಾಕ್ಷರತೆ, ವಿದ್ಯಾಭ್ಯಾಸ ಮಟ್ಟ ಕೌಟುಂಬಿಕ, ಆರ್ಥಿಕ ಪರಿಸ್ಥಿತಿ ಇವೆಲ್ಲವೂ ಮಂಗಾರವಾಡಿ ಮಹಿಳೆಯರಿಗೂ ಪೂರಕ ಸಂಬಂಧ ಹೊಂದಿರುವಂತಹದು ಮಹಿಳೆಯರ ಅನಕ್ಷರತೆಯು ರಾಜಕೀಯದಲ್ಲಿ ಭಾಗವಹಿಸುವಿಕೆಗೆ ಅಡ್ಡಿಯಾಗಿದೆ, ಪ್ರಮಾಣಿಕ ಪವಿತ್ರವಾದ ರಾಜಕೀಯ ಕನಸನ್ನು ಮಹಿಳೆಯರು ಸಮುದಾಯಗಳಲ್ಲಿ ಕಂಡಿರುವಂತಹದು ಹಿಂದು ಸಮುದಾಯಗಳಲ್ಲಿ ಗೋಚರಿಸುತ್ತದೆ.

೫.೪ ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಮಹಿಳೆಯರು

ಅಭಿವೃದ್ಧಿ ಎಂದರೆ ಸಾಮನ್ಯ ಅರ್ಥದಲ್ಲಿ ಪ್ರಗತಿ ಪಥದತ್ತ ಮುನ್ನೆಡೆಯುವುದು ಅಭಿವೃದ್ಧಿ ಎನ್ನವರು ಕೆಳಮಟ್ಟದಿಂದ ಮೇಲ್ಮಟ್ಟಕ್ಕೆ ಬದಲಾವಣೆ ಯಾಗುವಂತ ಒಂದು ಕ್ರಿಯೆ ಆದಾಯ ಕೃಷಿ, ಕೈಗಾರಿಕೆ, ಸಾರಿಗೆ ವಾಣಿಜ್ಯ ಇತ್ಯಾದಿ ಕ್ಷೇತ್ರಗಳಲ್ಲಿ ಕ್ರಿಯಾತ್ಮಕ ಬದಲಾವಣೆಗಳು ಉಂಟಾಗಬೇಕು ಸಾಮಾನ್ಯವಾಗಿ ಬುಡಕಟ್ಟು ಸಮುದಾಯಗಳಲ್ಲಿ ಬೆಳವಣಿಗೆ ಮತ್ತು ಅಭಿವೃದ್ದಿ ಇವೆರಡು ಪದಗಳು ಪರ್ಯಾಯವಾಗಿ ಬಳಸಲಾಗುತ್ತಿದೆ. ಬೆಳವಣಿಗೆ ಎಂದರೆ ಸದಾ ಕಾಲವೂ ನಡೆಯುತ್ತಿರುವ ಒಂದು ಸಾಮಾನ್ಯ ಕ್ರಿಯೆ, ರಾಷ್ಟ್ರದ ಅರ್ಥ ವ್ಯವಸ್ಥೆಯಲ್ಲೂ ಬದಲಾವಣೆಗಳು ಆಗುತ್ತಲೇ ಇರುತ್ತದೆ. ಇಲ್ಲಿ ಅಭಿವೃದ್ಧಿ ಎಂದರೆ ಕೇವಲ ಆರ್ಥಿಕಾಭಿವೃದ್ಧಿ ಎಂದು ಹೇಳುವಂತಹದಲ್ಲ. ಅಭಿವೃದ್ಧಿಯನ್ನುವಂತಹ ಬಹುಮುಖವಾದ ಅಂಶ. ಜೀವನ ಮಟ್ಟದಲ್ಲಿ ಹೆಚ್ಚಳ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವಂಥ ಸಾಮಾಜಿಕ ವ್ಯವಸ್ಥೆ ನಿರ್ಮಾಣ ಮೂಲಭೂತ ಅವಶ್ಯಕತೆಗಳನ್ನಾದರೂ ಪೂರೈಸಿಕೊಳ್ಳಬಹುದಾದಂಥ ಒಂದು ಪರಿಸ್ಥಿತಿ ಇನ್ನೂ ಹತ್ತು ಹಲವು ಪರಿಸ್ಥಿತಿಗಳು ಆರ್ಥಿಕ

ಬೆಳವಣಿಗೆಯ ಜೊತೆ ಜೊತೆಗೆ ನಿರ್ಮಾಣವಾದಾಗ ಮಾತ್ರ ಅಭಿವೃದ್ದಿ ಒಂದು ನಿಜವಾದ ಅರ್ಥದಲ್ಲಿ ಉಂಟಾಗುತ್ತದೆ ಎಂಬುದು ಗಮನಾರ್ಹವಾದ ಸಂಗತಿ ಅಭಿವೃದ್ದಿ ಎನ್ನುವುದು ಅಲೆಮಾರಿಗಳಾದ ಮಂಗಾರವಾಡಿಗರಲ್ಲಿ ಹತ್ತು ಹಲವು ಆಯಾಮಗಳ ಜೊತೆಗೆ ಬೌದ್ಧಿಕವಾಗಿ ಮಾನಸಿಕವಾಗಿ ಅಭಿವೃದ್ದಿ ಹೊಂದುವುದು ಅತ್ಯಗತ್ಯವಾಗಿದೆ.

ಅಭಿವೃದ್ಧಿ ಎಂಬ ಪರಿಕಲ್ಪನೆಯ ಅರ್ಥ ಕಾಲದಿಂದ ಕಾಲಕ್ಕೆ ಬದಲಾಗುತ್ತಿರುವುದನ್ನು ಕಾಣುತ್ತೇವೆ. ಮಂಗಾರವಾಡಿ ಮಹಿಳೆಯರು ಅಲ್ಪಸ್ವಲ್ಪ ಸುಧಾರಣೆಯ ಹಾದಿಯಲ್ಲಿ ಸಾಗುತ್ತಿರುವಂತಹದು ಕಂಡುಬರುತ್ತದೆ. ಪ್ರಾರಂಭದಲ್ಲಿ ಅದನ್ನು ಕೇವಲ ಆರ್ಥಿಕ ಬೆಳವಣಿಗೆ ಎಂಬ ಅರ್ಥದಲ್ಲಿ ಬಳಸಲಾಗುತ್ತಿತ್ತು. ಅಭಿವೃದ್ಧಿಯನ್ನು ಅಳೆಯುವುದು ಮಂಗಾರವಾಡಿಗರನ್ನು ನೋಡಿದರೆ ಹಲವಾರು ಸಮಸ್ಯೆಗಳ ಒಂದು ಸರಮಾಲೆಯಾಗಿ ಕಂಡುಬರುತ್ತದೆ. ಸಮಕಾಲೀನ ಸಂದರ್ಭದಲ್ಲಿ ಮಹಿಳೆಯರು ಅದರಲ್ಲಿ ಬುಡಕಟ್ಟು ಸಮುದಾಯದ ಮಹಿಳೆಯರೇ ಆಗಿರಬಹುದು, ಆದಿವಾಸಿ ಸಮುದಾಯದ ಮಹಿಳೆಯರೇ ಆಗಿರಬಹುದು ನಗರ ಮತ್ತು ಗ್ರಾಮೀಣ ಪ್ರದೇಶದ ಮಹಿಳೆಯರೆ ಆಗಿರಬಹುದು ಸಮುದಾಯಗಳಲ್ಲಿನ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದು ಜೀವನದ ಗುಣಮಟ್ಟವನ್ನು ಹೆಚ್ಚಿಸುವುದು ಮತ್ತು ಪರಾವಲಂಬಿತನದಿಂದ ಮುಕ್ತಿ ಹೊಂದುವುದು ಇವು ಅಭಿವೃದ್ಧಿಯನ್ನು ಮುಖ್ಯ ವ್ಯಕ್ತಿಯಿಂದ ವ್ಯಕ್ತಿಗೆ ದೇಶದಿಂದ ದೇಶಕ್ಕೆ ಸಮಾಜದಿಂದ ಸಮಾಜಕ್ಕೆ ಕಾಲದಿಂದ ಕಾಲಕ್ಕೆ ಒಂದೇ ರೀತಿಯಾಗಿ ಇರುವುದು ಕಂಡು ಬರುವುದಿಲ್ಲ. ಅದು ಭಿನ್ನವಾದಂತಹ ಒಂದು ಪ್ರಕ್ರಿಯೆಯಾಗಿದೆ.

೫.೫ ಅಭಿವೃದ್ದಿ ಪ್ರಕಿಯೆಯಲ್ಲಿ ಲಿಂಗವ್ಯವಸ್ಥೆಯ ಪ್ರಕ್ರಿಯೆಗಳು

ಹೀಗೆ ಬದಲಾಗುತ್ತ ಬಂದ ಅಭಿವೃದ್ದಿಯ ಪರಿಕಲ್ಪನೆ ಮತ್ತು ಪ್ರಕ್ರಿಯೆಯಲ್ಲಿ ಮಹಿಳೆಯ ಪಾತ್ರ ಏನೆಂಬುದು ತಿಳಿಯಲು ಮಹಿಳೆ ಮತ್ತು ಅಭಿವೃದ್ಧಿ ಎಂಬ ವಿಷಯವನ್ನು ನೋಡುವಂತಹ ಸಂದರ್ಭದಲ್ಲಿ ಮಹಿಳೆಯರಿಗೆ ಸಂಬಂಧಪಟ್ಟಂತೆ ಅಧ್ಯಯನದ ಸಂಶೋಧನೆ, ವಿಚಾರ, ಸಂಕಿರಣಗಳು ಪುಸ್ತಕ, ಲೇಖನ ಪ್ರಬಂಧ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳನ್ನು ನಡೆಸುತ್ತಿವೆ. ಮಹಿಳೆಗೆ ಸಂಬಸಿದಂತೆ ಸಮಾಜ, ಸಮುದಾಯ, ಕುಟುಂಬ ಶಿಕ್ಷಣ, ದುಡಿಮೆ ಆರ್ಥಿಕತೆ, ರಾಜಕೀಯ, ಅಭಿವೃದ್ಧಿ ಪ್ರಕ್ರಿಯೆ ಆರೋಗ್ಯ ಮುಂತಾದವುಗಳನ್ನು ಕಂಡು ಅಧ್ಯಯನ ಕ್ರಮಗಳು ಜರುಗುತ್ತ ಬಂದಿದದರೂ ಮಹಿಳೆಯರು ಅಭಿವೃದ್ದಿಯನ್ನು ಹೊಂದುತಿರುವುದು ಒಂದು ಪ್ರಮುಖ ವಿಷಯವಾಗಿದೆ.

ಅಭಿವೃದ್ಧಿ ಚಿಂತನೆಗಳಲ್ಲಿ ಮಹಿಳೆಯರ ಆರ್ಥಿಕ ಚಟುವಟಿಕೆಗಳು ಕುಟುಂಬಕ್ಕೆ ಸಮುದಾಯಕ್ಕೆ ಹಾಗೂ ಸಮಾಜಕ್ಕೆ ಅವರು ನೀಡುವ ಅತ್ಯಮುಲ್ಯವಾದ ಕೊಡುಗೆಯ ಪ್ರಸ್ತಾಪ

ಹೆಚ್ಚು ಕಡಿಮೆ ಇರಲೇ ಇಲ್ಲವೆಂದು ಹೇಳಬಹುದು ಬುಡಕಟ್ಟುಗಳಿಗೆ ಸಮುದಾಯಗಳಿಗೆ, ಬುಡಕಟ್ಟು ಮಹಿಳೆಯರಿಗೆ ಕೆಲವೂ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ಆಧ್ಯತೆ ನೀಡಿದ್ದರೂ ಅವುಗಳನ್ನು ಮಹಿಳೆಯರು ತಾಯಿಯನ್ನಾಗಿ ಹಾಗೂ ಗೃಹಿಣಿಯರನ್ನಾಗಿ ಮಾತ್ರ ನೋಡಲಾಗುತ್ತಿತ್ತು. ಮಕ್ಕಳ ಹಾಗೂ ಸಮುದಾಯದ ಪೋಷಿಸುತ್ತ, ಬೇಡಿಕೆಗಳನ್ನು ಈಡೇರಿಸುತ್ತಾ ಸಮುದಾಯಗಳ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿರುವಂತಹದು ಮಹಿಳೆಯರ ಶಿಕ್ಷಣ, ಆರೋಗ್ಯ ಕಾರ್ಯಕ್ರಮಗಳು ಹೊರ ಬಂದವೂ ಅಭಿವೃದ್ಧಿ ಚಿಂತನೆಯಲ್ಲಿ ಸಮುದಾಯದಲ್ಲಿ ಕಂಡುಬರುವ ಲಿಂಗಾಧಾರಿತ, ಶ್ರಮ ವಿಭಜನೆಗೆ ಹೆಚ್ಚಿನ ಒತ್ತನ್ನು ನೀಡಲಾಗಿತ್ತು. ಇದ್ದರಿಂದ ಅಭಿವೃದ್ದಿ ಕಾರ್ಯಗಳಲ್ಲಿ ಪುರುಷರನ್ನು ಕುಟುಂಬದ ಯಜಮಾನರನ್ನಾಗಿ ಗುರುತಿಸಿ ಅವರ ಕೈಗೊಳ್ಳುವ ಕೆಲಸಗಳಿಗೆ ಅಂದರೆ ಅವರ ಉತ್ಪಾದನಾ ಚಟುವಟಿಕೆಗಳಿಗೆ ತಕ್ಕಂತೆ ಕಾರ್ಯಕ್ರಮಗಳನ್ನು ರೂಡಿಸಿದರೆ, ಮಹಿಳೆಯರು ಗೃಹಿಣಿಯರಾಗಿ ತಾಯಂದಿರಾಗಿ, ನಿರ್ವಹಿಸುವ ಕೆಲಸಗಳನ್ನು ತಕ್ಕಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ೧೯೭೦ರ ದಶಕದಲ್ಲಿ ಅಭಿವೃದ್ಧಿಯು ಹೆಚ್ಚು ಜನ ಕೇಂದ್ರಿಕೃತ ಅಥವಾ ಜನಪದವಾದದಂತೆ ಅದರಲ್ಲಿ ಸ್ತ್ರೀಪರ ಕಾಳಜಿಗಳು ಕಾಣಿಸಿಕೊಳ್ಳತೊಡಗಿದವು.

ಬಡತನ ನಿರ್ಮೂಲನೆ ಕಾರ್ಯಕ್ರಮಗಳಿಗೆ ಫಲಾನುಭವಿಗಳನ್ನು ಗುರ್ತಿಸುವಾಗ ಬಡವರಲ್ಲಿ ಹೆಚ್ಚು ಬಡವರಾಗಿರುವವರು ಮಹಿಳೆಯರು ಮತ್ತು ಅತ್ಯಂತ ಬಡ ಸಮುದಾಯಗಳು ಎಂದರೆ ಬುಡಕಟ್ಟು ಜನಾಂಗಗಳು ಆದಿವಾಸಿಗಳು ಮೂಲಭೂತ ಅಗತ್ಯಗಳನ್ನು ಹೊಂದದೆ ಇರುವವರು ಮಹಿಳೆಯರು ಎಂಬ ಅಂಶಗಳು ಕಂಡುಬರುತ್ತವೆ. ಮಹಿಳೆಯರನ್ನು ಕಂಡು ವಿಶೇಷವಾದಂತ ಚಿಂತನೆಯನ್ನು ಬೆಳಕಿಗೆ ಬಂದವು ಅದಲ್ಲದೇ ದೇಶ ವಿದೇಶಗಳಲ್ಲಿ ನಡೆದ, ಮಹಿಳಾ ಚಳುವಳಿಗಳು ರಾಷ್ಟ್ರೀಯ ಅಂತರರಾಷ್ಟ್ರೀಯ ಸಂಸ್ಥೆಗಳಲ್ಲಿ ಹಾಗೂ ಸರ್ಕಾರದ ವಲಯಗಳಲ್ಲಿ ಮಹಿಳೆಯರ ದುಡಿಮೆಯ ಸಾಮಾಜಿಕ ಮಹತ್ವವನ್ನು ಕುರಿತು ಜಾಗೃತಿಯ ಧ್ವನಿಯ ಪಾತ್ರ ಮಹತ್ವವಾದದೂ ಈ ಸಂದರ್ಭದಲ್ಲಿ ಮಹಿಳೆ ಮತ್ತು ಅಭಿವೃದಿ ಕುರಿತಂತೆ ಮಹಿಳೆಯರ ಆರ್ಥಿಕ ಚಟುವಟಿಕೆಗಳನ್ನು ಕುರಿತು ಸಂವಾದ ಏರ್ಪಡಿಸುವುದು ಅಷ್ಟೇ ಅಲ್ಲದೆ ಅವರ ಅಗತ್ಯ ಮತ್ತು ಆದ್ಯತೆಗಳನ್ನು ಅವಶ್ಯಕವಾಗಿ ಗಣನೆಗೆ ತೆಗೆದುಕೊಳ್ಳಬೇಕು ಎಂದು ಹೇಳುತ್ತಾ ಅಭಿವೃದ್ಧಿಯಲ್ಲಿ ಮಹಿಳೆಯರು ಸಂಪೂರ್ಣವಾಗಿ ನಿರ್ಲಕ್ಷಕ್ಕೆ ಒಳಗಾದ ಗುಂಪು ಎಂದು ಈ ನಿಲುವುವಾದಿಸುತ್ತದೆ. ಆದರೆ ಇನ್ನೊಂದು ನೀಲವು ಸೂಚಿಸಿದ್ದು ಮಹಿಳೆಯರು ಈಗಾಗಲೇ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಯೋಜನಾಕಾರಲ್ಲಿ ಮಹಿಳೆಯರ ದುಡಿಮೆ ಹಾಗೂ ಕೊಡುಗೆಗಳ ಬಗ್ಗೆ ಹಲವು ಮಿಥ್ಯಗಳು ಸೃಷ್ಟಿಯಾಗಿರುವುದರಿಂದ ಅವರ ನಿಜವಾದ ಅಗತ್ಯಗಳು ನಿರ್ಲಕ್ಷಕ್ಕೆ

ಒಳಗಾಗಿವೆ, ಹಾಗೂ ಅವರ ಶ್ರಮವನ್ನು ಶೋಷಿಸಲಾಗಿದೆ. ಇದರ ಪರಿಣಾಮವಾಗಿ ಅಭಿವೃದ್ಧಿ ಕಾರ್ಯಗಳ ಲಾಭಹಾಗೂ ಇತರ ಸಂಪನ್ಮೂಲಗಳನ್ನು ಪಡೆಯುವಲ್ಲಿ ಮಹಿಳೆಯರು ಪುರುಷರಿಗಿಂತ ಹಿಂದೆ ಬಿದ್ದಿದ್ದಾರೆ. ಸಮುದಾಯದ ನಿರ್ವಹಣೆಯನ್ನು ಮಹಿಳೆಯರು ಆರ್ಥಿಕ ಪರಿಸ್ಥಿತಿಯನ್ನು ಬಲಪಡಿಸಲು ಕಡಿಮೆ ಆದಾಯವನ್ನು ತರುವಂತಹ ಸ್ವಯಂ ಉದ್ಯೋಗ ಚಟುವಟಿಕೆಗಳನ್ನು ಉತ್ತೇಜಿಸುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಮಹಿಳೆಯರ ಕೌಶಲ್ಯ ಬುದ್ದಿಮಟ್ಟ, ಸಾಮಾರ್ಥ್ಯ ಹಾಗೂ ಸಮಯದ ಅವಕಾಶ, ಇವು ಮಹಿಳೆಯರನ್ನು ಔಪಚಾರಿಕ ಉದ್ಯೋಗಗಳಲ್ಲಿ ತೊಡಗಿಸುವುದಕ್ಕಿಂತ ಸ್ವರ್ಯ ಉದ್ಯೋಗದಲ್ಲಿ ತೊಡಗಿಸಲು ಹೆಚ್ಚು ಸಹಾಯಕವಾಗಿವೆ. ಎಂಬ ನಂಬಿಕೆಯಿಂದ ಮಹಿಳೆಯರ ಸ್ವಯಂ ಉದ್ಯೋಗಕ್ಕೆ ಹೆಚ್ಚು ಮಹತ್ವ ನೀಡುತ್ತಾ ಬಂದಿರುವಂತಹದು ಕಂಡುಬರುತ್ತದೆ. ಮಹಿಳೆಯು ಉದ್ಯೋಗಕ್ಕೆ ಹೆಚ್ಚು ಒತ್ತುಕೊಟ್ಟು ಅವರ ಕೌಶಲ್ಯವನ್ನು ಉತ್ತಮಗೊಳಿಸುವುದು ಹಣಕಾಸಿನ ನೆರವು ನೀಡುವುದು ಹಾಗೂ ಉದ್ಯೋಗ ಶೀಲತೆಯನ್ನು ಚುರುಕುಗೊಳಿಸುವುದು ಮಹಿಳಾ ಅಭಿವೃದ್ಧಿ ಕಾರ್ಯಗಳು ಗುರಿಯಾದವು ಆದರೆ ಈ ಎಲ್ಲಾ ಪ್ರಯತ್ನಗಳು ಸಣ್ಣ ಪ್ರಮಾಣದಲ್ಲಿರುತ್ತಿದ್ದು ಅವುಗಳಿಗೆ ನೀಡುತ್ತಿದ್ದ ಹಣದ ಮೊತ್ತವು ಕೂಡಾ ಕಡಿಮೆಯಾಗಿರುವಂತಹದು ತಿಳಿದುಬರುತ್ತದೆ. ಅಭಿವೃದ್ಧಿಯಲ್ಲಿ ಮಹಿಳಾ ದೃಷ್ಠಿಕೋನವನ್ನು ಅಳವಡಿಸಿಕೊಂಡು ಅನೇಕ ಕಾರ್ಯಕ್ರಮಗಳಲ್ಲಿ ಮಹಿಳೆಯರನ್ನು ಕುರಿತು ವಿಶ್ವದ ಗಮನವನ್ನು ಹರಿಯಿತ್ತು, ಭಾರತವು ಕೂಡಾ ಮಹಿಳೆಯರ ಜೀವನ ಮತ್ತು ಇದರ ಚಟುವಟಿಕೆಗಳ ಬಗ್ಗೆ ಸೂಕ್ತ ಮಾಹಿತಿ ಹಾಗೂ ತಿಳುವಳಿಕೆಯಿಲ್ಲದಿರುವುದು ಕಂಡು ಬರುತ್ತದೆ, ಮಹಿಳೆಯರ ಸ್ಥಾನವನ್ನು ಅಧ್ಯಯನ ಮಾಡಿ ವರದಿಗಳನ್ನು ತಯಾರಿಸಿದ ಮಹಿಳೆಯರ ಶಿಕ್ಷಣ ಮಟ್ಟವನ್ನು ಉತ್ತಮ ಪಡಿಸಲು ಉದ್ಯೋಗವಾಕಾಶಗಳನ್ನು ಹೆಚ್ಚಿಸುವುದು ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅವರ ಭಾವಹಿಸುವಿಕೆಯನ್ನು ಹೆಚ್ಚಿಸುವುದು ಸೇವಾ ಸೌಲಭ್ಯಗಳನ್ನು ಒದಗಿಸುವುದು ಮುಂತಾದ ಅಂಶಗಳನ್ನು ಹೆಚ್ಚಿಗೆ ಗಮನಕೊಡಲಾಯಿತ್ತು. ಈ ಅವಧಿಯಲ್ಲಿ ಸರ್ಕಾರೇತರ ಸಂಘ ಸಂಸ್ಥೆಗಳು ಮಹಿಳಾ ಅಭಿವೃದ್ಧಿ ಕುರಿತು ಹೆಚ್ಚು ಕೆಲಸ ಮಾಡಲು ಪ್ರಾರಂಭಿಸಿದವು. ಮಹಿಳಾ ಸ್ವಯಂ ಸೇವಾ ಸಂಸ್ಥೆಗಳು ಮಹಿಳಾ ಹೋರಾಟಕ್ಕೆ ಬೆಂಬಲ ನೀಡುವ ಗುಂಪುಗಳು ಹಾಗೂ ಅಂತರಾಷ್ಟ್ರೀಯ ವ್ಯಾಪ್ತಿವುಳ್ಳ ಅನೇಕ ಸಂಸ್ಥೆಗಳು ಹುಟ್ಟಿಕೊಂಡವು ಆದರೆ ಮಂಗಾರವಾಡಿಮಹಿಳೆಯರು ಯಾವುದೇ ಸದಾವಕಾಶಗಳು ಹೊಂದಲಿಲ್ಲ. ಪ್ರತಿಯೊಂದು ಹಂತದಲ್ಲಿ ಮಹಿಳೆ, ಉನ್ನತ ಸ್ಥಾನ ಹೊಂದುತ್ತಾ ಬಂದಿರುವುದು ಅವಳ ಆರ್ಥಿಕ ಸ್ವಾವಲಂಬನೆ ಹೊಂದುತ್ತ ಪ್ರತಿಯೊಂದು ಸಮುದಾಯಗಳು ಅಭಿವೃದ್ದೀ ಪಥದತ್ತ ಸಾಗಿಕೊಂಡು ಬಂದಿರುವಂತಹದು ತಿಳಿದುಬರುತ್ತದೆ. ಮಹಿಳೆಯರ ದುಡಿಮೆಯ ಪ್ರಮಾಣ ಅದು ಕೇವಲ ವೇತನ ನೀಡುವ ಕೆಳಸ್ತರದ ಕೆಲಸಗಳಲ್ಲಿ ಮಾತ್ರ ಎಂಬುದು ಸ್ಪಷ್ಟವಾಗುತ್ತದೆ.

ಅಲ್ಲದೆ ದುಡಿಮೆಯ ಪ್ರಮಾಣವನ್ನು ಮಾರುಕಟ್ಟೆಯ ಮತ್ತು ಆರ್ಥಿಕ ಚಟುವಟಿಕೆಗಳ ಮೂಲಕ ಅಳೆಯಲಾಗುತ್ತದೆ. ಮೊದಲ ಬಾರಿಗೆ ಕೃಷಿ ಉತ್ಪಾದನೆ ಕುಂಠಿತಗೊಳ್ಳುತ್ತಿರುವುದ್ದಕ್ಕೂ ಹಾಗು ಮಹಿಳೆಯರಿಗೆ ಶ್ರಮ ಮತ್ತು ಅದಕ್ಕೆ ತಕ್ಕಂತೆ ಆರ್ಥಿಕ ಸೌಲಭ್ಯಗಳು ದೊರೆಯದೆ ಮಹಿಳೆಯರ ಜೀವನ ಕಷ್ಟಕರವಾಗಿದೆ ಎಂದು ಹೇಳಬಹುದು.

೫.೬ ಅಭಿವೃದ್ದಿಯಲ್ಲಿ ಮಹಿಳೆ (womens in Devolopment)

ಆರ್ಥಿಕ ಬೆಳವಣಿಗೆ ಮತ್ತು ಆಧುನಿಕತೆಯ ದಿಸೆಯಲ್ಲಿ ಮಹಿಳೆಯು ಅಭಿವೃದ್ಧಿ ಪಥದಲ್ಲಿ ಸಾಗುವಂತಹ ಒಂದು ದಿಸೆಯಲ್ಲಿದ್ದಾಳೆ, ಮಹಿಳೆಯರಿಗೆ ಉತ್ತಮ ಶಿಕ್ಷಣ, ಸಮಾನ ವೇತನ, ಒಳ್ಳೆಯ ಜೀವನಮಟ್ಟ ಸಿಗುವಂತಾದರೆ ಸಂಪ್ರದಾಯಿಕ ಪುರುಷ ಪ್ರಧಾನ ನಂಬಿಕೆಗಳು ತಾವಾಗಿಯೇ ಅಳಿಸಿ ಹೋಗುತ್ತಿವೆ. ಎಂದು ನಂಬುತ್ತವೆ. ಇದು ಮಹಿಳಾ ವಿಷಯಗಳಿಗೆ ಐತಿಹಾಸಿಕ ದೃಷ್ಟಿಕೋನವನ್ನಾಗಲಿ, ಮಹಿಳೆಯಲ್ಲೂ ಕಂಡು ಬರುವ, ಜಾತಿ ವರ್ಗ ಹಾಗೂ ಜನಾಂಗೀಯ ವಿಂಗಡಣೆಗಳಿಗಾಗಿ ಪ್ರಾಮುಖ್ಯತೆಯನ್ನು ನೀಡುವುದಿಲ್ಲ, ಈ ಚಿಂತನೆಯಲ್ಲಿ ಮಹಿಳೆಯರ ಅನುಭವ ಹಾಗೂ ವ್ಯಕ್ತಿಗಳಾಗಿ ಅವರಲ್ಲಿರುವ ಸಾಮರ್ಥ್ಯಕ್ಕೆ ಹೆಚ್ಚು ಒತ್ತು ನೀಡುವುದು ಹೆಚ್ಚಿನ ಪ್ರಾಶಸ್ತ್ಯ ನೀಡುವುದು ಗಮನಾರ್ಹ. ಪ್ರಾರಂಭದಲ್ಲಿ ಮಹಿಳೆಯರ ದುಡಿಮೆಯ ಅಗೋಚರತೆ, ಅವರ ಚಟುವಟಿಕೆಗಳ ಬಗ್ಗೆ ಇರುವ ಮಾಹಿತಿ ಕೊರತೆ, ಅಭಿವೃದ್ದಿ ಪ್ರಕ್ರಿಯಿಂದ ಅವರನ್ನು ಹೊರಗಿಟ್ಟಿರುವುದು ಇವೇ ಮೊದಲಾದ ಅಂಶಗಳನ್ನು ಎತ್ತಿ ತೋರಿಸಿದರು, ಅಭಿವೃದ್ದಿಯಲ್ಲಿ ಮಹಿಳೆಯರನ್ನು ಹೆಚ್ಚು ತೊಡಗಿಸುವುದು ಸೂಕ್ತ ತಾಂತ್ರಿಕ ಬೆಳವಣಿಗೆಯಿಂದ ಅವರ ಕೆಲಸದ ಹೊರೆಯನ್ನು ಕಡಿಮೆ ಮಾಡುವುದು ಅವರು ಆಧುನಿಕ ಶಿಕ್ಷಣಜ್ಞಾನ ಪಡೆಯುವಂತೆ ಮಾಡುವುದು ಹಣಕಾಸಿನ ಸೌಲಭ್ಯ ಒದಗಿಸುವುದು ಕೃಷಿ ಕ್ಷೇತ್ರದಲ್ಲೂ ಅವರಿಗೆ ತರಬೇತಿ ನೀಡುವುದು ಮುಂತಾದ ಅಭಿವೃದ್ಧಿ ಕಾರ್ಯಗಳತ್ತ ಅವರ ಗಮನವನ್ನು ಹರಿಸುವಂತಹುದಾಗಿದೆ. ಸಂಶೋಧನೆ ಯೋಜನೆ ಮತ್ತು ಸಂಯೋಜನೆಗಳ ಮೂಲಕ ಮಹಿಳೆಯರಿಗೆ ವಿಶೇಷ ಹಾಗೂ ಪ್ರತ್ಯೇಕವಾದಂತ ಪ್ರಾಮುಖ್ಯತೆಯನ್ನು ನೀಡಿ ಅಭಿವೃದ್ದಿಯ ಲಾಭವು ಅವರಿಗೆ ತಲುಪುವಂತೆ ಮಾಡಬೇಕಾದರೂ ಮುಖ್ಯವಾಗಿದೆ. ಅಭಿವೃದ್ದಿಯು ಬಡತನ ನಿರ್ಮೂಲನಾ ಕಾರ್ಯ ಹಾಗೂ ಮೂಲಭೂತ ಅಗತ್ಯಗಳ ಪೂರೈಕೆ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಬೇಕೆಂದು ಪ್ರಸ್ತಾಪಿಸಲಾಯಿತು.

ಸಮುದಾಯಗಳಲ್ಲಿ ಸ್ತ್ರೀ ಪುರುಷರ ಪಾತ್ರಗಳು ಮಹತ್ವದಾಗಿವೆ. ಸಮಾನತೆಗೆ ಒತ್ತು ನೀಡುವ ಈ ದೃಷ್ಟಿಕೋನವು ಮಹಿಳೆಯರು ಸಾರ್ವಜನಿಕ ಕ್ಷೇತ್ರವನ್ನು ಪ್ರವೇಶಿಸಬೇಕು ಸಂಪ್ರದಾಯದ ಜೀವನಕ್ಕೊಂದು ಆಕಾರ ಕೊಡುತ್ತ ಖಾಸಗಿ ಸಂಸ್ಥೆಗಳಲ್ಲಿ ತಮ್ಮ ಉದ್ಯೋಗ

ಮತ್ತು ಜೀವನವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಅಭಿವೃದ್ದಿಯಲ್ಲಿ ಮಹಿಳೆ ಪ್ರತಿಪಾಲಿಸಿದ ಕೆಲವು ಕಾರ್ಯಕ್ರಮಗಳಿಗೆ ಮಹಿಳೆಯರಿಗೇ ಹೆಚ್ಚು ಸ್ಪಂದಿಸಬೇಕಾಗಿದೆ. ಜವಾಬ್ದಾರಿ ಕೆಲಸ ಹಾಗು ಮೌಲ್ಯಗಳ ಅಸಮಾನ ಹಂಚಿಕೆಯನ್ನು "ಸ್ವಾಭಾವಿಕ"ವೆಂದು ಪರಿಗಣಿಸಿ ಅದನ್ನು ಬದಲಾಯಿಸಲು ಸಾಧ್ಯವಿಲ್ಲ ಬಡತನ ನಿರ್ಮೂಲನೆಯಲ್ಲಿ ಮಹಿಳೆ ಅಭಿವೃದ್ಧಿ ಪಥದಲ್ಲಿ ವಿವಿಧ ಹಂತಗಳಲ್ಲಿ, ಮುಂದುವರೆದುಕೊಂಡು ಬಂದಿರುವಂತಾಗಿದು ತಿಳಿದು ಬರುತ್ತದೆ. ಮಹಿಳಾ ಅಭಿವೃದ್ದಿ ಯೋಜನೆಗಳಿಗೆ ಹಣಕಾಸಿನ ಸಹಾಯ ದೊರೆಯುತ್ತಿರಲಿಲ್ಲ. ಇಂಥಹ ಕಾರ್ಯಕ್ರಮಗಳು ಕೇವಲ ಅಭಿವೃದ್ದಿ ಕ್ಷೇತ್ರಗಳಿಗೆ ಸೀಮಿತವಾಗಿರುತ್ತಿದ್ದವು ಅಲ್ಲದೆ ಕಡಿಮೆ ಆದಾಯ ಸಿಗುವಂತಹ ಕೆಲಸಗಳಲ್ಲಿ ಮಾತ್ರ ಮಹಿಳೆಯರನ್ನು ತೊಡಗಿಸುತ್ತಿದ್ದಾರೆ. ಸಮಾನ ವೇತನ ಮತ್ತು ಅಭಿವೃದ್ದಿ ಹೊರೆಯನ್ನು ಸಮಾನ ಹಂಚುವುದರಲ್ಲಿ ಅನೇಕ ತಾರತಮ್ಯಗಳು ಕಂಡು ಬರುವಂತಹದು ತಿಳಿದುಬರುತ್ತದೆ. ಸಮುದಾಯದಲ್ಲಿನ ವ್ಯಕ್ತಿಗಳ ಮತ್ತು ಸಮಾಜದ ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಜೀವನ ಸುಧಾರಣಾ ಪ್ರಕ್ರಿಯೆಯೇ ಅಭಿವೃದ್ಧಿ ಎಲ್ಲಾ ಜನರ ಮೂಲಭೂತ ಅಗತ್ಯಗಳ ಪೂರೈಕೆಯಾಗಿ ಸಂಪತ್ತಿನ ಸಮಾನ ಹಂಚಿಕೆಯಾಗಿ ಜೀವನ ಮಟ್ಟ ಸುಧಾರಣೆಗೊಂಡು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಎಲ್ಲ ಜನರಿಗೂ ಸಮಾನ ಅವಕಾಶಗಳಿರಬೇಕು. ಇಂತಹ ವ್ಯವಸ್ಥೆಯಲ್ಲಿ ಮಹಿಳೆ ಮತ್ತು ಪುರುಷರಿಬ್ಬರೂ ಕ್ರಿಯಾಶೀಲ ದುಡಿಮೆಗಾರರಾಗುತ್ತಾರೆ. ಕೇವಲ ಅಭಿವೃದ್ಧಿಯ ಲಾಭ ಪಡೆಯುವ ನಿಷ್ಕ್ರಿಯ ದುಡಿಮೆಗಾರರಾಗುತ್ತಾರೆ. ಅವರಿಬ್ಬರೂ ಸಾಮಾಜಿಕ, ಆರ್ಥಿಕ ವ್ಯವಸ್ಥೆಯು ಬೇರೆ ಬೇರೆ ಸ್ಥಾನಗಳನ್ನು ಹೊಂದಿರುವುದರಿಂದ ಅವರ ಆಸಕ್ತಿ ಮತ್ತು ಬೇಡಿಕೆಗಳು ಬೇರೆ ಬೇರೆಯಾಗಿರುವಂತಹದು ತಿಳಿದು ಬರುತ್ತದೆ. ಮಹಿಳೆಯರ ನಡುವೆ ಇರುವ ಭಿನ್ನಾಭಿಪ್ರಾಯಗಳು ವಿರೋದಭ್ಯಾಸವನ್ನು ಮತ್ತಷ್ಟು ಹೆಚ್ಚಿಸುತ್ತವೆ "ಸಾಮಾಜಿಕ ನೀತಿ ನಿಯಮಗಳನ್ನು ಮಹಿಳೆಯರ ಮೇಲೆ ಬಲತ್ಕಾರವಾಗಿ ಹೇರದೆ ಪರಸ್ಪರ ಸಮಾಲೋಚನೆ ಮತ್ತು ಸಹಕಾರದಿಂದ ರೂಪಿಸಬೇಕು."[೮] ಮಹಿಳಾ ಚಳುವಳಿಯಲ್ಲಿ ಹೋರಾಟದಲ್ಲಿ ವೈವಿದ್ಯತೆಯನ್ನು ಸೃಷ್ಟಿಸಿ ಅಲ್ಲಿ ಒಂದು ಸಾಮಾನ್ಯ ದೃಷ್ಟಿಕೋನವನ್ನು ಹೊಂದುವುದನ್ನು ಸಾಮಾಜಿಕ ವ್ಯವಸ್ಥೆ ಕಷ್ಟವಾಗಿಸುತ್ತದೆ.

ಸಮುದಾಯಗಳಲ್ಲಿ ಮಹಿಳೆಯರ ಬಗೆಗೆ ಯಾವಯಾವ ಕಲ್ಪನೆಗಳು ಹಾಗೂ ಆಚರಣೆಗಳಿವೆಯೋ ಅವುಗಳನ್ನು ಹಾಗೆಯೇ ಉಳಿಸಿಕೊಂಡು ಕೆಲವು ವಿಚಾರಗಳಲ್ಲಿ ಮಾತ್ರ ಬದಲಾವಣೆಯನ್ನು ಮಾಡಿಕೊಂಡಿದ್ದಾರೆ. ಈ ದೃಷ್ಟಿಕೋನ ಮಹಿಳೆಯರ ಸಮಸ್ತ ಸ್ಥಿತಿಗೆ ನಿಜಾಂಶದ ವ್ಯವಸ್ಥೆಗೆ ಕಾರಣವನ್ನು ಗುರುತಿಸುವುದಕ್ಕಾಗಲಿ ಅಥವಾ ವ್ಯವಸ್ಥೆಯನ್ನು ಪ್ರಶ್ನಿಸುವ

ಗೋಜಿನಲ್ಲಿ ಹೋಗುವುದಿಲ್ಲ. ಆದರೆ, ಮಹಿಳೆಯರ ಪರಿಸ್ಥಿತಿಗೆ ಯಾವ ಯಾವ ಕೆಲಸಗಳನ್ನು ಮಾಡುತ್ತಾರೆ. ಅವರಿಗೆ ಸಿಗುತ್ತಿರುವ ಸಂಭಾವನೆ ಎಷ್ಟು ಅವರ ಕೆಲಸದ ಹೊರೆಯನ್ನು ಹೇಗೆ ಕಡಿಮೆ ಮಾಡಬೇಕು ಎಂದು ಪ್ರಶ್ನಿಸಿ ಅವರ ದುಡಿಮೆಗೆ ಬೆಲೆ ಕೊಡಬೇಕು ಎಂದು ಗುರ್ತಿಸಲಾಗುತ್ತದೆ. ಇದ್ದರಿಂದ ಸಾಮಾಜಿಕ ಗೌರವ ದೊರೆಯುತ್ತದೆ. ಪುರುಷರ ಗುಣಗಳನ್ನು ಹಾಗೂ ಬುದ್ದಿ ಸಾಮರ್ಥ್ಯವನ್ನು ಪ್ರತಿನಿಧಿಸುವ ಕೆಲಸಗಳಿಗೆ ಹೆಚ್ಚಿನ ಮೌಲ್ಯವಿರುತ್ತದೆ. ಆದರೆ ಮಹಿಳೆಯರು ಮಾಡುವ ದೈಹಿಕ ಶ್ರಮದಿಂದ ಕೂಡಿದ ಕೆಲಸಗಳಿಗೆ ಸಾಮಾಜಿಕ ಮತ್ತು ಆರ್ಥಿಕ ಮೌಲ್ಯವಿರುವುದಿಲ್ಲ. ಉದಾಹರಣೆಗೆ ಮಕ್ಕಳನ್ನು ನೋಡಿಕೊಳ್ಳುವುದು. ವೃದ್ದರು ಹಾಗೂ ಕಾಯಿಲೆಯವರು ಸೇವೆ ಮಾಡುವುದು ಈ ಕೆಲಸಗಳಿಗೆ ಮೌಲ್ಯವಿರುವುದಿಲ್ಲ. ಇದ್ದರೂ ಅದು ಕೆಳ ಮಟ್ಟದಾಗಿರುತ್ತದೆ. ಇದ್ದರಿಂದ ಪುರುಷರು ಬುದ್ದಿ ಉಪಯೋಗಿಸಿ ಮಾಡುವ ಕೆಲಸಗಳನ್ನು ಮಾಡಲು ಸಮರ್ಥರು ಹೆಂಗಸರು ದೈಹಿಕ ಶ್ರಮವಿರುವ ಕೆಲಸಗಳನ್ನು ಮಾಡಲು ಮಾತ್ರ ಸಮರ್ಥರು ಎಂಬ ನಂಬಿಕೆ ಈಗಲೂ ಅನೇಕ ಸಮಾಜಗಳಲ್ಲಿ ಸಮುದಾಯಗಳಲ್ಲಿ ಆಳವಾಗಿ ನೆಲೆಸಿರುವಂತಹದು ವಿಷಯವಾಗಿದೆ. ಇದ್ದರಿಂದ ಸಮುದಾಯಗಳಲ್ಲಿ ಪುರುಷ ಮತ್ತು ಮಹಿಳೆಯರ ಮೇಲೆ ಪ್ರಭಾವ ಬೀರುವ ಶ್ರೀಮಂತರ ಅಧಿಕಾರ ಶಕ್ತಿಯನ್ನು ಕುಂಠಿತಗೊಳಿಸುತ್ತದೆ ಅಭಿವೃದ್ಧಿ ಯೋಜನಾಕಾರರು ಮತ್ತು ನೀತಿಗಳನ್ನು ನಿರೂಪಿಸುವವರು ಮಹಿಳೆಯರ ಪರಾಧೀನತೆ ಹಾಗೂ ನಿರಂತರ ಬಡತನ, ಜನಸಂಖ್ಯಾ ಹೆಚ್ಚಳ, ಆರ್ಥಿಕ ಬಿಕ್ಕಟ್ಟುಗಳ ಕಾರ್ಯಚರಣೆಯಲ್ಲಿ ಗುರ್ತಿಸಬಹುದಾಗಿದೆ. ಆಗಾಗಲೇ ಸಾಮಾಜಿಕ ಜೀವನ ಪುನರ್ ರಚನೆ ಮಾಡಲು ಸಾಧ್ಯವಾಗುತ್ತದೆ ಎಂಬುದು ಅರಿಯಬಹುದಾಗಿದೆ. ಜೀವನವು ನಿರಂತರ ಪರಿವರ್ತನೆಯಾದುದು ಹಳೆಯದನ್ನು ಸಂರಕ್ಷಿಸಬೇಕು ಹಾಗೂ ಬೇಡವಾದ್ದುದನ್ನು ಬದಲಾವಣೆಯ ಮೂಲಕ ಸಮತೋಲನವನ್ನು ಸಮನ್ವಯತೆಯನ್ನು ಕಾಪಾಡಿಕೊಳ್ಳುತ್ತ ಬುಡಕಟ್ಟು ಸಮುದಾಯಗಳು ಪರಂಪರೆಗಳು ಆಚಾರಗಳು ವಿಚಾರಗಳು ಸಂಪ್ರದಾಯಗಳು ಸ್ವಲ್ಪ ಮಟ್ಟಿಗೆ ಬದಲಾವಣೆಯ ದಿಸೆಯಲ್ಲಿ ಹೋಗುವಂತಹದು ತಿಳಿದುಬರುತ್ತದೆ. ಒಂದು ಸಮುದಾಯವು ತನ್ನ ಪರಿಸರದೊಂದಿಗೆ ಸಹ ಜೀವನ ನಡೆಸಲು ನೆರವಾಗುವ ಸಮಗ್ರ ಸಂಸ್ಕೃತಿ ಸಂಪ್ರದಾಯಗಳೆ ಎಂದು ಭಾವಿಸುತ್ತಾರೆ. ಇತರ ಸಮುದಾಯಗಳೊಂದಿಗೆ ತನ್ನ ಔಚಿತ್ಯ, ಅನೌಚಿತ್ಯ, ವಿವೇಕಗಳೆಲ್ಲವು ಒಳಗೊಂಡಿರುತ್ತದೆ. ಹಳೆಯ ಜೀವನ ಹೊಸ ದಾರಿಗೆ ಎಡೆಮಾಡಿಕೊಡುತ್ತದೆ ಹಾಗೆಯೇ ಎಲ್ಲವನ್ನು ಹುಡುಕುವ ಸಂಶೋಧಿಸುವ ನೆಲೆ ಬೆಲೆ ಕೊಡುವ ಪ್ರಕ್ರಿಯೆ ಆರಂಭವಾಗುತ್ತಿದೆ. ಇದೀಗ ಮಹಿಳಾ ಸಂಸ್ಕೃತಿ ಮಹಿಳಾ ಚರಿತ್ರೆ ಮಹಿಳಾ ಸಾಹಿತ್ಯ ಅನ್ವೇಷಣೆಯ ಹೊಸ ಆಯಾಮಗಳನ್ನು ಹುಡುಕುವುದ ಇವೆಲ್ಲದಕ್ಕೂ ಉತ್ತರ ಕೊಡುವ ಸಾಮಾಜಿಕ ಸಾಂಸ್ಕೃತಿಕ ಬದಲಾವಣೆಯ ಸಂದರ್ಭ ಈಗ ಎದುರಾಗಿದೆ. ಸ್ತ್ರೀ

ಸಮುದಾಯವು ತನ್ನ ಅಸ್ತಿತ್ವದ ಶೋಧನೆಗೆ ತೊಡಗಿವೆ. ಪ್ರಾರಂಭದಲ್ಲಿ ಸ್ತ್ರಿ ಸಮುದಾಯವು ಸಾಮಾಜಿಕ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ನಂಬಿಕೆ, ಸಂಪ್ರದಾಯಗಳು ಮೌಢ್ಯತೆಗಳ ನೆಲೆಯಲ್ಲಿ ಜೀವನ ನಡೆಸುತ್ತಿದ್ದರು. ಕಾಲ ಕಳೆದಂತೆ ಸಾಮಾಜಿಕ ಬದುಕಿನ ಪರಿವರ್ತನೆಯನ್ನುವಂತಹದು ಸಹಜವಾದುದು ಪ್ರಾರಂಭದಲ್ಲಿ ಸ್ತ್ರೀ ಸಮುದಾಯವು ಸಮಾಜಿಕ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಸ್ತ್ರೀ ಪುರುಷ ಅಸಮಾನತೆಯ ಸಮಸ್ಯೆಯನ್ನು ತೀರ್ವವಾಗಿ ಪರಿಗಣಿಸಿತ್ತು. ಅದೇ ರೀತಿಯಲ್ಲಿ ಎಂದರೆ ಬೇಡಿಕೆ, ಮನವಿಗಳ ರೂಪದಲ್ಲಿ ಪ್ರಾರಂಭವಾದ ಸ್ತ್ರೀ ಪರ ಹೋರಾಟಗಳು ಇಂದು ಸಂವಿಧಾನಾತ್ಮಕ ಹಕ್ಕುಗಳು ನಿಯಮ ನಿಟ್ಟಿನಲ್ಲಿ ಸ್ತ್ರೀ ಹೋರಾಟಗಳು ನಡೆದಿವೆ, ಇಂಥ ಸಮುದಾಯಿಕ ಹೋರಾಟದ ಫಲವಾಗಿ ಪ್ರಭುತ್ವವು ಸ್ತ್ರೀ ಪುರುಷ ಸಮಾನತೆಯನ್ನು ತಾತ್ವಿಕವಾಗಿ ಒಪ್ಪಿ ಬಹಿರಂಗವಾಗಿ ಘೋಸಲೇಬೇಕಾದ ಒತ್ತಡದಲ್ಲಿದೆ. ಸಂವಿಧಾನ ಕಾನೂನಿನ ಅಡಿಯಲ್ಲಿ ಶಾಸನಗಳ ರಚನೆಗಳಲ್ಲಿ ಸ್ತ್ರೀ ಪರವಾದ ಅಂಶಗಳನ್ನು ಜೋಡಿಸುವುದು ಸರ್ಕಾರದ ಉದ್ದೇಶ ಮತ್ತು ಯೋಜನೆಯ ಕಾರ್ಯಕ್ರಮಗಳಲ್ಲಿ ಸ್ತ್ರೀಯರಿಗೆ ಗಣನೀಯ ಭಾಗವನ್ನು ಮೀಸಲಿಡುವುದು ಈಗ ಅನಿವಾರ್ಯವಾಗಿದೆ. ಕೇವಲ ಇದರಿಂದ ಮಹಿಳೆಯರ ಸ್ಥಿತಿಗತಿ ಸುಧಾರಣೆಯಾಗಿ ಸ್ಥಾನಮಾನ ಮೇಲೇರುವುದಿಲ್ಲ. ಆದರೆ ಹೋರಾಟದ ಮುಂದಿನ ಹಂತಕ್ಕೆ ಇದು ಆಧಾರವಾಗುವುದು ಸ್ಪಷ್ಟ, ಆದರೆ ಇದ್ದರಿಂದ ಮೂಲಭೂತ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ಇಡೀ ಸಮುದಾಯದ ಪಿತೃಪ್ರಧಾನ ವ್ಯವಸ್ಥೆಯ ಪ್ರವೃತ್ತಿಗಳಲ್ಲಿಯೇ ಮೂಲಭೂತ ಪರಿವರ್ತನೆಗಳನ್ನು ತರುವುದು ಖಂಡಿತವಾಗಿ ಸುಲಭವಾದ ಕಾರ್ಯವಲ್ಲ. ಆದರೆ ಸರ್ಕಾರವನ್ನು ಒಳಗೊಂಡು ಎಲ್ಲ ಸಾರ್ವಜನಿಕ ವಲಯಗಳಲ್ಲಿ ಸ್ತ್ರೀ ಸಮುದಾಯವು ಎದುರಿಸುತ್ತಿರುವ ತಾಂತ್ರಿಕ ಸಮಸ್ಯೆಗಳನ್ನು ಸಮುದಾಯಿಕ ಹೋರಾಟದಿಂದ ಪರಿಹರಿಸಿಕೊಳ್ಳಲು ಸಾಧ್ಯವಿದೆ. ಇದಕ್ಕಾಗಿ ಸಮುದಾಯದ ಬಡಕಟ್ಟುಗಳಲ್ಲಿ ಸದಸ್ಯರ ಬೌದ್ಧಿಕ ಹಾಗೂ ಮಾನಸಿಕ ಬೆಂಬಲ ಪಡೆಯಲು ಚರ್ಚಾ ಕೂಟಗಳು ಸಂವಾದಗಳು ಏರ್ಪಡಿಸಬೇಕಾಗಿದೆ. ಮೊಟ್ಟ ಮೊದಲ ಮಾನವೀಯತೆಯನ್ನು ಜಾಗೃತಗೊಳಿಸಬೇಕಾಗಿದೆ. ಸ್ತ್ರೀ ಪುರುಷರ ಅಸಮಾನತೆಯ ಮನುಕುಲದಿಂದ ಹಾಗೇ ಮುಂದುರೆದುಕೊಂಡು ಬಂದಿರುವಂತಹದು ಅದನ್ನು ವಿನಾಶಕಾರಿಯಾಗಿ ಮಾಡಬೇಕಾದ ಇಂದಿನ ಮಹಿಳೆಯರ ಸವಾಲಾಗಿದೆ. ಪ್ರತಿಯೊಂದು ವಿವೇಚನೆಯನ್ನು ತಾತ್ವಿಕ ನೆಲೆಯನ್ನು ಅದನ್ನು ಅಧ್ಯಾಯನಕ್ಕೆ ಎಡೆಮಾಡಿಕೊಡುವಂತಹ ಪ್ರಮುಖ ವಿಷಯವೆಂದು ಹೇಳಬಹುದಾಗಿದೆ. ಕಾಲದಿಂದ ಕಾಲಕ್ಕೆ ಬೆಳಸಿಕೊಂಡು ಬಂದಿರುವಂತಹ ಒಂದು ಪದ್ದತಿ ನೀತಿ ನಿಯಮಗಳು ಸಂಪ್ರದಾಯಗಳು, ನಂಬಿಕೆಗಳು, ಇಂದು ಬುಡಕಟ್ಟುಗಳಲ್ಲಿ ಮಾಸಿ ಹೋಗುತ್ತಿವೆ. ಏಕೆಂದರೆ ಎಲ್ಲರೂ ಅಕ್ಷರಜ್ಞಾನ ಪಡೆಯುತ್ತಿದ್ದಾರೆ. ಆರ್ಥಿಕ ಜೀವನ ಮಟ್ಟ ಸುಧಾರಿಸಿಕೊಳ್ಳುತ್ತಿದ್ದಾರೆ.

೫.೭ ಮಹಿಳಾ ಅವಕಾಶಗಳು ಮತ್ತು ಬದಲಾವಣೆಗಳು

ಪ್ರಸ್ತುತ ದಿನಗಳಲ್ಲಿ ಮಹಿಳೆಯರಿಗೆ ಎಲ್ಲಾ ರಂಗಗಳಲ್ಲಿ ಹೆಚ್ಚಿನ ಒಂದು ಪ್ರಾಶಸ್ತ್ಯವನ್ನು ಕೊಡಲಾಗಿದೆ. ಯಾವ ಒಂದು ನೆಲೆಯಲ್ಲಿ ಬದುಕು ಸಾಗಿಸುತ್ತಿದ್ದಳು ಎಂಬುದನ್ನು ಅರಿತುಕೊಂಡು ಅವಳ ಒಂದು ಬದುಕಿಗೆ ಪ್ರೇರಣೆಯನ್ನು ಸಂವಿಧಾನದಲ್ಲಿ ಮೀಸಲಾತಿ ನೀಡಿರುವಂತಹದು ಮಹಿಳೆಯರು ಸಾಕಷ್ಟು ಪ್ರಗತಿ ಸಾಧಿಸದ್ದಿದ್ದರೂ ಸಾಕಷ್ಟು ಮಾರ್ಪಾಡುಗಳನ್ನು ಕಂಡುಬರುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರ ಮುನ್ನಡೆ ಇನ್ನು ಕಡಿಮೆಯಿದ್ದು, ಸಾಕಷ್ಟು ಒತ್ತಡ ಒತ್ತಾಸೆಯ ಮೂಲಕ ಸಾಕ್ಷರತೆಯನ್ನು ಸಾಧಿಸಬೇಕಾಗಿದೆ. ಬುಡಕಟ್ಟುಗಳಲ್ಲಿ ನಗರ ಪ್ರದೇಶಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಶಿಕ್ಷಣ, ಕ್ಷೇತ್ರದಲ್ಲಿ ಹುಡಗರಿಗಿಂತ ಒಂದು ಕೈ ಮೇಲಿದ್ದಾರೆ, ಅವರನ್ನು ಮೀರಿಸುವ ಮಟ್ಟದಲ್ಲಿ ಮಹಿಳೆಯ ಪ್ರತಿ ವರ್ಷದಲ್ಲಿ ಇತ್ತೀಚ್ಚೆಗೆ ನಾವು ನೋಡುವಂತಹುದು ಕಂಪ್ಯೂಟರ್, ಇಂಜಿನಿಯರಿಂಗ್, ಕ್ಷೇತ್ರಗಳಲ್ಲಿ ಮಹಿಳೆಯರು ದಾಪುಗಾಲು ಇಟ್ಟು ಮುಂದುವರೆಯುತ್ತಿರುವ ಇಂದಿನ ದಿನಗಳಲ್ಲಿ ಸಂತೋಷದ ವಿಷಯವಾಗಿದೆ. ತತ್ಪರಿಣಾಮವಾಗಿ ಸಮುದಾಯಗಳಲ್ಲಿ ಕುಟುಂಬಗಳಲ್ಲಿ ಮಹಿಳೆಯರಿಗೆ ಪ್ರಶಸ್ತ್ಯ ಹೆಚ್ಚಾಗಿದೆ. ಮುಖವಾಗಿ ಸ್ವಾವಲಂಬಿತನ ಈಗ ಮಹಿಳೆಯರಲ್ಲಿ ಮೂಡಿದೆ. ಹಾಗಾಗಿ ಮಹಿಳೆಯರಲ್ಲಿ ದೃಢ ಮನೋಭಾವ ಪರಿಶ್ರಮವನ್ನು ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಇದರ ಪರಿಣಾಮವಾಗಿ ಸಾವಿರಾರು ರೂಪಾಯಿ ಹಣಗಳಿಕೆ ಅವರಿಗೆ ತಮ್ಮ ವಿಶ್ವಾಸ ಆತ್ಮಬಲ ಸ್ವಾಭಿಮಾನವನ್ನು ತಂದುಕೊಟ್ಟಿದೆ ಸ್ತ್ರೀಯು ಹಿಂಜರಿಕೆ ಇದ್ದ ಕಡೆ ಈಗ ಛಲಗಾರಿಕೆಯಿಂದ ಮಹಿಳೆಯರು ಶೈಕ್ಷಣಿಕ ಸೌಲಭ್ಯಗಳು ರಾಜಕೀಯ ತಂತ್ರಜ್ಞಾನ ಮುಂತಾದ ಕ್ಷೇತ್ರದಲ್ಲಿ ಇಣುಕು ನೋಟ ಹಾಯಿಸಿರುವಂತಹದು ತಿಳಿದು ಬರುತ್ತದೆ. ವಿವಾಹ ಕೂಡಾ ಹುಡುಗಿಯರ ಆಯ್ಕೆಯಂತೆ ನಡೆಯುವ ಪ್ರಸಂಗಗಳು ಹೆಚ್ಚಿಗಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಇಷ್ಟು ಕ್ಷಿಪ್ರಗತಿಯಲ್ಲಿ ಮಹಿಳಾ ಆರ್ಥಿಕ ಸಬಲತೆಯಿಲ್ಲವಾದರೂ ಮಾಧ್ಯಮಗಳ ಮೂಲಕ ಅಲ್ಲಿಯ ಜನರಿಗೆ ಸಾಕಷ್ಟು ಜಾಗೃತಿ ಮಾಡುತ್ತಿದೆ. ಅವರಲ್ಲಿ ಮುಖ್ಯ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಹಿಂದುಳಿದ ವರ್ಗಗಳಿಗೆ ಸೇರಿದ ಮಹಿಳೆಯರು ಯುವತಿಯರು ಹಲವಾರು ಕ್ಷೇತ್ರದಲ್ಲಿ ತೊಡಗಿದ್ದಾರೆ. ಮಂಗಾರವಾಡಿಗರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ. ಅವರಿಗೆ ಎಲ್ಲಾ ಸಾಲ ಸೌಲಭ್ಯಗಳು ಸಂವಿಧಾನದ___ ಒದಗಿಸಿದೆ. ಆದರೆ ಇನ್ನು ಆರ್ಥಿಕತೆಯನ್ನು ಪೂರ್ಣ ಪ್ರಮಾಣದಲ್ಲಿ ಮೇಲೆಳಲು ಸಾಧ್ಯವಾಗಿಲ್ಲ. ಮಹಿಳೆಯರು ಈಗ ಗಗನ ಸಖಿಯರಾಗಿ ನರ್ಸ್, ವಿಮಾನ ಚಾಲಕರಾಗುವ ಅವಕಾಶವೊದಗಿದೆ.

ಸಾಹಸ, ಕ್ರೀಡೆ, ಮುಂತಾದ ರಂಗಗಳಲ್ಲಿ ಮಹಿಳೆಯರು ಭಾಗವಹಿಸುವಿಕೆ ಸಮನಾಗದಿದ್ದರು ಹಿಂದಿನಕ್ಕಿಂತ ಉತ್ತಮಗೊಂಡಿದ್ದಾರೆ. ಇನ್ನು ಸಾಹಿತ್ಯ ಕಲೆ ರಂಗದಲ್ಲಿ ಮಹಿಳೆಯ ಸಾಧನೆ ಗಮನಾರ್ಹನಾದರು ಅದಕ್ಕೆ ತಕ್ಕಂತೆ ಮಹಿಳೆಯರ ದಿಕ್ಕು

ಬದಲಾವಣೆಯಾಗುತ್ತಿರುವುದು ಮಾನವೀಯ ವೈದ್ಯಕೀಯ ವೈಜ್ಞಾನಿಕ ಮುಂತಾದ ಕ್ಷೇತ್ರಗಳು ಬದಲಾಗಿರುವುದರಿಂದ ಬೌದ್ಧಿಕ ಕ್ಷೇತ್ರದಲ್ಲಿ ಮಹಿಳೆಯರು ಸಾಕಷ್ಟು ಎತ್ತರದಲ್ಲಿದ್ದಾರೆ ಇನ್ನು ಉದ್ಯಮಿಗಳು ನಡೆಸುವ ವಹಿವಾಟುಗಳಲ್ಲಿ ಮಹಿಳೆಯರು ಅತ್ಯಂತ ವೇಗವಾಗಿ ಮುಂದೆ ಸಾಗುತ್ತಿದ್ದಾರೆ. ಮಹಿಳಾ ಅಭಿವೃದ್ಧಿ ನಿಗಮ ರಾಷ್ಟ್ರೀಯ ಮಹಿಳಾ ಆಯೋಗ, ಮುಂತಾದ ಸಂಸ್ಥೆಗಳು ಮಹಿಳೆಯರ ಸಂಕಷ್ಟ ನಿವಾರಣೆಗೆ ಅಭಿವೃದ್ಧಿಗೆ ಶ್ರಮಿಸುತಿವೆ. ಶಿಕ್ಷಣ ಜಾಗೃತಿ, ಮಹಿಳಾ ಸಂಘಟನೆಗಳು ಅವಳನ್ನು ಸ್ವಾವಲಂಭಿಯನ್ನಾಗಿ ಸ್ವತಂತ್ರಳನ್ನಾಗಿ ಮಾಡಬಲ್ಲವು ಏಕೆಂದರೆ ಮಹಿಳೆಯರು ಯಾವುದೇ ರಾಷ್ಟ್ರದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ರಂಗದ ಆಧಾರ ಸ್ತಂಭವಾಗಿ ನಿಲ್ಲುತ್ತಾಳೆಂಬುದು. ಇಷ್ಟೆಲ್ಲ ಬದಲಾದ ಸಾಂಸ್ಕೃತಿ ಪರಿಸರದಲ್ಲಿ ಪರಂಪರೆಯಲ್ಲಿ ಮಹಿಳೆಯು ಸ್ವಾವಲಂಭಿಯಾಗಲು ಅವಕಾಶವಿದೆ. ನಿಜ ಆದರೆ ಮಹಿಳೆಯ ಬದುಕು ಸರಳ ರೇಖೆಯಂತೆ ಸಾಗಲು ಸುಲಭವಾಗಿಲ್ಲ. ಅದು ಹಲವು ಮುಖ ಮಜಲು ಗೋಜಲುಗಳಿಂದ ಇನ್ನಷ್ಟು ಸಂಕೀರ್ಣವಾಗಿದೆ. ಸ್ತ್ರೀಯರು ಸಮಾಜದ ಪುರುಷ ಕೇಂದ್ರಿತ ಚಿಂತನೆಗಳಿಂದಾಗಿ ಸಾಮಾಜಿಕ ಕಟ್ಟುಪಾಡುಗಳಿಗೆ ತುಳಿತ ನಿಗ್ರಹ ಅಲ್ಪ ಸ್ವಲ್ಪ ಅನುಗ್ರಹ, ನಿಂದನೆ, ಉತ್ಪ್ರೇಕ್ಷೆ, ಉತ್ಪ್ರೇಕ್ಷೆಗಳಿಂದ ಕಷ್ಟ ಸುಖಗಳನ್ನು ಅನುಭವಿಸುತ್ತ ಏಳುತ್ತ ಬೀಳುತ್ತ ಬದುಕುತ್ತಿದ್ದಾರೆ. ಮಾನವ ಜನಾಂಗವನ್ನು ಉಳಿಸುತ್ತ ಬೆಳೆಸುತ್ತ ನಡೆಸಿದ್ದಾರೆ. ಆದರೆ ಅವರದೇ ಸ್ತ್ರೀತ್ವದ ಖಾಸಗಿ ಬದುಕು ಸಂತಸಕರವಾಗಿಯೇ ಎಂದರೆ ಅದು ನಕಾರಾತ್ಮಕವಾಗಿದೆ, ಜಗತ್ತಿನಾದ್ಯಂತ ಮಹಿಳೆಗೆ ದೊರೆಯುತ್ತಿರುವ ಶಿಕ್ಷಣ, ಆಹಾರ, ಆರೋಗ್ಯ, ಅವಕಾಶ ಆಯ್ಕೆ, ಸ್ವಾತಂತ್ರ್ಯ, ಆರ್ಥಿಕಬಲ, ಆರೈಕೆ ಇವುಗಳು ಇದನ್ನು ಪುಷ್ಟಿಕರಿಸುತ್ತಿದೆ. ಸಾಮಾಜಿಕವಾಗಿ ಮಹಿಳೆಯರ ಸ್ಥಾನಮಾನ ಮತ್ತು ಸ್ವಾತಂತ್ರ್ಯ ಇನ್ನು ಕೀಳುಮಟ್ಟದಲ್ಲಿದೆ. ಗಾಂಧೀಜಿಯವರು ಹೇಳಿದಂತೆ ನಡುರಾತ್ರಿಯಲ್ಲಿ ಮಹಿಳೆಯರು ಒಬ್ಬಂಟಿಯಾಗಿ ತಿರುಗಾಡುವಷ್ಟು ಅವಕಾಶವಿದ್ದರೆ, ಅದು ನಿಜವಾದ ಸ್ವಾತಂತ್ರ್ಯ ಪ್ರಾಯಃಶ ಮಹಿಳೆಗೆ ದುರ್ಬಲವೆನಿಸುತ್ತದೆ. ಬುಡಕಟ್ಟು ಮಹಿಳೆಯರಿಗೆ ಹೋಲಿಸಿ ನೋಡಿದರೆ ಅದು ಅನ್ವಯವೇ ಆಗುವಂತಹುದು ಏಕೆಂದರೆ ಹಾಡು ಹಗಲಿನಲ್ಲಿ ಅತ್ಯಾಚಾರ, ಮಾನನಷ್ಟ, ಆಸಿಡ್ ಪ್ರಕರಣ, ಮಹಿಳೆಯರ ಬದುಕು ಎಷ್ಟರ ಮಟ್ಟಿಗೆ ಸುರಕ್ಷಿತ ಹೀಗಾಗಿ ಸಂಕಷ್ಟಗಳ ಸರಮಾಲೆಯೇ ಇದೆ. ಶಿಶುಹತ್ಯೆ ಶಾಲೆಬಿಡುವುದು ಹೆಣ್ಣು ಮಕ್ಕಳ ಬಗ್ಗೆ ತಾತ್ಸಾರ, ಬಾಲಾಪರಾದ ಬಾಲಕಾರ್ಮಿಕ ಪದ್ದತಿ, ಭಿಕ್ಷಾಟನೆ ಬಾಲಕೀ, ಯುವತಿಯರ ಅಪಹರಣ, ಮಾರಾಟ ಬಾಲ್ಯವಿವಾಹ ಮುಂತಾದ ಎಲ್ಲ ಸಮಸ್ಯೆಗಳು ಮಹಿಳೆಯರನ್ನೇ ಸುತ್ತಿಕೊಂಡಿವೆ. ಇವುಗಳಲ್ಲಿ, ಪರಿಹಾರವಾಗುವ ಬಗೆ ಹೇಗೆ ಇನ್ನು ಸ್ತ್ರೀಯರಿಗೆ ಬಡತನ, ವೇತನ ತಾರತಮ್ಯ, ಲೈಂಗಿಕ ಕಿರುಕುಳ, ಕೌಟುಂಬಿಕ ಹಿಂಸೆ, ದೇವದಾಸಿ ಪದ್ದತಿ, ಸಮೂಹ ಮಾಧ್ಯಮಗಳಲ್ಲಿ ದುರ್ಬಳಕೆ, ಧಾರ್ಮಿಕ ಹಿನ್ನೆಲೆಯಲ್ಲಿ

ಶೋಷಣೆ, ದೌರ್ಜನ್ಯ, ಕೀಳರಿಮೆ, ಸಹೋದ್ಯೋಗಿಗಳ ಕಿರುಕುಳ ಅಧಿಕಾರಿಗಳ ದುರ್ನಡತೆ ಕೆಲಸದ ಸ್ಥಳಗಳು ದೂರವಿರುವುದು ಮಕ್ಕಳ ಚಿಂತೆ, ಎಲ್ಲಕ್ಕಿಂತ ಹೆಚ್ಚಾಗಿ ಉದ್ಯೋಗ ಹಾಗೂ ಕುಟುಂಬ ಎರಡು ಸ್ಥಳಗಳಲ್ಲಿ ಸಮರ್ಥವಾಗಿ ನಿರ್ವಹಿಸಬೇಕಾ ದ್ವಂದ್ವನೀತಿ ದುಡಿದುದನ್ನು ಕಿತ್ತು ಕೊಳ್ಳುವ ಪುರುಷ ವರ್ಗ ಹೀಗೆ ಮಹಿಳೆಯ ಜೀವನದ್ದುದಕ್ಕೂ ಕೇವಲ ಪ್ರಶ್ನೆಗಳ, ಸವಾಲುಗಳು ಎದುರಾಗುತ್ತಲೇ ವಿರುವಂತಹದು ನಾವು ಇಂದಿನ ಸಮುದಾಯಗಳಲ್ಲಿ ಕಾಣುತ್ತೇವೆ. ಇವೆಲ್ಲರ ನಡುವೆ ತಮ್ಮ ಹೋರಾಟವನ್ನು ತಾವೇ ಮುಂದುವರೆಸಿ ಸ್ವಾವಲಂಬಿಯಾಗಿ ಅಸ್ತಿತ್ವವನ್ನು ನೆಲೆಯುರಿಸಿಕೊಳ್ಳುವ ಪ್ರಬಲತೆ ಮಹಿಳೆಯರಲ್ಲಿ ಉಂಟಾಗಬೇಕು ಅದಕ್ಕೆ ಅಗತ್ಯವಾದ ಪ್ರತಿಭೆ, ಅಂತಶಕ್ತಿ, ವಿವೇಚನೆ ಹೊಂದಿದ್ದಾರೆ, ಇಂದಿನ ಸಮುದಾಯಗಳು ಅಲೆಮಾರಿಗಳು ಆದಿವಾಸಿಗಳು ಸ್ವಲ್ಪ ಮಾರ್ಪಾಡಿನತ್ತ ಸಾಗಿ ಬಂದಿರುವಂತಹದು ಶೈಕ್ಷಣಿಕ ಲಾಭ, ರಾಜಕೀಯ ಲಾಭ, ಸಂಘ, ಸಂಸ್ಥೆಗಳ ಲಾಭ ಸಂವಿಧಾನಾತ್ಮಕವಾಗಿ ಸಿಗುವಂತಹ ಎಲ್ಲ ಹಕ್ಕುಗಳು ಮಂಗಾರವಾಡಿ ಮಹಿಳೆಯರು ಇಂದಿನ ದಿನಗಳಲ್ಲಿ ನ್ಯಾಯ ನೀತಿ ಕಟ್ಟುಪಾಡುಗಳ ನೆಲೆಯಲ್ಲಿ ಅದನ್ನು ಉಪಯೋಗಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬನೆಯಾಗುವುದಲ್ಲಿ ಯಾವುದೇ ಸಂಶಯವನ್ನು ನಾವು ಕಾಣಬೇಕಾಗಿಲ್ಲ. ಹಾಗೆಯೇ ಇನ್ನುಳಿದ ಬುಡಕಟ್ಟುಗಳಿಗೆ, ಸಮುದಾಯಗಳ ಮಹಿಳೆಯರಿಗೆ ಈ ಸಮುದಾಯವು ಮಾರ್ಗದರ್ಶಿಯಾಗಬೇಕು ಕೆಲವೇ ಕೆಲವು ವರ್ಷಗಳಲ್ಲಿ ಇದು ಅಭಿವೃದ್ಧಿಯನ್ನು ಹೊಂದುವ ಒಂದು ದಿಸೆಯಲ್ಲಿ ಎಲ್ಲರೂ ಕೆಲಸ ಕಾರ್ಯಗಳು ಮಾಡುತ್ತಿರುವುದು ಕಂಡುಬರುತ್ತದೆ. ಆದ್ದರಿಂದ ಇನ್ನುಳಿದ ಸಮುದಾಯಗಳಿಗೆ ಇದು ಮಾರ್ಗದರ್ಶಿಯಾಗುತ್ತದೆ ಎಂಬುದು ಮನಗಾಣುತ್ತೇವೆ.

ಸಮಕಾಲೀನ ಸಂದರ್ಭದಲ್ಲಿ ಮಹಿಳೆಯರ ಸ್ಥಾನಮಾನ, ಸ್ಥಿತಿಗತಿಗಳನ್ನು ಸುಧಾರಿಸುವ ಹಾಗೂ ಸಂವಿಧಾನದಡಿಯಲ್ಲಿ ಪ್ರಸಕ್ತ ವೈಯಕ್ತಿಕ ಮತ್ತು ಸಮುದಾಯದ ಘನತೆಯನ್ನು ಸಮಾನ ಜೀವನವನ್ನು ಒದಗಿಸಲು ಮಹಿಳೆಯರು ಮುಂದಾಗಬೇಕು ಅದು ಎಲ್ಲಕ್ಕಿಂತ ಮುಖ್ಯವಾಗಿ ಮಹಿಳೆಯರನ್ನು ವ್ಯಕ್ತಿತ್ವ ನಿರ್ಮಾಣ ಮಾಡಿಕೊಳ್ಳುವ ದೃಷ್ಟಿಕೋನ ಹೊಂದಿರಬೇಕು ಹಾಗಾದಾಗ ಮಹಿಳೆಯ ಉತ್ತಮ ಸ್ಥಾನ ಮಾನಗಳು ಮತ್ತು ಸುಧಾರಣೆಗಳು ಹೊಂದಿವೆ. ಯಶಸ್ವಿಯಾಗುವುದು ಖಚಿತವೆಂದು ಹೇಳಬಹುದಾಗಿದೆ. ಸ್ವರ್ಯ ಪರಿಪೂರ್ಣತೆಯನ್ನು ತಾವೇ ಸ್ವಾವಲಂಬಿಗಳಾಗಬೇಕು ಎಂದರೆ ತಮ್ಮ ಸೌಲಭ್ಯಕ್ಕಾಗಿ ಇರುವ ಹಕ್ಕುಗಳನ್ನು ಅರಿತು ಹಕ್ಕು ಸ್ಥಾಪನೆ ಮಾಡಬೇಕು ಹೋರಾಡಬೇಕು ಒಂದಾದರೊಂದು ದಿನ ನಾವು ಯಶಸ್ವಿಯನ್ನು ಕಾಣುತ್ತೇವೆ ಎಂಬ ನಂಬಿಕೆಯನ್ನು ಅಲೆಮಾರಿಗಳ ಜೀವನ ದೃಢ ಸಮುದಾಯಗಳು ದೃಢ ನಿರ್ಧಾರಗಳು ಹೊಂದುತ್ತಿವೆ ಎಂಬುದು ನಮ್ಮಗೆ ಅಧ್ಯಯನದಿಂದ ಗೋಚರಿಸುವಂತಹ

ಅಡಿ ಟಿಪ್ಪಣಿಗಳು

೧. ಮಹಿಳೆ ಮತ್ತು ಸ್ವಾಲಂಬನೆ, ವೈ.ಎಸ್.ಜ್ಯೋತಿ, ಪು.ಸಂ-೭೦, (ಅಪ್ರಕಟಿತ ಪ್ರಬಂಧ)

೨. ಮೈ ಸೌತ್, ಎಷಿಯಾಬುಕ್, ಎಂ.ಕೆ. ಹಲಧರ್, ಪು.ಸಂ-೧೮೮, (ಅಪ್ರಕಟಿತ ಪ್ರಬಂಧ)

೩. ಮಹಿಳೆ ಮತ್ತು ಸ್ವಾವಲಂಭನೆ, ವೈ.ಎಸ್.ಜ್ಯೋತಿ, ಪು.ಸಂ-೭೨, (ಅಪ್ರಕಟಿತ ಪ್ರಬಂಧ)

೪. ಆಧುನಿಕ ಭಾರತದಲ್ಲಿ ಮಹಿಳೆ, ಡಾ.ಎಸ್.ಹೆಚ್.ಶ್ರೀಮತಿ, ಮೂಲ-ಜೆರಾಲ್ಡಿನ್ ಪೋರ್ಬ್ಸ್, ಪು.ಟ-೭, ೧೯೮೫.

೫. ೧೯೭೮ನೇ ಇಸವಿಯ ಸಂವಿಧಾನದ ೧೪೨ನೇ ತಿದ್ದುಪಡಿ ಅಧಿನಿಯಮದ ೩ನೇ ಪ್ರಕರಣದ ಮೂಲದ ದಿನಾಂಕ ೨೦-೦೬-೧೯೭೯ರಿಂದ ಜಾರಿಗೆ ಬರುವಂತೆ ಸೇರಿಸಲಾಯಿತ್ತು.

೬. ದಿ.ಕೋ ಅಪರೆಂಡಿವ್ ಮೂಮೆಂಟ್ ಇನ್ ಇಂಡಿಯಾ, ಎಂ. ಹ್ಯೂಗ್, ಪು.ಸಂ-೪೬.

೭. ಮಹಾತ್ಮ, ಡಿ.ಟಿ.ತೆಂಡೊಲ್ಕರ್, ಪು.ಸಂ-೭.

೮. ಪೇಪರ್ ಟೈಗ್ರೀಸ್ ರೆಡಲ್ಯೂಷನ್ ಅಂಡ್ ದಿ ಸ್ಟೇಟಸ್ ಆಫ್ ವುಮನ್ ಇನ್ ಇಂಡಿಯಾ, ಡಾ. ಸುಶೀಲಾ ಮೆಹತಾ, ಪು.ಸಂ-೧೮೩.

ಅಧ್ಯಾಯ – ೬

ಮಂಗಾರವಾಡಿಗರ ಆರ್ಥಿಕ ಜೀವನ

ಅಧ್ಯಾಯ – ೬

ಮಂಗಾರವಾಡಿಗರ ಆರ್ಥಿಕ ಜೀವನ

ಬುಡಕಟ್ಟು ಸಮುದಾಯವು ಇಂದಿನ ದಿನಗಳಲ್ಲಿ ಹೊಂದಿರುವಂತಹ ಆರ್ಥಿಕ ಜೀವನ, ಯಾವುದರ ಮೇಲೆ ಅವಲಂಬನೆಯಾಗಿದೆ. ಈ ಹಿನ್ನೆಲೆಯಲ್ಲಿ ನಾವು ಮಂಗಾರವಾಡಿ ಸಮುದಾಯವು ಬ್ರಿಟಿಷರ ಆಡಳಿತ ಕಾಲದಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಬೇರೆಯರ ಅಧೀನದಲ್ಲಿರುವುದನ್ನು ಗಮನಿಸಬಹುದಾಗಿದೆ. "ರಾನಡೆಯವರು ಕಲ್ಪನೆಯಲ್ಲಿ ಬಂಧಿತ ಸ್ಥಿತಿಯಿಂದ ಸ್ವತಂತ್ರ ಸ್ಥಿತಿಗೆ, ಅವಿಶ್ವಾಸದಿಂದ ವಿಶ್ವಾಸ ನಂಬಿಕೆಗಳಿಗೆ, ಕುರುಡು ದುರಂತಗಳಿಗೆ ಮಾನವೀಯ ಭಾವದೆಡೆಗೆ ಸಾಗುವ ವಿಕಸನ ಪಡೆದ ಸಮಾಜವಾಗಿತ್ತು. ಬದಲಾವಣೆಯ ಬಗೆಗೆ ಜಡತೆಯಿಂದ ಇರುವುದು ಅಥವಾ ಅದರ ವಿರುದ್ಧವಾಗಿ ಕೆಲಸ ಮಾಡುವುದು ಇದ್ದರಿಂದ ಸಮುದಾಯಗಳು ವಿನಾಶವಾದೀತು ಅಷ್ಟೆ ಅಲ್ಲದೆ ಭಾರತೀಯ ಸಮಾಜವು ಮರೆಯಾಗಿಯೇ ಬಿಡುವ ಸಾಧ್ಯತೆಯೂ ಇದೆ ಎಂದು ಎಚ್ಚರಿಸಿದರು."[೧] ಭಾರತೀಯ ಬುಡಕಟ್ಟು ಸಮುದಾಯಗಳು ಮೇಲ್ವರ್ಗದವರು ಕೆಳ ಸ್ತರದ ಜನರನ್ನು ಅವರ ಭೂಮಿಯನ್ನು ಆಕ್ರಮಿಸಿಕೊಂಡು ಜೀತದಾಳುಗಳಾಗಿ ದುಡಿಸಿಕೊಳ್ಳುತ್ತಾ ಬಂದಿದ್ದ ಅನೇಕ ಘಟನೆಗಳು ಹಲವಾರು ವರ್ಷಗಳಿಂದ ಸಾಗಿ ಬಂದಿದನು ನೋಡುತ್ತೇವೆ.

ಮಂಗಾರವಾಡಿ ಸಮುದಾಯವು ಒಂದು ಅಲೆಮಾರಿಗಳು ಜೀವನ ಕ್ರಮ ಏಣಿ ಶ್ರೇಣಿಕೃತ ಸಮುದಾಯಗಳಲ್ಲಿ ಆರ್ಥಿಕತೆಯಲ್ಲಿಯೂ ಶ್ರೀಮಂತ ಬಡವನೆಂಬುದು ಸಮುದಾಯಗಳಲ್ಲಿ ಸಹಜವಾಗಿ ಕಂಡುಬರುವ ಒಂದು ವಿಷಯ. ಸಮುದಾಯಗಳು ಇಂದು ನಗರ ಪ್ರದೇಶ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಒಂದು ನಿಶ್ಚಿತವಾದ ಭೂಪ್ರದೇಶವನ್ನು ಹೊಂದಿದು ಅವರು ಒಂದು ಕಡೆ ನೆಲೆನಿಂತು ತಮ್ಮದೇಯಾದ ಆರ್ಥಿಕತೆಯನ್ನು ರೂಡಿಸಿಕೊಂಡು ಬದುಕುವುದನ್ನು

ಕಂಡುಬರುತ್ತದೆ. ಇನ್ನೊಂದು ಕಡೆ ಒಂದು ಸ್ಥಳದಲ್ಲಿ ನೆಲೆ ನಿಲ್ಲದೆ ಅಲೆಮಾರಿಗಳಾಗಿ ಊರಿಂದ ಊರಿಗೆ ವಲಸೆ ಹೋಗುತ್ತಿದ್ದರು ಇದ್ದರಿಂದ ಆರ್ಥಿಕವಾಗಿ ಸುಧಾರಿಸಿಕೊಳ್ಳದೆ ಅತ್ಯಂತ ಹೀನಾಯ ಸ್ಥಿತಿಯಲ್ಲಿ ಬದುಕುತ್ತಿರುವುದು ಕಂಡು ಬರುತ್ತದೆ. ಇದಕ್ಕೆ ಮುಖ್ಯಕಾರಣವೆಂದರೆ ಅಲೆಮಾರಿ ಬದುಕು ಎಂಬುದು ಸ್ಪಷ್ಟಗೊಳುತ್ತದೆ.

ಮಂಗಾರವಾಡಿಗರು ಪ್ರಸ್ತುತ ದಿನಗಳಲ್ಲಿ ಹೊಲ ಗದ್ದೆಯನ್ನು ಉಳಿಮೆ ಮಾಡುತ್ತಿದ್ದಾರೆ. ಅದಕ್ಕೆ ತಕ್ಕಂತೆ ಪ್ರತಿಫಲ ಸಿಗುತ್ತಿಲ್ಲ. ಎನ್ನುವುದು ದುಃಖದ ಸಂಗತಿಯಾಗಿದೆ. ಇನ್ನೊಂದು ಕಡೆ ಉಳಿಮೆ ಮಾಡುವ ಹೊಲಗಳು ಬೇರೆಯವರಾಗಿದ್ದು ಅದನ್ನು ಸಮಪಾಲಿನ ರಾಶಿಯಲ್ಲಿ ಅಧಿಕಾರ ಹೊಂದಿದ್ದಾರೆ. ಇವರ ಬದುಕು ಆರ್ಥಿಕವಾಗಿ ಅಭದ್ರತೆಯನ್ನು ಹೊಂದಿದ್ದಾರೆ. ಈಗಲೂ ಸಹ ಸಮುದಾಯವು ಕೃಷಿಯನ್ನೇ ಮಾಡುತ ಮತ್ತು ಇತರ ಕೆಲಸಗಳನ್ನು ಮಾಡಿಕೊಂಡಿದ್ದಾರೆ. ಜೊತೆಗೆ ಸರ್ಕಾರ ಕೊಡುವ ಎಲ್ಲ ಸೌಲಭ್ಯಗಳಲ್ಲಿ ಅವರು ಲಾಭ ಪಡೆಯುವಲ್ಲಿ ಯಶಸ್ವಿಗೊಳ್ಳುತ್ತ ಸಾಗುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ, ಸರ್ಕಾರದ ಸೌಲಭ್ಯಗಳಾದ, ಆಸ್ಪತ್ರೆ, ಸಾರಿಗೆ, ರಸ್ತೆ, ವಿದ್ಯುತ್ ಮತ್ತು ಮೀಸಲಾತಿ ಹಾಗೂ ಶೈಕ್ಷಣಿಕ ಸಮಸ್ಯೆಗಳು ಸ್ವಲ್ಪ ಮಟ್ಟಿಗೆ ಸುಧಾರಿಸಿಕೊಂಡು ಬಂದಿರುವಂತಹದು ತಿಳಿಯುತ್ತದೆ. ಮಂಗಾರವಾಡಿಗರು ಜೋಳ, ತೊಗರಿ, ಹೆಸರು, ಉದ್ದು, ಶೇಂಗಾ, ಸಜ್ಜೆ, ನವಣೆ ಮುಂತಾದ ಬೆಳೆಗಳು ಬೆಳೆಯುತ್ತಾರೆ.

೬.೧.೧ ತರಕಾರಿ ಬೆಳೆಗಳು

ಮಂಗಾರವಾಡಿಗರಲ್ಲಿ ನೀರಾವರಿ ವ್ಯವಸ್ಥೆ ಹೊಂದಿಲ್ಲ. ಅಲ್ಪಸ್ವಲ್ಪ ಮಳೆಗಾಲದಲ್ಲಿ ಮೆಣಸು ಈರಳ್ಳಿಯನ್ನು ಬೆಳೆಯುತ್ತಾರೆ. ಮಂಗಾರವಾಡಿ ಸಮುದಾಯದಲ್ಲಿ ಸಾಮಾನ್ಯವಾಗಿ ಮಂಗಾರು ಮಳೆಯಲ್ಲಿ ಬಿತ್ತನೆಯ ಕೆಲಸವನ್ನು ಮಾಡುತ್ತಾರೆ. ಹುಲುಸಾಗಿ ಬೆಳೆದ ಹುಲ್ಲನ್ನು ಬೆಳೆಯನ್ನು ಕೊಯ್ದು ಕೊಯ್ದು ರಾಶಿ ಮಾಡುತ್ತಾರೆ. ಬೆಳೆದಂತಹ ಆಹಾರ ಧಾನ್ಯಗಳು ಮರುಕಟ್ಟೆಗೆ ಒಯ್ದು ಮಾರುತ್ತಾರೆ. ವ್ಯವಸ್ಥಿತವಾದ ರೀತಿಯಲ್ಲಿ ತಮ್ಮ ಬದುಕು ಸಾಗಿಸುತ್ತ ಬಂದಿದ್ದಾರೆ, ಪ್ರಸ್ತುತ ದಿನಗಳಲ್ಲಿ ಶಿಕ್ಷಣ ಹಾಗೂ ಸಾಲಸೌಲಭ್ಯಗಳು ಪಡೆದುಕೊಂಡು ಬದುಕುವ ಜನರಿಗೆ ಸಹಾಯಕಾರಿಯಾಗಿದೆ ಎಂದು ಯಶಸ್ವಿ ಮತ್ತು ಸಹಕಾರದ ರೂಪದಲ್ಲಿ ಸಾಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಕೆಲವರು ಭೂಮಿಯಿಲ್ಲದೆ ಬೇರೆಯವರ ಗದ್ದೆಗಳಲ್ಲಿ ಕೃಷಿ ಕೂಲಿಗಾಗಿ ದಿನ ನಿತ್ಯ ಹೋಗುತ್ತಾರೆ. ಇದರಿಂದಾಗಿ ತಿಳಿಯುವುದೆನೆಂದರೆ ಮಂಗಾರವಾಡಿಗರಿಗೆ ಎಲ್ಲರು ಭೂಮಿಯನ್ನು ಹೊಂದಿಲ್ಲ ಇದರ ಪರಿಣಾಮವಾಗಿ ಬೇರೆಯವರ ಹೊಲಗಳಿಗೆ ಹೋಗಿ ಕೂಲಿಯಾಳಾಗಿ ದುಡಿಯುವತ್ತಿರುವುದು ಕಂಡುಬರುತ್ತವೆ. ಈ ರೀತಿಯಾತಿ ಕೂಲಿಮಾಡಿಕೊಂಡು ಜೀವನವನ್ನು ನಡೆಸುತ್ತಿದ್ದಾರೆ.

೬.೧.೨ ಇತ್ತೀಚಿನ ಕೆಲವು ಅವಲಂಬಿತ ವೃತ್ತಿಗಳು

ಭಾರತದಲ್ಲಿರುವ ನಾವುಗಳು ಅಲೆಮಾರಿ ಸಮುದಾಯವು ಒಂದಲ್ಲಾ ಒಂದು ರೀತಿಯಲ್ಲಿ ತನ್ನ ಮೂಲವೃತ್ತಿಯಿಂದ ರೂಪಾಂತರಗೊಳ್ಳುತ್ತಿರುವುದನ್ನು ನೋಡಬಹುದು ಈ ಹಿನ್ನೆಲೆಯಲ್ಲಿ ಅಲೆಮಾರಿ ಸಮುದಾಯವು ಮೂಲ ವೃತ್ತಿ ಕಳ್ಳತನ ಬಿಟ್ಟು ಕೃಷಿಯನ್ನು ಅವಲಂಬಿಸಿದ್ದಾರೆ. ಸಮುದಾಯಗಳಲ್ಲಿ ಸಮಸ್ಯೆಗಳು ನಿಲುವು ಬೇರೆಯಾಗಿ ಪರಿವರ್ತನೆ ಹೊಂದುತ್ತ ಬಂದಾಗ ಆರ್ಥಿಕ ಬದುಕು ಸುಧಾರಣೆಯ ಮಟ್ಟ ತಲುಪಿದ್ದಾರೆಂದು ಹೇಳಬಹುದು ಜೊತೆಗೆ ಪುರುಷರು ದಿನಕೂಲಿ, ಇನ್ನಿತರ ಕೆಲಸಗಳಲ್ಲಿ ಅಂದರೆ ಆಟೋರಿಕ್ಷಾ, ಗ್ಯಾರೇಜ್‌ಗಳಲ್ಲಿ ಹೋಟೆಲ್‌ಗಳಲ್ಲಿ ಕಿರಾಣಿ ಅಂಗಡಿಗಳಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ ಮತ್ತು ಹಲವಾರು ಮಂದಿ ವಿದ್ಯಾವಂತರು ಕೂಡ ಆಗಿದ್ದಾರೆ. ಅದರ ಜೊತೆಗೆ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುತ್ತಿದ್ದಾರೆ ಒಳ್ಳೆಯ ರೀತಿಯಲ್ಲಿ ಬದುಕು ಸಾಗಿಸುತ್ತಿದ್ದಾರೆಮದು ತಿಳಿದು ಬರುತ್ತದೆ.

೬.೧.೩ ಬೌದ್ಧಿಕ ವ್ಯವಸ್ಥೆ

ಮಂಗಾರವಾಡಿ ಸಮುದಾಯವು ಶೈಕ್ಷಣಿಕವಾಗಿ ಗಮನಿಸಿದಾಗ ಕಂಪ್ಯೂಟರ್‌ಯುಗದಲ್ಲಿ ಅವರಿಗೆ ಜೀವನದ ಅತೀ ಮುಖ್ಯ ಘಟ್ಟವಾದ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಆದರೆ ಇಂದಿನ ಸರ್ಕಾರ ವ್ಯವಸ್ಥೆಯಲ್ಲಿ ಅಲೆಮಾರಿಗಳಿಗೆ ಎಷ್ಟರ ಮಟ್ಟಿಗೆ ಕಾಳಜಿವಹಿಸಿವೆ ಎಂಬುದು ಗಮನಿಸಬೇಕಾದದ್ದು ಪ್ರಾಚೀನ ಕಾಲದಿಂದ ತಾವು ವಂಶಪರಂಪರೆಯಾಗಿ ರೂಢಿಸಿಕೊಂಡು ಬಂದಿರುವ ತಮ್ಮದೆ ಆದ ಅನೌಪಚಾರಿಕ ಸಾಂಸ್ಕೃತಿಕ ಶಿಕ್ಷಣವನ್ನು ಮುಂದುವರೆಸಿಕೊಂಡು ಬಂದಿರುವಂತಹದು ನೋಡಬಹುದು ಯಾವುದೇ ಒಂದು ದೇಶದ ಅಭಿವೃದ್ಧಿಯನ್ನು ಇತರ ರಾಷ್ಟ್ರಗಳು ಅಳೆಯುವುದು ಮೊದಲು ಶಿಕ್ಷಣದಿಂದ ಎಂಬುದು ಮರೆಯುವಂತಿಲ್ಲ. ಭಾರತವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಕಂಪ್ಯೂಟರ್ ಶಿಕ್ಷಣದ ಪ್ರಭಾವವಿದ್ದರೂ ಎಷ್ಟರ ಮಟ್ಟಿಗೆ ಭಾರತದಲ್ಲಿರುವ ಬುಡಕಟ್ಟು ಅಲೆಮಾರಿಗಳ ಸಮುದಾಯ ಆದಿವಾಸಿ ಸಮುದಾಯಗಳ ಮೇಲೆ ಎಷ್ಟು ಪರಿಣಾಮ ಬೀರಿದೆ ಎಂಬುದು ಬಹಳ ಮುಖ್ಯ ಈ ಹಿನ್ನೆಲೆಯಲ್ಲಿ ಇಂದಿನ ಸಾಮಾಜಿಕ ವ್ಯವಸ್ಥೆಗೆ ಶಿಕ್ಷಣ ಎಷ್ಟು ಮುಖ್ಯವೋ ಬುಡಕಟ್ಟು ಸಮುದಾಯಗಳಿಗೂ ಶಿಕ್ಷಣ ಅಷ್ಟೇ ಪ್ರಮುಖವಾದುದು. ಇದರಿಂದ ಬೌದ್ಧಿಕವಾಗಿ ಮುಂದುವರಿಯಬಹುದು.

ಆದಿವಾಸಿ ಬುಡಕಟ್ಟುಗಳು ಅನೌಪಚಾರಿಕ ಶಿಕ್ಷಣವನ್ನು ರಚಿಸಿಕೊಂಡು ತಮ್ಮ ಪಾಡಿಗೆ ತಾವು ಕಾಡುಗಳಲ್ಲಿ ಗುಹೆಗಳಲ್ಲಿ ಬುಡಕಟ್ಟುಗಳಿಗೆ ಶಿಕ್ಷಣದ ಅಗತ್ಯತೆ ಇದೆಯೇ ಎಂಬುದು ಮೊದಲಾದ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಒಂದು ಕಡೆ ನಿಂತು ತಮ್ಮ ನೆಲೆಯಾಗಿ

ಗುರುತಿಸಿಕೊಂಡು ತಮ್ಮದೇ ಆದ ಕೃಷಿಯನ್ನು ಮೈಗೂಡಿಸಿಕೊಂಡಿರುವ ಮಂಗಾರವಾಡಿಗರು ಸಮುದಾಯವು ತನ್ನ ಅಗತ್ಯತೆಗಳನ್ನು ರೂಪಿಸಿಕೊಂಡು ಮಾನಸಿಕವಾಗಿ ನೆಮ್ಮದಿಯಿಂದ ಬದುಕುತಿದ್ದಾರೆ. ಇಂತಹ ಸಮುದಾಯದ ಸರ್ವಾಂಗೀಣ ಅಭಿವೃದ್ದಿಗೆ ಶಿಕ್ಷಣವೆ ಯಾಕೆ ಒಂದು ರೀತಿಯಲೇ ಶಿಕ್ಷಣ ಇಡೀ ಸಮುದಾಯದ ಅಗತ್ಯತೆಗಳನ್ನು ಪೂರೈಸುತ್ತದೆಂದು ನಂಬುವುದಾದರೆ ಆ ಶಿಕ್ಷಣದ ಸ್ವರೂಪ ಮಹತ್ವವೆಂತಹದು ಗಾಂಧೀಜಿ ಹೇಳುವಂತೆ ಮೂಲ ಶಿಕ್ಷಣವೇ ಇತ್ತೀಚ್ಛಿನ ಸರ್ಕಾರದವರು ತಂದ ಶಿಕ್ಷಣವೇ ಅಥವಾ ಕಂಪ್ಯೂಟರ್ ಮಾಹಿತಿ ತಂತ್ರಜ್ಞಾನ ಶಿಕ್ಷಣವೆ. ಈ ರೀತಿಯಾಗಿ ಅಲೆಮಾರಿಗಳಿಗೆ ಶಿಕ್ಷಣ ಕೊಡುವುದರಲ್ಲಿ ಅನೇಕ ರೀತಿಯ ತೊಡಕುಗಳಿರುವುದನ್ನು ಆಲೋಚಿಸಿದರು ಬುಡಕಟ್ಟುಗಳಿಗೆ ಶಿಕ್ಷಣವನ್ನು ಕೊಡಬೇಕಾದದ್ದು ಅವಶ್ಯಕ.

ಈ ಹಿನ್ನೆಲೆಯಲ್ಲಿ ಮಂಗಾರವಾಡಿ ಸಮುದಾಯಕ್ಕೆ ಸರ್ಕಾರ ಕೊಡುತ್ತಿರುವ ಶಿಕ್ಷಣ ಸೌಲಭ್ಯ ಎಷ್ಟರ ಮಟ್ಟಿಗೆ ಅವರ ಮೇಲೆ ಪರಿಣಾಮಕಾರಿಯಾಗಿದೆ ಎಂಬುದು ತಿಳಿದುಕೊಳಬೇಕಾದದು ಅಗತ್ಯ ಪ್ರಸ್ತುತ ಅವುಗಳಲ್ಲಿ ಶಿಕ್ಷಣ ವ್ಯವಸ್ಥೆ ಫಲಕಾರಿಯಾಗಿದೆವೆಂಬುದು ಸಮುದಾಯಗಳಲ್ಲಿ ವಾಸಿಸುವಂತಹ ಜನರು ತಮ್ಮ ಮಕ್ಕಳಿಗೆ ಒಳ್ಳೆಯ ರೀತಿಯಲ್ಲಿ ಶಿಕ್ಷಣ ನೀಡುತ್ತಿದ್ದಾರೆ. ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಬಿ.ಎ., ಎಂ.ಎ., ಉನ್ನತ ಶಿಕ್ಷಣದ ಹಂತ ಹಾಗೂ ಸ್ನಾತಕೋತ್ತರ ಪದವಿ ಹೊಂದಿದವರು ಮಂಗಾರವಾಡಿಗರಲ್ಲಿ ಕಂಡು ಬರುತ್ತಾರೆ. ಕೆಲವರು ವಕೀಲ ವೃತ್ತಿಯನ್ನು ಕೂಡಾ ಆರಂಭಿಸಿದ್ದಾರೆ. ಇಡೀ ಸಮುದಾಯದಲೇ ವಕೀಲ ವೃತ್ತಿ ಆರಂಭಿಸಿದವರೆಂದರೆ ಅನಿಲ್ ಕಾಂಬಳೆ ಅವರು ನಂತರ ಕೆಲವರು ಸರ್ಕಾರಿ ಹುದ್ದೆಗಳಲ್ಲಿ ಪೋಲಿಸ, ಮತ್ತು ಗುಮಾಸ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನು ಕೆಲವು ಜನರು ಹಾಗೆ ಉಳಿದುಕೊಂಡಿದ್ದಾರೆ. ಅದೇ ಸಂಪ್ರದಾಯ ಆಚಾರ, ವಿಚಾರ, ನಂಬಿಕೆ, ಮುಂತಾದ ಸಂಪ್ರದಾಯಗಳದಡಿ ಬದುಕು ಸಾಗಿಸುತ್ತಿದ್ದಾರೆಂದು ನೋಡುತ್ತೇವೆ.

ತಮ್ಮ ಜೀವನಕ್ಕೆ ಮಂಗಾರವಾಡಿಗರು ಊಟ ನಿದ್ರೆ, ಕೆಲಸ ಆದರೆ ಮತ್ತು ಮನೆಯಾದರೆ ಸಾಕು ಎಂಬ ಪ್ರವೃತ್ತಿಯನ್ನು ಬೆಳಸಿಕೊಂಡು ಬಂದಿದ್ದಾರೆ. ಅದಕ್ಕಾಗಿ ಇವರಲ್ಲಿ ಅಭಿವೃದ್ಧಿ ಕಾರ್ಯ, ಸ್ಫೂರ್ತಿ ಮೂಡಿಸುವಲ್ಲಿ ಮುಂದಾಳತ್ವವಹಿಸಬೇಕು ಆಗ ಮಾತ್ರ ಈ ಸಮುದಾಯ ಮುಂದೆ ಬರಲು ಸಾಧ್ಯವೆಂದು ಹೇಳಬಹುದು ಬಹುತೇಕ ಕುಟುಂಬಗಳಲ್ಲಿ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸಕೊಡಿಸುತ್ತಿರುವುದು ಸಂತೋಷದ ವಿಷಯ ಇದು ಅಲೆಮಾರಿಗಳ ಬದುಕು ಸಮೃದ್ಧಿ ಮತ್ತು ಅಭಿವೃದ್ಧಿಯನ್ನು ಹೊಂದಲು ಶಿಕ್ಷಣವು ಅವಕಾಶ ಮಾಡಿಕೊಡುತ್ತದೆ ಇದರಿಂದ ಪ್ರತಿಯೊಂದು ಮಗುವಿಗೂ ಶಿಕ್ಷಣ ಮಂಗಾರವಾಡಿಗರಲ್ಲಿ ಅವಶ್ಯಕವೆಂದು ಭಾವಿಸುತ್ತಾರೆ.

೬.೨ ಸಾಮಾಜಿಕ ಜೀವನ

ಅಲೆಮಾರಿ ಸಮುದಾಯಗಳು ನಿಯಮಗಳನ್ನು ಕಟ್ಟು ನಿಟ್ಟಿನಿಂದ ಪಾಲಿಸುತ್ತಲೆ ಬಂದಿದ್ದಾರೆ. ಇಂದು ಆದಿವಾಸಿ ಸಮುದಾಯಗಳನ್ನು ಆಧುನೀಕರಣದ ಸಂದರ್ಭದಲ್ಲಿ ಕೂಡಾ ತಾವು ಬೆಳಸಿಕೊಂಡು ಬಂದ ಕೆಲವು ವಂಶಪರಂಪರೆಯಾಗಿ ಬಂದ ನೀತಿ ನಿಯಮಗಳು ಉಳಿಸಿಕೊಂಡಿವೆ. ಅಲ್ಲದೆ ಕೆಲವು ಮೌಲ್ಯಗಳನ್ನು ತಮ್ಮಲ್ಲಿಯೇ ಇರಬೇಕೆಂಬ ಘಟವನ್ನು ಹೊಂದಿವೆ. ಹಾಗೂ ಕೆಳಜಾತಿಗಳನ್ನು ಪುರೋಹಿತಶಾಹಿಗಳು ತಮ್ಮ ಅಧೀನದಲ್ಲಿಟ್ಟುಕೊಂಡುಬೇಕಾದ. ಸಮಯದಲ್ಲಿ ಬಳಸಿಕೊಳ್ಳುತ್ತಿದ್ದರು ಹಾಗೂ ಆದಿವಾಸಿ ಮತ್ತು ಕೆಳಜಾತಿಗಳನ್ನು ಮಾನವೀಯತೆಯ ದೃಷ್ಟಿಯಿಂದ ನೋಡಿ ಶೋಷಣೆಗೆ ಒಳಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿಯೇ ಬುಡಕಟ್ಟುಗಳ ಬಗ್ಗೆ ಕಾಳಜಿಯನ್ನು ವಹಿಸಿ ಅವರನ್ನು ಅವರದೇ ಆದ ಸಂಸ್ಕೃತಿಯಲ್ಲಿ ಅಭಿವೃದ್ದಿಯತ್ತ ಸಾಗುವ ಕಾರ್ಯ ನಡೆದುಬೇಕಾದರು ಅವಶ್ಯಕವಾಗಿದೆ.

ಮಂಗಾರವಾಡಿ ಸಮುದಾಯವು ಜಾಗತೀಕರಣ ಸುಳಿಯಲ್ಲಿವೆ ಈ ಹಿನ್ನೆಲೆಯಲ್ಲಿಯಾದರೂ ಯಾವುದೇ ರೀತಿಯ ಪ್ರಭಾವಗಳಿಗೆ ಸಿಲುಕದೆ. ಒಂದು ಕಡೆ ನೆಲೆ ನಿಂತು ಜೀವನವನ್ನು ನಡೆಸುತ್ತಿದ್ದಾರೆ. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಗಮನಿಸಿದಂತೆ ಪ್ರಪಂಚದ ಯಾವುದೇ ಬುಡಕಟ್ಟುಗಳ ಅಭಿವೃದ್ಧಿಗಾಗಿ ರಚನೆಯಾದ ಕಾನೂನುಗಳು ಅಲೆಮಾರಿಗಳ ಸಮುದಾಯಗಳನ್ನು ಅಭಿವೃದ್ಧಿ ಪಡಿಸುತ್ತಿವೆ. ಪ್ರಸ್ತುತ ದಿನಗಳಲ್ಲಿ ಭಾರತದಲ್ಲಿ ಸಾಮಾಜಿಕ, ಕುಟುಂಬ ಮತ್ತು ಸಮುದಾಯದ ಮೇಲೆ ಅನೇಕ ರೀತಿಯ ಸಕಾರಾತ್ಮಕ ನಕಾರಾತ್ಮಕ ಪರಿಣಾಮಗಳನ್ನು ಬೀರಿವೆ. ಇದು ನಿಜವೇ ಎಂದು ತೋರುತ್ತದೆ. ಇಂದು ಮಾಹಿತಿ ತಂತ್ರಜ್ಞಾನವು ಮಾನವನು ಹಾಕುವ ಪ್ರತಿಯೊಂದು ಹೆಜ್ಜೆಯನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆ. ಪ್ರಪಂಚದ ಮೂಲೆ ಮೂಲೆಗಳಲ್ಲಿ ನವೀನತೆಯನ್ನು ಹೊಂದಿರುವುದು ತಿಳಿದು ಬರುತ್ತದೆ. ಅವಿಷ್ಕಾರಗಳು ತಾಂತ್ರಿಕ ಜಗತ್ತಿನಲ್ಲಿ ವೇಗವಾಗಿ ಬೆಳವಣಿಗೆಯಾಗುತ್ತಿರುವುದು ಆದರೆ ಇದರ ಸದುಪಯೋಗ ಮಂಗಾರವಾಡಿ ಸಮುದಾಯಕ್ಕೆ ಮತ್ತು ಮಹಿಳೆಯ ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಮಂಗಾರವಾಡಿಗಳು ಸಮುದಾಯವು ತಾಂತ್ರಿಕ ಯುಗದಲ್ಲಿಯೂ ಕೂಡಾ ತಮ್ಮದೇ ಆದ ರೀತಿ, ರಿವಾಜು ನಿಯಮಗಳಲ್ಲಿ ಕಟ್ಟು ಪಾಡುಗಳನ್ನು ರಚಿಸಿಕೊಂಡು ಇವುಗಳಿಗೆ ಸರಿಹೊಂದುವಂತೆ ಜೀವನವನ್ನು ಪಡೆಸುತ್ತಿದ್ದಾರೆ.

೬.೨.೧. ಮಂಗಾರವಾಡಿಗರ ಸಾಮಾಜಿಕ ಹಿನ್ನೆಲೆ

ಕರ್ನಾಟಕದಲ್ಲಿ ಸಮುದಾಯಗಳ ಚರಿತ್ರೆ ರೂಪಗೊಂಡಿದನ್ನು ಅವಲೋಕಿಸಿದಾಗ ಇದರ ಹಿಂದೆ ಅನೇಕ ಸಾಮಾಜಿಕ ದುಷ್‌ಕೃತ್ಯಗಳುವಿರುವುದುದನ್ನು ಕಾಣುತ್ತೇವೆ. ಬ್ರಿಟೀಷರ

ಕಾಲದ ಅವಧಿಯಲ್ಲಿ ರೂಪಗೊಂಡ ಸಮುದಾಯಗಳಲ್ಲಿ ಮಂಗಾರವಾಡಿ ಸಮುದಾಯವು ರೂಪಗೊಂಡಿದೆ ಒಂದು ಸಂದರ್ಭದಲ್ಲಿ ಸಮುದಾಯಗಳ ಚರಿತ್ರೆಯು ಪಾಶ್ಚಾತ್ಯ ಮತ್ತು ವಸಾಹತುಶಾಹಿಯ ಮಿಶ್ರಣದಿಂದ ಕೂಡಿದಾಗಿದೆ. ಇದರ ಪರಿಣಾಮವಾಗಿ ಭಾರತದಲ್ಲಿ ಮೇಲ್ಜಾತಿಗಳು ಭಾರತೀಯ ಸಂಸ್ಕೃತಿಯನ್ನು ನಿರ್ಮಿಸಿದವರು ದೇಶಿಯ ಮತ್ತು ವಸಾಹತುಶಾಹಿಯ ದೃಷ್ಟಿಯಿಂದ ಮತಿಯ ಪೂರ್ವಾಗ್ರಹಗಳು ಭಾರತೀಯ ಬುಡಕಟ್ಟು ವ್ಯವಸ್ಥೆ ಬಂದಂತೆ ವಿರೂಪಗೋಳಿಸಿವೆ. "ಸಾಮಾಜಿಕ ಮಾದರಿಗಳು ಎಂದರೆ ಸಾಮಾಜಿಕ ಆಂತರಿಕ ಕ್ರಿಯೆ-ಪ್ರಕ್ರಿಯೆಗಳ ಪರಿಸ್ಥಿತಿಯಲ್ಲಿನ ಸಾಮಾಜಿಕ ಸ್ಥಾನಮಾಗಳಿಂದ ಮೂಡಿದ ಸಾಮಾಜಿಕ ಮಾದರಿಗಳಾಗುತ್ತವೆ."[೨] ಮಂಗಾರವಾಡಿಗರು ಮೂಲತಹದಲ್ಲಿ ಮಾದಿಗ ಜಾತಿಗೆ ಸೇರಿದವರೆಂದು ಹೇಳುತ್ತಾರೆ. ಅವರು ಬ್ರಿಟೀಷ್ ಆಳ್ವಿಕೆಯ ಸಂದರ್ಭದಲ್ಲಿ ಕೆಳಜಾತಿಯ ಜನರನ್ನು ತಮ್ಮ ಅಧೀನದಲ್ಲಿಟ್ಟುಕೊಂಡು ತಮ್ಮ ಮನಸ್ಸಿಗೆ ಬಂದಂತೆ ವರ್ತಿಸುತ್ತಾ ಅವರ ಮೇಲೆ ದಬ್ಬಾಳಿಕೆ ಮಾಡುತ್ತ ಕ್ರೂರವಾಗಿ ನಡೆದುಕೊಂಡಿದೆ. ಅವರ ಅಲೆಮಾರಿ ಬದುಕಿಗೆ ಸಾಕ್ಷಿಯಾಗಿದೆ.

ಸ್ವತಂತ್ರ್ಯ ನಂತರ ಭಾರತದಲ್ಲಿದ ಅಲೆಮಾರಿಗಳು ಕಾಡು ಗುಡ್ಡಗಳಲ್ಲಿ ನೆಲೆ ನಿಂತವು ಅಲ್ಲಿಯ ಯಾವುದೇ ಉತ್ತಮ ಜೀವನ ನಡೆಸುವಂತಹ ಸೌಕರ್ಯಗಳಲ್ಲಿ ಸ್ವತಂತ್ರ್ಯ ನಂತರದಲ್ಲಿ ಮೇಲ್ವರ್ಗದರ ಆಡಳಿತದ ಹಿಡಿತದಲ್ಲಿ ಬುಡಕಟ್ಟು ಸಮುದಾಯಗಳನ್ನು ತಮ್ಮ ಅಧಿನದಲ್ಲಿಟ್ಟುಕೊಂಡು ಅವರಿಗೆ ಮನಬಂದಂತೆ ವರ್ತಿಸುತ್ತಿದ್ದರಿಂದ ಇಂಥಹ ಹಿಂಸೆಯಿಂದ ಮುಕ್ತಿಹೊಂದುವುದು ಯಾವಾಗ ಎಂಬುದು ಬುಡಕಟ್ಟುಗಳ ಜನರು ತಮ್ಮ ಆಸೆ, ಆಕಾಂಕ್ಷೆ, ನಡೆ, ನುಡಿ ಭಾವನೆಗಳನ್ನು ಮತ್ತು ಮನಸ್ಥಿತಿಯನ್ನು ಒಂದೇ ಕಡೆ ನಿಲ್ಲದೆ ಮತ್ತೆ ಬೇರೆ ಬೇರೆ ನಗರ ಪ್ರದೇಶಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಒಂದು ನೆಲೆನಿಂತು ತಮ್ಮ ಜೀವನವನ್ನು ರೂಢಿಸಿಕೊಂಡಿರುವಂತಹದು ತಿಳಿದುಬರುತ್ತದೆ ಆಧುನಿಕ ಯುಗದಲ್ಲಿ ಮಹಿಳೆಯರು ಒಂದು ಉತ್ತಮವಾದ ಸ್ಥಾನದಲ್ಲಿ ಜೀವನ ನಡೆಸುತ್ತಿದ್ದಾರೆಂಬುದು ಅಧ್ಯಯನದ ಮೂಲಕ ತಿಳಿದು ಬರುತ್ತಿದೆ. ನಗರ ಪ್ರದೇಶಗಳಲ್ಲಿ ಮನೆಗಳನ್ನು ಹೊಂದಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಹೊಲ ಅಥವಾ ಗದ್ದೆಯನ್ನು ಹೊಂದಿದ್ದಾರೆ. ಮಂಗಾರವಾಡಿ ಸಮುದಾಯದಲ್ಲಿ ಜೊತೆಗೂಡಿ ಬದುಕುತ್ತಾರೆ. ಮತ್ತು ಜೊತೆ ಜೊತೆ ಗೊಡಿ ದುಡಿಮೆಯಲ್ಲಿ ಮಹಿಳೆ ಪುರುಷರು ಕೂಡಿಕೊಂಡು ಕೆಲಸ ಮಾಡುತ್ತಿರುವುದು ವಿಸ್ಮಯಕರವೆಂದು ಹೇಳುಬಹುದು ಸ್ತ್ರೀ ಪುರುಷ ಎಂಬ ಬೇದ ಭಾವವಿಲ್ಲ. ಈ ಹಿನ್ನೆಲೆಯಲ್ಲಿ ನೋಡಿದಾಗ ಈ ರೀತಿಯ ಸಾಮಾಜಿಕ ನೆಮ್ಮದಿಯ ಜೀವನವು ಇವರ ಆರ್ಥಿಕ ಭದ್ರತೆಯನ್ನು ಮತ್ತು ರಕ್ಷಣೆಯನ್ನು ಹೆಚ್ಚಿಸುತ್ತದೆ. ಇದ್ದರಿಂದ ಬುಡಕಟ್ಟುಗಳು ಸಾಮಾಜಿಕ ಬದುಕು ಕೌಟುಂಬಿಕ ಜೀವನ ಸಾಂಸ್ಕೃತಿಕತೆಯನ್ನು ಕಾಪಾಡುವಲ್ಲಿ ಯಶಸ್ವಿಯಾಗಿ ಪ್ರಯತ್ನ ಮಾಡುತ್ತಿರುವುದು ನೋಡಬಹುದಾಗಿದೆ. ಮಂಗಾರವಾಡಿ

ಮಹಿಳೆಯರು ಕಾಡಿನಲ್ಲಿಯೆ ಉಳಿದು ಉಳುಮೆ ಮಾಡಿ ಜೀವನವನ್ನು ಆರಂಭಿಸಿದರು ಆದರೆ ಒಂದು ಕಾಲದಲ್ಲಿ ಗಡ್ಡೆ ಗೆಣಸು ಹಣ್ಣು-ಹಂಪಲುಗಳನ್ನು ತಿಂದು ಬದುಕುತ್ತಿದ್ದ ಈ ಸಮುದಾಯ ಇಂದು ಕಾಡಿನಲ್ಲಿ ಭೂಮಿಯನ್ನು ಉಳುಮೆ ಮಾಡಿ ಜೀವನ ನಡೆಸಲು ಆಹಾರ ಮುಖ್ಯವಾದದು ಎಂಬುದು ಅರಿತು ಒಳ್ಳೆಯ ರೀತಿಯಲ್ಲಿ ಜೀವನ ನಡೆಸುತ್ತಿದ್ದಾರೆ.

೬.೨.೨ ಮಂಗಾರವಾಡಿಗರ ಕೌಟುಂಬಿಕ ವ್ಯವಸ್ಥೆ

ಮಂಗಾರವಾಡಿಗರ ಸಾಮಾಜಿಕ ಸ್ಥಾನಮಾನಗಳನ್ನು ನೋಡಿದರೆ ಈ ಸಮುದಾಯ ಪಿತೃ ಪ್ರಧಾನವ್ಯವಸ್ಥೆಯನ್ನು ಹೊಂದಿರುವ ಬುಡಕಟ್ಟಾಗಿದೆ. ಇವರಲ್ಲಿ ಹೆಚ್ಚಾಗಿ ಅವಿಭಕ್ತ ಕುಟುಂಬಗಳ ಹೆಚ್ಚು ಕಂಡು ಬರುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ಅವಿಭಕ್ತ ಕುಟುಂಬ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಪಿತೃಪ್ರಧಾನ ವ್ಯವಸ್ಥೆಯಿಂದ ಕೂಡಿರುವ ಮಂಗಾರವಾಡಿಗರ ಸಮುದಾಯದಲ್ಲಿ ಏಕ ಪತ್ನಿತ್ವ ಪದ್ದತಿ ಜಾರಿಯಲ್ಲಿದೆ, ಮದುವೆಯಾದ ಕೆಲವು ವರ್ಷಗಳಲ್ಲಿ ಹುಡಗ ತೀರಿಕೊಂಡರೆ ಆ ಒಂದು ಸಮುದಾಯದಲ್ಲಿ ಮಹಿಳೆಗೆ ಮತ್ತೊಂದು ಮದುವೆಗೆ ಅವಕಾಶವಿದೆ. ಶಾಸ್ತ್ರೋಕ್ತವಾಗಿ ಎಲ್ಲರೂ ಕುಡಿಯೇ ಮದುವೆಯನ್ನು ಮಾಡುತ್ತಾರೆ. ಸಮುದಾಯ ಎಲ್ಲಾ ಜನರು ಸೇರಿ ಮದುವೆ ಕಾರ್ಯದಲ್ಲಿ ಭಾಗಿಯಾಗುತ್ತಾರೆ.

ಪ್ರಪಂಚದ ಬುಡಕಟ್ಟುಗಳ ಬದುಕನ್ನು ಗಮನಿಸಿದರೆ ಪ್ರಾಚೀನ ಕಾಲದಲ್ಲಿ ಆದಿವಾಸಿ ಸಮುದಾಯಗಳಲ್ಲಿ ಕುಟುಂಬ ವ್ಯವಸ್ಥೆಯು ಪ್ರಾಮುಖ್ಯತೆಯನ್ನು ಪಡೆದಿದೆ. ಕುಟುಂಬದಲ್ಲಿ ಮನೆಯ ಹಿರಿಯನೇ ಇಡೀ ಕುಟುಂಬದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಆಚರಣೆಗಳನ್ನು ನಿಯಂತ್ರಿಸುವವನಗಿರುತ್ತಾನೆ. ಅಲ್ಲದೆ ಯಾವುದೇ ಹಬ್ಬ, ಮದುವೆ ಮುಂತಾದ ಶುಭ ಕಾರ್ಯಗಳಿಗೆ ಮನೆ ಮಂದಿಗೆಲ್ಲ ಬಟ್ಟೆ ಆಭರಣಗಳನ್ನು ತರುವಂತ ಅಧಿಕಾರ ಮನೆಯ ಹಿರಿಯರದ್ದಾಗಿದೆ ಆಸ್ತಿಯ ಹಕ್ಕು ಸಾಮಾನ್ಯವಾಗಿ ತಂದೆ ನಂತರ ಮನಯ ಹಿರಿಯ ಮಗನಿಗೆ ಸೇರುತ್ತಿದೆ.

ಮಂಗಾರವಾಡಿಗರಲ್ಲಿ ಸ್ತ್ರೀ ಮಾತ್ರ ಕೆಲಸ ಮಾಡುವಂತಹದು ತಿಳಿದು ಬರುತ್ತದೆ. ಸ್ತ್ರೀಯ ಕೆಲಸ ಮಾಡಿ ತನ್ನ ಗಂಡ ಮತ್ತು ಮಕ್ಕಳನ್ನು ಕುಟುಂಬುವನ್ನು ನಡೆಸುವ ಜವಾಬ್ದಾರಿಯನ್ನು ಹೊಂದಿದ್ದಾಳೆ, ಮಂಗಾರವಾಡಿಗರಲ್ಲಿ ಸ್ತ್ರೀಯರಿಗೆ ಹೆಚ್ಚಿನ ಒಂದು ಗೌರವ ಮತ್ತು ಪ್ರಮುಖ ಸ್ಥಾನವನ್ನು ಹೊಂದಿದ್ದಾಳೆ. ಜೊತೆಗೆ ಸಮುದಾಯಗಳಲ್ಲಿ ಮಕ್ಕಳ ಪಾಲನೆ, ಪೋಷಣೆಯಲ್ಲಿ ಸ್ತ್ರೀ ಪಾತ್ರ ಪ್ರಧಾನವಾದುದು ಎಲ್ಲಾ ಸಮುದಾಯಗಳಲ್ಲಿ ಕಂಡು ಬರುವಂತೆ ಇಲ್ಲಿಯೂ ಕಂಡು ಬರುತ್ತದೆ. ಸಮುದಾಯದಲ್ಲಿ ಅಪ್ಪ ಅಮ್ಮ ಹೆಂಡತಿ ಮಕ್ಕಳು ಅಣ್ಣ ತಮ್ಮಂದಿರು ಅಕ್ಕ ತಂಗಿಯರು ಸಮುದಾಯದಲ್ಲಿ ಬಹಳ ಪ್ರೀತಿಯಿಂದ ಜೀವನ

ಸಾಗಿಸುವಂತಹದು ಸಮುದಾಯಗಳಲ್ಲಿ ತಿಳಿದುಬರುತ್ತದೆ. ಇತರ ಸಮಾಜದೊಂದಿಗೆ ಅವರು ಅನೋನ್ಯವಾಗಿ ಪ್ರೀತಿ, ಸಹನೆ, ಕರುಣೆ, ನೆಮ್ಮದಿಯಿಂದ ಕೂಡಿ ಬಾಳುವಂತಹದು ಅನೋನ್ಯವಾದ ಸಂಬಂಧವನ್ನು ಮಂಗಾರವಾಡಿಗರ ಸಮುದಾಯವು ಹೊಂದಿರುವಂತಹದು ತಿಳಿದುಬರುತ್ತದೆ.

೬.೨. ೩. ಮಂಗಾರವಾಡಿಗರ ನ್ಯಾಯ ಪದ್ಧತಿ

ಮಂಗಾರವಾಡಿ ಸಮುದಾಯದಲ್ಲಿ ಕುಟುಂಬದ ತೀರ್ಮಾನಗಳನ್ನು ಕುಟುಂಬದ ಹಿರಿಯ ಯಜಮಾನನೇ ಮಾಡುತ್ತಾನೆ. ಇದು ಹಲವಾರು ಶತ ಶತಮಾನದಿಂದ ತಲೆತಲಾಂತರದಿಂದ ಬಂದಂತಹ ಒಂದು ಪದ್ಧತಿ ಇಂದು ಮಂಗಾರವಾಡಿ ಸಮುದಾಯದಲ್ಲಿಯೂ ಕಂಡು ಬರುತ್ತದೆ. ಪ್ರಾಚೀನ ಕಾಲದಿಂದಲ್ಲೂ ಸಾಗಿ ಬಂದ ನ್ಯಾಯ ಪದ್ಧತಿಯನ್ನು ರೂಢಿಸಿಕೊಂಡು ಬಂದಿರುವಂತಹದು ತಿಳಿದು ಬರುತ್ತದೆ. ಸಮುದಾಯಕ್ಕೆ ಸಂಬಂಧಿಸಿದ ನ್ಯಾಯಗಳಿದ್ದರೆ ಅದನ್ನು ಸಮುದಾಯದ ಹಿರಿಯರು ಕೂಡಿಕೊಂಡು ಬುದ್ಧಿವಂತಿಕೆಯಿಂದ ನ್ಯಾಯವಾದ ರೀತಿಯಲ್ಲಿ ಸಮುದಾಯದ ಸಮಸ್ಯೆಯನ್ನು ಬಗೆಹರಿಸುತ್ತಾರೆ.

ಮಂಗಾರವಾಡಿ ಸಮುದಾಯದಲ್ಲಿ ಜಗಳ ತಂಟೆಗಳು ಬಂದರೆ ಎರಡು ಕುಟುಂಬದ ಜನರನ್ನು ಕರೆದು ಪಂಚಾಯತಿ ಕಟ್ಟೆಯಲ್ಲಿ ಕರೆದು ನ್ಯಾಯ ಸಮ್ಮತವಾದ ರೀತಯಲ್ಲಿ ಯಾವ ಸಮಾಜಕ್ಕೂ ಅನ್ಯಾಯವಾಗದಂತೆ ಸೂಕ್ತ ನಿರ್ಣಯವನ್ನು ನೀಡುವಂತಹದು ಕಂಡುಬರುತ್ತದೆ. ಅದರಲ್ಲಿ ಯಾವುದೇ ಮೇಲು–ಕೀಳು, ಶ್ರೇಷ್ಠ–ಕನಿಷ್ಠ ಎಂಬುದು ತೋರುವುದಿಲ್ಲ. ಎಲ್ಲರಿಗೇ ಸಮಾನವಾದ ರೀತಿಯಲ್ಲಿ ಸಮುದಾಯದವರು ಕೂಡಕೊಂಡು ಒಂದು ಸಮಿತಿಯನ್ನು ಮಾಡಿದ್ದಾರೆ ಅದನ್ನು ಸಮುದಾಯದ ಪಂಚಕಮಿಟಿವೆಂದು ಹೇಳುವಂತಹದು ಸಮುದಾಯದ ಆಗು ಹೋಗುಗಳನ್ನು ನಿರ್ಣಯ ಮಾಡುವವರು ಈ ಒಂದು ಸಮಿತಿ ಹೊಂದಿದೆ. ಸಮುದಾಯದ ಹಿರಿಯ ಮುಖಂಡರು ಕೂಡಿಕೊಂಡಿದ್ದಾರೆ. ಸಮುದಾಯದಲ್ಲಿ ಯಾವುದೇ ಬೇದ ಭಾವ ಮಾಡುವಂತಿಲ್ಲ. ಸಮಿತಿಯ ಸದಸ್ಯರೆಲ್ಲರೂ ಒಳ್ಳೆಯ ತೀರ್ಮಾನ ನೀಡಬೇಕು ಸಮಿತಿಯಲ್ಲಿರುವ ಮುಖಂಡರುಗಳು ಮತ್ತು ಸದಸ್ಯರುಗಳ ಪಟ್ಟಿ ಈ ಕೆಳಗಿನಂತಿದೆ.

*** ಪಂಚ ಕಮಿಟಿ ಸದಸ್ಯರುಗಳು (ಸಮುದಾಯದ ಮುಖಂಡರು)**

೧. ಸದಾಶಿವ ಆರ್. ಉಪಾಧ್ಯಾಯ

೨. ಪೋಪಟಲಾಲ್ ಆರ್. ಉಪಾಧ್ಯಾಯ

೩. ಸಕಲಾದ ಗೋಪಾಲರಾವ್. ಕಾಂಬಳೆ

೪. ಬಿಲ್ಲಿ ಮೋರ್. ಉಪಾಧ್ಯಾಯ

೫. ಪನ್ನಾಲಾಲ್. ಉಪಾಧ್ಯಾಯ

೬. ಅನಿಲ್‌ಕುಮಾರ್, ಎಸ್.ಕಾಂಬಳೆ (ವಕೀಲರು)

೭. ವಿಕ್ರಮ ಉಪಾಧ್ಯಾಯ

೮. ರಮೇಶ ಕಾಂಬಳೆ

ಮಂಗಾರವಾಡಿ ಸಮುದಾಯದಲ್ಲಿ ಅಕ್ರಮ ಸಂಬಂಧಿ ಕಲಹಗಳು ಅನೈತಿಕತೆಯಿಂದ ಕೂಡಿದ ಕಲಹಗಳನ್ನು ಮುಂತಾದವುಗಳನ್ನು ಬಗ್ಗೆ ಸಾಮಾನ್ಯವಾಗಿ ಪಂಚಾಯಿತಿಯನ್ನು ಸೇರಿಸಿ ತೀರ್ಮಾನಗಳನ್ನು ದಂಡದ ರೂಪದಲ್ಲಿ, ಬಹಿಷ್ಕಾರದ ರೂಪದಲ್ಲಿ, ಅನೈತಿಕವಾಗಿ ಗರ್ಭಿಣಿಯಾದ ಸ್ತ್ರೀಗೆ ಅದೇ ಹುಡುಗನಿಗೆ ಕರೆ ತಂದು ಮದುವೆಗೆ ಒಪ್ಪಿಸುತ್ತಾರೆ. ಮದುವೆಗೆ ಒಪ್ಪದಿದ್ದರೆ ಸಮುದಾಯದಿಂದ ೧೦ವರ್ಷ ೧೫ವರ್ಷಬಹಿಷ್ಕಾರ ಹಾಕುತ್ತಾರೆ. ಹೆಚ್ಚಾಗಿ ಮದುವೆ ಕಾರ್ಯಗಳನ್ನು ಮಾಡುವುದು ತಿಳಿದುಬಂದಿದೆ. “ಸಮುದಾಯಗಳಲ್ಲಿ ಪುರುಷ ಪ್ರಧಾನ ಸಂಸ್ಕೃತಿ ಬೇರೂರುತ್ತ ಹೋದಂತೆಲ್ಲ. ಗಂಡು ಸಂತಾನಕ್ಕೆ ಸಾಮಾಜಿಕ ಆರ್ಥಿಕ, ಮಟ್ಟಗಳು ಹೆಚ್ಚುತ್ತಾ ಹೋಬತು ಇಂಥ ಸಂಸ್ಕೃತಿಗೆ ಪ್ರಮುಖ ಅಂಶಗಳೇ ಕಾರಣವೆಂದು ಗುರುತಿಸಲ್ಪಟಿವೆ.”[೩] ಇಲ್ಲಿ ಮಹಿಳೆಯ ಪಾತ್ರವೇ ಪ್ರಧಾನವಾರುವೆಂಬುದು ತಿಳಿದುಬರುತ್ತದೆ. ಗಂಡ ಸತ್ತರೆ ಆಕೆಗೆ ಮತ್ತೊಂದು ಮದುವೆ ಎಲ್ಲಾ ಧಾರ್ಮಿಕ ವಿಧಿ ವಿಧಾನದ ಪ್ರಕಾರ ಮದುವೆಯಾಗುತ್ತಾಳೆ ಗಂಡು ಕೂಡಾ ಮರುಮದುವೆಯಾಗುವುದು ಸಮುದಾಯದಲ್ಲಿ ಸಹಜವಾಗಿ ಬೆಳೆದು ಬಂದ ಒಂದು ಪದ್ದತಿಯಾಗಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ನ್ಯಾಯ ಪದ್ದತಿಯು ಪ್ರಮುಖವಾದುದಾಗಿದೆ.

೬.೩. ಧಾರ್ಮಿಕ ಜೀವನ

ಮಂಗಾರವಾಡಿಗರು ಸಾಮಾನ್ಯವಾಗಿ ಶಕ್ತಿ ದೇವತೆಗಳ ಉಪಾಸಕಾರಾಗಿದ್ದು ಕಂಡು ಬರುತ್ತದೆ. ವಿಠ್ಠಲ ಮಂದಿರ ಲಕ್ಷ್ಮೀ ಮಂದಿರ ಹನುಮಾನ ಮಂದಿರ, ಮತ್ತು ದುರ್ಗಾ ಮಾತಾ ಶಕ್ತಿ ದೇವತೆಗಳು ಆರಾಧಕರಾಗಿದ್ದಾರೆ. ದೇವರನ್ನು ಭಕ್ತಿಯಿಂದ ಪೂಜಿಸುತ್ತಾರೆ. ಜೊತೆಗೆ ಹಲವಾರು ಹಿಂದೂ ದೇವತೆಗಳನ್ನು ಪೂಜೆ ಮಾಡುತ್ತಾರೆ. ಶಿವ, ವಿಷ್ಣು, ಪಾರ್ವತಿ, ಹಿಂದೂ ದೇವತೆಗಳನ್ನು ಪೂಜಿಸುತ್ತಾ ಬಂದಿದ್ದಾರೆ. ತುಳಜಾ ಭವಾನಿ, ಅಂಬಾ ಭವಾನಿ ದೇವರನ್ನು ಆರಾಧಿಸುತ್ತಾರೆ. ದೈವಭಕ್ತರಾದ ಮಂಗಾರವಾಡಿಗರು ಕುರಿ, ಕೋಳಿಗಳನ್ನು ದೇವರಿಗೆ ಬಲಿಕೊಡುವ ಪದ್ದತಿ ಸಮುದಾಯದಲ್ಲಿ ಕಂಡುಬರುತ್ತದೆ. ತಮ್ಮ ಸಂಸ್ಕೃತಿಯ ಆರಾಧ್ಯ ದೇವರುಗಳ ಹಾಗೂ ಭೂತ ಪ್ರೇತಗಳ ಸಂತೃಪ್ತಿಗಾಗಿ ಬಲಿಕೊಡುವ ಸಂಪ್ರದಾಯ

ಮಂಗಾರವಾಡಿಗರಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಮಂಗಾರವಾಡಿಗರು ಪ್ರಮುಖವಾದ ಎಲ್ಲ ಭಾರತೀಯ ಹಬ್ಬ ಹರಿದಿನ ಜಾತ್ರೆ ಮತ್ತು ಹಬ್ಬಗಳನ್ನು ತಮ್ಮದೆ ಆದ ರೀತಿಯಲ್ಲಿ ಆಚರಿಸುತ್ತಾರೆ.

ಬುಡಕಟ್ಟು ಜನರು ಸರಿಸುಮಾರಾಗಿ ಹಿಂದೂ ಸಂಪ್ರದಾಯದಂತೆ ಅನೇಕ ಆಚರಣೆಗಳು ಮಾಡುತ್ತ ಹಾಗೆಯೇ ಮುಂದುವರೆಸುತ್ತ ಬಂದಿದ್ದಾರೆ, ದೀಪಾವಳಿ, ಹೋಳಿಹಬ್ಬ, ಗೌರಿಹಬ್ಬ, ದಸರಾ ಹಬ್ಬ ಇವುಗಳೆಲ್ಲ ಆಚರಿಸುವಂತಹದು ಕಂಡುಬರುತ್ತದೆ. ದೀಪಾವಳಿ ಮತ್ತು ದಸರೆ ಹಬ್ಬಗಳಲ್ಲಿ, ಗೋಪೂಜೆ, ಲಕ್ಷ್ಮೀಪೂಜೆ, ಮತ್ತು ಹಿರಿಯರ ಹಬ್ಬ ಅಥವಾ ಪೂರ್ವಜರಿಗೆ ಸಲ್ಲಿಸುವ ಪೂಜೆ ಆಚರಿಸುತ್ತಾರೆ. ಹೋಳಿ ಹಬ್ಬವನ್ನು ಕಾಮದ ಸಂಕೇತವಾಗಿ ಆಚರಿಸುತ್ತಾರೆ. ಗೌರಿ ಹಬ್ಬವನ್ನು ಶ್ರೀ ಕೃಷ್ಣನ ಆರಾಧನೆಯ ಹಿನ್ನಲೆಯಲ್ಲಿ ಆಚರಿಸುತ್ತಾ ಬಂದಿರುವಂತಹದು ಮತ್ತು ದಸರೆಯ ಸಂದರ್ಭದಲ್ಲಿ ದುರ್ಗಾ ದೇವಿಯ ಪೂಜೆಯ ಹಿನ್ನೆಲೆಯಲ್ಲಿ ಆಚರಿಸುತ್ತಾರೆ ಬುಡಕಟ್ಟು ಧಾರ್ಮಿಕ ಪರಂಪರೆಯನ್ನು ಹಲವಾರು ಏರ್ಪಾಡುಗಳಿಂದ ಹಾಗೇ ಉಳಿಸಿಕೊಂಡು ಮತ್ತು ಮುಂದುವರೆಸಿಕೊಂಡು ಬಂದಿರುವಂತಹದು ತಿಳಿದುಬರುತ್ತದೆ.

ಮುಂಗಾರವಾಡಿಗರ ಬದುಕು ದೈವ ಭಕ್ತಿ ಪರಂಪರೆಗೆ ಪ್ರಧಾನವಾದದು ಅವರಲ್ಲಿರುವ ಆಳವಾದ ನಂಬಿಕೆಗಳಿಂದ ಮೌಢ್ಯತೆಯ ನೆಲೆಯಲ್ಲಿ ಬದುಕುತಿದ ಜನಾಂಗಗಳು ಧಾರ್ಮಿಕವಾಗಿ ದೇವರ ನಮ್ಮ ಎಲ್ಲಾ ಸಮಸ್ಯೆಗಳು ಪರಿಹರಿಸುತ್ತಾನೆಂಬ ಒಂದು ಕಲ್ಪನೆ ಮತ್ತು ಭಾವನೆಯನ್ನು ಹೊಂದಿದ್ದಾರೆ. "ಯಾವುದೇ ಶಕ್ತಿಯ ಸಂಪನ್ಮೂಲಗಳಿಂದ ಒಂದು ಸಮುದಾಯದ ಸ್ಮೃತಿ ಅಥವಾ ಸಮುದಾಯ ಪ್ರಜ್ಞೆ ಸಬಲಗೊಳಿಸುವುದಕ್ಕಿಂತ ದುರ್ಬಲಗೊಳಿಸುವಂತದೇ ಆಗಿರುತ್ತದೆ. ಇಂದಿಗೂ ದಲಿತರಲ್ಲಿ ಆಸ್ತಿಗಳಿಲ್ಲ."[೪] ಒಬ್ಬೊಬ್ಬರು ಒಂದೊಂದು ದೇವರುಗಳನ್ನು ಸೃಷ್ಟಿಮಾಡಿಕೊಂಡು ಧಾರ್ಮಿಕತೆಯ ಹಿನ್ನೆಲೆಯಲ್ಲಿ ಆಚರಿಸುತ್ತ ಬಂದಿದ್ದಾರೆ. ಹಬ್ಬಗಳನ್ನು ಒಂದೊಂದು ಗುಂಪಿನ ಜನ ತಮ್ಮದೇ ಆದ ವಿಶಿಷ್ಠ ಸಾಂಸ್ಕೃತಿಯ ಹಾಗೂ ಪರಂಪರೆಯ ಹಿನ್ನೆಲೆಯಲ್ಲಿ ಆಚರಿಸುತ್ತ ಬಂದಿದ್ದಾರೆ. ಹಿಂದೂ ಧರ್ಮದಲ್ಲಿ ಧಾರ್ಮಿಕತೆ ಹೆಚ್ಚಿನ ಪೂಜ್ಯತೆಯ ಭಾವನೆ ಹೊಂದಿರುವುದು ತಿಳಿದುಬರುತ್ತಿದೆ. ಜೀವನದ ಮುಕ್ತಿಗೆ ದೇವರ ಕೃಪೆ ಅತಿ ಅವಶ್ಯಕವೆಂದು ಭಾವನೆ ಅವರಲ್ಲಿದೆ ಆದ್ದರಿಂದಲೇ ತಾವು ನಂಬಿದ ಅನೇಕ ದೇವತೆಗಳ ಉಪಾಸನೆ ಮಾಡುತ್ತಾ ಭಕ್ತಿಯಿಂದ ಸ್ತುತಿ ಮಾಡುತ್ತಾರೆ. ದೇವತೆಗಳನ್ನು ಕುರಿತು ಅನೇಕ ಧಾರ್ಮಿಕ ಗೀತೆಗಳು ಹಾಡುತ್ತಾರೆ. ಧಾರ್ಮಿಕ ಗೀತೆಯಲ್ಲಿ ದುರ್ಗಾದೇವಿ ಮೇಲೆ ವಿಠ್ಠಲನ ಮೇಲೆ ಅನೇಕ ಹಾಡುಗಳು ಹಾಡುತ್ತಾರೆ. ಇವರಲ್ಲಿ ಅನೇಕ ಬಗೆಯ ಹಾಡುಗಳು ಲಭ್ಯವಾಗುತ್ತವೆ. ಮಾತೃ-ಪಿತೃಗಳ ಬಗ್ಗೆ ಅನೇಕ ಹಾಡುಗಳು

ಹಾಡುತ್ತಿರುವುದು ಅಲೆಮಾರಿಗಳ ಜನರಲ್ಲಿ ಕಂಡುಬರುತ್ತಿದೆ ಮಾತೃ ಮತ್ತು ಪಿತೃಗಳ ಆರಾಧ್ಯ ಅವರಲ್ಲಿ ವಿಶೇಷವಾಗಿ ಕಂಡು ಬರುತ್ತವೆ. ಶಿವ, ಗಣಪತಿ, ರಾಮಾ, ಹನುಮಂತ ಇತ್ಯಾದಿ ಹಿಂದೂ ದೈವಗಳ ಆರಾಧನೆಯೂ ಮಂಗಾರವಾಡಿಗಳಲ್ಲಿ ಕಂಡು ಬರುವ ಪ್ರಮುಖ ಅಂಶವಾಗಿದೆ.

ಭಾರತೀಯ ಬುಡಕಟ್ಟುಗಳಲ್ಲಿ ಪ್ರಜಾ ವಿಧಾನ ಮತ್ತು ದೇವರುಗಳು ಹಿಂದೂ ಜಾತಿಯ ಜನರು ಪೂಜಾ ವಿಧಾನ ಮತ್ತು ದೇವರುಗಳು ಭಿನ್ನವಾಗಿವೆ. ಭಕ್ತಿ ಭಯ, ನಯ, ವಿನಯದಿಂದ ಎಲ್ಲಾ ಜನಾಂಗದ ಜನರು ತಮ್ಮ ತಮ್ಮ ಕುಲದೇವತೆಗಳಿಗೆ ಹೆಚ್ಚು ನಂಬಿಕೆ, ವಿಶ್ವಾಸವನ್ನು ಇಟ್ಟುಕೊಂಡು ನಮ್ಮನ್ನು ಸದಾಕಾಲ ರಕ್ಷಿಸುತ್ತವೆ. ನಮ್ಮ ಬೇನ್ ಹಿಂದೆ ಯಾವಾಗಲು ದೇವರು ಇದ್ದಾನೆಂಬ ಪರಿಕಲ್ಪನೆಯಲ್ಲಿ ಜನರು ತಮ್ಮ ಬದುಕು ಸಾಗಿಸುತ್ತಿರುವುದು ತಿಳಿದುಬರುತ್ತದೆ. ದೇವರ ಹೆಸರಿನಲ್ಲಿ ಅನೇಕ ಆಚರಣೆಗಳು ವ್ರತಗಳು ಮಾಡುತ್ತ ಜೀವನದಲ್ಲಿ ತಾವು ಬಯಸಿದ, ಧನ, ಕನಕ, ಸಂಪತ್ತು, ಸಂತಾನ, ಸ್ಥಾನಮಾನ ಪಡೆಯುತ್ತೇನೆಂಬ ಒಂದು ದೃಷ್ಠಿಯಿಂದ ದೇವರಲ್ಲಿ ವ್ರತವಿರುವುದು ಕಂಡುಬರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಆಚರಣೆಯಲ್ಲಿ ಲೋಪವಾದರೆ ಅದ್ದರಿಂದ ಸಿದ್ದಿಯಾಗುವ ಬದಲು ಕೆಡುಕು ಆಗುತ್ತದೆ. ಕ್ಷಣದಲೇ ಮನೆ ಸಂಪತ್ತು ನಾಶವಾಗುವ ಮಕ್ಕಳ ಸುತ್ತದಟ್ಟ ದರಿದ್ರವಾಗುವ ಕಥೆಗಳಿಂದ ವ್ರತಗಳ ಆಚರಣೆಯಲ್ಲಿ ಕಟ್ಟು ನಿಟ್ಟಿನ, ನಿಯಮ ಪಾಲಿಸುವರು ದೇವರು ಯಾವುದೇ ಬಗೆಯ ವೇಶದಲ್ಲಿ ನಮ್ಮನ್ನು ಪರಿಕ್ಷಿಸುವನ್ನು ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಆದ್ದರಿಂದ ಯಾವುದೇ ವಿಚಾರಗಳು ನಂಬಿಕೆಗಳು ಸಂಪ್ರದಾಯಗಳು ಧಾರ್ಮಿಕ ಜೀವನದ ತಳಹದಿಯ ಮೇಲೆ ರೂಪಿಸಿಕೊಂಡು ತಮ್ಮ ಬದುಕು ಸಾಗಿಸಿರುವಂತಹದು ತಿಳಿದುಬರುತ್ತದೆ. ದೃಢ ಸಂಕಲ್ಪದಿಂದ ದೇವರಲ್ಲಿ ಮತ್ತು ದೇವರ ಹೆಸರಿನಲ್ಲಿ ವ್ರತಗಳನ್ನು ಕೈಗೊಳ್ಳುತ್ತಾರೆ. ಇದರಲ್ಲೂ ಅಚ್ಚುಕಟ್ಟಾಗಿ ನಿಯಮ ಬದ್ದವಾಗಿ ಶಿಸ್ತಿನ ಕ್ರಮವನ್ನು ಪಾಲಿಸುತ್ತಾರೆ. ಬುಡಕಟ್ಟುಗಳಲ್ಲಿ ಎಲ್ಲರು ವ್ರತಗಳು ಆಚರಿಸಲು ಸಾಧ್ಯವಿಲ್ಲ. ಕೆಲವರು ದೇವರಲ್ಲಿ ಭಯ ಭಕ್ತಿ ನಯ ವಿನಯದಿಂದ ನಡೆದುಕೊಳ್ಳುತ್ತಾರೆ ಮಡಿ–ಮೈಲಿಗೆ ಯಾವುದಾದರೂ ಯಾರಲ್ಲಿ ಕಂಡುಬಂದರೆ ಆ ಒಂದು ವ್ರತಕ್ಕೆ ಭಂಗ ಬರುತ್ತದೆಂದು ಅರಿತುಕೊಂಡಿದ್ದಾರೆ, ಇಂದಿನ ದಿನಗಳಲ್ಲಿ ನಂಬಿಕೆಗಳ ಸಂಪ್ರದಾಯಗಳು ಧಾರ್ಮಿಕ ಜೀವನ ನಡೆಸುವ ಮತ್ತು ಕ್ರಮ ಮತ್ತು ಜೀವನವೇ ಬದಲಾವಣೆಯತ್ತ ಸಾಗಿಬರುತ್ತಿರುವುದು ಕಂಡುಬರುತ್ತದೆ. ಅನೇಕ ಹಬ್ಬ ಹರಿದಿನಗಳು ಆಚರಿಸದೇ ಇರುವ ಅನೇಕ ಬುಡಕಟ್ಟು ಇಂದು ಅಭಿವೃದ್ಧಿ ಪಥದತ್ತ ಸಾಗಿಕೊಂಡು ಜೀವನಕ್ರಮವನ್ನು ರೂಢಿಸಿಕೊಂಡಿವೆ.

ಹಬ್ಬ ಹುಣ್ಣಿಮೆಯ ದಿನದಂದು ದೇವರ ಹೆಸರಿನಲ್ಲಿ ಉಪವಾಸ ಮಾಡುವುದು ವ್ರತಗಳನ್ನು ನಿರ್ದಿಷ್ಟವಾದ ಜಾತಿ ಸಮುದಾಯದವರೇ ಆಚರಿಸಬೇಕೆಂಬ ನಿರ್ಧಾರವೇನು

ಇಲ್ಲ. ಎಲ್ಲಾ ಜಾತಿಯ ಹೆಂಗಸರು, ಗಂಡಸರು, ಮಕ್ಕಳು ಎಲ್ಲರೂ ಆಚರಿಸಬಹುದು ಇದನ್ನು ನಗರ, ಗ್ರಾಮೀಣ ಪ್ರದೇಶಗಳಿಂದ ಕಾಡುಗಳಲ್ಲಿ ವಾಸಿಸುವ ಬುಡಕಟ್ಟು ಅಲೆಮಾರಿಗಳ ಜನರಲ್ಲಿ ಆಳವಾಗಿ ಉಳಿದುಕೊಂಡಿದೆ. ದೇವರ ಹೆಸರಿನಲ್ಲಿ ಹೆಚ್ಚಾಗಿ ಹೆಣ್ಣು ಮಕ್ಕಳು ವ್ರತವಿರುವುದು ಕಂಡುಬರುತ್ತದೆ. ಏಕೆಂದರೆ ಪತಿಯ ಯೋಗಕ್ಷೇಮಕ್ಕಾಗಿ ಮತ್ತು ಸಂತಾನ ಪ್ರಾಪ್ತಿಗಾಗಿ ಸುಖ ಸಂಪತ್ತಿಗಾಗಿ ವ್ರತಗಳನ್ನು ಆಚರಿಸುವಂತಹದು ಬುಡಕಟ್ಟುಗಳಲ್ಲಿ ಮುಖ್ಯವಾಗಿ ಕಂಡುಬರುತ್ತದೆ ದೇವರ ಮೇಲಿನ ಅಪಾರ ನಂಬಿಕೆಗೆ, ಲಕ್ಷ್ಮೀಹೆಸರಲ್ಲಿ, ಮಂಗಮ್ಮಗ ಹೆಸರಿನಲ್ಲಿ, ವ್ರತಗಳು ಮಾಡುತ್ತಾರೆ. ಸಂಪತ್ತು ಐಶ್ವರ್ಯ ನೀಡಲೆಂದು ಶುಕ್ರವಾರ, ಮಂಗಳವಾರ, ಶನಿವಾರ ದೇವರಿಗೆ ಪೂಜೆ ಮಾಡುತ್ತಾರೆ ಧಾರ್ಮಿಕ ನಂಬಿಕೆ ನೆಲೆಯಲ್ಲಿ ಕೈಗೊಂಡಿರುತ್ತಾರೆ, ಆ ಸಮಯದಲ್ಲಿ ಮನೆಯನ್ನು ಶುಚಿಗೊಳಿಸುವುದು, ಉಪವಾಸ ಮಾಡುವುದು, ಉಪವಾಸದಿಂದ ಬುದ್ದಿ ಚುರುಕಾಗುವುದು ಮನಸ್ಸು ದೃಢವಾಗುವುದು ಶಾಂತಿ ಲಭಿಸುವುದು ಇವುಗಳನ್ನೆಲ್ಲಾ ಕಾಲದಿಂದ ಕಾಲಕ್ಕೆ ಬೆಳೆಯುತ್ತಾ ತಮ್ಮ ಮೌಲ್ಯಗಳು ನಂಬಿಕೆಗಳು ಧಾರ್ಮಿಕವಿಧಿ ವಿಧಾನಗಳು ಅಚ್ಚಳಿಯದಂತೆ ಅಲೆಮಾರಿ ಜನರು ಆಚರಿಸಿಕೊಂಡು ಹಾಗೆಯೇ ಬೆಳಸುತ್ತ ಬಂದಿರುವಂತಹದು ಗಮನಿಸಬಹುದಾಗಿದೆ.

ಹಬ್ಬ ಹರಿದಿನಗಳಲ್ಲಿ, ಜಾತ್ರೆಗಳಲ್ಲಿ ಉತ್ಸವಗಳಲ್ಲಿ ಅನೇಕ ಸಂಪ್ರದಾಯ, ಧಾರ್ಮಿಕ ನಂಬಿಕೆ ಜನರಲ್ಲಿ ಆಳವಾಗಿಬೇರುರಿಬಿಟ್ಟಿದೆ ಕಂಪ್ಯೂಟರ್, ತಂತ್ರಜ್ಞಾನಯುಗದಲ್ಲಿ ಇಂಥಹ ಒಂದು ನಂಬಿಕೆ ಆಲೋಚನೆಗಳು ಹೆಚ್ಚಾಗುತ್ತ ಸಾಗುವಂತಹದು ನಮ್ಮ ಇಂದಿನ ಅನೇಕ ಸಮುದಾಯಗಳಲ್ಲಿ ಕಾಣುತ್ತೇವೆ ನಮ್ಮ ಮೇಲಿನ ಕಷ್ಟನಷ್ಟಗಳು ನಾವೇ ಕಡಿಮೆ ಮಾಡಿಕೊಳ್ಳಬೇಕು ಯಾವ ದೇವರು ಬರುವುದಿಲ್ಲ, ಐಶ್ವರ್ಯ ಸಂಪತ್ತುಗಳಿಸಬೇಕಾದರೆ ದುಡಿಯಬೇಕು ಯಾವುದೇ ಮೂಢನಂಬಿಕೆಗೆ ಮಾರುಹೋಗಬಾರದು ಇಂದಿನ ದಿನಗಳಲ್ಲಿ ಅಲೆಮಾರಿಗಳೇ ಧಾರ್ಮಿಕತೆ ಇರುವಂತಹದು ಕಾಣುತ್ತೇವೆ ಧಾರ್ಮಿಕತೆ ಎಲ್ಲಾ ಸಮುದಾಯಗಳಲ್ಲಿರುವುದು ಆದರೆ ಮಂಗಾರವಾಡಿಗರು ದೇವರ ಮೇಲಿನ ಅಪಾರ ನಂಬಿಕೆಗೆ ಮಾರುಹೋಗುತ್ತಿದ್ದಾರೆ.

೬.೪. ಸಾಂಸ್ಕೃತಿಕ ಜೀವನ

ಸಂಸ್ಕೃತಿ ಎಂದರೆ ಸಂಪ್ರದಾಯಿಕವಾಗಿ ಬೆಳೆದು ಬಂದಿರುವ ಪದ್ದತಿ ಹಾಗೂ ಜೀವನ ಮೌಲ್ಯಗಳು ಮತ್ತು ಆದರ್ಶಗಳು ಸಂಗ್ರಹವೇ ಸಂಸ್ಕೃತಿ ಯಾವುದೇ ಸಂಸ್ಕೃತಿಯಲ್ಲಿ ಕೇವಲ ಮೌಲ್ಯಗಳ ಅಥವಾ ಭಾವನೆಗಳು ಮಾತ್ರ ಇರದೆ ಬೌದ್ಧಿಕ ಸಾಧನೆಗಳು, ಜೀವನ ಶೈಲಿ ರೀತಿ ನೀತಿಗಳು ನಂಬಿಕೆ, ಆಚರಣೆಗಳು ಮುಂತಾದ ಹಲವಾರು ಅಂಶಗಳಿರುತ್ತವೆ.

ಮಂಗಾರವಾಡಿ ಸಮುದಾಯವು ರೂಪಿಸಿಕೊಂಡು ಬೆಳಸಿಕೊಂಡು ಬಂದಿದೆ. ಸಂಸ್ಕೃತಿಯು ಕೂಡಾ ಹಾಗೇ ಉಳಿಸಿಕೊಂಡಿದೆ. ಸಂಸ್ಕೃತಿ ಎಂದರೆ ಭೌತಿಕ ಮತ್ತು ಅಭೌತಿಕವಾದ ಅಂಶಗಳನ್ನುಳೊಗೊಂಡಂಥ ಹಾಗೂ ಸಮಾಜದಿಂದ ಸಮಾಜಕ್ಕೆ ಅಸ್ತಿತ್ವಕ್ಕೆ ಬಂದಂತಹ ಒಂದು ವ್ಯವಸ್ಥೆಯಾಗಿದೆ. ಇಲ್ಲಿ ಸಂಸ್ಕೃತಿ ಮತ್ತು ಸಮುದಾಯದ ನಡುವೆ ಇರುವ ಸಂಬಂಧವು ಏಕಮುಖವಾದುದಲ್ಲ. ಸಂಸ್ಕೃತಿಯು ಸಮಾಜದ, ರೀತಿ ನೀತಿಗಳನ್ನು ಜೀವನದುದ್ದಕ್ಕೂ ಪ್ರಭಾವಿಸುತ್ತಿದೆ. "ಸಂಸ್ಕೃತಿಯ ಪ್ರಾಧಾನತೆ ಹಾಗೂ ಇನ್ನೊಂದರ ಅಧೀನತೆ ಸಾಪೇಕ್ಷ ವಿವರಣೆಗಳು ಹಾಗೂ ಕಾಲ ದೇಶಬದ್ದ ಸಂಗತಿಗಳು ಏಕೆಂದರೆ ಪ್ರಧಾನತೆಯಾಗಲಿ, ಅಧಿನತೆಯಾಗಲಿ ನಿಯತ ಹಾಗೂ ನಿರಂತರವಾದುದಲ್ಲ."[೫] ಸಂಸ್ಕೃತಿ ಯಾವುದೇ ವ್ಯಕ್ತಿಯ ಹುಟ್ಟಿನಿಂದ ಕರಗತವಾಗಿರದೇ ಕಲಿಕೆಯಿಂದ ಬಂದಿರುವುದಾಗಿದೆ, ಸಮುದಾಯವು ಸಂಸ್ಕೃತಿಯನ್ನು ಉಳಿಸಿಕೊಂಡು ಬೆಳಸಿಕೊಂಡು ಬಂದುದಾಗಿದೆ.

ಅಲೆಮಾರಿಗಳು ಸ್ವಾವಲಂಬನೆಯ ಘಟಕವು ದುಡಿಮೆ ಜೀವನ ಸಾಮೂಹಿಕ ನೆಲಗಟ್ಟಿನಲ್ಲಿ ರೂಢಿಸಿಕೊಂಡು ಬದುಕುತ್ತಿದ್ದಾರೆ. ಅಲೆಮಾರಿಗಳ ಸಮುದಾಯಗಳಲ್ಲಿ ಪ್ರತಿಯೊಬ್ಬರ ಸಮಸ್ಯೆಯು ಅಲೆಮಾರಿಗಳ ಸಮಸ್ಯೆಯಾಗಿದ್ದರಿಂದ ದುಡಿದು ತಿನ್ನುವ ವ್ಯವಸ್ಥೆಯು ಮಂಗಾರವಾಡಿಗರಲ್ಲಿದೆ. ಬುಡಕಟ್ಟು ಸಮುದಾಯ ಸಾಮಾಜಿಕ ಬದಲಾವಣೆ ತರುವಾಗ ನಮಗೆಗೊತ್ತಿರುವ ಅಲೆಮಾರಿಗಳ ಮಾದರಿಯನ್ನಿಟ್ಟುಕೊಂಡು ಗಮನಿಸಬೇಕಾದ ಸಂಗತಿಯೆಂದರೆ ವ್ಯಕ್ತಿ ಸಂಘಜೀವಿಯಾಗಿದ್ದರಿಂದ ಸಂಸ್ಕೃತಿಯನ್ನು ರೂಢಿಸಿಕೊಳ್ಳುವುದಕ್ಕೆ ಸಾಧ್ಯವಾಗಿದೆ. ಇದ್ದರಿಂದ ವ್ಯಕ್ತಿಯ ಮತ್ತು ಬುಡಕಟ್ಟು ಮಹಿಳೆಯರ ನಡವಳಿಕೆಯನ್ನು ಪರಿಚಯಿಸುವ ಅನೇಕ ಪ್ರಸಂಗಗಳು ಬದುಕಿನುದ್ದಕ್ಕೂ ಕಂಡು ಬರುತ್ತಿವೆ. ಯಾವುದೇ ಸಮುದಾಯಗಳು ಸಂಸ್ಕೃತಿಯನ್ನು ಬಿಟ್ಟಿರಲು ಸಾಧ್ಯವಲ್ಲ. ಇದರಿಂದಾಗಿ ಸಂಸ್ಕೃತಿಯಿಲ್ಲದೆ. ಯಾವುದೇ ಸಮುದಾಯಗಳು ಉನ್ನತ ಸ್ಥಾನಮಾನವನ್ನು ಪಡೆಯಲಾರವು ಎಂಬ ಮಾತು ಸತ್ಯ. ಸಮುದಾಯಗಳಲ್ಲಿ ಸಂಸ್ಕೃತಿಬೇಕು "ಸೋತ ಸಂಸ್ಕೃತಿಗಳ ನಡುವೆ ಬದುಕುವ ಛಲ ತುಂಬಿದ ಅಲೆಮಾರಿಗಳ ಶಕ್ತಿಯನ್ನು ಎತ್ತಿ ಹಿಡಿದ ಪೆರಿಯನ್ ಎಲ್ವಿನ್"[೬] ಸಂಸ್ಕೃತಿಯಿಂದಲೇ ವ್ಯಕ್ತಿ ಉತ್ತಮವಾಗಬಹುದು ಹಾಗೂ ತನ್ನ ಬದುಕನ್ನು ರೂಪಿಸಿಕೊಳ್ಳಬಹುದು ಅಂಥಹ ಸಂಸ್ಕೃತಿಯನ್ನು ಮಂಗಾರವಾಡಿ ಸಮುದಾಯದಲ್ಲಿ ಮಹಿಳೆಯರು ಹೊಂದಿರುವಂತಹದು ಕಂಡುಬರುತ್ತದೆ. ಸಂಸ್ಕೃತಿ ಇಲ್ಲದಿದ್ದರೆ ಮನುಷ್ಯರು ಕ್ರೂರ ಮೃಗಗಳಂತೆ ವರ್ತಿಸಬಹುದಾಗಿತ್ತು. ಆದರೆ ಸಂಸ್ಕೃತಿ ಹೊಂದಿದ ಸಮುದಾಯವು ಪ್ರಕ್ರಿಯೆಯ ಹಾದಿಯಲ್ಲಿ ಸಾಗುತ್ತಿದೆ. ಅದು ನಿಂತ ನೀರಲ್ಲ, ನಿರಂತರವಾಗಿ ಬದಲಾವಣೆ ಹೊಂದುವಂತಹದು.

ಹಬ್ಬಗಳು

ಮಂಗಾರವಾಡಿ ಸಮುದಾಯವು ಕೇವಲ ದುಡಿಮೆ ಮಾಡುತ್ತ ಜೀವನ ಸಾಗಿಸುವುದಲ್ಲದೆ ಇಂದಿನ ದಿನಗಳಲ್ಲಿ ಹಲವಾರು ಹಬ್ಬ ಹರಿದಿನಗಳು ಆಚರಿಸಿಕೊಂಡು ಬರುತ್ತಿರುವಂತಹದು ತಿಳಿದು ಬರುತ್ತದೆ ಸಮುದಾಯದಲ್ಲಿ ಹೆಚ್ಚಾಗಿ ಶ್ರಮವಿಲ್ಲದೆ ಬಾಳುವಂತಹ ಅನೇಕ ಕುಟುಂಬಗಳು ಇಲ್ಲಿ ಕಂಡುಬರುತ್ತದೆ. ಸ್ತ್ರೀಯರ ಮೇಲೆ ಅವಲಂಬನೆಯಾಗಿದ್ದಾರೆ, ಪುರಷರು ಯಾವುದೇ ಕೆಲಸಕಾರ್ಯಗಳು ಮಾಡುವುದಿಲ್ಲ ಮಹಿಳೆ ದೋಚಿಕೊಂಡು ಅಪಹರಿಸಿಕೊಂಡು ತಂದತಹ ವಸ್ತುಗಳನ್ನು ಮಾರಿ ಜೀವನ ನಡೆಸುತ್ತಾ ಬಂದಿರುವಂತಹದು ತಿಳಿದುಬರುತ್ತದೆ. ಜೊತೆ ಹಬ್ಬಗಳು ಹರಿದಿನಗಳು ಆಚರಿಸುತ್ತಾ ತಮ್ಮ "ಜಾನಪದ ವರ್ಗೀಕರಣದಲ್ಲಿ ಆರ್.ಎಸ್.ಬಾಗ್ಯ ಅವರು ಸಂಪ್ರದಾಯ ಮತ್ತು ಹಬ್ಬಗಳು ಎಂಬ ಶೀರ್ಷಿಕೆಯನ್ನು ನೀಡಿದ್ದಾರೆ."[೭] ಸಂಸ್ಕೃತಿಯನ್ನು ಪರಂಪರೆಯನ್ನು ಮುಂದುರೆಸಿಕೊಂಡು ಬಂದಿದ್ದಾರೆ.

ಮಂಗಾರವಾಡಿಗರು ಆಚರಿಸುವಂತಹ ಹಬ್ಬಗಳು

೧. ಯುಗಾದಿ

೨. ದೀಪಾವಳಿ

೩. ಶಿವರಾತ್ರಿ

೪. ದಸರ

೫. ಹೋಳಿ ಹಬ್ಬ

೬. ನಾಗರಪಂಚಮಿ

೭. ಸಂಕ್ರಾಂತಿ

೮. ಗಣೇಶ ಚತುರ್ಥಿ

ಮಂಗಾರವಾಡಿಗರು ಒಂದು ಕಾಲದಲ್ಲಿ ಯಾವುದೇ ಜನರ ಸಂಪರ್ಕವಿಲ್ಲದೆ ಕಾಡಿನಲ್ಲಿ ಇದ್ದ ಜನಾಂಗವಾಗಿದ್ದರು ಇತ್ತೀಚ್ಚಿನ ದಿನಗಳಲ್ಲಿ ಶೈಕ್ಷಣಿಕವಾಗಿ ವಿದ್ಯಾಭ್ಯಾಸ ಪಡೆದು ಅನೇಕ ಆಚರಣೆಗಳನ್ನು ಹಬ್ಬ ಹರಿದಿನಗಳು ಆಚರಿಸುತಿದ್ದಾರೆ ಶಿವರಾತ್ರಿ ಹಬ್ಬವನ್ನು ನಾಡಿನ ಜನರೆಲ್ಲರೂ ಆಚರಿಸುವಂಥ ರೂಢಿ ಸಂಪ್ರದಾಯದ ಪದ್ಧತಿಗಳಿಗೆ ಅನುಗುಣವಾಗಿ ಆಚರಿಸುತ್ತಾ ಬಂದಿದ್ದಾರೆ. ಅದೇ ರೀತಿಯಾಗಿ ಯುಗಾದಿ ಹಬ್ಬವನ್ನು ಪ್ರತಿಯೊಂದು ಹಿಂದೂ ಸಮುದಾಯವರು ಬೇವಿನ ಮರದ ಸೊಪ್ಪು ನೀರಿನಲ್ಲಿ ಮಕ್ಕಳಿಗೆ ಮೈಯನ್ನು ತೊಳೆದು ಹೊಸ ಬಟ್ಟೆಯನ್ನು ಹಾಕಿಕೊಳ್ಳುವುದರ ಮೂಲಕ ಯುಗಾದಿ ಹಬ್ಬವನ್ನು ಭಾರತೀಯ ಎಲ್ಲಾ ಸಮುದಾಯದಲ್ಲಿ ಇದೊಂದು ದೊಡ್ಡ ಹಬ್ಬವೆಂದು ಆಚರಿಸುತ್ತಾರೆ. ಅದರಂತೆ ಮಂಗಾರವಾಡಿಗರು ಈ ಹಬ್ಬವನ್ನು ಆಚರಿಸಿಕೊಂಡು ಬಂದಿದ್ದಾರೆ.

ಮಂಗಾರವಾಡಿ ಸಮುದಾಯದವರು ನಾಗರ ಪಂಚಮಿಹಬ್ಬವನ್ನು ಆಚರಿಸುತ್ತಾ ಹಾವು ಹುತ್ತದಲ್ಲಿಯೇ ಇರುತ್ತದೆಯೆಂಬ ನಂಬಿಕೆಯಿಂದ ಕಾಡಿನಲ್ಲಿ ಯಾವುದೇ ಸ್ಥಳದಲ್ಲಿ ಸಿಕ್ಕರು ನಮಗೆ ತೊಂದರೆಯಾಗದಿರಲಿ ಎಂದು ಹುತ್ತಕ್ಕೆ ಆಕಳ ಹಾಲು ಹಾಕಿ ಪೂಜೆಯನ್ನು ಮಾಡುತ್ತ ನಂತರ ಎಲ್ಲಾರಿಗೂ ಫಲಾಹಾರವನ್ನು ಕೊಟ್ಟು ಹಿಂದೂರುಗುತ್ತಿದೆ. ಈ ರೀತಿಯಾಗಿ ಮಂಗಾರವಾಡಿಗರಲ್ಲಿ ಒಂದೊಂದು ಹಬ್ಬಕ್ಕೆ ಒಂದೊಂದು ರೀತಿಯ ವಿಶಿಷ್ಟತೆಯನ್ನು ಇಟ್ಟುಕೊಂಡು ಹಬ್ಬಗಳನ್ನು ಆಚರಿಸುತ್ತಾರೆ. ಮಂಗಾರವಾಡಿ ಸಮುದಾಯವು ಇತ್ತೀಚಿಗೆ ನಾಡಿನ ಜನರ ಪ್ರಭಾವಕ್ಕೆ ಒಳಗಾದ್ದಾರೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ

*** ಮಂಗಾರವಾಡಿ ಸಮುದಾಯದ ಆಚರಣೆಗಳು**

ಆರಣೆಯಲ್ಲಿ ಬರುವಂಹ ಜನನ ಜವಳ, ಋತುಮತಿ, ಮದುವೆ, ಹಬ್ಬ, ಹರಿದಿನಗಳ ನಂಬಿಕೆ ಮತ್ತು ಸಂಪ್ರದಾಯಗಳ ಬಗ್ಗೆ ಅಧ್ಯಾಯ ನಾಲ್ಕುರಲ್ಲಿ ವಿವರಿಸಲಾಗಿದೆ.

*** ಸಾವು**

ಮಂಗಾರವಾಡಿ ಸಮುದಾಯದಲ್ಲಿ ಸ್ತ್ರೀ ಮತ್ತು ಪುರುಷರು ಸಾವು ಬಂದ ಕ್ಷಣ ಮೊದಲು ಸಂಬಂಧಿಕರಿಗೆ ತಿಳಿಸುತ್ತಾರೆ. ಹೆಣವನ್ನು ತೆಗೆಯಬೇಕಾದರೆ ಆ ಕುಟುಂಬದ ಹೊರ ಸಂಬಂಧಿಕರು ಬರಲೇಬೇಕು ಅವರು ಬಂದ ಮೇಲೆ ಹೆಣವನ್ನು ತೆಗೆಯುತ್ತಾರೆ. ಈ ಸಮುದಾಯದಲ್ಲಿ ಹೆಣವನ್ನು ಹಿರೇಮನೆಯ ಎದುರುಗಡೆ ಕೂರಿಸುತ್ತಾರೆ. ಹೆಣವನ್ನು ಕೂರಿಸುವಾಗ ಮೊದಲು ನೀರಿನಿಂದ ಸ್ವಚ್ಚವಾಗಿ ಮೈ ತೊಳೆಯುತ್ತಾರೆ. ನಂತರ ವಿಧಿವತ್ತಾಗಿ ಗೋಡೆಗೆ ಕೂಡಿನೆ. ನಂತರ ಪೂಜೆ ಪುನಸ್ಕಾರ ಮಾಡುತ್ತಾರೆ. ಹೊಸ ಬಟ್ಟೆಯನ್ನು ತೊಡಿಸುತ್ತಾರೆ. ಎಲ್ಲ ಬಂದುಬಳಗ ಸೇರಿದ ಮೇಲೆ ಹೆಣವನ್ನು ಒಯ್ದು ಸುಡುತ್ತಾರೆ. ಹೆಣವನ್ನು ಸುಟ್ಟ ಬಳಿಕ ಮನೆಗೆ ಬಂದು ಎಲ್ಲರೂ ಮೈ ತೊಳೆದುಕೊಳ್ಳುತ್ತಾರೆ. ಇದು ಹಿಂದು ಸಂಪ್ರದಾಯದಲ್ಲಿಯೂ ಕಂಡುಬರುತ್ತದೆ. ಸತ್ತ ಮೂರು ದಿನದ ನಂತರ ತಿಥಿಯನ್ನು ಮಾಡುತ್ತಾರೆ. ಸತ್ತ ವ್ಯಕ್ತಿ ಯಾವ ಯಾವ ಆಹಾರ ಸೇವಿಸುತ್ತಿದ್ದ ಏನೇನು ತಿನ್ನುತ್ತಿದ್ದ ಎಲ್ಲವನ್ನು ತಂದು ಅವನ ಸತ್ತ ದಿನವನ್ನು ಮಾಡುವ ಆಚರಣೆಗಳು ಸಂಪ್ರದಾಯಗಳು ಹಾಗೇ ಉಳಿದುಕೊಂಡು ಬಂದಿರುವುದು ತಿಳಿದುಬರುತ್ತದೆ. ಸಂಸ್ಕಾರ, ಸಂಪ್ರದಾಯ ತಕ್ಕಂತೆ ಮುಂದುವರೆಸಿಕೊಂಡು ಬಂದಿರುವಂತಹದು ತಿಳಿದುಬರುತ್ತದೆ. ನಂಬಿಕೆ ಆಚಾರ, ವಿಚಾರ, ಪದ್ದತಿ, ಸಂಸ್ಕೃತಿ ಹಿನ್ನೆಲೆಯಲ್ಲಿ ದೈವಿ ಸಂಕಲ್ಪದ ನೆಲೆಯಲ್ಲಿ ಆಚರಿಸಿಕೊಂಡು ಬಂದಿರುವ ಪದ್ದತಿಗಳು ಇಂದಿಗೂ ಜೀವಂತವಾಗಿ ಉಳಿಸಿಕೊಂಡು ಬಂದಿದ್ದಾರೆ.

ಈ ಸಮುದಾಯದಲ್ಲಿ ಮಾಂಸಹಾರಕ್ಕಾಗಿ ಕೆಲವೊಂದು ಪ್ರಾಣಿಗಳನ್ನು ಮಾತ್ರ ತಿನ್ನುತ್ತಾರೆ. ಮತ್ತೆ ಕೆಲವೊಂದು ಪ್ರಾಣಿಗಳು ತಿನ್ನಬಾರದೆಂಬ ನಂಬಿಕೆ ಹೊಂದಿದ್ದಾರೆ. ಕೋಳಿಮಾಂಸ, ಕುರಿಮಾಂಸ, ದನದ ಮಾಂಸವನ್ನು ತಿನ್ನುತ್ತಾರೆ. ಹಂದಿಮಾಂಸ, ಕಾಡುಹಂದಿ ಮಾಂಸ ತಿನ್ನಬಾರದೆಂಬ ನಂಬಿಕೆ ಹೊಂದಿದ್ದಾರೆ ಹೆರಿಗೆಯಾದ ಸ್ತ್ರೀಯರು ದೇವರ ಮನೆಗೆ ಪ್ರವೇಶವಿಲ್ಲ. ಇವರಲ್ಲಿ ಒಂದು ವಿಶಿಷ್ಟ ನಂಬಿಕೆಯೆಂದರೆ ಹೆಣ್ಣು ಮದುವೆಯಾಗುವ ಗಂಡಿನ ಮನೆಗೆ ಬರುವಾಗ ತೊಡೆಯುವುದು ಮನೆಯ ದೇವರ ಜಗಲಿಯ ಮುಂದೆ ದೀಪ ಹಚ್ಚುವುದು ಮುಂತಾದ ಸಂಪ್ರದಾಯಿಕ ನಂಬಿಕೆಗಳು ಹೊಂದಿದ್ದಾರೆ. ಸತ್ತ ಜನರು ಪುನರ್‌ಜನ್ಮದ ಬಗ್ಗೆ ನಂಬಿಕೆಯನ್ನು ಹೊಂದಿದ್ದಾರೆ. ಆದರೆ ಜನಗಳು ಸತ್ತ ಮೇಲೆ ಅನೇಕ ಆಸೆ ಆಕಾಂಕ್ಷೆ ಮನೆಯಲ್ಲಿಯೇ ಓಡಾಡುತ್ತವೆ ಮತ್ತು ಮತ್ತೊಬ್ಬರಿಗೆ ತೊಂದರೆ ಕೊಡುತ್ತವೆ ಎಂಬ ನಂಬಿಕೆ ಹೊಂದಿದ್ದಾರೆ. ಹಿರಿಯರ ಆತ್ಮಗಳು ಪವಿತ್ರವೆಂದು ಕುಟುಂಬ ರಕ್ಷಕರೆಂದು ನಂಬಿ ಆಚರಣೆಯನ್ನು ಮಾಡುತ್ತಾರೆ. ಇವರ ಸಮುದಾಯದಲ್ಲಿ ಯಾವುದೇ ಕಾಯಿಲೆ ಮತ್ತು ದೆವ್ವ ಭೂತ ಪಿಶಾಚಿ ಹಿಡಿದುಕೊಂಡರೆ ಅವರ ಮನೆ ದೇವರ ಹೆಸರಿನಲ್ಲಿ ಬೇಡಿಕೊಳ್ಳುತ್ತ. ದೇವರ ಪೂಜೆಗೆ ಹೋಗುತ್ತಾರೆ. ವಿಠ್ಠಲ ಮಂದಿರ, ಹನುಮಾನ ಮಂದಿರ, ದೇವಿಮಂದಿರ ಮುಂತಾದ ದೇವರ ಹೆಸರಿನಲ್ಲಿ ಪೂಜೆ ಪುನಸ್ಕಾರ ಮಾಡಿ ಚೆನ್ನಾಗಿ ಇಡಲೆಂದು ಭಾವಿಸುತ್ತಾರೆ.

ನಿಷೇಧಗಳು

ಭಾರತೀಯ ವಿವಿಧ ಬುಡಕಟ್ಟುಗಳ ಅಧ್ಯಯನದಿಂದ ಒಟ್ಟು ಮಾನವ ಸಂಸ್ಕೃತಿಯ ವಿವಿಧ ಘಟ್ಟಗಳನ್ನು ಹಾಗೂ ಅವುಗಳ ಸ್ವರೂಪ ಹಾಗೂ ವಿನ್ಯಾಸವನ್ನು ಹಲವಾರು ಸಮುದಾಯಗಳಲ್ಲಿ ಕಂಡು ಬಂದಂತೆ ಮಂಗಾರವಾಡಿ ಸಮುದಾಯದಲ್ಲಿ ಗುರ್ತಿಸಿದಂತೆ ನಿಷೇದಗಳು ಸಹ ಅಷ್ಟು ಪ್ರಾಮುಖ್ಯತೆಯನ್ನು ಪಡೆದುಕೊಂಡವೆ. ಈ ಹಿನ್ನೆಲೆಯಲ್ಲಿ ಬುಡಕಟ್ಟುಗಳನ್ನು ಅಧ್ಯಯನ ಮಾಡುವುದಷ್ಟೇ ಅಲ್ಲ. ಆ ಸಮುದಾಯ ಆದಿವಾಸಿ ಸಮುದಾಯವಾಗಿ ನಾಡಿನ ಪ್ರತಿಯೊಂದು ಜನರಿಂದ ಬಹು ದೂರದಲ್ಲಿರುವುದರಿಂದ ಬುಡಕಟ್ಟುಗಳ ಸಂಸ್ಕೃತಿ, ಭಾಷೆ, ಆಚರಣೆ, ಸಂಪ್ರದಾಯ ಹಾಗೂ ನಿಷೇಧಗಳಲ್ಲಿ ಸ್ವಂತಿಕೆಯನ್ನು ಇಟ್ಟುಕೊಂಡು ಬಂದಿರುವಂತಹದು ಈ ಹಿನ್ನೆಲೆಯಲ್ಲಿ ನಮ್ಮ ಅಲೆಮಾರಿ ನಿಷೇಧಗಳನ್ನು ಈ ಸಮುದಾಯ ಪಾಲಿಸುವ ನಿಷೇದಗಳು ಬೇರೆ ಸಮುದಾಯಗಳಿಗೆ ಕೆಟ್ಟವು ಅಥವಾ ಮೂಡನಂಬಿಕೆಯಿಂದ ಕೂಡಿದವು ಎನ್ನಬಹುದು ಅದರೆ ಮಂಗಾರವಾಡಿ ಸಮುದಾಯಗಳಲ್ಲಿ ಎಲ್ಲರೂ ನಿಯಮಬದ್ಧವಾಗಿ ನಡೆಯಲು ಹಾಗೂ ಸಮುದಾಯದಲ್ಲಿರುವ ವ್ಯಕ್ತಿಗಳ ವರ್ತನೆಯ ಮೇಲೆ ನಿಯಂತ್ರಣ ಹಾಕಲು ನಿಷೇಧಗಳು ಅವಶ್ಯಕತೆಯಿದೆ. ಇಲ್ಲಿ

ಮನೆಯ ಹಿರಿಯರು ಹೊಲಕ್ಕೆ ಬೀಜವನ್ನು ಮೊದಲು ಬಿತ್ತುವ ಪ್ರಶ್ನೆಯೆಂದರೆ ಸಮುದಾಯದ ಸದಸ್ಯರು ಕುಟುಂಬದ ಎಲ್ಲಾ ನಿಯಮಗಳನ್ನು ಅಚ್ಚುಕಟ್ಟಾಗಿ ಪಾಲಿಸುತ್ತ ಬಂದಿರುವಂತಹದು ಕಂಡುಬರುತ್ತದೆ.

ಮಂಗಾರವಾಡಿ ಸಮುದಾಯವು ಅನೇಕ ವರ್ಷಗಳಿಂದ ಆಚರಿಸಿಕೊಂಡು ಬಂದಿರುವಂತಹ ಒಂದು ಅನೇಕ ವಿಧಿ ವಿಧಾನಗಳು ಸಂಪ್ರದಾಯಗಳು ನಂಬಿಕೆಗಳು ಆಚಾರ, ವಿಚಾರ, ಸಂಸ್ಕೃತಿ, ಲೋಕರೂಢಿಗಳನ್ನು ಬೆಳಸಿಕೊಂಡು ಬಂದಿದ್ದಾರೆ. ಕಾಲದಿಂದಕಾಲಕ್ಕೆ ಅವು ಸಮುದಾಯದಿಂದ ಸಮುದಾಯಕ್ಕೆ ಬೇರೆ ರೂಪಪಡೆದುಕೊಳ್ಳುತ್ತ ಸ್ವಲ್ಪ ಬದಲಾವಣೆಯತ್ತ ಸಾಗಿರುವಂತಹದು ತಿಳಿದುಬರುತ್ತದೆ. ಭಾರತೀಯ ಹಿಂದೂ ಸಾಂಸ್ಕೃತಿಕ ಬದುಕಿನ ಒಂದು ಚಿತ್ರಣದಲ್ಲಿ ಬುಡಕಟ್ಟುಗಳ ಪಾತ್ರ ಮಹತ್ವ ಸ್ಥಾನಕ್ಕೆ ಕೊಂಡೊಯುವಲ್ಲಿ ಸಹಕಾರಿಯಾಗಿವೆ. ಕರ್ನಾಟಕ ಅನೇಕ ಬುಡಕಟ್ಟುಗಳಲ್ಲಿ ಮಂಗಾರವಾಡಿಗರ ಸಮುದಾಯವು ಮಹತ್ವದ ಸ್ಥಾನ ಹೊಂದಿರುವಂತಹದು ಸಮುದಾಯವು ನಗರ ಜೀವನಕ್ಕೆ ಹೊಂದಿಕೊಂಡು ಸರಿಯಾದ ಜೀವನ ನಡೆಸುವಂತಹದು ಕಂಡು ಬರುತ್ತದೆ. ಇಂದಿನ ದಿನಗಳಲ್ಲಿ ಬುಡಕಟ್ಟುಗಳ ಸ್ಥಿತಿ ಅವನತಿಯತ್ತ ಸಾಗಿವೆ. ನಗರ ಜೀವನವನ್ನು ರೂಢಿಸಿಕೊಂಡಿವೆ. ಬದುಕಿನಲ್ಲಿ ಬದಲಾವಣೆಯನ್ನು ಕಾಣುತ್ತಿವೆ ಎಂಬುದು ಗಮನಿಸಬೇಕಾದ ಪ್ರಮುಖ ವಿಷಯಗಳಾಗಿವೆ.

ಅಡಿ ಟಿಪ್ಪಣಿಗಳು

೧. ಹಿನ್ಸುತ್ ನ್ಯಾಷನಲಿಸಂ, ಪುಟ ಸಂಖ್ಯೆ-೧೮೧

೨. ಪೊಜಿಷನ್ ಆಫ್ ವುಮನ್ ಇನ್ ಹಿಂದೂ ಸಿವಿಲೈಜೇಷನ್ ಎ.ಬಿ. ಅಲ್ತೇಕರ್, -೧೯೬೨

೩. ಭಾರತದಲ್ಲಿ ಮಹಿಳೆಯರು, ಡಾ.ಆರ್. ಇಂದಿರಾ, ಜುಲೈ-೧೯೯೯

೪. ಡಾ.ಬಿ.ಆರ್.ಅಂಬೇಡ್ಕರ್ ಉಲ್ಲೇಖ, ಗೋಪಾಲಗುರು ಆಧುನಿಕತೆಯ ಬೆನ್ನು ಹತ್ತಿ ದಲಿತರು, ಪುಟ ಸಂಖ್ಯೆ-೧೯೫, ೨೦೦೪

೫. ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ, ವೈ.ವಿ.ನಾರಾಯಣ, ಪುಟ ಸಂಖ್ಯೆ-೧೯, ೧೯೯೭

೬. ಕಾಡು ಕಾಂಕ್ರಿಟ್ ಮತ್ತು ಜನಪದ, ಹಿ.ಚಿ.ಬೋರಲಿಂಗಯ್ಯ, ಪುಟ ಸಂಖ್ಯೆ-೧೨

೭. ದಲಿತರು ಬದುಕು ಮತ್ತು ಸಂಸ್ಕೃತಿ, ಪುಟ ಸಂಖ್ಯೆ-೩೧೨

ಅಧ್ಯಯ – ೭

ಸಮಾರೋಪ

ಅಧ್ಯಯ – ೭

ಸಮಾರೋಪ

ಶತಶತಮಾನಗಳಿಂದಲೂ ಮಾನವ ಸಂಸ್ಕೃತಿಯನ್ನು ಮುಂದುವರೆಸುತ್ತ ಬಂದಿರುವ ಮಹಿಳೆಯರು ಗೌರವಾನ್ವಿತ ಜೀವನಕ್ಕಾಗಿ ಹಾತೊರೆಯುತ್ತಿದ್ದಾರೆ. ಮಹಿಳೆ ಮತ್ತು ಪುರುಷ ಇಬ್ಬರು ಸರಿಸಮಾನ ವ್ಯಕ್ತಿಗಳೆಂದು ಪರಿಗಣಿಸಲಾಗಿದೆ. ಬುಡಕಟ್ಟು ಸಮುದಾಯಗಳಲ್ಲಿ ಸಮುದಾಯಕ್ಕೆ ತಾನು ಅನಿವಾರ್ಯವೆಂದು ಭಾವಿಸುವಂತಹ ನಿರಾತಂಕ ಜೀವನ ಪ್ರತಿಯೊಬ್ಬ ಮಹಿಳೆಯರಲ್ಲೂ ಇರುವಂತಹದು ತಿಳಿದು ಬರುತ್ತದೆ. ಪ್ರೀತಿ, ಗೌರವ, ಮಮತೆಯಿಂದ ನೋಡಬೇಕು ಪುರುಷರಿಗೆ ಮಾಡಿರುವ ಎಲ್ಲ ಅನುಕೂಲಗಳು ಮತ್ತು ಹಕ್ಕುಗಳು ಮಹಿಳೆಯರಿಗೆ ದೊರೆಯಬೇಕು ಇಬ್ಬರು ಸಮಾಜ ಜೀವಿಗಳಾಗಿ ಮಹಿಳೆ ಮತ್ತು ಪುರುಷ ಒಂದೇ ಸ್ವಭಾವದವರು ಸಂಘಜೀವನ, ಸಾಮಾಜಿಕತೆ ವೈಚಾರಿಕತೆ, ಗೌರವ, ಸಮಾನತೆ, ಜವಾಬ್ದಾರಿಗಳನ್ನು ಹೊಂದಿದು ಸಮುದಾಯದಲ್ಲಿ ಪರಸ್ಪರ ಪೂರಕವಾಗಿ ಬದುಕುವ ಅವಕಾಶವನ್ನು ಹೊಂದಿದ್ದಾಳೆ ಹೀಗಾಗಿ ಮೇಲೂ ಕೀಳು ಎಂಬುದು ಗಂಡು ಹೆಣ್ಣಿನ ನಡುವೆ ತಲೆಹಾಕಬಾರದಿದ್ದ ವಿಷಯವಾಗುತ್ತದೆ ಆದ್ದರಿಂದಲೇ ಲಿಂಗಬೇಧ, ತಾರತಮ್ಯ ಇವು ಮಾನವ ಬದುಕಿನ ಬೆಳವಣಿಗೆ ಮತ್ತು ಸಂಸ್ಕೃತಿಗೆ ಮುಳುವಾಗಿರುವುದು ಪುರುಷ ಪ್ರಾಧಾನ್ಯತೆ ಬೇರು ಬಿಟ್ಟು ಸಮಾಜದಲ್ಲಿ ಸಮುದಾಯದಲ್ಲಿ ಪುರಷನಿಗೆ ಹೆಚ್ಚಿನ ಸ್ಥಾನ ಮಾನ, ಅಧಿಕಾರ ಮತ್ತು ಹಕ್ಕುಗಳನ್ನು ಜೀವನದ ಎಲ್ಲ ಭಾಗಗಳಲ್ಲಿಯೂ ಕಂಡುಬರುತ್ತದೆ. ಬುಡಕಟ್ಟುಗಳ ಆದಿವಾಸಿಗಳು ಸಮುದಾಯಗಳಲ್ಲಿ, ನಗರ ಮತ್ತು ಗ್ರಾಮೀಣದಲ್ಲಿಯೂ ಕಾಣುತ್ತೇವೆ. ಸಾಮಾಜಿಕ ಸಂರಚನೆ ಮನೋಭಾವಗಳಲ್ಲಿ, ಪರಿವರ್ತನೆ ಹುಟ್ಟಿಕೊಳ್ಳುವ ಮಾನವ ಹಲವಾರು ಕನಸಿನ ಗೋಪುರವನ್ನೇ ನಿರ್ಮಾಣಮಾಡಿ ಕೊಂಡಿರುವಂತಹುದು ರಮ್ಯವಾದ ಕನಸುಗಳು

ಹಗೆಯುವ ನಿರೀಕ್ಷೆಯಲ್ಲಿಯೇ ಮಹಿಳೆ ಇರುವುದು ಕೈಗೆಟುಕುವ ಅವಕಾಶಗಳು ಇಂದು ತಮ್ಮ ಮೂಲದಾಯಗಳಲ್ಲಿ ಕಳೆದು ಕೊಳ್ಳುತ್ತಿದ್ದಾಳೆ ಪುರುಷ ವಂಚಿಸುವ ಹುಸಿ ತುಂಬಿದ ಊಹೆಗಳು ಇನ್ನು ಪ್ರವರ್ಧಮಾನವಾಗಿಯೇ ಉಳಿದಿವೆ ಕಲ್ಪನೆ, ಊಹೆ, ಭ್ರಮೆ ಭರವಸೆ ಇವುಗಳೆಲ್ಲವು ಮಹಿಳೆಯ ವಾಸ್ತವ ಜೀವನ ಹೆಣೆದುಕೊಳ್ಳುವ ನಂಬಿಕೆಗಳು ಭರವಸೆಗಳು ಹುಟ್ಟಿದ ನಿಟ್ಟಿನಲ್ಲಿರುವುದುನ್ನು ಕಾಣಬಹುದಾಗಿದೆ. ಆರ್ಥಿಕ ಹಾಗು ರಾಜಕೀಯ ರಂಗಗಳಲ್ಲಿ ದೊರಕುವ ಸ್ಥಾನಮಾನ ಬಹುಮಟ್ಟಿಗೆ ಉಳಿದ ರಂಗಗಳಲ್ಲಿ ದೊರೆಯಬಹುದಾದ ಸ್ಥಾನಮಾನಗಳು ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದ ಮಹಿಳೆಯರು ದಾಪುಗಾಲು ಹಾಕುತ್ತಿದ್ದಾರೆ. ಆದರೆ ಬುಡಕಟ್ಟುಗಳ ಆದಿವಾಸಿ ಸಮುದಾಯಗಳು ಮಹಿಳೆಯ ಅದೇ ಸ್ಥಾನದಲ್ಲಿರುವುದು ನೋಡುತ್ತೇವೆ.

ಪ್ರಸ್ತುತ ದಿನಗಳಲ್ಲಿ ಮಹಿಳೆಯರು ವಿಶ್ವದಾದ್ಯಂತ ಎಲ್ಲಾ ರಂಗಗಳಲ್ಲಿ ಮುಂದುವರಿಯುತ್ತಿದ್ದಾರೆ. ಮಹಿಳೆಯರ ಸ್ಥಿತಿಗತಿ ಅವಲೋಕಿಸಿದಾಗ ಜೀವನದಲ್ಲಿ ಅಶಾಕಿರಣದ ಜೊತೆಗೆ ಭೀತಿಯೂ ಇರುವುದನ್ನು ಊಹಿಸಿಕೊಳ್ಳಬಹುದು ಹೊಸ ಹೊಸ ಅಭಿವೃದ್ಧಿಯ ಕಾರ್ಯಗಳಲ್ಲಿ ಮಹಿಳೆ ಮುಂದುವರೆವುದರ ಜೊತೆಗೆ ಮಹಿಳೆಯರು ಎದುರಿಸುತ್ತಿರುವ ಭೀತಿಗಳು ನೂರೆಂಟು ಸಮಸ್ಯೆಗಳಿಂದಾಗಿ ಇಡೀ ಮಾನವಕುಲಕ್ಕೆ ವಿಪತ್ತು ಕಾದಿದೆಯೆಂಬ ಅಭಿವ್ಯಕ್ತ ಕಾಣುತ್ತದೆ. ಮಹಿಳೆಯರ ಹಿಂದಿನ ಹಾಗು ಇಂದಿನ ಪರಿಸ್ಥಿತಿಗಳನ್ನು ನಾವು ಅರ್ಥೈಸಿಕೊಳ್ಳುವುದರ ಮೂಲಕ ಮಹಿಳೆಯರ ಜೀವನವನ್ನು ನೋಡುತ್ತೇವೆ. ಎದುರಿಸುವ ಸಮಸ್ಯೆ ಎಂದರೆ ದೇವದಾಸಿ ಬಾಲ್ಯವಿವಾಹ, ಸತಿಪದ್ದತಿ, ಬಾಲವಿಧವೆಯರು ಹೆಣ್ಣು ಮಕ್ಕಳ ದುಸ್ಥಿತಿ ಮುಂತಾದವು, ಈ ಅಂಶಗಳನ್ನು ನೋಡಬಹುದಾಗಿದೆ. ಶತಶತಮಾನಗಳ ಹಿಂದೆ ಆಂಗ್ಲರ ಬಂದು ದಬ್ಬಾಳಿಕೆ, ಕ್ರೌರ್ಯ, ಹಿಂಸೆ, ದೌರ್ಜನ್ಯ ಮುಂತಾದ ತೊಂದರೆ ಅನುಭವಿಸಿದವರು ನಂತರದಲ್ಲಿ ಭಾರತದಲ್ಲಿರುವ ಮೇಲ್ವರ್ಗ, ಜನರು ಕೆಳ ಜಾತಿಯ ಮೇಲೆ ನಡೆಸಿರುವಂತಹ ದೌರ್ಜನ್ಯ ಅವನೆಲ್ಲಾ ಸಹಿಸಿಕೊಂಡು ಇಂದು ಮಹಿಳೆಯರು ಅಭಿವೃದ್ಧಿಯ ಹಾದಿ ತುಳಿಯದೇ ಆರ್ಥಿಕವಾಗಿ ದುರ್ಬಲರಾಗಿ ಆಡಳಿತವರ್ಗದವರ ಕೈಗೊಂಬೆಯಾಗಿ, ಜೀವನ ಪೂರ್ತಿಯಾಗಿ ಹಾಗೆ ಇದ್ದಾಳೆ. ಇದರಿಂದ ಅನೇಕ ಬುಡಕಟ್ಟುಗಳ ಮಹಿಳೆಯ ಬೇರೆ ಸಮುದಾಯದ ಪುರುಷ ವರ್ಗ ಕಟ್ಟಿಕೊಟ್ಟ ಅನೇಕ ನೀತಿ ನಿಯಮಗಳು ಕಟ್ಟು ಪಾಡುಗಳು ಮಹಿಳೆಯ ಬದುಕಿಗೆ ಬಂಧನಕಾರಿಯಾಗಿವೆ. ಅಷ್ಟೇ ಅಲ್ಲ ಪ್ರತಿಯೊಂದು ಸಮುದಾಯದ ಮಹಿಳೆಯರು ಜಾತಿ ವರ್ಗಗಳಿಗೆಗೆ ಅವರದೇ ಆದ ರೀತಿ ನೀತಿಗಳು ಕಂಡುಕೊಂಡಿದರಿಂದ ಹಿಂದೂ ಸಂಪ್ರದಾಯವು ಪಾಲನೆಗೆ ಮುಂದುವರೆಸಿಕೊಂಡು ಬಂದಿದ್ದಾರೆ.

ಸ್ವತಂತ್ರೋತ್ತರ ಭಾರತದಲ್ಲಿ ಮಹಿಳೆಯರು ಹಲವಾರು ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವುದು ಮಹಿಳೆಯರು ಇಂಜಿನಿಯರಿಂಗ್, ವೈದ್ಯಕೀಯ ಅಣುವಿಜ್ಞಾನ, ಕಂಪ್ಯೂಟರ್, ಆಡಳಿತ ಮ್ಯಾನೇಜ್‌ಮೆಂಟ್ ಕಲೆ ಮಾನವಿಕ ವಿಜ್ಞಾನ, ಅಂತರೀಕ್ಷ, ಹೀಗೆ ಎಲ್ಲ ಆಧುನಿಕ ಮತ್ತು ವೈಜ್ಞಾನಿಕ ಅಭಿವೃದ್ಧಿ ಪುರುಷರಿಗೆ ಸರಿಸಾಟಿಯಾಗಿ ಮುಂದುವರಿಯುತ್ತಿದ್ದಾರೆ. ದೇಶ ವಿದೇಶಗಳಲ್ಲಿ ನೆಲೆಸಿ ಸಾಧನೆಮಾಡುತ್ತಿದ್ದಾರೆ. ಆದರೆ ಈ ಎಲ್ಲ ಮಹಿಳಾ ಸಾಧನೆಯ ಬಗ್ಗೆ ಹೆಮ್ಮೆ ಪಡುವಂತಹುದು ಸಂತೋಷದ ವಿಷಯವಾಗಿದೆ. ಇದಕ್ಕೆ ಮುಖ್ಯ ಕಾರಣಿ ಕರ್ತರಾದವರು ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಸಂವಿಧಾನದಲ್ಲಿ ಮಹಿಳೆಯ ಸೌಲಭ್ಯಗಳು ಮೀಸಲಾತಿಗಳು ಒದಗಿಸದೆ ಹೋದರೆ ಇಂದು ಮಹಿಳೆ ಮನುವಿನ ಪ್ರಕಾರ ಮನೆಯಲ್ಲಿ ಪೂಜ್ಯತೆ ಸ್ಥಾನಹೊಂದಿ ನಾಲ್ಕು ಗೋಡೆಗಳ ಮಧ್ಯವಿರಬೇಕಾಗಿತ್ತು ಆದರೆ ಇಂದು ಎಲ್ಲಾ ರಂಗಗಳಲ್ಲಿ ಅಭಿವೃದ್ಧಿಯ ಸಾಧಿಸುತ್ತಿರುವುದು ನೋಡುತ್ತೇವೆ. ಇನ್ನೊಂದು ದುಃಖಕರ ಸಂಗತಿಯೆಂದರೆ, ಮೀಸಲಾತಿಗಳು ಸಾಲಸೌಲಭ್ಯಗಳು ಇಂದು ಬುಡಕಟ್ಟು ಮತ್ತು ಆದಿವಾಸಿಸಮುದಾಯಗಳಿಗೆ ಸರಿಯಾದ ಬಳಕೆಯಾಗುತ್ತಿಲ್ಲ ಕಾರಣ ಅಜ್ಞಾನ ಅನಕ್ಷರತೆ ಮುಂತಾದವುಗಳು ಕಂಡುಬರುತ್ತವೆ. ಭಾರತೀಯ ಸಂಸ್ಕೃತಿಯ ಮೇರುಗುಕಂಡುಕೊಳ್ಳುವುದು ನಾವು ಬುಡಕಟ್ಟುಗಳಲ್ಲಿಯೇ ಇಂದು ಬುಡಕಟ್ಟುಗಳು ಅಭಿವೃದ್ಧಿಯ ದಿಸೆಯಲ್ಲಿ ಸಾಗುತ್ತಿರುವುದು ಕಾಣುತ್ತೇವೆ. ಇಲ್ಲಿ ಮಂಗಾರವಾಡಿಗರು ಕೂಡಾ ಅನಕ್ಷರತೆ, ಅಜ್ಞಾನ, ಹಿಂದುಳಿದ ಒಂದು ಸಮುದಾಯವೆಂದು ಹೇಳಬಹುದು ಇಂದಿನ ದಿನಗಳಲ್ಲಿ ಅಲ್ಪ ಸ್ವಲ್ಪ ಜನರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ನೀಡುತ್ತಿದ್ದಾರೆ. ಅಭಿವೃದ್ಧಿಯನ್ನು ಕಂಡುಕೊಳ್ಳುವ ದಿಸೆಯಲ್ಲಿ ಪ್ರಯತ್ನಗಳು ಮಾಡುತ್ತಿದ್ದಾರೆಂದು ಹೇಳಬಹುದು ಏಕೆಂದರೆ. ಭಾರತದಲ್ಲಿ ೪೦೦೦ಮೀಲಿಯನ್‌ಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿಂದ ಶೇ೧೫ರಷ್ಟು ಜನ ಮಹಿಳೆಯರು ಇನ್ನು ಅನಕ್ಷರಸ್ಥರಾಗಿದಾರಂಬುದು ತಲೆ ತಗ್ಗಿಸುವಂತಹ ಸಂಗತಿಯಾಗಿದೆ. ಇದಲ್ಲಿ ಹೆಚ್ಚಾಗಿ, ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಕಾರ್ಮಿಕರಾಗಿ ಸಾಗುವಳಿದಾರರಾಗಿ ಕುಶಲಕರ್ಮಿಗಳಾಗಿ ಜೀವನ ಸಾಗಿಸುತ್ತಿದ್ದಾರೆ. ಇವರೆಲ್ಲ ಇನ್ನು ಹಳೆಯ ಕಂದಾಚಾರದ ಎಲ್ಲ ಬಗೆಯ ಒತ್ತಡ ತುಳಿತ, ದಮನಕ್ಕೆ ಒಳಗಾಗಿದ್ದಾರೆ, ಭಾರತವನ್ನು ಪ್ರನಿಧಿಸುವ ಭಾಷಣ, ಗೋಷ್ಠಿಗಳಲ್ಲಿ, ಸಮಾವೇಶಗಳಲ್ಲಿ ಇವರನ್ನು ಮಾತ್ರವೇ ವೈಭವೀಕರಿಸಲಾಗುತ್ತಿದೆ. ರಾಷ್ಟ್ರೀಯ ಅಭಿವೃದ್ಧಿಯ ಉನ್ನತ ಧ್ಯೇಯದಲ್ಲಿ ಮಹಿಳೆಯರು ಎಲ್ಲಿ ಯಾವ ಸ್ಥಾನ ಪಡೆಯಬಹುದು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಕಾನೂನು ಸಾಂಸ್ಕೃತಿಕ, ಔಧ್ಯಮಿಕ ಹಾಗೂ ರಾಜಕೀಯ ರಂಗಗಳಲ್ಲಿ ಇಂದು ಮಹಿಳೆಯರು ಪಾತ್ರ ಪ್ರಮುಖವಾದದು ಮಂಗಾರವಾಡಿ ಮಹಿಳೆಯರು ಸಮಾನ ಅಂತಸ್ತು ಮತ್ತು ಸಮಾನಾವತಾರಗಳನ್ನು ಪಡೆದುಕೊಳ್ಳುವಲ್ಲಿ ಪ್ರಗತಿ ಸಾಧಿಸಿದ್ದಾರೆಂಬ ಅವರು ಪುರುಷ ಸಂಗಾತಿಗಳ ಮನೋಭಾವ ಹೇಗಿದೆ, ಅವರು ಅಸಹಾಯಕರಾಗಿ

ಮಹಿಳೆಯರು ಅನಗತ್ಯ ಸ್ಪರ್ಧಿಗಳಾಗಿರುವರೆಂದು ಕಿಡಿಕಾರುವವರೆ? ಅಥವಾ ಸಹಕಾರ ಮನೋಧರ್ಮದಿಂದ ನೆರವಿನ, ಪ್ರೋತ್ಸಾಹದ ಹಸ್ತ ನೀಡುತ್ತಿರುವವರೆ? ಯೋಜಿತ ಬದಲಾವಣೆಗಳನ್ನು ಕುರಿತು ಹೊಸ ಆಲೋಚನೆಗಳೊಂದಿಗೆ ಸಕಾಲದಲ್ಲಿ ಹಳೆಯ ಅಭಿಪ್ರಾಯಗಳನ್ನು ಅಳಿಸಿಹಾಕಿ ಹೊಸ ಮೌಲ್ಯ ಹಾಗು ಕ್ರಮಗಳಿಗೆ ಅನುವು ಮಾಡಲು ಸಾಧ್ಯವಾಗುವುದೇ ಅಥವಾ ಧ್ಯೇಯಗಳಿಲ್ಲವೋ ಕೇವಲ ಹಾಳೆಯ ಮೇಲಷ್ಟೇ ಉಳಿದುಬಿಡಬಹುದೆ ಹೀಗೆ ಹಲವಾರು ಪ್ರಶ್ನೆಗಳ ಪಟ್ಟಿಯ ಬೆಳೆಯುತ್ತಾ ಹೋಗುತ್ತದೆ.

ಬುಡಕಟ್ಟು ಮಹಿಳೆಯರ ಬಗ್ಗೆ ಕಲ್ಪಿತ ಮಾದರಿ ಜೀವನ ಸಾಮಾಜಿಕ ಹಂದರವನ್ನು ನಿರ್ಮಿಸಿದೆ. ಅಂದರೆ ಈಗ ಮಹಿಳೆಯ ಜೀವನ ತಳಹದಿ ಎಂಬಂತೆ ನೆಲೆಯೂರಿವೆ, ಅದಕ್ಕನುಸಾರವಾಗಿಯೇ ಪುರುಷ ಸಂತತಿಯನ್ನು ಮಾತ್ರ ವೃದ್ದಿಪಡಿಸಲಾಗುತ್ತಿದೆ ಮಹಿಳೆಯರನ್ನು ಬೇಕಾದಂತೆ ಹೊಸಕಿ ಬದಿಗೆ ತಳ್ಳಿ ಪುರುಷರ ಹಾದಿಯನ್ನು ಸುಗಮವಾಗಿಸುವ ತಂತ್ರ ನಡೆದಿವೆ, ಸಾಂಪ್ರದಾಯಿಕ ವ್ಯವಸ್ಥೆ, ಸಾಂಸ್ಕೃತಿಕ ಪ್ರವೃತ್ತಿ ಹಾಗು ಮೌಲ್ಯ ನಿರ್ಧರಗಳು ಭಾರತೀಯ ಮಹಿಳೆಯರನ್ನು ನಿರ್ಧರ ತೆಗೆದುಕೊಳ್ಳುವುದು ಕರ್ತವ್ಯ ಹಾಗೂ ಜವಾಬ್ದಾರಿ ಹಾಗು ಅಧಿಕಾರದಲ್ಲಿ ಪಡೆಯುವ ವಿಷಯಗಳಿಗೆ ಸಂಬಂಧಪಟ್ಟಂತೆ ಇನ್ನು ಪ್ರತಿಕೂಲ ಪರಿಸ್ಥಿತಿಯಲ್ಲೇ ಮುಂದುವರೆಯುವಂತೆ ಮಾಡಿವೆ. ಮಹಿಳೆಯ ಸಾಮಾಜಿಕ ಸ್ಥಾನಮಾನವಂತೊ ಹಲವು ಬಗೆಯ ಸಾಂಸ್ಥಿಕ ಸಂಕೀರ್ಣತೆ ಹಾಗೂ ಮಿಥ್ಯಗಳಿಂದ ಕೂಡಿದೆ ಮಹಿಳಾ ವಿಮೋಚನೆಯನ್ನು ಯಾವುದೇ ಪಕ್ಷ ಮತ್ತು ಸರ್ಕಾರ ರಾಜಕೀಯ ಚಳುವಳಿಯ ಮೂಲಕ ಮಹಿಳೆಯರನ್ನು ಬೆಳೆಯುವುದಕ್ಕೆ ಬಿಡುವುದಿಲ್ಲ. ಸಮಾನತೆಗಾಗಿ ಹೋರಾಡಬೇಕಾದರೆ ಮಹಿಳೆಯರು ಅದನು ಸಾಧಿಸಲು ತಮ್ಮ ಪಾಲ್ಗೋಳ್ಳುವಿಕೆಗಾಗಿ ಮುನ್ನುಗ್ಗಬೇಕು ಹಾಗೂ ಪ್ರತಿ ಮಹಿಳೆ ತನ್ನ ಸ್ವಂತ ಏಳಿಗೆಗಾಗಿ ತನ್ನಂಥ ಅಸಂಖ್ಯಾತ ಸೋತ ಮಹಿಳೆಯರ ಅಭಿವೃದ್ದಿಯ ಅಗತ್ಯತೆಗಾಗಿ ಸ್ಪಂಧಿಸಬೇಕು ಪರಾವಲಂಬಿತನವನ್ನು ಕ್ರಮೇಣವಾಗಿ ಕೈಬಿಡುತ್ತ ಸ್ವಾವಲಂಬನೆಯಿಂದ ತಲೆಯತ್ತಬೇಕು ಇದು ಅಂತಿಮವಾಗಿ ವಿಫಲವಾಗುತ್ತದೆ. ಆದ್ದರಿಂದ ಸಮುದಾಯದ ಬುಡಕಟ್ಟಿನ ಮಹಿಳೆಯರು ತಮ್ಮ ಗುರಿ ಮತ್ತು ಅಭಿವೃದ್ಧಿ ಸಾಧಿಸಲು ಮಾಡುವ ಪ್ರಯತ್ನಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಅತ್ಯಗತ್ಯ.

ಭಾರತೀಯ ಸಮಾಜದಲ್ಲಿ ಮಹಿಳೆಯರಿಗೂ ಪರಿವರ್ತನೆಯ ಹೊಸ ಆಯಾಮಗಳು ಎಟುಕುತ್ತಿವೆ ಸಮುದಾಯಗಳ ಮಹಿಳೆಯರಲ್ಲಿ ಸ್ಥಿರ ಮನಸ್ಸು ಕಾರ್ಯಸಾಧನೆಯ ಸಾಮರ್ಥ್ಯ ಹಾಗೂ ನಿಸ್ವಾರ್ಥ ಸೇವಾಮನೋಭಾವ ಇವೆಲ್ಲವು ಇವೆ. ಆದರೆ ಅವು ಬೆಳಕಿಗೆ ಬರುವಂಥಹ ಅವಕಾಶಗಳನ್ನು ಅವರೇ ಕಲ್ಪಿಪಿಸಿಕೊಳ್ಳಬೇಕಾದ ಪರಿಸ್ಥಿತಿಯು ಉಂಟಾಗಿದೆ. ಮಹಿಳೆಯರ ಈ ಗುಣಗಳಿಗೆ ಜೊತೆಯಾಗಿ, ಶಿಕ್ಷಣ, ತರಬೇತಿ, ಪ್ರೋತ್ಸಾಹ, ದೊರೆಯಬೇಕು ಸಾಮಾಜಿಕ

ಭದ್ರತೆಯಿರಬೇಕಾದರೆ ಸ್ವಾವಲಂಬನೆ ಅತ್ಯುತ್ತಮ ಮಾರ್ಗವಾಗಿದ್ದು ಆರ್ಥಿಕ ಸ್ವಾತಂತ್ರ್ಯ ಮಹಿಳೆಯ ಹಂಗಿನ ಜೀವನ, ದಾಸ್ಯ ಕೀಳರಿಮೆ ಹಾಗೂ ಅಪಮಾನದಿಂದ ಆತ್ಮಹತ್ಯೆಯಂಥ ಪ್ರಯತ್ನಕ್ಕೆ ಕೈಹಾಕುವ ಅಸಹಾಯಕತೆಯನ್ನು ನಿವಾರಿಸಬೇಕು. ಬುಡಕಟ್ಟು ಮಹಿಳೆಯರು ಆದಿವಾಸಿಗಳು ನಗರ ಮತ್ತು ಗ್ರಾಮೀಣ ಪ್ರದೇಶದ ಮಹಿಳೆಯರು ಸಂಪ್ರದಾಯ ಮೂಢನಂಬಿಕೆಗಳನ್ನು ದಿಕ್ಕರಿಸುವ ಹಾಗೂ ಹೊಸ ಬಗೆಯ ದಿಟ್ಟತನದಿಂದ ಪ್ರಜ್ಞಾವಂತಿಕೆ ಹೊಸದನ್ನು ಸೃಜಿಸುವ ಕ್ರಿಯಾಶೀಲತೆ ಧ್ಯೆಯೋದ್ದೇಶಗಳು ಸಾಧಿಸಬೇಕಾಗಿದೆ. ಇದಕ್ಕಾಗಿ, ವ್ಯಕ್ತಿಗತವಾಗಿ ಹಾಗೂ ಸಾಮೂಹಿಕವಾಗಿ ಶಿಸ್ತು, ಸ್ಫೂರ್ತಿ ಸಹಕಾರ ಹಾಗೂ ಸಮನ್ವಯ ಮನೋಭಾವನೆ ಬೆಳಸಿಕೊಳ್ಳುವುದು ಅಗತ್ಯವಾಗಿದೆ. ಅಲೆಮಾರಿಗಳಲ್ಲಿ ಸಲ್ಲದ ಮಡಿವಂತಿಕೆ ಅಡ್ಡಿ ಆತಂಕ ಕಾಲೆಳೆಯುವ ಸಂಚುಗಳಿಗೆ ಧೈರ್ಯ ಬಿಡದೆ ಮುಂದೆ ಸಾಗುವುದು. ಇದಕ್ಕೆ ವೈಯಕ್ತಿಕವಾಗಿ ಉದ್ಯಮಶೀಲತೆ ಹೊಣೆಗಾರಿಕೆ, ಸತತ ಪ್ರಯತ್ನದ ಅವಶ್ಯಕತೆವಿದೆ ಸಾಮೂಹಿಕವಾಗಿ ಸಮಾಜ ವ್ಯವಸ್ಥೆಗೆ ಸಡ್ಡು ಹೊಡೆಯುವ ಮಹಿಳಾ ಸಂಘಟನೆ ಕಾರ್ಯ ನಡೆಸಬೇಕು ಆಗ ಕೇವಲ ಕುಟುಂಬಕ್ಕೆ ಅಲ್ಲ ಪ್ರಪಂಚದಾದ್ಯಂತ ಮಹಿಳೆಯರ ಅನಿವಾರ್ಯತೆ ಅಭಿವೃದ್ದಿ ಪರ ಉದ್ಯಮ ಕ್ಷೇತ್ರದಲ್ಲಿ ಬೆಳೆಯಲು ಮುಂದಾಗಿದಂತಾಗುತ್ತದೆ.

ಬುಡಕಟ್ಟುಗಳ ಅಧ್ಯಯನದಲ್ಲಿ ಮಹಿಳೆಯ ಒಂದು ಅಲೆಮಾರಿಗಳ ಮತ್ತು ಜೀವನ ಸ್ಥಿತಿಗಳು ಹಂತ ಹಂತವಾಗಿ ಮೇಲೇರುತ್ತ ಬಂದಿರುವಂತಹದು ತಿಳಿದು ಬರುತ್ತದೆ. ಮಂಗಾರವಾಡಿಗರು ಒಂದೇ ಕಡೆ ನೆಲೆ ನಿಲ್ಲದೆ ಬೇರೆ ಬೇರೆ ಕಡೆ ಚದುರಿಹೋಗಿ ತಮ್ಮ ಜೀವನವನ್ನು ರೂಢಿಸಿಕೊಂಡಿರುವುದು ತಿಳಿದುಬರುತ್ತದೆ. ಸಾಮಾಜಿಕ, ಆರ್ಥಿಕವಾಗಿ ಹಲವಾರು ವರ್ಷಗಳಿಂದ ತುಳಿತಕ್ಕೆ ಒಳಗಾದ ಅಲೆಮಾರಿಗಳಾದ ಮಂಗಾರವಾಡಿಗರು ಒಂದು ಸಮುದಾಯವೆಂದು ಹೇಳಬಹುದು ಇದ್ದರಿಂದ ಇವರು ಒಂದು ಪ್ರವೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತ ಹಲವಾರು ಎಡರು ತೊಡರುಗಳು ಅನುಭವಿಸುತ್ತ ಬಂದಿರುವುದು. ಸಮುದಾಯಗಳು ವಿವಿಧ ಜಾತಿ ಧರ್ಮ, ಪದ್ದತಿಗಳ ಸಂಪ್ರದಾಯಗಳ ಮೇಲೆ ಅವಲಂಭನೆಯಾಗಿ ಮತ್ತು ದೇವರ ಮೇಲೆ ನಂಬಿಕೆ ಆಚಾರ ವಿಚಾರಗಳನ್ನು ನಂಬಿಕೊಂಡು ದೈವಾರಾಧಕರಾಗಿದ್ದಾರೆಂಬುದು ಅಧ್ಯಯನದಿಂದ ತಿಳಿದುಬರುತ್ತದೆ. ಜೀವನದಲ್ಲಿ ಆರ್ಥಿಕ ಬದುಕಿನಲ್ಲಿ ತೊಂದರೆಯಾದಾಗ ಅನಿವಾರ್ಯವಾಗಿ ಹಲವಾರು ಕೆಲಸ ಕಾರ್ಯಗಳು ಮಾಡುವುದನ್ನು ಆರಂಭಿಸಿದರು ಮೊದಲು ಎಮ್ಮೆ ಬೋಳಿಸುವ ಚರಿಹೊಡೆಯುವುದು ಬೆಟ್ಟಸಕಾಯಿ ತಯಾರಿಕೆ ಮಾಡಿ ಕೊಂಡು ಜೀವನ ಸಾಗಿಸಾದ್ದರೆಂಬುದು ತಿಳಿದುಬರುತ್ತದೆ. ವಕ್ತೃ ಪ್ರಕಾರ ಹಲವಾರು ತೊಂದರೆಗಳಿಗೆ ನಮ್ಮ ಸಮುದಾಯವು ಇಡಾಗಿದೆಂದು ಹೇಳುತ್ತಾರೆ. ನೋವು ನಲಿಯುವ ಅನೇಕ ತೊಂದರೆಗಳಿಗೆ ಸಿಲುಕಿಕೊಂಡು ಇನ್ನು ಆರ್ಥಿಕವಾಗಿ

ಹಿಂದುಳಿದಿದೆ. ಉಪಜೀವನಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗುವುದು ಅನಿವಾರ್ಯವಾಗಿತ್ತು ಮಹಿಳೆಯರು ಪುರುಷರು ಕೂಡಿಕೊಂಡು ಕಳ್ಳತನ, ಮತ್ತು ಜೇಬು ಕತ್ತರಿಸುವುದು, ಅವರ ಮೂಲ ವೃತಿಯಾಗಿ ಮಾಡಿಕೊಂಡರೆಂಬ ಜನರ ಒಂದು ವದಂತಿ ಇದೆ. ಹಾಗೆ ಮಾಡುತ್ತ ಅನೇಕ ವರ್ಷಗಳವರಗೆ ತಮ್ಮ ಜೀವನ ಸಾಗಿಸಿಕೊಂಡು ಬಂದಿದ್ದಾರೆ ಎಂದು ಮತ್ತು ಸಣ್ಣ ಪುಟ್ಟ ಅಪರಾಧಿ ಕೃತ್ಯಗಳಲ್ಲಿ ತೊಡಗಿದ್ದಾರೆಂಬುದು ಕಂಡುಬರುತ್ತದೆ. ಮಂಗಾರವಾಡಿ ಮಹಿಳೆಯರು ಕಳ್ಳತನದಲ್ಲಿ ತೊಡಗಿದ್ದ ಬಗ್ಗೆ ಈ ಹಿಂದೆ ಯಾವುದೇ ಆಧಾರಗಳಿಲ್ಲ ಆದರೆ ತಮ್ಮ ವೃತ್ತಿ ಕಳೆದುಕೊಂಡಿದ್ದರಿಂದ ಸ್ಥಳೀಯರು ಸಹಕಾರ ನೀಡದೇ ಇರುವುದರಿಂದ ಬ್ರಿಟೀಷರ ಆಡಳಿತ ಅವಧಿಯಲ್ಲಿ ಅಪರಾಧಿ ಕೃತ್ಯಗಳಿಗೆ ಕೈ ಹಾಕಿದರು ಎಂಬುದು ಅಪರಾಧಿ ಚಟುವಟಿಕೆಗಳನ್ನು ಗಮನಿಸಿದ ಬ್ರಿಟೀಷರು ಇವರನ್ನು ಅಪರಾಧಿ ಜನಾಂಗವೆಂದು ಪರಿಗಣಿಸಲಿಲ್ಲ. ತದನಂತರದಲ್ಲಿ ಅಲೆಮಾರಿಗಳು ಕಾಡಿನಲ್ಲಿ ವಾಸಿಸಲು ತೊಡಗಿದರು. ಸಂವಿಧಾನದಲ್ಲಿ ಮಂಗಾರವಾಡಿಗರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ. ಅವರಿಗೆ ಸಿಗುವ ಸರ್ಕಾರ ಸೌಲಭ್ಯಗಳು ಪಡೆದುಕೊಳ್ಳದೆ ವಂಚಿತರಾಗಿದ್ದಾರೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಕಾನೂನಿನ ಬಗ್ಗೆ ಸರಿಯಾದ ಪರಿಕಲ್ಪನೆ ಇಲ್ಲ ಅನಕ್ಷರಸ್ಥರಾಗಿರುವಂತಹುದು ತಿಳಿದುಬರುತ್ತದೆ.

ಪ್ರಸ್ತುತ ದಿನಗಳಲ್ಲಿ ಮಂಗಾರವಾಡಿಗರ ಸಾಮಾಜಿಕ ಜೀವನದಲ್ಲಿ ಬದಲಾವಣೆಯನ್ನು ಸ್ವಲ್ಪ ಮಟ್ಟಿಗೆ ಕಂಡುಬರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿನ ಮಂಗಾರವಾಡಿಗರು ಕೂಲಿಕಾರರಾಗಿ, ಕೃಷಿಕರಾಗಿ, ಹೊಲಗದ್ದೆಗಳಲ್ಲಿ ಕೆಲಸ ಕಾರ್ಯ ಮಾಡುತ್ತಿದ್ದಾರೆ. ಆರ್ಥಿಕ ಸ್ಥಿತಿಗತಿಗಳಿಗೆ ಹೊಂದಿಕೊಂಡು ಮಂಗಾರವಾಡಿಗರು ಉತ್ತಮವಾದ ಬದುಕು ನಡೆಸುತ್ತಿದ್ದಾರೆ. ಕೆಲವರು ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಕೆಲವರು ಭೂಮಿಯನ್ನು ಖರೀದಿಸಿದ್ದಾರೆ ಬಾಪುನಗರ ಮತ್ತು ಸುಂದರ ನಗರದಲ್ಲಿ ಹೋಟೆಲ್, ಕಿರಾಣಿ ಅಂಗಡಿಗಳು ಇಟ್ಟಿಕೊಂಡಿದ್ದಾರೆ. ಯಾವುದೇ ಹಬ್ಬ ಹುಣ್ಣಿಮೆಗಳನ್ನು ಧಾರ್ಮಿಕವಾಗಿ ವಿಧಿವತ್ತಾಗಿ ಆಚರಿಸುತ್ತಾರೆ. ದೇವರು ನಂಬಿಕೆ, ಸಂಪ್ರದಾಯ, ಸ್ವಭಾವ, ವರ್ತನೆ ಪರಿಸರದ ತಕ್ಕಂತೆ ಇವೆಲ್ಲವು ಕೂಡ ಮುಖ್ಯವಾಗಿ ಚನ್ನಾಗಿ ಬೆಳಸಿಕೊಂಡು ನಗರದ ಒಂದು ಸುಂದರ ಬದುಕು ರೂಢಿಸಿಕೊಂಡು ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಮಂಗಾರವಾಡಿ ಮಹಿಳೆಯರು ಸ್ವಸಹಾಯ ಗುಂಪುಗಳು ಸಹಕಾರ, ಸಂಘಗಳಲ್ಲಿ ಬೆಳವಣಿಗೆಯನ್ನು ಹೊಂದಬೇಕಾಗಿದೆ. ಮಹಿಳೆಯು ಪ್ರತಿಭೆ ಕೌಶಲ್ಯಗಳನ್ನು ಹೊಂದಿ, ಸೇವಾ ಮನೋಭಾವದಿಂದ ನಾಯಕತ್ವವಹಿಸಿ ಸಂಘ ಸಂಸ್ಥೆಗಳನ್ನು ಬೆಳಸಬೇಕಾಗಿದೆ. ಜೊತೆಗೆ ಮಕ್ಕಳ ಶೈಕ್ಷಣಿಕವಾಗಿ ಬೆಳಕಿಗೆ ಮತ್ತು ಅಭಿವೃದ್ದಿಯತ್ತ ಸಾಗುವುದು ಮಹಿಳೆಯರಲ್ಲಿ ನಾವು ಕಾಣುತ್ತೇವೆ. ಹಲವಾರು ಸೌಲಭ್ಯಗಳು ತರಬೇತಿಗಳ ಮೂಲಕ ಅವರಲ್ಲಿ ಒಳ್ಳೆಯ

ಒಂದು ಕ್ರಿಯಾಶಕ್ತಿ ಪ್ರಚೋದನೆಗೆ ಸ್ವಯಂ ಉದ್ಯೋಗ, ಸ್ವಸಹಾಯ ಪರಿಪೂರ್ಣತೆ, ಇವುಗಳಲ್ಲಿ ಮುಂದೆ ಬರಬೇಕಾದ ಇಂದಿನ ದಿನಗಳಲ್ಲಿ ಪ್ರಮುಖವಾದದು ಎಂಬುದು ತಿಳಿಯಬಹುದು.

ಬುಡಕಟ್ಟುಗಳು ಶತಶತಮಾನಗಳಿಂದ ತುಳಿತಕ್ಕೆ ಶೋಷಣೆಗೆ ಗುರಿಯಾಗಿವೆ. ಇಂದಿನ ದಿನಗಳಲ್ಲಿ ಸಂಪೂರ್ಣ ಅರಿವು ಪಡೆದುಕೊಳ್ಳುತ್ತ ತಮ್ಮ ಅಸ್ತಿತ್ವವನ್ನು ಹೊಸ ವಿಧಾನಗಳ ಮೂಲಕ ಜೀವನವನ್ನು ರೂಪಿಸಿಕೊಳ್ಳತೊಡಗಿವೆ. ಹಳೆಯ ಸಂಪ್ರದಾಯಗಳು ಪ್ರವೃತ್ತಿಗಳನ್ನು ಮೂಲೆಗೊತ್ತುತ ಜಾಗೃತವಾಗಿ ಬದುಕುತ್ತಿದ್ದಾರೆ. ಮಹಿಳೆಯರು ಎಲ್ಲಾ ಕಾಲದಲ್ಲೂ ಎಲ್ಲಾ ಸಂದರ್ಭದಲ್ಲಿಯು ಹಾಗೆಯೇ ಇರುವುದು ಕಂಡು ಬರುವುದಿಲ್ಲ. ಅವರು ಒಂದು ಬದುಕು ಬದಲಾವಣೆಯತ್ತಸಾಗುವಂತೆ ಅವರ ಭಾವನೆಗಳು ಬಯಕೆಗಳು ಆಸೆಗಳು ಅವರನ್ನು ಪ್ರಚೋದಿಸುತ್ತವೆ. ಹಳೆಯ ವ್ಯವಸ್ಥೆಗೆ ಅಂಟಿಕೊಂಡದ್ದ ಮಹಿಳೆಯರು ಈಗ ತಮ್ಮ ತಮ್ಮ ಮನೆಗಳ ಚೌಕಟ್ಟಿಗೆ ಅಂಟಿಕೊಂಡಿರುವ ಸಂಪ್ರದಾಯಿಕ ಆಚರಣೆಗಳು ಬಿಟ್ಟುಕೊಡಬೇಕಾದ ಸನ್ನಿವೇಶಗಳು ಎದುರಾಗುತ್ತಿವೆ. ಆದರೆ ಮಂಗಾರವಾಡಿ ಮಹಿಳೆಯ ಶೈಕ್ಷಣಿಕ ಆರ್ಥಿಕವಾಗಿ ಮುಂದುವರೆಯುವಂತಹ ಮಹಿಳೆಯರು ಎಂಬುದನ್ನು ಹೇಳಬಹುದು. ಇಂದಿನ ದಿನಗಳಲ್ಲಿ ಮಹಿಳೆಯರಿಗೆ ಸ್ಥಾನಮಾನ ಹಾಗೂ ಜೀವನಾನುಕೂಲಗಳನ್ನು ಒದಗಿಸುವಲ್ಲಿ ತಾರತಮ್ಯವಾಗಿರುವ ದೃಷ್ಟಿಯಿಂದ ಈಗ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಾಧ್ಯವಾಗುವಂತೆ ಅವರನ್ನು ಸಬಲೆಯರನ್ನಾಗಿಸುವ ಪ್ರಯತ್ನ ಸರ್ಕಾರ, ಸಂಘ–ಸಂಸ್ಥೆಗಳು ಇತ್ಯಾದಿಗಳು ಮಾಡುತ್ತಿವೆ. ಮಂಗಾರವಾಡಿ ಮಹಿಳೆಯರ ಸ್ಥಾನ ಮಾನದಲ್ಲಿ ಬದಲಾವಣೆಯನ್ನು ಕಂಡು ಕೊಂಡಿದೆ. ಭಾರತೀಯ ಮಹಿಳೆಯರು ಸಮುದಾಯದಲ್ಲಿರುವ ನಿರ್ಬಂಧ ರಹಿತ ಅಡೆತಡೆಗಳು ಕಟ್ಟಿ ಹಾಕಿವೆ. ಮಂಗಾರವಾಡಿ ಮಹಿಳೆಯ ಸ್ಥಿತಿಯು ದೈಹಿಕವಾಗಿ, ಮಾನಸಿಕವಾಗಿ, ಕೌಟುಂಬಿಕ ಒತ್ತಡಗಳ ನಡುವೆಯೆ ಕೆಲಸ ಮಾಡುವ ಸಾಮರ್ಥ್ಯ ಮತ್ತು ಛಲವನ್ನು ಹೊಂದಿದ್ದಾಳೆ. ಮುಖ್ಯವಾಗಿ ತಾನು ಪರರ ಮೇಲೆ ಅವಲಂಬನೆಯಾಗಬಾರೆಂಬುದು ಅವರ ಉದ್ದೇಶವಾಗಿದೆ. ಮಹಿಳೆಯ ಪರ ಅಧ್ಯಯನದಲ್ಲಿ ಕಾನೂನು ಸಮಾಜ, ಸಂಸ್ಕೃತಿ, ಮಹಿಳಾ ಜೀವನದ ಮತ್ತು ಬದುಕಿನ ನೆಲೆಗಳ ಬಗ್ಗೆ ಅರಿತುಕೊಂಡು ಅವರಿಗಿರುವ ಸೌಲಭ್ಯಗಳು ಸಹಕಾರಗಳು ನಮ್ಮ ಮುಖಾಂತರ ಅಥವಾ ಸರ್ಕಾರದ ಮುಖಾಂತರ ನೀಡುವ ಸೌಲಭ್ಯಗಳನ್ನು ತಿಳಿ ಹೇಳುವುದು ಮುಖ್ಯವಾದದು ಮತ್ತು ಅಭಿವೃದ್ಧಿಯ ದಿಸೆಯಲ್ಲಿ ಸಾಗುವಂತಹ ಒಂದು ವ್ಯವಸ್ಥೆ ನಿರ್ಮಾಣ ಮಾಡಬೇಕಾಗಿದೆ. ಹಂತ ಹಂತವಾಗಿ ಬೆಳವಣಿಗೆ ಹೊಂದಲು ಸಾಧ್ಯವೆಂದು ಹೇಳಬಹುದು.

ಕೌಟುಂಬಿಕ ಜೀವನದ ಬದುಕಿಗೆ ಇಂದು ಸಮುದಾಯಗಳಲ್ಲಿ ಪ್ರೀತಿ, ವಿಶ್ವಾಸ, ಸ್ನೇಹ ಸಂಬಂಧಗಳಿಂದ ಕೂಡಿದ್ದು ನಂಬಿಕೆಗಳು ಆಚಾರ ವಿಚಾರಗಳು ಗಮನಿಸುವುದಾಗಿದೆ.

ಆದರೆ ವಾಸ್ತವವಾಗಿ ಮಂಗಾರವಾಡಿ ಮಹಿಳೆ ಹಾಗೂ ಬುಡಕಟ್ಟು ಮಹಿಳೆಯರು ದೈನಂದಿನ ದಿನಗಳಲ್ಲಿ ಪ್ರಾಣ, ಮಾನಹಾನಿ, ಪರಾವಲಂಬನೆಯನ್ನು ತೊಡೆದು ಸಮುದಾಯದಲ್ಲಿ ಸಮಾನತೆಯಿಂದ ಬಾಳುವ ಅವಕಾಶವೊದಗಿಸುವ ಪ್ರಯತ್ನ ನಡೆಯಬೇಕಾಗಿದೆ ಅವರಲ್ಲಿರುವ ಮೌಢ್ಯತೆಯನ್ನು ಬಿಡಬೇಕು ರಾಜಕೀಯವಾಗಿ, ಸಾಮಾಜಿಕವಾಗಿ ಶೈಕ್ಷಣಿಕವಾಗಿ ಬೆಳೆಯಬೇಕು ಮಹಿಳೆಯ ಅಭಿವೃದ್ದಿಯ ಸಲುವಾಗಿ ಹಲವಾರು ಕಾರ್ಯಕ್ರಮಗಳು ಸರ್ಕಾರ ಹಮ್ಮಿಕೊಂಡಿದೆ, ಅಲೆಮಾರಿಗಳ ಅಭಿವೃದ್ದಿಗಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಅಭಿವೃದ್ಧಿ ಹೊಂದಿಬೇಕಾಗಿದೆ. ನಮ್ಮ ಸಂವಿಧಾನದಲ್ಲಿ ಮಹಿಳೆಯರ ಹಕ್ಕುಗಳು ನೀಡಿದ್ದಾರೆ. ಮಹಿಳೆಯ ಇಡೀ ಜೀವನವನ್ನೇ ಬದಲಾವಣೆಯತ್ತ ಸಾಗುವಂತೆ ಮಾಡಿದವು. ಮೀಸಲಾತಿಯಿಂದ ಅನುಕೂಲ ಪಡೆದುಕೊಂಡಿದ್ದಾರೆ. ಇದರಿಂದ ಪ್ರತಿಯೊಂದು ಮಹಿಳೆ, ಪ್ರತಿಯೊಂದು ಜನಾಂಗ, ಅಭಿವೃದ್ದಿಯತ್ತ ಸಾಗುತ್ತಿದ್ದಾರೆ. ಎಂಬುದು ಗಮನಿಸಬಹುದಾದ ಸಂಗತಿ ಮೇಲ್ವರ್ಗ ಮಹಿಳೆಯರಿಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಮಹಿಳೆಯರು ಇನ್ನೊಬ್ಬರ ಮೇಲೆ ಅವಲಂಬನೆಯಾಗದೆ ತನ್ನನ್ನು ತಾನು ಪರಿಪೂರ್ಣವಾಗಿ ಒಂದು ಕಡೆ ನೆಲೆ ನಿಲ್ಲಲ್ಲು ಅಭಿವೃದ್ಧಿ ಹೊಂದಲು ಅವಕಾಶ ಕಲ್ಪಿಸಿರುವಂತಹದು ಇದಲ್ಲದೆ ಬುಡಕಟ್ಟುಗಳಲಿ ಅಲೆಮಾರಿಗಳಾದ ಮಂಗಾರವಾಡಿ ಪುರುಷ ಮಹಿಳೆಯರಿಗೆ, ಮಕ್ಕಳಿಗೆ ಪ್ರೋತ್ಸಾಹ, ಗೌರವ ಒಳ್ಳೆಯ ಸ್ಥಾನಮಾನಗಳು ಹೊಂದಿದ್ದಾರೆ ಮಹಿಳೆಯರು ಕೂಡಾ ವಿವಿಧ ಕ್ಷೇತ್ರಗಳಲ್ಲಿ ಭಾಗಿಯಾಗುತ್ತಾ ತಮ್ಮ ತನವನ್ನು ಭದ್ರಪಡಿಸಿ ಕೊಂಡಿದ್ದಾರೆ ಆತ್ಮವಿಶ್ವಾಸ ದೃಢಸಂಕಲ್ಪ ಹೊಂದುತ್ತ ತನ್ನನ್ನು ತಾನು ಸಮರ್ಥಿಸುವ ಒಂದು ನಂಬಿಕೆಯ ಅವಳಲ್ಲಿ ಹುಟ್ಟಬೇಕು. ಇದರ ಜೊತೆಗೆ ಸಮುದಾಯದ ಶೈಕ್ಷಣಿಕವಾಗಿ ಮುಂದುವರೆಯಬೇಕು ಅಂದಾಗ ಮಾತ್ರ ಮಹಿಳೆಯರು ಅಭಿವೃದ್ಧಿಯತ್ತ ಸಾಗುವುದಕ್ಕೆ ಯಾವುದೇ ಸಂಶಯವಿಲ್ಲ. ಎಂಬುದು ತೋರ್ಪಡಿಸಬಹುದು.

ಅನುಬಂಧಗಳು

ಆಕಾರ ಗ್ರಂಥಗಳು

ವಕ್ತೃಗಳ ವಿವರ

ಛಾಯಚಿತ್ರಗಳು

ಪರಾಮರ್ಶನ ಗ್ರಂಥಗಳು

೧. ಅಂಬೇಡ್ಕರ್-ಒಂದು ಮರು ವ್ಯಾಖ್ಯಾನ, ಡಾ.ಜಿ.ವೆಂಕಟೇಶ್, ಸಂಸ್ಕೃತಿ ಪ್ರಕಾಶನ, ಬಳ್ಳಾರಿ, ೨೦೦೫

೨. ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ಡಾ.ಜೆ.ಸೋಮಣ್ಣ ಚೇತನ ಬುಕ್ ಹಾಸ, ಮೈಸೂರು, ೨೦೦೩

೩. ಅಲೆಮಾರಿಗಳ ಸ್ಥಿತಿಗತಿ, ಡಾ.ಸ.ಚಿ.ರಮೇಶ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೫

೪. ಆಧುನಿಕ ಭಾರತದಲ್ಲಿ ಮಹಿಳೆ, ಡಾ.ಎಸ್.ಹೆಚ್.ಶ್ರೀಮತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೫

೫. ಕಾಡುಗೊಲ್ಲರ ಸಂಪ್ರದಯಗಳು ಮತ್ತು ನಂಬಿಕೆಗಳು, ತೀ.ನಂ.ಶಂಕರನಾರಾಯಣ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ೧೯೮೨

೬. ಕರ್ನಾಟಕದ ಬುಡಕಟ್ಟುಗಳು, ಪ್ರೊ.ಹೆಚ್.ಜೆ.ಲಕ್ಕಪಗೌಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೧೯೯೮

೭. ಜನಪದ ಸಮಾಜ ಮತ್ತು ಸಂಸ್ಕೃತಿ, ಎಸ್.ಎಸ್.ಹಿರೇಮಠ, ಸೂರ್ಯ ಪ್ರಕಾಶನ ಚಿತ್ರದುರ್ಗ-೨೦೦೫

೮. ಜನ-ಜನಪದ-ಜಾನಪದ, ಡಾ.ಎಮ್.ಚಿದಾನಂದಮೂರ್ತಿ, ಸಪ್ನ ಪ್ರಕಾಶನ-೨೦೦೨

೯. ನ್ಯಾಯಕ್ಕಾಗಿ ಮಹಿಳೆಯರ ಹೋರಾಟ, ಡಾ.ಡಿ.ವೆಂಕೋಬರಾವ್, ದಿವ್ಯಚಂದ್ರ ಪ್ರಕಾಶನ್, ಬೆಂಗಳೂರು-೨೦೦೨

೧೦. ದಲಿತರು ಮತ್ತು ಜಾಗತೀಕರಣ, ಡಾ.ಮೊಗಳ್ಳಿಗಣೇಶ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೧೯೯೯

೧೧. ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಜೀ.ಶಂ.ಪರಮಶಿವಯ್ಯ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು-೧೯೭೯

೧೨. ದೇಸೀ ಚಹರೇ, ಡಾ.ಮಂಜುನಾಥ ಬೇವಿನಕಟ್ಟಿ, ರೂಪ ಪ್ರಕಾಶನ ಮೈಸೂರು-೨೦೦೪

೧೩. ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ, ಡಾ.ಗಂಗಾಧರ ದೈವಜ್ಞ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೧೯೯೯

೧೪. ಬುಡಕಟ್ಟು ಬದುಕಿನ ಸ್ಥಿತ್ಯತರಗಳು, ಡಾ.ಎ.ಎಸ್.ಪ್ರಭಾಕರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೦

೧೫. ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, ಭಗವತ್ ಶರಣ ಉಪಾಧ್ಯಯ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು-೧೯೮೯
೧೬. ಮಹಿಳೆ ಮತ್ತು ಸಂಸ್ಕೃತಿ, ಡಾ.ಇಂದಿರಾ ಆರ್., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೨
೧೭. ಮಹಿಳಾ ಸಂಕಥನ, ಡಾ.ಗಾಯತ್ರಿ ನಾವಡ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು-೨೦೦೩
೧೮. ಮಹಿಳೆ ಮತ್ತು ದುಡಿಮೆ, ಡಾ.ಅಂಜನಪ್ಪ ಬಿ.ಹೆಚ್., ಸೃಷ್ಟಿ ಪಬ್ಲಿಕೇಶನ್ ಬೆಂಗಳೂರು-೧೯೯೪
೧೯. ಮಹಿಳೆ ಶೋಷಣೆ ಸವಾಲುಗಳು, ಡಾ.ಎಸ್.ಹೆಚ್.ಶ್ರೀಮತಿ, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೨೦೦೫
೨೦. ಮಹಿಳಾ ಮೀಸಲಾತಿ, ಡಾ.ಕೆ.ಎಸ್.ರತ್ನಮ್ಮ, ಪ್ರೊ.ಸ.ನ.ಗಾಯತ್ರಿ, ಈಶ್ವರಿ ಪ್ರಕಾಶನ ಮೈಸೂರು-೨೦೦೫
೨೧. ಮಹಿಳಾ ಅಧ್ಯಯನ, ಡಾ.ಎಸ್.ಹೆಚ್.ಶ್ರೀಮತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೦
೨೨. ಮಹಿಳೆ ಸಮಾಜ ಮತ್ತು ಕಾನೂನು, ಡಾ.ಬೆ.ಕಾ.ಮೂರ್ತಿಶ್ವರಯ್ಯ, ಸಪ್ನ ಬುಕ್ ಹೌಸ್, ಬೆಂಗಳೂರು-೨೦೦೨
೨೩. ಮಹಿಳಾ ಅಧ್ಯಯನ, ಡಾ.ಹೆಚ್.ಎಸ್.ಶ್ರೀಮತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೦
೨೪. ಮಹಿಳೆ ಬಿಡುಗಡೆಯ ಹಾದಿಯಲ್ಲಿ, ಡಾ.ಎನ್.ಗಾಯತ್ರಿ, ನವಕಾರ್ನಟಕ ಪ್ರಕಾಶನ-೧೯೯೫
೨೫. ಮಹಿಳೆ ಮತ್ತು ಸಮೂಹ ಮಾಧ್ಯಮಗಳು, ಡಾ.ಆರ್.ಸರೋಜಾ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೪
೨೬. ಮೀಸಲಾತಿ- ಸಮಸ್ಯೆ ಸವಾಲುಗಳು, ಡಾ.ಹೆಚ್.ಟಿ.ಪೋತೆ, ಡಾ.ಜಗನ್ನಾಥ ಸಿಂದೆ, ತಿಪ್ಪಣ್ಣಂಬು ಪ್ರಕಾಶನ ಗುಲಬರ್ಗಾ-೨೦೦೬
೨೭. ಲಂಬಾಣಿ ಸಂಸ್ಕೃತಿ, ಡಾ.ಸಣ್ಣರಾಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-೧೯೯೯
೨೮. ಸಾವು ಒಂದು ಚಿಂತನೆ, ಡಾ.ಬಿ.ಎಂ.ಪುಟ್ಟಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೧
೨೯. ಸ್ತ್ರೀ ಕಥನ, ಡಾ. ಶೈಲಜಾ, ಹಿರೇಮಠ, ಭುವನ ಪ್ರಕಾಶನ ಹೋಸಪೇಟೆ-೨೦೦೩
೩೦. ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ, ಸಾ.ರಾ.ಅಬೂಬಕರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೭

ವಕ್ತೃಗಳ ವಿವರ

ಹೆಸರು	ವಯಸ್ಸು	ಜಾತಿ	ವೃತ್ತಿ	ಅಕ್ಷರಸ್ಥರು/ ಅನಕ್ಷರಸ್ಥರು
೧. ಹರಿದಾಸ-ಏಕನಾಥ-ಕಾಂಬಳೆ	೭೮	ಮಂಗಾರವಾಡಿ	ವೃದ್ದ	ಅನಕ್ಷರಸ್ಥ
೨. ಸತ್ಯಬಾನ್ ಕಾಂಬಳೆ	೭೦	ಮಂಗಾರವಾಡಿ	ವೃದ್ದ	ಅನಕ್ಷರಸ್ಥ
೩. ಪಾನಾಲಾಲ ಉಪಾಧ್ಯಾಯ	೬೨	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೪. ಬಿಲ್ಲಿ ಮೋರ್ ಸಕಾರಾಮ	೬೫	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೫. ವಿಕ್ರಮ ಮನ್‌ಸುಬಾ	೫೮	ಮಂಗಾರವಾಡಿ	ಕೃಷಿಕರು	ಅನಕ್ಷರಸ್ಥ
೬. ಮೋರನಾಬಾಯ ವಜಾನ್-ಕಾಂಬಳೆ	೮೫	ಮಂಗಾರವಾಡಿ	ವೃದ್ದೆ	ಅನಕ್ಷರಸ್ಥ
೭. ಭಗವಾನ್ ಉಪಾಧ್ಯಾಯ	೬೫	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೮. ಪ್ರಲಾಬಾಯಿ ಗಂಡ ನಾಜಿಂಕಾಂಬಳೆ	೭೨	ಮಂಗಾರವಾಡಿ	ವೃದ್ಧೆ	ಅನಕ್ಷರಸ್ಥ
೯. ಪ್ರಬಲಾಯಿ	೬೮	ಮಂಗಾರವಾಡಿ	ವೃದ್ದೆ	ಅನಕ್ಷರಸ್ಥ
೧೦.ಯಮುನಾಬಾಯಿ ಮಾಸ್ತರ ಕಾಂಬಳೆ	೫೮	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೧೧.ಸೀತಾಬಾಯಿ ಬನ್ಸೆಲಾಲ ಪಾಟೀಲ	೬೭	ಮಂಗಾರವಾಡಿ	ವೃದ್ದೆ	ಅನಕ್ಷರಸ್ಥ
೧೨.ಸಾವಿತ್ರಿ ಗಂಡ ಶಂಕರ ಪಾಟೀಲ	೬೧	ಮಂಗಾರವಾಡಿ	ಕೃಷಿಕರು	ಅನಕ್ಷರಸ್ಥ
೧೩.ಸೇಸುಬಾಯಿ ನವರಸ ಉಪಾಧ್ಯಾಯ	೪೯	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೧೪.ಇಂದಿರಾಬಾಯಿ ಪಿ. ಉಪಾಧ್ಯಾಯ	೬೨	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೧೫.ಬಿಜಲಾಬಾಯಿ ಪಿ. ಉಪಾಧ್ಯಾಯ	೬೫	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೧೬.ಸಕ್ರಾಬಾಯಿ ಬಾಬು ಉಪಾಧ್ಯಾಯ	೪೯	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೧೭.ದೇವಿಕಾಬಾಯಿ ವಿಕ್ರಮ ಉಪಾಧ್ಯಾಯ	೬೦	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೧೮.ಸರುಬಾಯಿ ಬಿಲ್ಲಿಮೊರ್ ಉಪಾಧ್ಯಾಯ	೬೨	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೧೯.ತಾರಾಬಾಯಿ ಬಿ. ಉಪಾಧ್ಯಾಯ	೫೮	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೨೦.ಲಕ್ಷ್ಮಿಬಾಯಿ ಗೋಪಾಲ ಕಾಳೆ	೫೫	ಮಂಗಾರವಾಡಿ	ಕೃಷಿಕರು	ಅನಕ್ಷರಸ್ಥ
೨೧.ಶಾಂತಾಬಾಯಿ ಗೋಪಾಲ ಕಾಳೆ	೫೮	ಮಂಗಾರವಾಡಿ	ಕೃಷಿಕರು	ಅನಕ್ಷರಸ್ಥ
೨೨.ಕೋರುಬಾಯಿ, ರಾಮ ಉಪಾಧ್ಯಾಯ	೮೨	ಮಂಗಾರವಾಡಿ	ವೃದ್ಧ	ಅನಕ್ಷರಸ್ಥ

ಹೆಸರು	ವಯಸ್ಸು	ಜಾತಿ	ವೃತ್ತಿ	ಅಕ್ಷರಸ್ಥರು/ ಅನಕ್ಷರಸ್ಥರು
೨೩.ಕೇರುಬಾಯಿ ಮತ್ತು ಕಾಳೆ	೬೨	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೨೪.ಕಮಲಾಬಾಯಿ ಎಚ್.ಉಪಾಧ್ಯಾಯ	೪೯	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೨೫.ಶಾಂತಾಬಾಯಿ ಬಿ. ಉಪಾಧ್ಯಾಯ	೬೨	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೨೬.ಶಾಲುಬಾಯಿ ಖಾದರ್ ಪಾಷೆ	೪೮	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೨೭.ಮಹಳಬಾಯಿ ಶಂಕರ ಪಾಟೀಲ್	೬೨	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೨೮.ಹರಿದಾಸ ಏಕನಥ ಕಾಳೆ	೪೮	ಮಂಗಾರವಾಡಿ	ಗುಮಾಸ್ತರು	ಅನಕ್ಷರಸ್ಥ
೨೯.ಗಣೇಶ ತಂದೆ ಶಂಕರ	೩೫	ಮಂಗಾರವಾಡಿ	ಕೂಲಿ	ಅಕ್ಷರಸ್ಥ
೩೦.ಸದಾಶಿವ ಆರ್.ಉಪಾಧ್ಯಾಯ	೪೬	ಮಂಗಾರವಾಡಿ	ಕೂಲಿ	ಅಕ್ಷರಸ್ಥ
೩೧.ಪೋಪಟಲಾಲ್ ಆರ್. ಉಪಾಧ್ಯಾಯ	೪೯	ಮಂಗಾರವಾಡಿ	ಸಮುದಾಯ ಮುಖಂಡರು	ಅಕ್ಷರಸ್ಥ
೩೨.ಸಕಲಾದ ಜಿ ಕಾಂಬಳೆ	೪೫	ಮಂಗಾರವಾಡಿ	ಸಮುದಾಯ ಮುಖಂಡರು	ಅಕ್ಷರಸ್ಥ
೩೩.ಆಕಾಶ ಉಪಾಧ್ಯಾಯ	೩೨	ಮಂಗಾರವಾಡಿ	ಪಂಚಕಮಿಟಿ ಸದಸ್ಯರು	ಅಕ್ಷರಸ್ಥ
೩೪.ರಮೇಶ್ ಕಾಂಬಳೆ	೩೭	ಮಂಗಾರವಾಡಿ	ಸಮುದಾಯ ಮುಖಂಡರು	ಅಕ್ಷರಸ್ಥ
೩೫.ಭರತ ಉಪಾಧ್ಯಾಯ	೩೩	ಮಂಗಾರವಾಡಿ	ಮುಖಂಡರು	ಅಕ್ಷರಸ್ಥ
೩೬.ಮೋತಿಲಾಲ ಪಾಟೀಲ	೪೫	ಮಂಗಾರವಾಡಿ	ಮುಖಂಡರು	ಅನಕ್ಷರಸ್ಥ
೩೭.ಪೂರ್ಣಿಮಾ ಡಿ ಉಪಾಧ್ಯಾಯ	೩೦	ಮಂಗಾರವಾಡಿ	ನಿರುದ್ಯೋಗಿ	ಅಕ್ಷರಸ್ಥ
೩೮.ದಾಮೋದರ ಜೀಯಾಲಾಲ	೩೬	ಮಂಗಾರವಾಡಿ	ನಿರುದ್ಯೋಗಿ	ಅಕ್ಷರಸ್ಥ
೩೯.ಸುಧೀರ ಸದಾಶಿವ	೨೮	ಮಂಗಾರವಾಡಿ	ನಿರುದ್ಯೋಗಿ	ಅಕ್ಷರಸ್ಥ
೪೦.ಸಂಧ್ಯಾ ಪೋಪಟಲಾಲ್	೨೨	ಮಂಗಾರವಾಡಿ	ನಿರುದ್ಯೋಗಿ	ಅಕ್ಷರಸ್ಥ
೪೧.ದೀರಜ್ ಶಂಕರವಾವ್	೨೯	ಮಂಗಾರವಾಡಿ	ಕೂಲಿ	ಅನಕ್ಷರಸ್ಥ
೪೨.ರಮೇಶ ಈಶ್ವರಪ್ಪ ಉಪಾಧ್ಯಾಯ	೩೪	ಮಂಗಾರವಾಡಿ	ಕೃಷಿಕರು	ಅನಕ್ಷರಸ್ಥ

ಛಾಯಚಿತ್ರಗಳು



ಪ್ಲಾಸ್ಟಿಕ್ ಆರಿಸುತ್ತಿರುವ ಮಂಗರವಾಡಿ ಮಹಿಳೆ



ಶ್ರೀ ಹನುಮಾನ ಮಂದಿರ



ಶ್ರೀ ರೇವಣಸಿದ್ದೇಶ್ವರ ಗುಡಿ



ಶ್ರೀ ವಿಠ್ಠಲ ಮಂದಿರ



ಶ್ರೀವಿಠ್ಠಲ ರುಕ್ಮಿಣಿ ಮೂರ್ತಿಗಳು



ಮಂಗರವಾಡಿಯರ ಮದುವೆಯ ಸಂದರ್ಭದಲ್ಲಿ ಪರಸ್ಪರ ವೀಳ್ಯೆ ಬದಲಾಯಿಸಿಕೊಳ್ಳುತ್ತಿರುವುದು



ವಧು-ವರರಿಗೆ ಆರತಿ ಮಾಡುವುದು



ಸುರಿಗಿ ನೀರು ಎರೆಯುತ್ತಿರುವುದು



ವಧು-ವರರು ಪರಸ್ಪರ ಅಕ್ಷತೆ ಹಾಕಿಕೊಳ್ಳುವುದು



ಊಟ ಮಾಡುತ್ತಿರುವ ಬಂಧು-ಬಳಗದವರು